# 3.2.1 Faculty Publication




**ABHIJNAN**

*A collection of Articles by various scholars*


| | |
|---|---|
| Editor's Name | : Dr. Nagaraj D. Murgod |
| Published by | : Avva Pustaka Prakashan, Belagavi |
| First Impression | : 2021 |
| Copies | : 1000 |
| Pages | : VIII+109 |
| Price | : Rs. 150/- |
| Paper Used | : 70 GSM |
| Copy Right | : Publisher's |
| Cover Design | : Nagaraj Nandaragi, Hubballi-31. |
| DTP | : Ravi Kammar |
| Printers | : B G Printers, Dharwad |
| ISBN | : 978-81-950975-0-0 |

---

**ಅಭಿಜ್ಞಾನ :** ಸಂಶೋಧನ ಪ್ರಬಂಧಗಳ ಸಂಕಲನ

(ಈ ಪುಸ್ತಕದಲ್ಲಿರುವ ಲೇಖನಗಳ ವಿಷಯ ಲೇಖಕರ ವಿವೇಚನೆಗಳಿಂದ ಹೊರಬಂದವುಗಳು. ಅದಕ್ಕೆ ಸಂಪಾದಕರಾಗಲಿ ಹಾಗೂ ಪ್ರಕಾಶಕರಾಗಲಿ ಜವಾಬ್ದಾರರಲ್ಲ.)

| | |
|---|---|
| ಸಂಪಾದಕರು | : ಡಾ. ನಾಗರಾಜ ಡಿ. ಮುರಗೋಡ |
| ಪ್ರಕಾಶಕರು | : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಪುಟಗಳು | : VIII + 109 |
| ಪ್ರಥಮ ಮುದ್ರಣ | : ೨೦೨೧ |
| © | : ಪ್ರಕಾಶಕರು |
| ಬೆಲೆ | : ರೂ. ೧೫೦/- |
| ಅಕ್ಷರ ಸಂಯೋಜನೆ | : ರವಿ ಕಮ್ಮಾರ |
| ಮುಖಪುಟ | : ನಾಗರಾಜ ನಂದರಗಿ, ಹುಬ್ಬಳ್ಳಿ-೩೧ |
| ಮುದ್ರಕರು | : ಬಿ. ಜಿ. ಪ್ರಿಂಟರ್ಸ್, ಧಾರವಾಡ |
| ISBN | 978-81-950975-0-0 |

# ರಾಂಗ್ಲರ್ ಡಾ. ಡಿ. ಸಿ. ಪಾವಟೆ

– ಡಾ. ನಾಗರಾಜ ಡಿ. ಮುರಗೋಡ

"ಪಾವಟೆಯವರ ಸರಳತೆ, ವಿಶ್ವಾಸ, ಹೃತ್ಪೂರ್ವಕ ಪ್ರೇಮ, ಅದಮ್ಯ ಶ್ರದ್ಧೆ ಇವು ನನ್ನ ಮನಸ್ಸಿನ ಮೇಲೆ ಪ್ರಭಾವ ಬೀರಿದವು. ಅವಿರಾಮಶ್ರಮ, ಅಚಂಚಲ ನಿಷ್ಠೆ, ಬಹು ವರ್ಷಗಳ ಶ್ರದ್ಧಾಮಯ ತಪಸ್ಸು ಮತ್ತು ವ್ಯವಹಾರ ಕೌಶಲ್ಯ ಇವುಗಳಿಂದ ವಿಶ್ವವಿದ್ಯಾಲಯದಂತಹ ಸಹ್ಯಾಚಲಸ್ಪರ್ಧಿ ಮಹಾಸಂಸ್ಥೆಯನ್ನು ಕಟ್ಟಿ, ಕೀರ್ತಿ ಶಿಖರ ಸ್ಥಾಯಿಯಾಗುವಂತೆ ಮಾಡಿದ ಮಹಾನುಭಾವ ಪಾವಟೆಯವರ ಕೈಯಿಂದ ಗೈರು ಹಾಜರಿಯಲ್ಲಿ ಗೌರವ ಡಾಕ್ಟರೇಟ ಪದವಿ ಪಡೆಯಲು ನನ್ನ ಮನಸ್ಸು ಒಪ್ಪಲಿಲ್ಲ." ಹೀಗೆ ಬರೆದವರು ದಿವಂಗತ ರಾಷ್ಟ್ರಕವಿ ಕುವೆಂಪುರವರು. ಕನ್ನಡದ ಮಹಾಕವಿಗಳಲ್ಲಿ ಪ್ರಮುಖರಾದ ಕುವೆಂಪುರವರಿಗೆ ಪ್ರಪ್ರಥಮವಾಗಿ ಗೌರವ ಡಾಕ್ಟರೇಟ ಪದವಿಯನ್ನಿತ್ತು ಗೌರವಿಸಿದ್ದು ಪಾವಟೆಯವರು ಕನ್ನಡಕ್ಕೆ ಮನ್ನಣೆ ಇತ್ತಿದ್ದನ್ನು ತಿಳಿಸುವುದಾದರೆ ಕುವೆಂಪುರವರಂತ ಮಹಾಕವಿ, ಪಾವಟೆಯವರ ಬಗ್ಗೆ ಆಡಿದ ಮೌಲಿಕ ಮಾತುಗಳು ಅವರ ಘನ ವ್ಯಕ್ತಿತ್ವಕ್ಕೆ ಕಳಸಪ್ರಾಯವಾಗಿವೆ.

ಧಾರವಾಡ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ. ಇದರ ಹೆಸರನ್ನು ನೆನಪಿಸುತ್ತಿದ್ದಂತೆಯೇ ನಮ್ಮ ಕಣ್ಣು ಮುಂದೆ ಕಟ್ಟುವುದು ಕರ್ನಾಟಕ ವಿಶ್ವವಿದ್ಯಾಲಯ. ಈ ವಿಶ್ವವಿದ್ಯಾಲಯ ನೆನಪಾಗುತ್ತಿದ್ದಂತೆಯೇ ನಮ್ಮ ಕಣ್ಣ ಮುಂದೆ ಗೊಮ್ಮಟ ಸದೃಶ ಅಜಾನುಭಾವ ವ್ಯಕ್ತಿತ್ವದ ಕಾಂತಿ ಕಂಗಳ ಪುರುಷ ಡಾ.ಡಿ.ಸಿ. ಪಾವಟೆಯವರ ವ್ಯಕ್ತಿತ್ವ ಬಂದು ನಿಲ್ಲುವುದು.

ಹಲವು ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಸದಸ್ಯರಾಗಿ, ಶಿಕ್ಷಣಾಧಿಕಾರಿಯಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಶಿಲ್ಪಿಯಾಗಿ, ಪಂಜಾಬಿನ ರಾಜ್ಯಪಾಲರಾಗಿ ಹೀಗೆ ಸುಮಾರು ೩೪ ವರ್ಷಗಳವರೆಗೆ ಅವ್ಯಾಹತವಾಗಿ ಒಂದು ದೊಡ್ಡ ಹುದ್ದೆಯಲ್ಲಿದ್ದ ಇನ್ನೊಬ್ಬ ಕನ್ನಡಿಗನ ಹೆಸರು ಕೇಳಿ ಬರುವುದು ವಿರಳವೇ. ಪ್ರತಿಭೆ, ಪಾಂಡಿತ್ಯ, ನ್ಯಾಯನಿಷ್ಠುರತೆ, ವಿದ್ಯಾ ಪಕ್ಷಪಾತತನ, ಕರ್ತವ್ಯದಕ್ಷತೆ, ಸಮರ್ಥ ಆಡಳಿತ, ಶೈಕ್ಷಣಿಕ ಶಿಸ್ತು, ವಿದ್ಯಾರ್ಥಿ ಪ್ರೇಮ, ಉಚ್ಚ ಶಿಕ್ಷಣದ ಕನಸು ಇವುಗಳೆಲ್ಲವೂ ಪಾವಟೆಯವರ ವ್ಯಕ್ತಿತ್ವದಲ್ಲಿ ಹಾಸುಹೊಕ್ಕಾಗಿದ್ದವು.



### ಜನನ-ಬಾಲ್ಯ :

ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಮಮದಾಪುರ ಗ್ರಾಮವು ಭಾರತದ, ಅದರಲ್ಲೂ ಕರ್ನಾಟಕದ ಭೂಪಟದಲ್ಲಿ ವಿಶೇಷವಾದ ಸ್ಥಾನವನ್ನು ಹೊಂದಿದೆ. ಸುಂದರವಾದ ಪರಿಸರವನ್ನು ಹೊಂದಿದ ಮಮದಾಪುರವು ಒಂದು ಸಣ್ಣ ಹಳ್ಳಿಯಾದರು ಸಹ ಒಂದು ಶೈಕ್ಷಣಿಕ ಕೇಂದ್ರವೆನಿಸುವಷ್ಟು ಶಿಕ್ಷಣ ತಜ್ಞರನ್ನು ಮತ್ತು ಮಹಾನುಭಾವರನ್ನು ತನ್ನ ಮಣ್ಣಿನ ಮಡಿಲಲ್ಲಿ ಪೋಷಿಸಿದೆ.

ಈ ಹಳ್ಳಿಯಲ್ಲಿ ಪಾವಟೆ ಎಂಬ ಹೆಸರಿನ ಒಂದು ಮನೆತನ. ಇದು ಶರಣ ಸಂಸ್ಕೃತಿ, ವಿದ್ವತ್ತು, ಸಮಾಜ ಸೇವೆ ಮತ್ತು ಪ್ರಾಮಾಣಿಕತನಕ್ಕೆ ಹೆಸರಾಗಿದ್ದಿತ್ತು. ಅಂತಹ ಕುಟುಂಬದ ಚಿಂತಪ್ಪ ಮತ್ತು ಶಾಂತವೀರಮ್ಮ ಎಂಬ ಆದರ್ಶ ದಂಪತಿಗಳ ಪುಣ್ಯ ಗರ್ಭದಲ್ಲಿ ೨-೮-೧೮೯೯ ರಂದು ನಾಲ್ಕನೆಯ ಮಗನಾಗಿ ಜನಿಸಿದವನೇ ದಾದಪ್ಪ, ಇವರೇ ಮುಂದೆ ದಾದಾಸಾಹೇಬ ಎಂಬ ಹೆಸರಿನಿಂದ ಜಗದ್ವಿಖ್ಯಾತಿಯಾದರು. ಇವರಿಗೆ ಸಂಗಪ್ಪ, ವೀರಭದ್ರಪ್ಪ ಮತ್ತು ಪತ್ರೆಪ್ಪ ಎಂಬ ಮೂರು ಅಣ್ಣಂದಿರು ಇದ್ದರು.

ಒಂದು ಕಾಲಕ್ಕೆ ಶ್ರೀಮಂತವಾಗಿದ್ದ ಈ ಮನೆತನ ದಾದಪ್ಪ ಹುಟ್ಟುವ ವೇಳೆಗೆ ಕಡುಬಡತನದ ಸ್ಥಿತಿಗೆ ಬಂದಿತ್ತು. ಅತಿ ಕಷ್ಟತನದಲ್ಲಿ ದಾದಪ್ಪನವರ ಕುಟುಂಬ ಇರುವಾಗ ಅವರ ತಾಯಿ ಶಾಂತವೀರಮ್ಮ ದೈವಾಧೀನಳಾಗುತ್ತಾಳೆ. ಆಗ ದಾದಪ್ಪನಿಗೆ ಕೇವಲ ಒಂದುವರೆ ವರ್ಷ. "ದಾದಣ್ಣ, ನಾನು ಸಾಯುತ್ತೇನೆ ಕೊನೆಯ ಸಲ ನನ್ನ ಮೊಲೆ ಉಣ್ಣ ಬಾ" ಎಂದು ಆವಳ ತಾಯಿ, ಕೊನೆಗೊಮ್ಮೆ ತನ್ನ ಮಗುವನ್ನು ಕರೆದಳಂತೆ. ಮುಂದೆ ಚಿಂತಪ್ಪನೇ ಈ ನಾಲ್ಕು ಜನ ಮಕ್ಕಳಿಗೆ ತಂದೆ-ತಾಯಿಯಾದನು.

### ವಿದ್ಯಾಭ್ಯಾಸ :

ಇವರ ಪ್ರಾಥಮಿಕ ವಿದ್ಯಾಭ್ಯಾಸವು ಸ್ವಗ್ರಾಮವಾದ ಮಮದಾಪುರದಲ್ಲಿಯೇ ನಡೆಯಿತು. ನಂತರ ರಬಕವಿಗೆ ಹೋಗಿ ಅಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪ್ರಾರಂಭಿಸಿ ಪ್ರಥಮ ರ್‍ಯಾಂಕಿನ ವಿದ್ಯಾರ್ಥಿಯೆನಿಸಿಕೊಂಡು ಮರಳಿ ಗೋಕಾಕಗೆ ಆಗಮಿಸಿ ನಾಲ್ಕನೆಯ ವರ್ಗ ಪಾಸಾದರು. ನಂತರ ಕೊಲ್ಲಾಪುರಕ್ಕೆ ಹೋಗಿ ಅಲ್ಲಿನ ರಾಜಾರಾಮ್ ಹೈಸ್ಕೂಲಿನಿಂದ ಧಾರವಾಡ ಕೇಂದ್ರಕ್ಕೆ ಮ್ಯಾಟ್ರಿಕ ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಪ್ರಥಮವಾಗಿ ಪಾಸಾಗಿ ಹೆಸರುವಾಸಿಯಾದರು. ತದನಂತರ ಧಾರವಾಡದ ಕರ್ನಾಟಕ ಕಾಲೇಜನ್ನು ಸೇರಿ ೧೯೨೦ ರಲ್ಲಿ ಗಣಿತ ವಿಷಯವನ್ನು ತೆಗೆದುಕೊಂಡು ಬಿ.ಎ. ಪರೀಕ್ಷೆಯಲ್ಲಿ ಮುಂಬೈ ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನವನ್ನು ಪಡೆದು ನಾಡಿಗೆ ಕೀರ್ತಿ ತಂದರು.



ದಾದಪ್ಪನವರು ರಾಜಾರಾಮ್ ಹೈಸ್ಕೂಲಿನಲ್ಲಿರುವಾಗ ಅವರ ಹೆಡ್ ಮಾಸ್ತರರವರು ಇವರ ಪ್ರತಿಭೆ – ಪ್ರಯತ್ನಗಳನ್ನು ಗುರುತಿಸಿ ಹಿಂದುಳಿದವರಿಗಾಗಿ ಮೀಸಲಾಗಿದ್ದ ಶಿಷ್ಯವೇತನವನ್ನು ಕೊಡಲು ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ಹೇಳಿದರೂ ದಾದಪ್ಪ ಇದನ್ನು ನಿರಾಕರಿಸುತ್ತಾರೆ. ಕಾರಣ ನಾನು ಹಿಂದುಳಿದ ವಿದ್ಯಾರ್ಥಿ ಎಂದು ಹೇಳಿಕೊಂಡು ಶಿಷ್ಯವೇತನ ಪಡೆಯುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳುತ್ತಾರೆ. ಆವಾಗ ಮಾಸ್ತರರು ಶಿಷ್ಯವೇತನವನ್ನು ಅರ್ಹತೆಯ ಆಧಾರದ ಮೇಲೆ ಕೊಡಲು ಸರ್ಕಾರದ ನಿಯಮವನ್ನು ತಿದ್ದುಪಡಿ ಮಾಡಿಸಿ ಇವರಿಗೆ ಶಿಷ್ಯವೇತನ ಮಂಜೂರು ಮಾಡಿಸುತ್ತಾರೆ.

### ವೈವಾಹಿಕ ಜೀವನ :

ದಾದಪ್ಪನಿಗೆ ಓದು ಮುಗಿಯದ ಮುನ್ನವೇ ೧೯೧೮ ರಂದು ಇವರ ೧೯ ನೆಯ ವಯಸ್ಸಿಗೆ ೮ ವರ್ಷದ ಗಿರಿಜಾದೇವಿಯೊಂದಿಗೆ ವಿವಾಹ ನೆರವೇರಿತು. ಅಣ್ಣ ವೀರಭದ್ರಪ್ಪನವರ ಮದುವೆಯೊಡನೆಯೇ ಇವರ ಮದುವೆಯು ನೆರವೇರಿತು. ಮದುವೆಗೆ ಇವರನ್ನಾಗಲಿ ಇವರ ಪತ್ನಿ ಗಿರಿಜಾದೇವಿಯವರನ್ನಾಗಲಿ ಕೇಳುವ ಪ್ರಮೆಯವೇ ಅಂದು ಇರಲಿಲ್ಲ ಎಂದು ಸ್ವತಃ ದಾದಾಸಾಹೇಬರೇ ತಮ್ಮ ಎಷ್ಟೋ ಭಾಷಣಗಳಲ್ಲಿ ಹೇಳಿದ್ದಾರೆ.

ಇವರ ಕುಟುಂಬ ಆದರ್ಶ ಕುಟುಂಬವಾಗಿದ್ದು ಗಿರಿಜಾದೇವಿಯವರನ್ನು ಎಲ್ಲರೂ 'ಅಮ್ಮಾವರು' ಎಂದೇ ಕರೆಯುತ್ತಿದ್ದರು. ಕಾಶಿನಾಥ, ಅಶೋಕ ಮತ್ತು ಮೇಧಾವಿನಿ ಎಂಬ ಮೂರು ಮಕ್ಕಳು ಇವರಿಗೆ ಇದ್ದು, ಒಟ್ಟಿನಲ್ಲಿ ಇವರ ಕುಟುಂಬ ಸುಖಿ ಸಂಸಾರದಿಂದ ಕೂಡಿದ್ದಿತು.

ಕ್ರಿ.ಶ. ೧೯೨೧ ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಸಿಡ್ನಿಸಸೆಕ್ಸ್ ಕಾಲೇಜಿನಲ್ಲಿ ಪ್ರವೇಶ ಪಡೆದು ಹಡಗಿನ ಮೂಲಕ ಭಾರತದಿಂದ ಪ್ರಯಾಣ ಬೆಳೆಸಿದ ಇವರು ಶ್ರೀಮತಿ ಬ್ರಾವ್ನ್ ಎಂಬ ಮಹಿಳೆಯ ಮನೆಯಲ್ಲಿ ವಾಸವಾಗಿದ್ದರು. ತಮ್ಮ ಉತ್ತಮ ನಡತೆ ಮತ್ತು ಸತತ ಅಭ್ಯಾಸ ಹಾಗೂ ಸದ್ಗುಣಗಳಿಂದ ಅಲ್ಲಿ ಪ್ರಾಧ್ಯಾಪಕರ ಮೆಚ್ಚುಗೆ ಗಳಿಸಿ, ಕೇಂಬ್ರಿಜ್ ವಿಶ್ವವಿದ್ಯಾಲಯದ ಟ್ರಿಪಾಸ್ ಎಂದರೆ ಬಿ.ಎ. (ಆನರ್ಸ್) ಪದವಿಯನ್ನು ಪ್ರಥಮ ದರ್ಜೆಯಲ್ಲಿ ಎರಡನೆಯವರಾಗಿ ಪಡೆದು 'ರ್‍ಯಾಂಗ್ಲರ್' ಎನಿಸಿಕೊಂಡು ತಾಯಿ ನಾಡಾದ ಭಾರತದ ಕರ್ನಾಟಕಕ್ಕೆ ಮರಳಿದರು.

### ವೃತ್ತಿ ಜೀವನ :

ತಾಯಿ ನಾಡಿಗೆ ಮರಳಿದ ಮೇಲೆ ಕೆ.ಎಲ್.ಇ. ಸೊಸಾಯಿಟಿಯ ಕಾಲೇಜು ಆರಂಭವಾದುದರಿಂದ ಅವರ ಅನುಮತಿ ಪಡೆದುಕೊಂಡು ಬನಾರಸ್



ಹಿಂದೂ ವಿಶ್ವವಿದ್ಯಾಲಯದಲ್ಲಿ ಗಣಿತ ವಿಭಾಗದ ಮುಖ್ಯಸ್ಥರಾಗಿ ಕ್ರಿ.ಶ. ೧೯೨೪ ಜುಲೈ ೫ ನೆಯ ತಾರೀಖಿನಂದು ಸರಕಾರಿ ಸೇವೆಗೆ ಹಾಜರಾದರು.

ಬನಾರಸ ವಿಶ್ವವಿದ್ಯಾಲಯದಲ್ಲಿ ಇರುವಾಗಲೇ ಮುಂಬೈ ಸರ್ಕಾರದ ಶಿಕ್ಷಣ ಇಲಾಖೆಯಲ್ಲಿ ಇವರಿಗೆ ಶಿಕ್ಷಣಾಧಿಕಾರಿಯ ಹುದ್ದೆ ಪ್ರಾಪ್ತವಾಯಿತು. ದಿನಾಂಕ ೧೬-೯-೧೯೩೦ ರಂದು ಇದಕ್ಕೆ ಹಾಜರಾದರು. ಅದೇ ವರ್ಷ ಮುಂಬೈ ವಿಶ್ವವಿದ್ಯಾಲಯದ ಸಿನೇಟ ಸದಸ್ಯರೂ ಆದರು. ಶಿಕ್ಷಣ ಇಲಾಖೆಯಲ್ಲಿ ಇವರ ಮೇಲೆ ೨೫ ಜನ ಉನ್ನತಾಧಿಕಾರಿಗಳು ಇದ್ದರೂ ಸಹ ಡಾ. ಪಾವಟೆಯವರಿಗೆ ಡೆಪ್ಯೂಟಿ ಡೈರೆಕ್ಟರ ಹುದ್ದೆ ಲಭಿಸಿತು. ಈ ಸಮಯದಲ್ಲಿಯೇ ಅವರು 'ಕಡ್ಡಾಯ ಪ್ರಾಥಮಿಕ ಶಿಕ್ಷಣ' ಕಾರ್ಯಕ್ರಮವನ್ನು ಜಾರಿಗೊಳಿಸಿದರು.

ಇವರ ಅರ್ಹತೆ, ದಕ್ಷತೆ, ಪ್ರಾಮಾಣಿಕತೆ ಮತ್ತು ಕಾರ್ಯದಲ್ಲಿಯ ಪರಿಶ್ರಮವನ್ನು ಕಂಡ ಬ್ರಿಟಿಷ್ ಸರ್ಕಾರವು ದಿನಾಂಕ ೨೨-೧-೧೯೪೬ ರಂದು ಮುಂಬೈ ರಾಜ್ಯದ 'ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್' (ಡಿಪಿಐ) ಹುದ್ದೆಗೆ ಆಯ್ಕೆ ಮಾಡಿತು. ಇಲ್ಲಿಯವರೆಗೆ ಈ ಹುದ್ದೆಯನ್ನು ಸಾಮಾನ್ಯವಾಗಿ ಐಸಿಎಸ್ ಅಧಿಕಾರಿಗಳೇ ಪಡೆಯುತ್ತಿದ್ದರು. ಕನ್ನಡಿಗನೊಬ್ಬನಿಗೆ ಇಂಥಹ ಭಾಗ್ಯ ಸಂಧಿಯುವುದು ಪ್ರಶಂಸನೀಯವಾಗಿದ್ದು ಅಷ್ಟೇ ವಿರಳವಾಗಿತ್ತು.

ಈ ಹುದ್ದೆಯನ್ನು ಅಲಂಕರಿಸಿದ ಮೇಲೆ ಪಾವಟೆಯವರು ಪ್ರಾಥಮಿಕ ಶಿಕ್ಷಕರ ಆಯ್ಕೆಯನ್ನು ಒಬ್ಬರೇ ಮಾಡುತ್ತಿದ್ದುದನ್ನು ಖಂಡಿಸಿ ಆ ಕೆಲಸವನ್ನು ಒಂದು ಸಮಿತಿಗೆ ಒಪ್ಪಿಸಿದರು. ಪಠ್ಯಪುಸ್ತಕಗಳ ಆಯ್ಕೆಗೂ ಸಹ ಒಂದು ಸಮಿತಿಯನ್ನು ಮಾಡಿದರು. ಮೆಟ್ರಿಕ್ ಪರೀಕ್ಷೆಗಳ ಪಠ್ಯಕ್ರಮಕ್ಕೆ ಪ್ರತ್ಯೇಕ ಒಂದು ಎಸ್.ಎಸ್.ಎಲ್.ಸಿ. ಬೋರ್ಡ್ ಸ್ಥಾಪಿಸಿದರು. ಈ ರೀತಿಯಾಗಿ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳನ್ನು ತಂದರು.

ದೇಶದ ಶಿಕ್ಷಣ ನೀತಿಯನ್ನು ರೂಪಿಸಲು ದೆಹಲಿಯಲ್ಲಿ ಕೂಡಿದ ಎಲ್ಲ ಡೈರೆಕ್ಟರ್‌ರ ಸಭೆಯಲ್ಲಿ ರಾಜಗೋಪಾಲಚಾರ್ಯರವರ ಇಚ್ಛೆಯಂತೆ ತಯಾರಿಸಿದ 'Elementary Educational Bill' ಎಂಬ ಸಭೆ ಕೂಡಿತು. ಅಲ್ಲಿ ಡಾ.ಪಾವಟೆಯವರು ಮಾತನಾಡಿ ಅದನ್ನು ಖಂಡಿಸಿ ಮತ್ತು ವಿರೋಧಿಸಿ ರಾಜಾಜಿಯವರಿಗೆ ಈ ದೇಶದ ಶಿಕ್ಷಣವನ್ನು ಹಾಳುಮಾಡಲು ಹಕ್ಕಿಲ್ಲ' ಎಂದು ಹೇಳಿದರು. ಈ ತೆರನಾಗಿ ಶಿಕ್ಷಣ ಇಲಾಖೆಯಲ್ಲಿ ಕ್ರಾಂತಿಕಾರಿ ಡಿ.ಪಿ. ಐ. ಹುದ್ದೆಗಳಲ್ಲಿ ಸುಮಾರು ಏಳು ವರ್ಷಗಳ ಕಾಲ ದಕ್ಷತೆಯಿಂದ ಕಾರ್ಯ ನಿರ್ವಹಿಸಿದರು.

ಕರ್ನಾಟಕ ವಿಶ್ವವಿದ್ಯಾಲಯದ ಮಹಾನ್ ಶಿಲ್ಪಿಯಾಗಿ – ಕುಲಪತಿಗಳಾಗಿ ದಿನಾಂಕ ೧೯-೬-೧೯೫೪ ರಂದು ಡಾ.ದಾದಾಸಾಹೇಬ ಚಿಂತಾಮಣಿ

ಪಾವಟೆಯವರು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಆಯ್ಕೆಯಾದರು. ಸಿನೆಟ ಸಭೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಮೂರನೆಯ ಕುಲಪತಿಗಳಾಗಿ ಅಧಿಕಾರ ಸ್ವೀಕರಿಸಿಕೊಂಡರು.

ತಾವು ಓದಿದ ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾಲಯದ ಮಾದರಿಯಲ್ಲಿಯೇ ಕರ್ನಾಟಕ ವಿಶ್ವ ವಿದ್ಯಾಲಯವನ್ನು ಬೆಳೆಸುವ ಕನಸು ಕಾಣತೊಡಗಿದರು. ಪಾವಟೆಯವರು ಜಗತ್ತಿನ ಎಲ್ಲ ಪ್ರಸಿದ್ಧ ವಿಶ್ವವಿದ್ಯಾಲಯಗಳ ರೂಪುರೇಷ ಅರಿತಿದ್ದರು. ಇದರಿಂದ ತಾವು ಒಂದು ಮಾದರಿ ವಿಶ್ವವಿದ್ಯಾಲಯವನ್ನು ನಿರ್ಮಿಸಬೇಕೆಂಬ ಹಂಬಲವನ್ನು ಇಟ್ಟು ಕೊಂಡು ಅದನ್ನು ಕಾರ್ಯಗತಗೊಳಿಸಿದರು.

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸತತವಾಗಿ ಐದು ಬಾರಿ ಆಯ್ಕೆಯಾಗಿ ಹದಿಮೂರು ವರ್ಷಗಳ ಕಾಲ (೧೯-೦೭-೧೯೫೪ ರಿಂದ ೧೫-೧೦-೧೯೬೭ ರವರೆಗೆ) ಉಪಕುಲಪತಿಗಳಾಗಿ ಉಚ್ಚ ಶಿಕ್ಷಣ ರಂಗದಲ್ಲಿ ಒಂದು ಹವಾಡವನ್ನೇ ಮೆರೆದು ಒಂದು ಹೊಸ ದಾಖಲೆಯನ್ನು ಸೃಷ್ಟಿಸಿದರು.

ಸುಮಾರು ೨೫ ಲಕ್ಷ ರೂಪಾಯಿಯ ವೆಚ್ಚದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ 'ವಿದ್ಯಾಸೌಧ' ವನ್ನು ಕಟ್ಟಿ 'ಕರ್ನಾಟಕ ವಿಶ್ವವಿದ್ಯಾಲಯದ ಶಿಲ್ಪಿ ಮತ್ತು ರೂವಾರಿ ಎಂಬ ಅನ್ವರ್ಥಕ ನಾಮವನ್ನು ಪಡೆದುಕೊಂಡರು. ನಂತರ ವಿಶ್ವವಿದ್ಯಾಲಯದ ಆವರಣದಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಭೂಗರ್ಭಶಾಸ್ತ್ರ ಮೊದಲಾದ ಸ್ನಾತಕೋತ್ತರ ವಿಭಾಗಗಳ ಕಟ್ಟಡಗಳನ್ನು, ಶಾಲ್ಬಲಾ ಹಾಸ್ಟೆಲ್, ನಿಜಲಿಂಗಪ್ಪ ಹಾಸ್ಟೆಲ್, ಮಹಿಳೆಯರ ಹಾಸ್ಟೆಲ್ ಮತ್ತು ಪರೀಕ್ಷಾ ವಿಭಾಗದ ಕಟ್ಟಡ ಹೀಗೆ ಅನೇಕ ಭವ್ಯವಾದ ಮತ್ತು ಸುಂದರವಾದ ಕಟ್ಟಡಗಳನ್ನು ಕಟ್ಟಿದರು.

ಸರ್ಕಾರದಿಂದ ಪಬ್ಲಿಕ್ ಸ್ಕೂಲನ್ನು ವಿಶ್ವವಿದ್ಯಾಲಯಕ್ಕೆ ಪಡೆದುಕೊಂಡು, ವಿಶ್ವವಿದ್ಯಾಲಯದ ಆವರಣದಲ್ಲಿಯೇ ಒಂದು ಪ್ರಾಯಮರಿ ಶಾಲೆ ಆರಂಭಿಸಿದರು. ಒಂದು ಕಾಯಿದೆ ಕಾಲೇಜು, ಶಿಕ್ಷಣ ಕಾಲೇಜು, ವಿಜ್ಞಾನ ಕಾಲೇಜು ಹೀಗೆ ಹಲವು ಕಾಲೇಜುಗಳು ನಿರ್ಮಾಣಗೊಂಡವು. ವಿದೇಶಿ ಭಾಷೆಗಳಾದ ಜರ್ಮನ್, ಫ್ರೆಂಚ್ ಮತ್ತು ರಷ್ಯನ್ ಭಾಷೆಗಳ ಅಧ್ಯಯನಕ್ಕೂ ಆವರಣದಲ್ಲಿಯೇ ಅವಕಾಶ ಮಾಡಿಕೊಟ್ಟರು. ಒಂದಿದ್ದ ಇತಿಹಾಸ ವಿಭಾಗವನ್ನು ಎರಡಾಗಿ, ಅದರಂತೆಯೇ ಸಮಾಜಶಾಸ್ತ್ರ ವಿಭಾಗವನ್ನು ಎರಡಾಗಿ ವಿಂಗಡಿಸಿದರು. ಅಪರಾಧಶಾಸ್ತ್ರ ಹಾಗೂ ಸಂಗೀತ ವಿಭಾಗಗಳನ್ನು ಹೊಸದಾಗಿ ಆರಂಭಿಸಿದರು. IAS ದಂತಹ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ವ್ಯವಸ್ಥೆ ಮಾಡಿದರು. ಉದ್ಯೋಗ ತರಬೇತಿ ಕೇಂದ್ರ



ಹಾಗೂ ಸಮಾಚಾರ ಮಾಹಿತಿ ಕೇಂದ್ರವನ್ನು ಆರಂಭಿಸಿದರು. ಭಾಷಾ ಸಾಹಿತ್ಯಗಳ ಅಧ್ಯಯನದ ಜೊತೆಗೆ ಭಾಷಾಶಾಸ್ತ್ರ (Linguistics) ವಿಭಾಗವನ್ನು ಸಹ ಪ್ರಾರಂಭಿಸಿದರು.

ವಿಶ್ವವಿದ್ಯಾಲಯಕ್ಕೆ ಅದರ ಕ್ಷೇತ್ರದ ಗುಂಟ ಗಡಿಗುರ್ತಿಗಾಗಿ ಸುತ್ತಲೂ ನೀಲಗಿರಿ ಗಿಡಗಳನ್ನು ಬೆಳೆಸಿ ಆವರಣದ ಹವೆಯ ಶುದ್ಧೀಕರಣದೊಂದಿಗೆ ಸೌಂದರ್ಯವನ್ನು ಹೆಚ್ಚಿಸಿದರು. ಆಕರ್ಷಕ ಗಿಡಮರಗಳ ಹೂದೋಟವನ್ನು, ಬೃಂದಾವನದಲ್ಲಿರುವಂತೆ ಕಾರಂಜಿ ವ್ಯವಸ್ಥೆಯನ್ನು, ವಿದ್ಯುತ್ ದೀಪಗಳ ಓರಣವನ್ನು, ಸಸ್ಯಶಾಸ್ತ್ರದ ಉದ್ಯಾನವನವನ್ನು ಮತ್ತು ಈಜುಗೊಳವನ್ನು ನಿರ್ಮಿಸಿ ಕಾಶ್ಮೀರ ವಿಶ್ವವಿದ್ಯಾಲಯದ ತರುವಾಯ ಕರ್ನಾಟಕ ವಿಶ್ವವಿದ್ಯಾಲಯದ ಆವರಣವೇ ಅತ್ಯಂತ ಸುಂದರವಾದ ಸ್ಥಾನವೆಂಬ ಹೆಸರು ಪ್ರಾಪ್ತವಾಗುವಂತೆ ಮಾಡಿ ಇದಕ್ಕೆ 'ಛೋಟಾ ಮಹಾಬಳೇಶ್ವರ' ಎಂಬ ಹೆಸರನ್ನಿಟ್ಟರು.

ತಾವು ವಿದ್ಯಾಭ್ಯಾಸ ಮಾಡಿದ ಕರ್ನಾಟಕ ಕಾಲೇಜನ್ನು ಕರ್ನಾಟಕ ಸರ್ಕಾರದಿಂದ ತಮ್ಮ ವಿಶ್ವವಿದ್ಯಾಲಯಕ್ಕೆ ಪಡೆದುಕೊಂಡು ಆ ಕಾಲೇಜನ್ನು ಎಲ್ಲ ರಂಗಗಳಲ್ಲಿ ಬೆಳೆಸಿ ಸಾಕಷ್ಟು ಸಿಬ್ಬಂದಿ, ಮೇಲ್ದರ್ಜೆಯ ಲೈಬ್ರರಿ ಮತ್ತು ಪ್ರಾಧ್ಯಾಪಕರಿಗೆ ಅಭ್ಯಾಸ ಕೋಣೆಗಳನ್ನು ಕಲ್ಪಿಸಿ ಈ ಮೊದಲಾದ ವೈಶಿಷ್ಟ್ಯಗಳಿಂದ ಇದನ್ನೊಂದು ಮಾದರಿ ಕಾಲೇಜನ್ನಾಗಿ ಪರಿವರ್ತಿಸಿ, ಕಿರುವ್ಯಾಪ್ತಿ ಹೊಂದಿದ್ದ ವಿಶ್ವವಿದ್ಯಾಲಯವನ್ನು ಒಂದು ಸಾಮ್ರಾಜ್ಯದಂತೆ ಬೆಳೆಸಿದರು.

ಪಾವಟೆಯವರು ಗವರ್ನರರಾಗಿ ಹೋಗುವ ಕಾಲಕ್ಕೆ ವಿಶ್ವವಿದ್ಯಾಲಯದ ನಿರ್ವಹಣೆಗೆ ಕೊರತೆಯಾಗದಿರಲೆಂದು ಸುಮಾರು ೫೦ ಲಕ್ಷ ರೂಪಾಯಿ ಮುದ್ದತಿ ಠೇವಣಿ ಇರಿಸಿದ್ದರು. ಮನಸ್ಸು ಕೊಟ್ಟು ಕೆಲಸ ಮಾಡುವವರನ್ನು ಕಂಡರೆ ಪಾವಟೆಯವರಿಗೆ ತುಂಬ ಪ್ರೇಮ. ಒಂದು ದಿನ ಪಾವಟೆಯವರು ತಮ್ಮ ಶ್ರೀಮತಿಯವರೊಂದಿಗೆ ಮುಂಜಾನೆ ವಾಯುವಿಹಾರಕ್ಕೆ ಹೋದಾಗ ಮುದ್ರಣ ಕಟ್ಟಡದ ಒಳಗಡೆ ನೋಡಬೇಕೆನಿಸಿ ಒಳಗೆ ಹೋಗಲು ಅಣಿಯಾದರು. ಆವಾಗ ಕಾವಲುಗಾರ ಇವರನ್ನು ತಡೆದು, "ಇದಕ್ಕೆ ನೀವು ಒಡೆಯರ ಸಾಹೇಬರ ಚೀಟಿ ತರಬೇಕು" ಎಂದು ಹೇಳಿದ. ಅವನಿಗೆ ಅವರೇ ಪಾವಟೆಯವರು ಎಂದು ತಿಳಿದಿರಲಿಲ್ಲ ನಂತರ ಪಾವಟೆಯವರು ವಿಶ್ವವಿದ್ಯಾಲಯಕ್ಕೆ ಹೋದ ಮೇಲೆ ಆ ಕಾವಲುಗಾರನನ್ನು ಕರೆಯಿಸಿ ಅವನ ಕಾರ್ಯನಿಷ್ಠೆಯನ್ನು ಪ್ರಶಂಸಿಸಿ ಹೊಗಳಿ ಕಳಿಸಿದರಂತೆ.

ಕ್ರಿ. ಶ. ೧೯೫೯ ರಲ್ಲಿ ಪಾವಟೆಯವರ ೬೦ನೆಯ ವರ್ಷದ ಹುಟ್ಟು ಹಬ್ಬದ ಕಾಲಕ್ಕೆ ಅವರ ಅಭಿಮಾನಿಗಳೆಲ್ಲರೂ ಸೇರಿ ಒಂದು ಲಕ್ಷ ಇಪ್ಪತ್ತೈದು



ಸಾವಿರ ರೂಪಾಯಿಗಳನ್ನು ಕೂಡಿಸಿ ಅದರ ಚೆಕ್ಕನ್ನು ಸತ್ಕಾರ ಸಮಿತಿಯ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರಿಗೆ ಕೊಟ್ಟು ಇದನ್ನು ಪಾವಟೆಯವರಿಗೆ ಕಾಣಿಕೆ ನೀಡಲು ಹೇಳಿದರಂತೆ. ಆಗ ಚೆಕ್ಕನ್ನು ತೆಗೆದುಕೊಂಡ ಡಾ. ಪಾವಟೆಯವರು ಆ ಹಣವನ್ನು ಡಾ. ರಾಜೇಂದ್ರ ಪ್ರಸಾದ, ಡಾ. ಸಿ. ಡಿ. ದೇಶಮುಖ ಮತ್ತು ಅಂದಿನ ರಾಜ್ಯಪಾಲ ಮತ್ತು ಕುಲಪತಿಗಳಾಗಿದ್ದ ಜಯಚಾಮರಾಜೇಂದ್ರ ಒಡೆಯರ ಹೆಸರುಗಳಲ್ಲಿ ಶಿಷ್ಯವೇತನ ಹಾಗೂ ಬಹುಮಾನ ನೀಡಲು ಅರ್ಪಿಸಿ ವಿಶ್ವವಿದ್ಯಾಲಯದ ಆಸ್ತಿಯನ್ನು ಹೆಚ್ಚಿಸಿದ್ದು ಶ್ಲಾಘನೀಯ.

ಕುವೆಂಪು ಮತ್ತು ಮಾಸ್ತಿಯವರಿಗೆ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ ಪದವಿ ನೀಡಿದ ಮೇಲೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಡೆದ ಪಟಿಕೋತ್ಸವ ಸಮಾರಂಭಗಳು ಕನ್ನಡದಲ್ಲಿಯೇ ನಡೆಯಲು ಪ್ರಾರಂಭವಾದವು. ಭಾಷಾಸೂತ್ರಗಳಲ್ಲಿ ತ್ರಿಭಾಷಾ ಸೂತ್ರ ಒಪ್ಪಿದ ಪಾವಟೆಯವರು ಕನ್ನಡ ಭಾಷೆಗೆ ಪ್ರಾಶಸ್ತ್ಯ ನೀಡಿ, ಹಿಂದಿ ಮತ್ತು ಇಂಗ್ಲೀಷುಗಳಿಗೂ ಪ್ರಮುಖ ಸ್ಥಾನವನ್ನು ಕಲ್ಪಿಸಿದರು. ವಚನ ವಾಙ್ಮಯ ಶೋಧನೆಗೆ ಒಂದು ಪ್ರತ್ಯೇಕ ಶಾಖೆಯನ್ನು ಪ್ರಾರಂಭಿಸಿ ವಚನ ಸಾಹಿತ್ಯದ ಹೆಬ್ಬೊತ್ತಗೆಗಳು ಪ್ರಕಟವಾಗಲು ಕಾರಣಕರ್ತರಾದರು. ಈ ಕಾರಣಾಗಿ ವಿಶ್ವವಿದ್ಯಾಲಯದ ಉಪಕುಲಪತಿ ಸ್ಥಾನವು ಪಾವಟೆಯವರಿಗೂ ಮನ್ನಣೆ ತಂದಿತಲ್ಲದೇ, ವಿಶ್ವವಿದ್ಯಾಲಯದ ಆ ಸ್ಥಾನಕ್ಕೆ ಪಾವಟೆಯವರು ಸಹ ಮನ್ನಣೆಯನ್ನು ತಂದರು. ಅದೊಂದು ಮೇಧಾವಿಗಳು ಮತ್ತು ಸತ್ ಚಾರಿತ್ರ್ಯರೂ ಕುಳಿತುಕೊಳ್ಳುವ ಸ್ಥಾನವೆನಿಸಿ ಪಾವಟೆಯವರ ಹೆಸರು ವಿಶ್ವವಿದ್ಯಾಲಯದಲ್ಲಿ ಹಾಸುಹೊಕ್ಕಿತು. ಪಂಜಾಬದ ರಾಜ್ಯಪಾಲರಾಗಿ ಡಾ. ಪಾವಟೆಯವರು

ಪ್ರಧಾನಿ ಇಂದಿರಾ ಗಾಂಧಿಯವರ ಸೆಕ್ರೆಟರಿಗೆ ಪಾವಟೆಯವರ ಶಿಸ್ತು, ಜನಪ್ರಿಯತೆ ಮತ್ತು ಸಾಮರ್ಥ್ಯದ ಪರಿಚಯವಿದ್ದುದರಿಂದ ಅವರು ಪಾವಟೆಯವರ ಹೆಸರನ್ನು ಶ್ರೀಮತಿ ಇಂದಿರಾಗಾಂಧಿಯವರಿಗೆ ಸೂಚಿಸಿದ್ದರು. ಅದರಂತೆ ೧೯೬೭ರ ಅಕ್ಟೋಬರ ೧೬ ರಂದು ಪಾವಟೆಯವರು ಕುಲಪತಿಯ ಸ್ಥಾನದಲ್ಲಿರುವಾಗಲೇ ಚಂಡಿಘಡದಲ್ಲಿ ಪಂಜಾಬಿನ ಗವರ್ನರರಾಗಿ ಅಧಿಕಾರ ಸ್ವೀಕರಿಸಿಕೊಂಡರು. ನಂತರ ಪಂಜಾಬಿನಲ್ಲಿದ್ದ ಅಸೆಂಬ್ಲಿಯ ಸದಸ್ಯರು ಸ್ವಲಾಭಕ್ಕಾಗಿ ಮೇಲಿಂದ ಮೇಲೆ ಪಾರ್ಟಿ ಬದಲಾಯಿಸುತ್ತಿದ್ದುದರಿಂದ ಅಲ್ಲಿ ಎರಡು ಬಾರಿ ಅಧ್ಯಕ್ಷೀಯ ಆಡಳಿತವನ್ನು ಜಾರಿಗೊಳಿಸಿ ಜನಹಿತ ಕಾರ್ಯಗಳ ಕಡೆಗೆ ಗಮನವಿತ್ತರು.

ಪಂಜಾಬದಲ್ಲಿನ ಐದನೂರು ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ ಹನ್ನೆರಡನೂರು ಮೈಲು ಉದ್ದದ ರಸ್ತೆ ನಿರ್ಮಾಣ ಕಾರ್ಯ ಪೂರ್ಣಗೊಳಿಸಿದರು.



ಹಳ್ಳಿ ಜನರಿಗೆ ಮತ್ತು ಹಿಂದುಳಿದವರಿಗೆ ಸರ್ಕಾರದಿಂದ ಭೂಮಿಯನ್ನು ನೀಡಿದರು, ನಿಷ್ಪಕ್ಷಪಾತತನದಿಂದ ರಾಜ್ಯದ ಚುನಾವಣೆಗಳನ್ನು ನಡೆಸಿದರು. ನೌಕರಿಯಲ್ಲಿ ದಕ್ಷ ಕೆಲಸ ಮಾಡಿದವರಿಗೆ ಬಡ್ತಿಯನ್ನು ನೀಡಿದರು. ಇವರ ಈ ಎಲ್ಲ ಕಾರ್ಯಗಳನ್ನು ಅವಲೋಕಿಸಿದ ದೈನಂದಿನ ಪತ್ರಿಕೆಗಳಲ್ಲಿ ಒಂದಾದ 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆ ಪಾವಟೆಯವರ ಆಡಳಿತ ಸಾಧನೆಯನ್ನು 'An Impressive Record'" ಎಂದು ಕರೆದಿದೆ.

## ಗೌರವ-ಸನ್ಮಾನ ಮತ್ತು ಪ್ರಶಸ್ತಿಗಳು

ಡಾ. ಪಾವಟೆಯವರು ೧೯೬೦ರಲ್ಲಿ ಶಿವಯೋಗ ಮಂದಿರದಲ್ಲಿ ನಡೆದ ೧೭ನೆಯ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷ ಸ್ಥಾನವನ್ನು ಹೊಂದಿ, ಅಧ್ಯಕ್ಷ ಭಾಷಣದಲ್ಲಿ ಶರಣರ ಧಾರ್ಮಿಕ ಮೌಲ್ಯಗಳನ್ನು ಅರಿತುಕೊಳ್ಳಲು ಕರೆಕೊಟ್ಟರು. ಇದರ ಅಧ್ಯಕ್ಷರಾಗಿ ಒಂಬತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿ 'ವೀರಶೈವ' ಎನ್ನುವ ತ್ರೈಮಾಸಿಕವನ್ನು ಹೊರಡಿಸಿ ಸಂಸ್ಕೃತಿ ಮತ್ತು ಸಾಹಿತ್ಯದ ಮೇಲೆ ಹೊಸ ಬೆಳಕನ್ನು ಬೀರುವ ಹಾಗೆ ಮಾಡಿದರು.

- ಇವರು ೧೯೫೬ ರಲ್ಲಿ ಅಂತರಾಷ್ಟ್ರೀಯ ಶಿಕ್ಷಣ ಸಮ್ಮೇಳನಕ್ಕೆ ಭಾರತದ ಶಿಷ್ಟ ಮಂಡಳಿಯ ನಾಯಕರಾಗಿದ್ದರು.
- ಭಾರತ ಸರ್ಕಾರ ನೇಮಿಸಿದ ಆಡಳಿತ ಭಾಷಾ ನಿರ್ಧಾರ ಮಂಡಳಿಯ ಸದಸ್ಯರಾಗಿದ್ದರು (೧೯೫೮-೫೬).
- ರಾಕಫೆಲರ್ ಫೌಂಡೇಶನ್‌ದ ಆಮಂತ್ರಣದ ಮೇರೆಗೆ ಯೂರೋಪ, ಅಮೇರಿಕಾ ಮತ್ತು ಜಪಾನ ದೇಶಗಳ ವಿಶ್ವವಿದ್ಯಾಲಯಗಳಿಗೆ ಸಂದರ್ಶನವಿತ್ತರು (೧೯೫೯).
- ಗೌಹಾತಿ ವಿಶ್ವವಿದ್ಯಾಲಯದ ವಿಚಾರಣಾ ಸಮಿತಿಯ ಅಧ್ಯಕ್ಷರಾಗಿದ್ದರು (೧೯೬೨).
- ೧೯೬೩ರಲ್ಲಿ ಲಂಡನದಲ್ಲಿ ಕಾಮನವೆಲ್ತ್ ವಿಶ್ವವಿದ್ಯಾಲಯಗಳ ಸಂಘದ ಆಡಳಿತ ಮಂಡಳಿಯ ಸದಸ್ಯರಾದುದಲ್ಲದೆ ಆಸ್ಟ್ರೇಲಿಯಾ, ಕೆನಡಾ ಮತ್ತು ನ್ಯೂಝಿಲ್ಯಾಂಡ್ ದೇಶಗಳ ವಿಶ್ವವಿದ್ಯಾಲಯಗಳನ್ನು ಸಂದರ್ಶಿಸಿದರು.
- ಲಂಡನ್ ನಗರದಲ್ಲಿ ಕಾಮನವೆಲ್ತ್ ವಿಶ್ವವಿದ್ಯಾಲಯದ ಕಾಂಗ್ರೆಸ್ಸನಲ್ಲಿ ಭಾರತದ ಪರವಾಗಿ ಭಾಗವಹಿಸಿದರು (೧೯೬೩).

* ಭಾರತದ ಭಾವೈಕ್ಯತಾ ಸಾಧಕ ಅಧಿವೇಶನದ ಸದಸ್ಯರಾಗಿ ಕೆಲಸ ಮಾಡಿದರು (೧೯೬೧).

ಭಾರತ ಸರ್ಕಾರ ಈ ಎಲ್ಲ ಇವರ ಅನುಪಮ ಸೇವೆಯನ್ನು ಅವಲೋಕಿಸಿ ೧೯೬೬ ರಲ್ಲಿ ಇವರಿಗೆ 'ಪದ್ಮಭೂಷಣ' ಪ್ರಶಸ್ತಿಯನ್ನು ನೀಡಿ ಗೌರವಿಸಿ ನಮನ ಸಲ್ಲಿಸಿತು.

**ಸಾಹಿತ್ಯಿಕ ಸೇವೆ :**

ಡಾ. ಡಿ. ಸಿ. ಪಾವಟೆಯವರು ವಚನ ವಾಙ್ಮಯ, ಸಂಶೋಧನ, ಪರಿಷ್ಕರಣ, ಸಂಪಾದನ ಹಾಗೂ ಇತ್ಯಾದಿ ಹಲವು ಯೋಜನೆಗಳಿಗೆ ನಾಂದಿ ಹಾಡಿ ಬಸವಾದಿ ಶರಣರ ತತ್ವ ವಿಚಾರಗಳು ವಿದೇಶಿಯರಿಗೂ ಮುಟ್ಟಬೇಕೆಂದು ಭಾಷಾಂತರ ಯೋಜನೆಗೆ ಶ್ರೀಕಾರ ಹಾಕಿದರು.

ಇವರು ಗಣಿತ ವಿಷಯಕ್ಕೆ ಸಂಬಂಧಪಟ್ಟಂತೆ ಬರೆದ 'ಅಲ್‌ಜಿಬ್ರಾ' ಮತ್ತು 'ಕ್ಯಾಲ್‌ಕ್ಯೂಲಸ್' ಎಂಬ ಗ್ರಂಥಗಳು ಹಲವಾರು ವಿದ್ವಾಂಸರ ಗೌರವಕ್ಕೆ ಪಾತ್ರವಾಗಿವೆ. ಅವರ 'ಅಲ್‌ಜಿಬ್ರಾ' ಗ್ರಂಥವು ಸುಮಾರು ೧೫ ಆವೃತ್ತಿಗಳನ್ನು ಪಡೆದಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಇವುಗಳಲ್ಲದೆ 'ಮೆಮಾಯರ್ಸ್ ಆಫ್ ಆನ್ ಎಜ್ಯುಕೇಶನಲ್ ಎಡ್ಮಿನಿಸ್ಟ್ರೇಟರ್' ಹಾಗೂ 'ಮಾಯ್ ದೇಜ್ ಆ್ಯಜ್ ಗವರ್ನರ್' ಎಂಬೆರಡು ಗ್ರಂಥಗಳನ್ನು ರಚಿಸಿ ತಮ್ಮ ಬದುಕಿಗೆ ದರ್ಪಣ ಹಿಡಿದಿದ್ದಾರೆ. ಸುಂದರ ಸರಳ ಶೈಲಿಯಲ್ಲಿ ರಚಿತವಾದ ಈ ಎರಡು ಕೃತಿಗಳು ಪಾವಟೆಯವರ ವಿದ್ವತ್ತು ಮತ್ತು ಪ್ರಾಮಾಣಿಕತೆಗಳಿಗೆ ಸಾಕ್ಷಿಯಾಗಿವೆ.

ರಾಜ್ಯಪಾಲ ಹುದ್ದೆಯಿಂದ ನಿವೃತ್ತಿಯಾದ ಬಳಿಕ ಡಾ. ಡಿ. ಸಿ. ಪಾವಟೆಯವರು ಬೆಂಗಳೂರಿನಲ್ಲಿಯೇ ನೆಲೆಸಿದರು. ದಿನಾಂಕ ೧೭-೧-೧೯೭೯ ರಂದು ಬೆಳಗಿನ ಜಾವ ಹೃದಯಾಘಾತದಿಂದ ಅನಂತ ಚೈತನ್ಯದಲ್ಲಿ ಲೀನವಾಗಿ ಹೋದರು. ಅವರ ಪೂರ್ವ ಇಚ್ಛೆಯಂತೆ ಅವರ ಜನ್ಮಸ್ಥಳವಾದ ಗೋಕಾಕ ತಾಲೂಕಿನ ಮಮದಾಪುರ ಗ್ರಾಮದಲ್ಲಿನ ಅವರೇ ಕಟ್ಟಿಸಿದ ಶಾಲೆಯ ಆವರಣದಲ್ಲಿ ಅವರನ್ನು ಸಕಲ ರಾಜಗೌರವ ಮರ್ಯಾದೆಗಳೊಂದಿಗೆ ಸಮಾಧಿ ಮಾಡಲಾಯಿತು.

ಅವರ ಮರಣದ ಸುದ್ದಿ ನಾಡಿನ ತುಂಬೆಲ್ಲ ಹರಡಿ ಹಲವಾರು ಸಂದೇಶಗಳು ಬಂದವು. ಇದರಲ್ಲಿ ಒಂದಾದ ಅಮೇರಿಕೆಯ ಶಿಕ್ಷಣದ ಮೂಲಭೂತ ವಿಚಾರ ಸಂಸ್ಥೆಯು 'It is one of the most progressive Universities in



India' ಎಂದೂ ಹಾಗೂ 'Dr. Pavate took care of this University as if it was his own Property'[18] ಎಂದು ಮೊದಲಾಗಿ ಪ್ರಶಂಸಿಸಿತು.

ಡಾ. ಡಿ.ಸಿ. ಪಾವಟೆಯವರ ಅಡಳಿತ ಸಾಮರ್ಥ್ಯ, ಚುರುಕುಬುದ್ಧಿ, ವ್ಯವಹಾರ ಕೌಶಲ್ಯ, ಸಾರ್ವಜನಿಕ ಹಣವನ್ನು ಸದುಪಯೋಗಪಡಿಸಿಕೊಳ್ಳುವ ರೀತಿ, ಅದಮ್ಯ ಉತ್ಸಾಹ, ದೈವಭಕ್ತಿ, ಶಿಸ್ತು ಮತ್ತು ದಕ್ಷ ಆಡಳಿತ ವೈಖರಿ ಇಂಥ ಮೊದಲಾದ ಅವರ ಗುಣಗಳು ಇಂದು ಭೌತಿಕವಾಗಿ ಅವರು ಇಲ್ಲದಿದ್ದರು ಅವುಗಳೆಲ್ಲವೂ ಸೂಕ್ಷ್ಮ ಚೇತನಗಳಾಗಿ ವಿವಿಧೆಡೆ ಹರಡಿವೆ. 'ಅಳಿಯುವುದು ಕಾಯ ಉಳಿಯುವುದು ಕೀರ್ತಿ' ಎಂಬ ಉಕ್ತಿ ದಿವಂಗತ ಪಾವಟೆಯವರಿಗೆ ಸಲ್ಲುತ್ತದೆ.


**ಆಕರ ಗ್ರಂಥಗಳು :**

೧. ನಾವಲಗಿ ಸಿ. ಕೆ. ಮತ್ತು ಲಕ್ಕಿ ಚಂದ್ರಶೇಖರ (ಸಂ.) : ಗೋಕಾವಿ ನಾಡಿನ ಹೊನ್ನ ಬೆಳೆ, ಪು. ೭೯.
೨. ಗುಂಜಾಳ ಎಸ್. ಆರ್. (ಸಂ): ಬೆಳಗಾವಿ ಬೆಳಕು, ಸ್ಮರಣ ಸಂಚಿಕೆ, ಪು. ೨೬೦.
೩. ಕ್ಷೇತ್ರಕಾರ್ಯ ವರದಿ, ಪಾವಟೆ ಎಸ್. ಎಸ್. ನಿವೃತ್ತ ಐಎಫ್ ಎಸ್ ಅಧಿಕಾರಿ, ಬೆಳಗಾವಿ
೪. ಕ್ಷೇತ್ರಕಾರ್ಯ ವರದಿ, ರಾಜು ಪಾವಟೆ, ವಕೀಲರು, ಬಾಗಲಕೋಟ
೫. ಕ್ಷೇತ್ರಕಾರ್ಯ ವರದಿ, ರಾಜು ಪಾವಟೆ, ವಕೀಲರು, ಬಾಗಲಕೋಟ


ಸಹಾಯಕ ಪ್ರಾಧ್ಯಾಪಕ, ಜಿ. ಪಿ. ಪಿ. ಹಾಗೂ ವ್ಹಿ. ವ್ಹಿ. ಎಸ್. ಕಾಲೇಜು, ಸಿಂದಗಿ, ವಿಜಯಪುರ





ಸದಾ ಸಾಹಿತ್ಯಿಕ ಒಡನಾಟವುಳ್ಳ ಡಾ. ನಾಗರಾಜ ಮುರಗೋಡರವರು ಒಬ್ಬ ಕತೆಗಾರನೆಂತೋ ಅಂತೆಯೇ ಒಬ್ಬ ಉನ್ನತ ಮೌಲ್ಯಗಳ ಆದರ್ಶ ವ್ಯಕ್ತಿ. ಹೃದಯದಲ್ಲಿ ಮಾನವೀಯತೆ, ನಯನಗಳಲ್ಲಿ ಆತ್ಮೀಯತೆ, ಮಾತಿನಲ್ಲಿ ಆಪ್ತತೆ-ಇವು ಅವರ ಆದರ್ಶದ ಬೇರುಗಳು. ಈ ಕೃತಿಯ ಒಡಲಾಳದಲ್ಲಿ ಬಡವರ ನೊಂದ ಧ್ವನಿಯಿದೆ;ನಿರ್ಗತಿಕರ ಆರ್ತನಾದವಿದೆ. ಪ್ರಾಣಿಗಳ ದಯೆಯಿದೆ;ಪ್ರೀತಿ-ಪ್ರೇಮಗಳ ವ್ಯಾಖ್ಯಾನವಿದೆ. ಮನಸಿನ ದುಗುಡಕ್ಕೆ ಸಾಂತ್ವನ ನೀಡುವ ಶಕ್ತಿಯಿದೆ. ಇವುಗಳ ಜೊತೆಗೆ ಸಾಹಿತಿಗೆ ಸಾಮಾಜಿಕ ಜವಾಬ್ದಾರಿ ಮತ್ತು ಕಳಕಳಿಗಳಿರುತ್ತವೆ ಎಂಬುವುದನ್ನು ಡಾ. ಮುರಗೋಡರವರು ಈ ಕೃತಿಯಲ್ಲಿ ಸಾಬೀತುಪಡಿಸಿದ್ದಾರೆ.

ಸರ್ವ ಸಹೃದಯರು ಓದಲೇ ಬೇಕಾದ ಕೃತಿಯಿದು. ಕಾರಣ ಈ ಕೃತಿಯ ಒಡಲಾಳದಲ್ಲಿ ಕುತೂಹಲಕಾರಿಯಾದ ಚಿಂತನೆಗಳಿವೆ, ರೋಚಕ ಘಟನೆಗಳಿವೆ, ಸಂಸ್ಕರಿಸುವ ಸಂಸ್ಕಾರದ ಸೂತ್ರಗಳಿವೆ. ನಿಜವಾದ ಮಾನವ ಧರ್ಮದ ಮಾಹಿತಿಗಳಿವೆ. ಒಟ್ಟು ಕೃತಿಯನ್ನು ಬೆಟ್ಟು ಮಾಡಿ ತೋರಿಸುವುದೆಂದರೆ 'ಅರಿತು ನಡೆದರೆ ಮಾನವ ಸಂತತಿ;ಮರೆತು ನಡೆದರೆ ದುರಂತದ ದುಃಸ್ಥಿತಿ' ಎನ್ನುವಂತಿದೆ. ಇದು ಈ ಕಾಲದ ಮುನ್ನೆಚ್ಚರಿಕೆಯ ವಾರ್ನಿಂಗ್ ಬೆಲ್ ಕೂಡ ಆಗಿದೆ. ಒಟ್ಟಿನಲ್ಲಿ ಸಾಹಿತ್ಯ ಮತ್ತು ಸಮಾಜದ ಕಾಳಜಿಯೊಂದಿಗೆ ವರ್ತಮಾನದ ತಲ್ಲಣಗಳ ಕಡೆಗೆ ಕತೆಗಾರರ ಚಿಂತನೆಗಳಿವೆ. ಅವರ 'ಅಲಕಾವತಿ' ಸಹೃದಯರ ಮನಸನ್ನು ಸೆಳೆಯುವಂತಾಗಲಿ, ವಿಮರ್ಶಕರಿಂದ ಮೆಚ್ಚುಗೆಯನ್ನು ಗಳಿಸುವಂತಾಗಲಿ, ಕನ್ನಡ ವಾಙ್ಮಯ ಜಗತ್ತಿನ ಮೇಲ್‌ಗರಿಯಾಗಿ ಮೆರೆಯಲಿ ಎಂಬುವುದು ಈ ಸ್ನೇಹಜೀವಿಯ ಹಾರೈಕೆ.


ಡಾ. ವಾಯ್. ವಾಯ್. ಕೊಕ್ಕನವರ
ಕನ್ನಡ ಪ್ರಾಧ್ಯಾಪಕರು,
ಸರಕಾರಿ ಪದವಿ ಕಾಲೇಜು ಜಮಖಂಡಿ



ಅವ್ವ ಪುಸ್ತಕ ಪ್ರಕಾಶನ
ಬೆಳಗಾವಿ

ISBN : 978-81-953734-1-3





ಡಾ. ನಾಗರಾಜ ಡಿ. ಮುರಗೋಡ

# ALAKAVATI

***A collection of Stories***


| | |
|---|---|
| Author's | : **Dr. Nagaraj D. Murgod** |
| Published by | : **Avva Pustaka Prakashan, Belagavi** |
| First Impression | : **2021** |
| Copies | : **1000** |
| Pages | : **XVIII+68** |
| Price | : **Rs. 110/-** |
| Paper Used | : **80 GSM** |
| Copy Right | : **Publisher's** |
| Cover Design | : **Nagaraj Nandaragi, Hubballi-31.** |
| DTP | : **Ravi Kammar** |
| Printers | : **B G Printers, Dharwad** |
| ISBN | : **978-81-953734-1-3** |


---

## ಅಲಕಾವತಿ :

**ಲೇಖನಗಳ ಕಥಾ ಸಂಕಲನ**


| | |
|---|---|
| ಲೇಖಕರು | : ಡಾ. ನಾಗರಾಜ ಡಿ. ಮುರಗೋಡ |
| ಪ್ರಕಾಶಕರು | : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಪುಟಗಳು | : **XVIII+68** |
| ಪ್ರಥಮ ಮುದ್ರಣ | : ೨೦೨೧ |
| © | : ಪ್ರಕಾಶಕರು |
| ಬೆಲೆ | : ರೂ. ೧೧೦/- |
| ಅಕ್ಷರ ಸಂಯೋಜನೆ | : ರವಿ ಕಮ್ಮಾರ |
| ಮುಖಪುಟ | : ನಾಗರಾಜ ನಂದರಗಿ, ಹುಬ್ಬಳ್ಳಿ-೩೧ |
| ಮುದ್ರಕರು | : ಬಿ. ಜಿ. ಪ್ರಿಂಟರ್ಸ್, ಧಾರವಾಡ |
| ISBN | : **978-81-953734-1-3** |

# ಪರಿವಿಡಿ

**


| | | | |
|---|---|---|---|
| ೧. | ಆ ದಿನ | ... | ೧ |
| ೨. | ನನಗೆ ಬಂದಿತ್ತು 'ಏಡ್ಸ್' | ... | ೫ |
| ೩. | ಅಲಕಾವತಿ | ... | ೯ |
| ೪. | ಅಳುವ ಕಾಯಕದವರು | ... | ೨೧ |
| ೫. | ಅರಿವೇ ಗುರು | ... | ೨೬ |
| ೬ | ಕಂಪನ | ... | ೩೩ |
| ೭. | ಕಟು ಸತ್ಯ | ... | ೪೫ |
| ೮. | ಸಂದಿಗ್ಧತೆ | ... | ೪೯ |
| ೯. | ಪ್ರಾಣಿ ದಯೆ | ... | ೫೨ |
| ೧೦. | ಮೂಕರೋಧನ | ... | ೫೬ |


***



ನಮ್ಮ ಶ್ರೀ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆ [illegible] ಜೆ. ಪಿ. ಪೋರವಾಲ ಕಲಾ, ವಾಣಿಜ್ಯ ಹಾಗೂ [illegible] ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ. [illegible] ಅವರ ಪ್ರಕಟವಾಗಲಿರುವ ಸಂಪಾದಿತ ಕೃತಿ "ಅಂತರ್ಗತ". [illegible] ಸೂಚಿಸುವಂತೆ ಹತ್ತು – ಹಲವಾರು ವಿಷಯಗಳು [illegible] ಕೃತಿಯಲ್ಲಿ ಭಾಷೆ, ವಿವಿಧ ರೀತಿಯ ಸಾಹಿತ್ಯ, [illegible] ಮೌಲ್ಯಗಳ ಚಿಂತನಪರವಾದ ಲೇಖನಗಳನ್ನು [illegible]

ಡಾ. ನಾಗರಾಜ ಮುರಗೋಡ ಅವರು [illegible] ಕ್ರಿಯಾಶೀಲ ವ್ಯಕ್ತಿಯಾಗಿದ್ದಾರೆ. ಇಷ್ಟೊಂದು [illegible] ಪ್ರಕಟಗೊಳಿಸುವ ಕೆಲಸ ಸಾಮಾನ್ಯವಾದುದಲ್ಲ. ಈ 'ಅಂತರ್ಗತ' [illegible] ನಮ್ಮ ಮಹಾವಿದ್ಯಾಲಯದ ಅಂತರಾಷ್ಟ್ರೀಯ [illegible] ಸಂದರ್ಭದಲ್ಲಿ ಪ್ರಕಟಗೊಳ್ಳುತ್ತಿರುವುದು [illegible]

ಡಾ. ನಾಗರಾಜ ಅವರ ಸಾಹಿತ್ಯ [illegible] ನಡೆಯಲಿ ಎಂದು ಹೃದಯಪೂರ್ವಕವಾಗಿ [illegible]

ದಿನಾಂಕ
26-01-2020

[illegible]

[illegible]
ನಂ.103/ಎ, 3ನೇ ಮುಖ್ಯ [illegible]
[illegible]

ISBN : 978-81-938117-3-3

ಅಂತರ್ಗತ ಡಾ. ನಾಗರಾಜ ಡಿ. ಮುರಗೋಡ

# ಅಂತರ್ಗತ

ಡಾ. ನಾಗರಾಜ ಡಿ. ಮುರಗೋಡ



**Antargata** - A collection of Articles by various scholars

| | | |
|---|---|---|
| Editor's Name | : | Dr. Nagaraj D. Murgod |
| Published by | : | Anant Prakashana, Bangalore |
| First Impression | : | 2020 |
| Copies | : | 1000 |
| Pages | : | xx + 240 |
| Price | : | Rs. 210/- |
| Paper Used | : | 70 GSM |
| Copy Right | : | Editor |
| Cover Design | : | Chittar Kala Balaga, Dharawad |
| DTP | : | Ravi Kammar |
| Printers | : | B G Printers, Dharwad, 98452 70114 |
| ISBN | : | 978-81-938117-3-3 |
| Book Size | : | 1/8th Demi |

**ಅಂತರ್ಗತ –**

ವಿವಿಧ ಸಂಶೋಧಕರಿಂದ ಬರೆಯಲ್ಪಟ್ಟ ಸಂಶೋಧನ ಲೇಖನಗಳ ಸಂಗ್ರಹ

| | | |
|---|---|---|
| ಸಂಪಾದಕರು | : | ಡಾ.ನಾಗರಾಜ ಡಿ.ಮುರಗೋಡ |
| ಪ್ರಕಾಶಕರು | : | ಅನಂತ ಪ್ರಕಾಶನ<br>ನಂ.೧೦೩/ಎ, ೩ನೇ ಮುಖ್ಯ ರಸ್ತೆ,<br>೨ನೇ ಹಾಪ್ ಲೈನ್, ಟಾಟಾ ಸಿಲ್ಕ್ ಫಾರಂ,<br>ಬಸವನಗುಡಿ, ಬೆಂಗಳೂರು-೫೬೦೦೦೪<br>ಮೊಬೈಲ್ :[illegible] |
| ಪುಟಗಳು | : | xx + ೨೪೦ |
| ಪ್ರಥಮ ಮುದ್ರಣ | : | ೨೦೨೦ |
| ಹಕ್ಕುಗಳು | : | ಸಂಪಾದಕರು |
| ಬೆಲೆ | : | ರೂ. ೨೧೦/- |
| ಅಕ್ಷರ ಸಂಯೋಜನೆ | : | ರವಿ ಕಮ್ಮಾರ |
| ಮುಖಪುಟ | : | ಚಿತ್ತಾರ ಕಲಾ ಬಳಗ ಧಾರವಾಡ |
| ಮುದ್ರಕರು | : | ಬಿ. ಜಿ. ಪ್ರಿಂಟರ್ಸ್, ಧಾರವಾಡ |



ಹಿರಿಯ ಪ್ರಾಧ್ಯಾಪಕರು
ಹಾಗೂ
ನನಗೆ ಮಾರ್ಗದರ್ಶಕರೂ ಆದ
ಸಹೃದಯಿ
**ಪ್ರೊ. ಚಂದ್ರಶೇಖರ ಅಕ್ಕಿ**
ಅವರಿಗೆ

# ಘಟಪ್ರಭೆಯ ಎರಡು ಸೇವಾಶ್ರಮಗಳು

– ಡಾ. ನಾಗರಾಜ ಡಿ. ಮುರಗೋಡ

ಗೋಕಾಕ ನಾಡಿನ ವೈದ್ಯಕೀಯ ಕ್ಷೇತ್ರದಲ್ಲಿ ಎರಡು ಧ್ರುವತಾರೆಗಳಂತೆ ಜನಮಾನಸದಲ್ಲಿ ಹೆಸರುವಾಸಿಗಳಾಗಿರುವ ಎರಡು ಆಸ್ಪತ್ರೆಗಳೆಂದರೆ, 1) ಕರ್ನಾಟಕ ಆರೋಗ್ಯ ಧಾಮ (Karnataka Health Institute) ಹಾಗೂ 2) ಜಗದ್ಗುರು ಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆ (Jagadguru Guru Siddeshwar Co-Operative Hospital). ಈ ಎರಡು ಆಸ್ಪತ್ರೆಗಳು ರೋಗಿಯೇ ದೇವರು ; ಅವನ ಸೇವೆಯನ್ನು ಮಾಡಬೇಕು' ಎಂಬ ಧ್ಯೇಯ ವಾಕ್ಯವನ್ನು ಹಾಗೂ ಆಸ್ಪತ್ರೆಯೇ ದೇವಾಲಯ' ಎಂಬ ಸಿದ್ಧಾಂತವನ್ನು ಅಕ್ಷರಶಃ ಅಳವಡಿಸಿಕೊಂಡಿವೆ.

ಗೋಕಾಕ ತಾಲೂಕಿನ ಘಟಪ್ರಭಾದ ಈ ಎರಡು ಆಸ್ಪತ್ರೆಗಳು ಗ್ರಾಮಾಂತರ ಪ್ರದೇಶದ ಎರಡು ಸೇವಾಶ್ರಮಗಳಿದ್ದಂತೆ. ಈಗಿನ ಬಡ ದುರ್ಬಲ ರೋಗಿಗಳ ಸೇವೆ ಮಾಡುತ್ತಾ ಗಡಿನಾಡಿನ ಜನರ ಆರೋಗ್ಯದ ಎರಡು ಕಣ್ಣುಗಳಂತೆ ಸೇವೆ ಸಲ್ಲಿಸುತ್ತಿವೆ. ಈ ಭಾಗದ ಪ್ರತಿಯೊಂದು ಮನೆಯವರು ಈ ಎರಡು ಆಸ್ಪತ್ರೆಗಳ ಫಲಾನುಭವಿಗಳೇ. ವೈದ್ಯಕೀಯವನ್ನು ಹಣ ಸಂಪಾದನೆಯ ದಂಧೆಯನ್ನಾಗಿ ಮಾಡಿಕೊಂಡ ದವಾಖಾನೆಗಳ ವೈದ್ಯರಿಗೇನೂ ಕೊರತೆಯಿಲ್ಲ. ಆದರೆ ಉದಾತ್ತ ಸೇವಾ ಧರ್ಮದ ದೀಕ್ಷೆ ತೊಟ್ಟು, ದುಬಾರಿ ವೈದ್ಯಕೀಯ ಶಸ್ತ್ರ ಚಿಕಿತ್ಸೆಯ ಖರ್ಚು ವೆಚ್ಚ ಭರಿಸಲಾಗದ ದೀನ ದುರ್ಬಲರಿಗೆ ಸುಲಭ ಚಿಕಿತ್ಸೆಯಲ್ಲಿ ಉತ್ತಮ ಚಿಕಿತ್ಸೆ ಮತ್ತು ಉಪಚಾರ ನೀಡುವ ಆರೋಗ್ಯ ಸಂಸ್ಥೆಗಳು ಇಂದು ಬಹಳ ವಿರಳ. ಅಲ್ಲದೇ ತ್ಯಾಗಶೀಲ ಹಾಗೂ ಸೇವಾ ಮನೋಭಾವದ ವೈದ್ಯರೂ ಸಹ ಅಪರೂಪ. ಈ ಹಿನ್ನೆಲೆಯಲ್ಲಿ ಕೆ. ಎಚ್. ಆಯ್. ಮತ್ತು ಜೆ. ಜಿ. ಸಿ. ಓ.ಗಳೆಂಬ ಆಸ್ಪತ್ರೆಗಳು ಇಡೀ ನಮ್ಮ ನಾಡಿಗೆ ಮಾದರಿ ಎನಿಸಿವೆ.

ವಿಶ್ವ ವಿಖ್ಯಾತ ಗೋಕಾಕ ಜಲಪಾತ, ರುದ್ರ ರಮಣೀಯ ನಿಸರ್ಗದ ಚೆಲುವು, ಘಟಪ್ರಭಾ ನದಿಯ ಹಿನ್ನೀರ, ರೈಲು ನಿಲ್ದಾಣಗಳ ಇಕ್ಕೆಲಗಳಲ್ಲಿ ಪ್ರಕೃತಿಯ ಮಡಿಲಲ್ಲಿ ಈ ಆರೋಗ್ಯ ಕೇಂದ್ರಗಳು ರಾರಾಜಿಸುತ್ತಿವೆ. ಮಲ್ಲಿಕಾರ್ಜುನ ಗುಡ್ಡದ ಇಳಿಜಾರಿನ ಸೆರಗಿನಲ್ಲಿ ಜೆ.ಜಿ.ಸಿ.ಓ. ಆಸ್ಪತ್ರೆ ತಲೆ ಎತ್ತಿದ್ದರೆ, ಪೂರ್ವದ ಬಯಲಿನಲ್ಲಿ ಕೆ.ಎಚ್.ಆಯ್. ವಿಸ್ತಾರವಾಗಿ ಮೈ ಚಾಚಿದೆ. ಧೂಪದಾಳ ಜಲಾಶಯದ ಮೇಲಿಂದ ಬೀಸುವ ತಂಗಾಳಿ ಆರೋಗ್ಯವರ್ಧಕ. ಇಲ್ಲಿಯ ನೆಲ-ಜಲ, ಗಾಳಿಯೇ ಸತ್ವಪೂರ್ಣ. ಇಂತಹ ಪೂರಕ ವಾತಾವರಣದಲ್ಲಿ ಸ್ವಯಂಸೇವಾ ಮನೋಭಾವನೆಯಿಂದ ಜನರ



ಆರೋಗ್ಯದ ಹೊಣೆ ಹೊತ್ತು ಈ ಆರೋಗ್ಯ ದೇಗುಲಗಳು ಕ್ರಿಯಾಶೀಲವಾಗಿರುವುದು ಈ ನಾಡಿನ ಪುಣ್ಯ ಹಾಗೂ ಜನರ ಸೌಭಾಗ್ಯ.

178 ಎಕರೆಯ ವಿಶಾಲ ಪ್ರದೇಶದಲ್ಲಿ ವ್ಯಾಪಿಸಿರುವ ಕರ್ನಾಟಕ ಆರೋಗ್ಯ ಧಾಮವು ಹೂ, ಗಿಡ, ಹಸಿರು ನಂದನ ವನ ಮತ್ತು ಸುಂದರ ಕಟ್ಟಡಗಳಿಂದ ಮನಸೂರೆಗೊಳಿಸುತ್ತದೆ. ದೀನ ದುರ್ಬಲರಿಗೆ ಅಲ್ಪ ವೆಚ್ಚದಲ್ಲಿ ಉನ್ನತ ದರ್ಜೆಯ ಉಪಚಾರ ನೀಡಲು ಹಗಲಿರಳು ಸದಾ ಸನ್ನದ್ಧವಾಗಿ ನಿಂತಿದೆ. ಇದರ ಸಂಸ್ಥಾಪಕ ವೈದ್ಯರು ಇಂದು ಪ್ರಾತಃಸ್ಮರಣೀಯರಾದ ಅಥಣಿಯ ಡಾ. ಕೊಕಟನೂರರವರು. ಇದು ದಿನಾಂಕ 05-05-1935 ರಲ್ಲಿ ಕಾರ್ಯಾರಂಭ ಮಾಡಿದೆ. ರಾಷ್ಟ್ರೀಯ ಸೇವಾದಳದ ಡಾ. ನಾಸೂ ಹರಡಿಕರರವರ ಮಾರ್ಗದರ್ಶನದಲ್ಲಿ ಡಾ. ಎಂ.ಕೆ. ವೈದ್ಯ ಅವರು ತಮ್ಮ ಕುಟುಂಬದ ಪರಿವಾರವನ್ನೆಲ್ಲ ಈ ಆರೋಗ್ಯ ಯಜ್ಞಕ್ಕೆ ಅರ್ಪಿಸಿಕೊಂಡಿದ್ದಾರೆ.

ಡಾ. ಕಿರಣ, ಡಾ. ಅಲ್ಕಾ, ಡಾ. ಘನಶಾಂ, ಡಾ. ಸ್ವಾತಿಯಂತಹ ಹಲವು ಸಮರ್ಥ ವೈದ್ಯರ ತಂಡ ಈ ಆರೋಗ್ಯ ದೇಗುಲವನ್ನು ಇನ್ನಷ್ಟು ಸಾರ್ಥಕವಾಗುವಂತೆ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. 430 ಬೆಡ್‌ಗಳು, ತುರ್ತು ಚಿಕಿತ್ಸಾ ವಿಭಾಗ, ಹೆರಿಗೆ ವಾರ್ಡ್, ಕ್ಷಯ ರೋಗ ಘಟಕ, ಸ್ಪೆಷಲ್ ಮತ್ತು ಜನರಲ್ ವಾರ್ಡ್‌ಗಳಲ್ಲದೇ 1955 ರಿಂದ ಸಂಚಾರಿ ಆರೋಗ್ಯ ಸೇವಾ ಘಟಕ ಸ್ಥಾಪಿಸಿ ನೂರಾರು ಹಳ್ಳಿಗಳ ಮನೆ ಬಾಗಿಲಿಗೆ ಹೋಗಿ ಆರೋಗ್ಯ ಸೇವೆಯನ್ನು ನೀಡುತ್ತಿದೆ.

ಇಲ್ಲಿ ಎಲ್ಲ ರೀತಿಯ ಚಿಕಿತ್ಸಾ ಸೌಲಭ್ಯಗಳು ಲಭ್ಯವಿದ್ದು ತನ್ನ ಸರಳತೆಯ ಮೂಲಕ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಹೆಸರು ಉಳಿಸಿಕೊಂಡಿದೆ. ಶ್ವೇತ ವಸ್ತ್ರಧಾರಿಣಿ ದಾದಿಯರು, ಜೀವದೀಕ್ಷೆ ತೊಟ್ಟ ಸೇವಾಶ್ರಮದವರು ಹಾಗೂ ಆರೋಗ್ಯ ಕಾರ್ಯಕರ್ತರು ಹೆಚ್ಚು ಸಂಬಳ ಪಡೆಯದೇ ತಮ್ಮ ಜೀವನ ನಿರ್ವಹಣೆಯ ಆಶ್ರಯದೊಂದಿಗೆ ಸಮಾಜ ಸೇವೆಯಲ್ಲಿ ತಮ್ಮನ್ನು ಮುಡುಪಿಸಿಕೊಂಡಿದ್ದಾರೆ. ಒಟ್ಟಾರೆಯಾಗಿ ಈ ಆಸ್ಪತ್ರೆಯನ್ನು ನೋಡಿದವರಿಗೆ ಒಂದು ಸಾತ್ವಿಕ ಸಮಾಧಾನ ವಾಗುವುದು.

**ಜೆ.ಜಿ.ಸಿ.ಓ.:** ಆಸ್ಪತ್ರೆಯು ಸುವರ್ಣ ಮಹೋತ್ಸವದ ಸಂಭ್ರಮ ಕಂಡಿರುವ ಆಸ್ಪತ್ರೆ. ಹುಬ್ಬಳ್ಳಿಯ ಮೂರು ಸಾವಿರ ಮಠದ ಪ. ಪೂ. ಜಗದ್ಗುರು ಶ್ರೀ ಗುರುಸಿದ್ಧೇಶ್ವರ ರಾಜಯೋಗೀಂದ್ರ ಮಹಾಸ್ವಾಮಿಗಳು ಬಡ ಹಳ್ಳಿಗರ ಆರೋಗ್ಯ ಸೇವೆಯ ಏಕೈಕ ಉದ್ದೇಶದಿಂದ 1951ರಲ್ಲಿ ಈ ಸಹಕಾರಿ ಆಸ್ಪತ್ರೆಯನ್ನು ಸ್ಥಾಪಿಸಿದ್ದಾರೆ.

ಇದು ರಾಷ್ಟ್ರೀಯ ಸಹಕಾರಿ ರಂಗದ ಮೊದಲ ಬೃಹತ್ ಸುಸಜ್ಜಿತ ಆಸ್ಪತ್ರೆ. ಇಲ್ಲಿಯ ಚಿಕಿತ್ಸಾ ಶುಲ್ಕಗಳು ಕಡು ಬಡವರಿಗೂ, ರೈತಾಪಿ ಜನರಿಗೂ



ಕೈಗೆಟುಕುವಂತಿದ್ದು, ತೀರ ಅಸಹಾಯಕ ನಿರ್ಗತಿಕರಿಗೆ ಉಚಿತ ಚಿಕಿತ್ಸೆಗಳೂ ಕೂಡ ಇಲ್ಲಿ ಲಭ್ಯವಾಗಿವೆ. ಪರಮಪೂಜ್ಯಶ್ರೀಗಳು 63 ಎಕರೆ ಭೂಮಿ ದಾನ ನೀಡಿದ್ದಲ್ಲದೆ, ಇಂದಿನವರೆಗೂ ಈ ಆಸ್ಪತ್ರೆಗೆ ಧನ ಸಹಾಯವನ್ನು ಒದಗಿಸುತ್ತಾ ಬಂದಿದ್ದಾರೆ. ಅವರ ಉತ್ತರಾಧಿಕಾರಿಗಳಾದ ಡಾ. ಜಗದ್ಗುರು ಗಂಗಾಧರ ಮಹಾಸ್ವಾಮಿಗಳು (ಮೂಜಗಂ) ಈ ಸಹಕಾರಿ ಆರೋಗ್ಯ ಸಸಿಯನ್ನು ಹೆಮ್ಮರವಾಗಿ ಬೆಳೆಸಿದ್ದಾರೆ.

ಈ ಆಸ್ಪತ್ರೆಯು ಸುಸಜ್ಜಿತ ಕಟ್ಟಡ, ಅನುಭವಿ ವೈದ್ಯರ ತಂಡ, ಪರಿಣಿತಿ ಸಿಬ್ಬಂದಿ, ಹಾಗೂ ಆಧುನಿಕ ಯಂತ್ರೋಪಕರಣಗಳ ಸೌಲಭ್ಯವನ್ನು ಹೊಂದಿದ್ದು; 213 ಹಾಸಿಗೆಗಳನ್ನು ಹೊಂದಿರುವ ಈ ಭಾಗದ ಬಹುದೊಡ್ಡ ಆಸ್ಪತ್ರೆಯಾಗಿದೆ. ಇಲ್ಲಿ ಹೊರ ರೋಗಿಗಳ ವಿಭಾಗ, ತುರ್ತು ಚಿಕಿತ್ಸಾ ವಿಭಾಗ, ಔಷಧಾಲಯ, ಆಪರೇಷನ್ ಥೇಟರ, ಹೆರಿಗೆ ವಾರ್ಡ್, ಸೆನಿಟೋರಿಯಂ, ಸುಸಜ್ಜಿತ ಪ್ರಯೋಗಾಲಯ, ಕ್ಯಾಂಟೀನುಗಳಂತಹ ಅಗತ್ಯ ಸೌಲಭ್ಯಗಳು ಇವೆ. ಡಿಪ್ಲೋಮಾ ಇನ್ ನರ್ಸಿಂಗ ಹಾಗೂ ಪದವಿ ನರ್ಸಿಂಗ್ ಕೋರ್ಸ್‌ಗಳು ಇದ್ದು, 1996-97 ರಲ್ಲಿ ಬಿ. ಎ. ಎಮ್. ಎಸ್. ಆಯುರ್ವೇದಿಕ್ ವೈದ್ಯಕೀಯ ಕಾಲೇಜನ್ನು ಸಹ ಪ್ರಾರಂಭಿಸಿದೆ ಇದಕ್ಕೆ 120 ಹಾಸಿಗೆಯನ್ನು ಅಳವಡಿಸಲಾಗಿದೆ.

ಈ ಆಸ್ಪತ್ರೆಯಲ್ಲಿನ ಸಸ್ಯಕಾಶಿ ನೋಡುಗನ ಕಣ್ಣುಗಳಿಗೆ ಹಬ್ಬ. ಕೇವಲ ಐದಾರು ವರ್ಷಗಳಲ್ಲಿ ಮೈದಳೆದ ಈ ಆಸ್ಪತ್ರೆಯ 'ನಿಸರ್ಗ – ಉಪಚಾರ ಮಂದಿರ' (Naturopathy Centre)) ದ ಭವ್ಯವಾದ ಕಟ್ಟಡ ನಮ್ಮ ನಾಡಿನ ಹೆಮ್ಮೆ. ಇಲ್ಲಿ ಪ್ರಕೃತಿಯೋಗ ಚಿಕಿತ್ಸೆಯೊಂದಿಗೆ ಆಕ್ಯುಪಂಕ್ಚರ್ (ಸೂಜಿ ಚಿಕಿತ್ಸೆ), ವಾಟರ್ ಥೆರಪಿ (ನೀರಿನ ಚಿಕಿತ್ಸೆ), ಹೈಡ್ರೋಥೆರಪಿ, ಸರ್ಕ್ಯುಲರ್ ಜೆಟ್ ಥೆರಪಿ, ಮಡ್‌ಬಾತ್, ಸನ್‌ಬಾತ್, ಸ್ಟೀಮ್‌ಬಾತ್‌ಗಳು ಸಹ ಲಭ್ಯವಾಗಿವೆ. ಇದು ಪ್ರಾಚೀನ ವೈದಿಕ ತತ್ವಚಿಂತನೆಗಳ ಮೇಲೆ ಸ್ಥಾಪಿತವಾದ ಕೇಂದ್ರವಾಗಿದ್ದು ಇದು ಮನುಷ್ಯನ ದೈಹಿಕ ಮತ್ತು ಮಾನಸಿಕ ಶಕ್ತಿಗಳ ಸಾಮರಸ್ಯದ ಒಮ್ಮುಖವನ್ನು ಹೆಚ್ಚಿಸುತ್ತದೆ. ಇದು ಔಷಧೀಯ ವಿಜ್ಞಾನದ ಪರ್ಯಾಯ ಚಿಕಿತ್ಸಾ ವಿಧಾನವಾಗಿದ್ದು, ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಭದ್ರಪಡಿಸುತ್ತದೆ. ಔಷಧಿಗಳಿಲ್ಲದೇ ದೀರ್ಘಕಾಲದ ಕಾಯಿಲೆ ಹಾಗೂ ಶಾರೀರಿಕ ಸಮಸ್ಯೆಗಳನ್ನು ನಿವಾರಿಸುವುದು. ಇಲ್ಲಿನ ಪ್ರತಿಯೊಂದು ಚಿಕಿತ್ಸೆಗಳು ಶಾಂತ ಮತ್ತು ಪರಿಣಾಮಕಾರಿ ಚಿಕಿತ್ಸೆಗಳಾಗಿರುವುದು ಇದರ ವಿಶೇಷ.

ರಾಷ್ಟ್ರೀಯ – ಅಂತರಾಷ್ಟ್ರೀಯ ಖ್ಯಾತಿಯ ಡಾ. ಮೆಟಗುಡ್ಡ, ಡಾ. ಸುಶೀಲ, ಡಾ. ಆಲೂರು, ಡಾ. ವಿಲಾಸ ನಾಯಿಕವಾಡಿಯಂತಹ ವೈದ್ಯ ದಿಗ್ಗಜರು ಈ ಆಸ್ಪತ್ರೆಗೆ ಸೇವಾನುದಾನ ನೀಡಿ ಈ ಸಹಕಾರಿ ಆಸ್ಪತ್ರೆಯ ಕೀರ್ತಿ ಪ್ರತಿಷ್ಠೆಯನ್ನು ಬಾನೆತ್ತರಕ್ಕೆ ಹೆಚ್ಚಿಸಿದ್ದಾರೆ. ಇಪ್ಪತ್ತೈದು ವರ್ಷಗಳ ವರೆಗೆ ಅಖಂಡ ಸೇವೆ ಸಲ್ಲಿಸುತ್ತಾ ಬಂದ ಡಾ. ನಾಯಿಕವಾಡಿಯವರು ಈ ಆಸ್ಪತ್ರೆಯ ಜೀವಾಳ.

ವೈದ್ಯಕೀಯ ಸೇವೆಯೂ ಸಹಿತ ಇಂದು ಹಣ ಗಳಿಸುವ ಒಂದು ಬೃಹತ್ ಉದ್ಯಮವಾದ ಕಾಲಘಟ್ಟದಲ್ಲಿ ಘಟಪ್ರಭಾದ ಈ ಎರಡು ಸೇವಾಶ್ರಮಗಳು ಇನ್ನೂ ಸಹಿತ ತಮ್ಮ ಪ್ರಾಚೀನ ವೈದ್ಯ ಪದ್ಧತಿಯ ಪರಂಪರೆಯನ್ನು ಮೈಗೂಡಿಸಿಕೊಂಡು ಬಂದು, ಈ ಭಾಗದ ಬಡವರ, ನಿರ್ಗತಿಕರ ಮತ್ತು ಮುಗ್ಧ ಹಳ್ಳಿಗರ ಸೇವೆಯಲ್ಲಿ ಭಗವಂತನನ್ನು ಕಾಣುತ್ತಿರುವುದು ಉತ್ತರ ಕರ್ನಾಟಕದ ಜನತೆಯ ಪುಣ್ಯವೆಂದೇ ಭಾವಿಸಬಹುದು.

❑❑

ಸಹಾಯಕ ಪ್ರಾಧ್ಯಾಪಕರು, ಜಿ.ಪಿ. ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ. ವ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ



ಅನುನಯ

ಸಮಾಜದ ಶ್ರೇಯೋಭಿವೃದ್ಧಿಗಾಗಿ ಸದಾ ಮಿಡಿಯುವ ಕ್ರಿಯಾಶೀಲ ಪ್ರಾಧ್ಯಾಪಕರು, ಚಿಂತನಶೀಲ ಬರಹಗಾರರು ಆದ ಡಾ. ನಾಗರಾಜ ಮುರಗೋಡ ಅವರ 'ಅನುನಯ' ಎಂಬ ಗ್ರಂಥದಲ್ಲಿ ಮೂಡಿ ಬಂದಿರುವ ಸಂಶೋಧನಾತ್ಮಕ ಲೇಖನಗಳ ಗುಚ್ಛ ನಿರಂತರ ಓದಿಗೆ ಪೂರಕವಾದ ವಿಷಯಗಳನ್ನೊಳಗೊಂಡಿದೆ. ಇಲ್ಲಿ ಬರುವ ಲೇಖನಗಳು ಸಂಶೋಧನಾರ್ಥಿಗಳಿಗೆ ಉಪಯುಕ್ತ ಆಕರಗಳಾಗಿವೆ. ಗತ ಇತಿಹಾಸದ ಮೌಲ್ಯ ಹಾಗೂ ಸಂಸ್ಕೃತಿಯ ವಿಚಾರಗಳ ಮೇಲೆ ಬೆಳಕು ಚೆಲ್ಲಿ ಸಹೃದಯರ ಆದರ್ಶ ಜೀವನಕ್ಕೆ ದಾರಿ ದೀಪವಾಗುತ್ತವೆ...

ಹೀಗೆ ಜ್ಞಾನದ ವಿವಿಧ ಆಯಾಮಗಳನ್ನು ಹೊಂದಿದ ಲೇಖನಗಳು ತತ್ವಾದರ್ಶ, ವೈಚಾರಿಕತೆಯ, ಮೌಲ್ಯಯುತ ನೆಲೆಗಟ್ಟಿನ ಮೇಲೆ ಮೂಡಿ ಬಂದಿದ್ದು ಸಂಶೋಧನಾ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇ ಬೇಕಾದ ಗ್ರಂಥವಿದು ಎಂಬ ವಿಚಾರವನ್ನು ಸಂತೋಷದಿಂದ ತಿಳಿಸುತ್ತಾ ನನ್ನೀ ಲೇಖನಿಗೆ ವಿರಾಮ ನೀಡುತ್ತೇನೆ.

......ಮುನ್ನುಡಿಯಿಂದ

**ಶ್ರೀ ಎಂ. ಜಿ. ಜರಾದಾರ**
ಮುಖ್ಯಸ್ಥರು, ಕನ್ನಡ ವಿಭಾಗ,
ಸಿ. ಎಮ್. ಮನಗೂಳಿ ಕಲಾ, ವಿಜ್ಞಾನ, ವಾಣಿಜ್ಯ
ಮಹಾವಿದ್ಯಾಲಯ, ಸಿಂದಗಿ

ಅವ್ವ ಪುಸ್ತಕ ಪ್ರಕಾಶನ
ಬೆಳಗಾವಿ

ISBN : 978-81-953734-3-7

# ಅನುನಯ



ಡಾ. ನಾಗರಾಜ ಡಿ. ಮುರಗೋಡ

**ANUNAY**

*A collection of Articles*

| | |
|---|---|
| Author's | : Dr. Nagaraj D. Murgod |
| Published by | : Avva Pustaka Prakashan, Belagavi |
| First Impression | : 2021 |
| Copies | : 1000 |
| Pages | : XII+66 = 78 |
| Price | : Rs. 110/- |
| Paper Used | : 70 GSM (Demy 1/8th) |
| Copy Right | : Publisher's |
| Cover Design | : Nagaraj Nandaragi Hubballi-31 |
| DTP | : Ravi Kammar |
| Printers | : B. G. Printers, Dharwad |
| ISBN | : 978-81-953734-3-7 |

**ಅನುನಯ** : ಲೇಖನಗಳ ಸಂಚಯ

| | |
|---|---|
| ಲೇಖಕರು | : ಡಾ. ನಾಗರಾಜ ಡಿ. ಮುರಗೋಡ |
| ಪ್ರಕಾಶಕರು | : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಪುಟಗಳು | : XII+66 = 78 |
| ಪ್ರಥಮ ಮುದ್ರಣ | : ೨೦೨೧ |
| © | : ಪ್ರಕಾಶಕರು |
| ಬೆಲೆ | : ರೂ. ೧೧೦/- |
| ಅಳತೆ | : ಡೆಮಿ ೧/೮ |
| ಅಕ್ಷರ ಸಂಯೋಜನೆ | : ರವಿ ಕಮ್ಮಾರ |
| ಮುಖಪುಟ | : ನಾಗರಾಜ ನಂದರಗಿ, ಹುಬ್ಬಳ್ಳಿ-೩೧ |
| ಮುದ್ರಕರು | : ಬಿ. ಜಿ. ಪ್ರಿಂಟರ್ಸ್, ಧಾರವಾಡ |
| ISBN | : 978-81-953734-3-7 |






## ANUSARAN

*A collection of Articles*

| | |
|---|---|
| Author's | : Dr. Nagaraj D. Murgod |
| Published by | : Avva Pustaka Prakashan, Belagavi |
| First Impression | : 2021 |
| Copies | : 1000 |
| Pages | : X+66 = 76 |
| Price | : Rs. 110/- |
| Paper Used | : 70 GSM (Demy 1/8th) |
| Copy Right | : Publisher's |
| Cover Design | : Nagaraj Nandaragi Hubballi-31 |
| DTP | : Ravi Kammar |
| Printers | : B. G. Printers, Dharwad |
| ISBN | : 978-81-950975-3-1 |

---

## ಅನುಸರಣ : ಲೇಖನಗಳ ಸಂಕಲನ

| | |
|---|---|
| ಲೇಖಕರು | : ಡಾ. ನಾಗರಾಜ ಡಿ. ಮುರಗೋಡ |
| ಪ್ರಕಾಶಕರು | : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಪುಟಗಳು | : X+66 = 76 |
| ಪ್ರಥಮ ಮುದ್ರಣ | : ೨೦೨೧ |
| © | : ಪ್ರಕಾಶಕರು |
| ಬೆಲೆ | : ರೂ. ೧೧೦/- |
| ಆಳತೆ | : ಡೆಮಿ ೧/೮ |
| ಅಕ್ಷರ ಸಂಯೋಜನೆ | : ರವಿ ಕಮ್ಮಾರ |
| ಮುಖಪುಟ | : ನಾಗರಾಜ ನಂದರಗಿ, ಹುಬ್ಬಳ್ಳಿ-೩೧ |
| ಮುದ್ರಕರು | : ಬಿ. ಜಿ. ಪ್ರಿಂಟರ್ಸ್, ಧಾರವಾಡ |
| ISBN | : 978-81-950975-3-1 |






**ANVESHAN**

*A collection of Articles by various scholars*

| | |
|---|---|
| Editor's Name | : Dr. Nagaraj D. Murgod |
| Published by | : Avva Pustaka Prakashan, Belagavi |
| First Impression | : 2021 |
| Copies | : 1000 |
| Pages | : VIII+116 |
| Price | : Rs. 150/- |
| Paper Used | : 70 GSM |
| Copy Right | : Publisher's |
| Cover Design | : Nagaraj Nandaragi, Hubballi-31. |
| DTP | : Ravi Kammar |
| Printers | : B G Printers, Dharwad |
| ISBN | : 978-81-949726-4-8 |

**ಅನ್ವೇಷಣ :** ಸಂಶೋಧನ ಪ್ರಬಂಧಗಳ ಸಂಕಲನ

(ಈ ಪುಸ್ತಕದಲ್ಲಿರುವ ಲೇಖನಗಳ ವಿಷಯ ಲೇಖಕರ ವಿವೇಚನೆಗಳಿಂದ ಹೊರಬಂದವುಗಳು. ಅದಕ್ಕೆ ಸಂಪಾದಕರಾಗಲಿ ಹಾಗೂ ಪ್ರಕಾಶಕರಾಗಲಿ ಜವಾಬ್ದಾರರಲ್ಲ.)

| | |
|---|---|
| ಸಂಪಾದಕರು | : ಡಾ. ನಾಗರಾಜ ಡಿ. ಮುರಗೋಡ |
| ಪ್ರಕಾಶಕರು | : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಪುಟಗಳು | : VIII + 116 |
| ಪ್ರಥಮ ಮುದ್ರಣ | : ೨೦೨೧ |
| © | : ಪ್ರಕಾಶಕರು |
| ಬೆಲೆ | : ರೂ. ೧೫೦/- |
| ಅಕ್ಷರ ಸಂಯೋಜನೆ | : ರವಿ ಕಮ್ಮಾರ |
| ಮುಖಪುಟ | : ನಾಗರಾಜ ನಂದರಗಿ, ಹುಬ್ಬಳ್ಳಿ-೩೧ |
| ಮುದ್ರಕರು | : ಬಿ. ಜಿ. ಪ್ರಿಂಟರ್ಸ್, ಧಾರವಾಡ |
| ISBN | : 978-81-949726-4-8 |




# ಸ್ಥಳನಾಮ ಅಧ್ಯಯನ ಬೆಳೆದು ಬಂದ ಬಗೆ

– ಡಾ. ನಾಗರಾಜ ಡಿ. ಮುರಗೋಡ

ಸ್ಥಳನಾಮಗಳ ಅಧ್ಯಯನವನ್ನು ಮಾಡುವುದು ಗೊಂಡಾರಣ್ಯದಲ್ಲಿ ಪ್ರವೇಶಿಸಿ ಪ್ರಾಣಿ, ಪಕ್ಷಿ, ಮೃಗ, ಉರಗಗಳ ದಾಳಿಯಿಂದ ತಪ್ಪಿಸಿಕೊಂಡು ಅಮೂಲ್ಯ ನಿಧಿಯನ್ನು ಸಂಗ್ರಹಿಸಿ, ಹೊರಬಂದಂತೆ. ಇಲ್ಲಿ ಅಧ್ಯಯನಕಾರನಿಗೆ ತಾಳ್ಮೆ, ಶ್ರದ್ಧೆಯ ಜೊತೆಗೆ ಭಾಷಾ ಜ್ಞಾನ, ಜಾನಪದ ಜ್ಞಾನ, ಕ್ಷೇತ್ರಕಾರ್ಯ ಜ್ಞಾನ ಮತ್ತು ಸಾಮಾಜಿಕ ಜ್ಞಾನದಂತಹ ಇತರ ಜ್ಞಾನ ಶಿಸ್ತುಗಳೊಂದಿಗೆ ಅವನಿಗೆ ವೈಜ್ಞಾನಿಕ ಮನೋಭಾವ ಅತ್ಯವಶ್ಯಕವಾಗಿ ಬೇಕು. ಇವೆಲ್ಲವುಗಳ ಜ್ಞಾನವಿಲ್ಲದೇ ಈ ಕಾರ್ಯಕ್ಕೆ ಅಣಿಯಾದರೆ ಕಾಡಿನ ಖಗ-ಮೃಗಗಳ ವಿನೋದ ವಸ್ತುವಾಗಬೇಕಾಗುತ್ತದೆ. ಅವುಗಳ ಚೆಲ್ಲಾಟಕ್ಕೆ ಮೂಕ ಪ್ರಾಣಿಯಾಗಬೇಕಾಗುತ್ತದೆ.

ಮಾನವ ತನ್ನ ಅಲೆಮಾರಿ ಜೀವನವನ್ನು ಬಿಟ್ಟು ತನ್ನ ಕುಟುಂಬದೊಂದಿಗೆ ಒಂದೆಡೆ ನೆಲೆ ಕಂಡುಕೊಂಡು ಬದುಕತೊಡಗಿದ. ತನಗೆ ಅವಶ್ಯವಿರುವ ಎಲ್ಲ ಮೂಲಭೂತ ಪದಾರ್ಥಗಳನ್ನು ಒಂದು ಕಡೆಗೆ ಪಡೆದುಕೊಳ್ಳಲು ಪ್ರಾರಂಭಿಸಿದನೋ ಅಂದಿನಿಂದ ಮಾನವ ಏಕಾಂಗಿ ಪ್ರಾಣಿಯಾಗದೇ ಸಮಾಜ ಜೀವಿಯಾಗಿ ಬದುಕತೊಡಗಿದ. ಒಂದೊಂದು ಕುಟುಂಬ ಅಥವಾ ಸಮುದಾಯಗಳು ಒಂದು ನಿಶ್ಚಿತವಾದ ನೆಲೆಯಲ್ಲಿ ವಾಸಿಸಲು ಪ್ರಾರಂಭಿಸಿದಾಗ, ಆ ನೆಲೆಗೆ ಅಥವಾ ಸ್ಥಳಕ್ಕೆ ಅದನ್ನು ಗುರುತಿಸಲು ಒಂದೊಂದು ಹೆಸರನ್ನು ಕೊಡತೊಡಗಿದನು. ಆ ಸ್ಥಳದ ಹೆಸರು ನೀಡುವ ಪ್ರಕ್ರಿಯೆ ಅಂದು ಮಾತ್ರ ನಡೆದು ನಿಲ್ಲಲಿಲ್ಲ. ಇದೊಂದು ನಿರಂತರವಾಗಿ ಸಾಗುವ ಪ್ರಕ್ರಿಯೆಯಾಗಿದೆ.

ಭಾರತದಲ್ಲಿ ಯಾವುದಾದರೊಂದು ಹೊಸ ಜ್ಞಾನ ಶಿಸ್ತು ಮಾನ್ಯತೆ ಪಡೆಯಬೇಕೆಂದರೆ ಅದು ಪಾಶ್ಚಾತ್ಯ ಬಾಗಿಲ ಮೂಲಕವೇ ಬರಬೇಕು ಅಂದಾಗ ಮಾತ್ರ ಅದಕ್ಕೆ ಎಲ್ಲಿಲ್ಲದ ಮಾನ್ಯತೆ. ಅಂಥ ಒಂದು ಹೊಸ ಜ್ಞಾನ ಶಿಸ್ತುಗಳಲ್ಲಿ ಪ್ರಮುಖವಾದದ್ದು ಸ್ಥಳನಾಮಗಳ ಅಧ್ಯಯನ. ಭಾರತ ದೇಶದ ತತ್ವಜ್ಞಾನಿಗಳು, ಭಾಷಾಶಾಸ್ತ್ರಜ್ಞರು, ವ್ಯಾಕರಣಕಾರರು, ಜಾನಪದ ತಜ್ಞರು, ಇತಿಹಾಸಕಾರರು, ಸಂಶೋಧಕರು ಇತ್ತ ಕಡೆ ಗಮನ ಹರಿಸದೇ ಇರುವಾಗಲೇ

ಯುರೋಪ ಮತ್ತು ಅಮೇರಿಕಾ ಖಂಡಗಳಲ್ಲಿ ಇದರ ವ್ಯಾಪಕ ಅಧ್ಯಯನ ಪ್ರಾರಂಭವಾಗಿತ್ತು. ಅಮೇರಿಕೆಯ ಸಂಯುಕ್ತ ಸಂಸ್ಥಾನ, ಡೆನ್ಮಾರ್ಕ, ನಾರ್ವೆ, ಫ್ರಾನ್ಸ್ ಮತ್ತು ಜರ್ಮನ್ ರಾಷ್ಟ್ರಗಳಲ್ಲಿ ಸ್ಥಳನಾಮಗಳ ಅಧ್ಯಯನದ ಬಗ್ಗೆ ಸಾಕಷ್ಟು ಕೆಲಸ ಕಾರ್ಯಗಳು ನಡೆದಿವೆ. ನೆಬ್ರಾಸ್ಕ ಸ್ಥಳನಾಮಗಳ ಬಗ್ಗೆ ಲಿಲಿಯನ್ ಲಿಂಡರ್ ಫಿಟ್ ಪ್ಯಾಟ್ರಿಕ್ ಎನ್ನುವರು ಸಂಶೋಧನೆ ನಡೆಸಿ ೧೯೨೫ ರಲ್ಲಿಯೇ ಮಹಾಪ್ರಬಂಧವೊಂದನ್ನು ಸಿದ್ಧಪಡಿಸಿದ್ದರು. ೧೯೫೭ ರಲ್ಲಿ ಅಮೇರಿಕಾದಲ್ಲಿ ಅಮೇರಿಕಾ ಸ್ಥಳನಾಮ ಸಂಸ್ಥೆಯೊಂದನ್ನು ಸ್ಥಾಪಿಸಿ ಸ್ಥಳನಾಮಗಳ ಅಧ್ಯಯನಕ್ಕೆ ಹೆಚ್ಚಿನ ಒತ್ತು ನೀಡಿತು. ಇದು ಪ್ರಾರಂಭವಾದ ಮೂರೇ ವರ್ಷಗಳಲ್ಲಿ 'Names' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸಲು ಪ್ರಾರಂಭಿಸಿತು.

ಇವೆಲ್ಲವುಗಳ ಪ್ರಭಾವದಿಂದ ಭಾರತದಲ್ಲಿ ಸ್ಥಳನಾಮಗಳ ಅಧ್ಯಯನದ ಗಾಳಿ ಬೀಸಿತು. ಇದಕ್ಕೂ ಮುಂಚೆ ಅದೆಷ್ಟೋ ನಮ್ಮ ಪ್ರಾಚೀನ ವ್ಯಾಕರಣಕಾರರು ಹಾಗೂ ಕಾವ್ಯ ಮೀಮಾಂಸಕರು ಸ್ಥಳನಾಮದ ವ್ಯುತ್ಪತ್ತಿ ಮತ್ತು ನಿಷ್ಪತ್ತಿ ನೀಡುತ್ತಿದ್ದರು.

ಪಾಣಿನಿ ಮತ್ತು ಯಾಸ್ಕ ನಂತ ವಿದ್ವಾಂಸರು ಭಾಷೆಯ ಪ್ರತಿಯೊಂದು ಪದಕ್ಕೂ ನಿರುಕ್ತ ಹೇಳುತ್ತಿದ್ದರು. ಈ ನಿರುಕ್ತ ಹೇಳುವ ಪಂಥ್ಯವನ್ನು ಸಹ ಕಟ್ಟುತ್ತಿದ್ದರು. ಆದರೆ ಅವು ಇಷ್ಟು ದೊಡ್ಡ ಮಟ್ಟದ ಒಂದು ಜ್ಞಾನ ಶಿಸ್ತುವಾಗಿ ಅಧ್ಯಯನ ವಾಗಿರಲಿಲ್ಲ. ಒಟ್ಟಾರೆ ಭಾರತದಲ್ಲಿ ಸ್ಥಳನಾಮಗಳ ಅಧ್ಯಯನ ಪ್ರಾರಂಭಗೊಂಡದ್ದು, ಪಾಶ್ಚಾತ್ಯರಿಂದಲೇ ಎಂಬುದು ಕಟುಸತ್ಯ. ಭಾರತದಲ್ಲಿ ಈ ಸ್ಥಳನಾಮದ ಅಧ್ಯಯನ ಪ್ರಾರಂಭವಾಗಿದ್ದರೂ ಇದರ ಗತಿ ಅಮೆ ವೇಗದಲ್ಲಿದೆ. ಅಲ್ಲೊಂದು ಇಲ್ಲೊಂದು ಎಂಬ ಬೆರಳೆಣಿಕೆಯ ಅಧ್ಯಯನಕ್ಕೆ ಸೀಮಿತವಾಗಿದೆ. ಇದನ್ನು ಪ್ರೋತ್ಸಾಹಿಸಲು ೧೯೭೭ ರಲ್ಲಿ ಮೈಸೂರಿನಲ್ಲಿ ಭಾರತೀಯ ಸ್ಥಳನಾಮ ಸಂಸ್ಥೆ ಜನ್ಮ ತಾಳಿಯಿತು. ಈ ಸಂಸ್ಥೆ ರಾಷ್ಟ್ರಮಟ್ಟದ ಸಂಸ್ಥೆಯಾಗಿದ್ದು, ತಕ್ಕ ಮಟ್ಟಿಗೆ ಸಾಕಷ್ಟು ಅಧ್ಯಯನವನ್ನು ಮಾಡಿದೆ.

ಸ್ಥಳನಾಮಗಳ ಅಧ್ಯಯನದ ಬಗ್ಗೆ ಹೆಸರಿಸಲೇಬೇಕಾದ ಮಹಾ ವಿದ್ವಾಂಸರೆಂದರೆ ಪ್ರೊ. ಎಚ್. ಡಿ. ಸಂಕಾಲಿಯಾರವರು. ಇವರು ಸ್ಥಳನಾಮಗಳನ್ನು ಸಾಂಸ್ಕೃತಿಕ ಅಧ್ಯಯನದ ಆಧಾರದ ಮೇಲೆ ವಿಂಗಡಿಸಿ ಭೌಗೋಳಿಕ, ರಾಜಕೀಯ, ಧಾರ್ಮಿಕ ಎಂಬ ಮುಂತಾದ ವರ್ಗಗಳನ್ನಾಗಿ ಮಾಡಿ ಈ ಕ್ಷೇತ್ರದಲ್ಲಿ ಒಂದು ವಿಶಿಷ್ಟ ಮೈಲುಗಲ್ಲನ್ನು ಸ್ಥಾಪಿಸಿ ಈ ಕಡೆಗೆ ಅಧ್ಯಯನ ಮಾಡಲು ಸಾಕಷ್ಟು ಸಂಶೋಧಕರನ್ನು ಪ್ರೇರೇಪಿಸಿದರು.

ಬಂಗಾಳಿ ಭಾಷೆಯಲ್ಲಿ ವಿದ್ವಾಂಸ ಸುನಿತಕುಮಾರ ಚಟರ್ಜಿ, ಉತ್ತರ ಪ್ರದೇಶದಲ್ಲಿ ವಿದ್ವಾಂಸ ಪ್ರಕಾಶ ಕೊಹ್ಲೀ, ತಮಿಳಿನ ವಿದ್ವಾಂಸ ಕೆ.



ನಚಿಮುತ್ತುರವರು ಇದರಲ್ಲಿ ಗಮನಾರ್ಹವಾದ ಅಧ್ಯಯನ ಮಾಡಿದ್ದಾರೆ. ಇವರಲ್ಲದೇ ಟಿ. ಕೆ. ಶೇಷಾದ್ರಿ, ಶೋಭನಾ ಗೋಖಲೆ, ಬಿ. ಸುರೇಶ, ಸುಮತಿ ಮುಲೆ, ಟಿ. ಲಕ್ಷ್ಮಣ ಪಿಳ್ಳೈ, ಕೆ. ಪಿ. ಅಚ್ಯುತ ಮೆನನ್, ಪಿ. ರಾಮಾಪಿಳರೋಲಿ, ಟಿ. ಕೆ. ಜೋಸೆಫ್, ಪಿ.ಪಿ. ಕೆ. ಪಳಿತ್ ಮತ್ತು ಟಿ.ಬಾಲಕೃಷ್ಣನಾಯರ ರಂತ ಮೊದಲಾದವರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಉತ್ತರ ಪ್ರದೇಶದ ಶಹರಾನ್ಪೂರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ತಮಿಳಿನ ಸ್ಥಳನಾಮಗಳು, ಮಲಬಾರ ಸ್ಥಳನಾಮಗಳು, ಕೊಯಿಮತ್ತೂರ ಜಿಲ್ಲೆಯ ಸ್ಥಳನಾಮಗಳು, ತಿರುವಾಂಕೂರು ಜಿಲ್ಲೆಯ ಸ್ಥಳನಾಮಗಳು, ಕನ್ಯಾಕುಮಾರಿ ಜಿಲ್ಲೆಯ ಸ್ಥಳನಾಮಗಳು ಮುಂತಾದ ಅಧ್ಯಯನಗಳನ್ನು ಇಲ್ಲಿ ಹೆಸರಿಸಬಹುದು.

ಇನ್ನು ಕನ್ನಡದ ಬಗ್ಗೆ ಹೇಳಬೇಕೆಂದರೆ ಇಲ್ಲಿ ಸ್ಥಳನಾಮದ ಬಗ್ಗೆ ಸಾಕಷ್ಟು ಕೆಲಸಗಳು ನಡೆದಿಲ್ಲ. ಮಾಸ್ತಿ ವೆಂಕಟೇಶ ಅಯ್ಯಂಗಾರ, ಡಾ.ದೇ. ಜವರೇಗೌಡ ಮತ್ತು ಡಾ. ಆರ್. ಸಿ. ಹಿರೇಮಠರು ಸ್ಥಳನಾಮಗಳ ಬಗ್ಗೆ ಲೇಖನಗಳನ್ನು ಬರೆದು ಸಂಶೋಧಕರ ಗಮನ ಸೆಳೆದು ಈ ನಿಟ್ಟಿನಲ್ಲಿ ಕೆಲಸ ಮಾಡಲು ಮಾರ್ಗಸೂಚಕರಾಗಿದ್ದಾರೆ. ದೇಜಗೌರವರ ಸ್ಥಳನಾಮ ವ್ಯಾಸಂಗ ಕೃತಿಯೂ ಈ ನಿಟ್ಟಿನಲ್ಲಿ ಅಧ್ಯಯನ ಕೈಗೊಳ್ಳುವವರಿಗೆ ಒಂದು ಉತ್ತಮ ಮೌಲಿಕ ಕೃತಿಯಾಗಿದೆ. ಸ್ಥಳನಾಮಗಳ ಉಗಮ, ಸ್ಥಳನಾಮ ವಿಜ್ಞಾನದ ಇತಿಹಾಸ ಮುಂತಾದ ಲೇಖನಗಳೊಂದಿಗೆ ಮೈಸೂರು ನಗರದ ಬೀದಿ ಹೆಸರುಗಳ ಬಗ್ಗೆ ಬೆಳಕು ಚೆಲ್ಲಿದೆ.

ಇನ್ನು ದಂ. ಭಾ. ಜೋಶಿಯವರ 'ಕರುನಾಡಕತೆ' ಎಂಬ ಕೃತಿಯನ್ನು ಸ್ಥಳನಾಮಗಳ ಅಧ್ಯಯನದಲ್ಲಿ ಹೆಸರಿಸಲೇಬೇಕಾದ ಒಂದು ಮಹತ್ವದ ಕೃತಿ. ೨೦೦೭–೦೮ ರಲ್ಲಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಧಾರವಾಡದಿಂದ ಪ್ರಕಟಗೊಂಡ ಶ್ರೀ ಎಸ್. ಎಲ್. ದೇಶಪಾಂಡೆಯವರ ಕರ್ನಾಟಕದ ಸ್ಥಳನಾಮಗಳು ಒಂದು ಅಧ್ಯಯನವು ವೈಶಿಷ್ಟ್ಯಪೂರ್ಣ ಸ್ಥಳನಾಮದ ಕೃತಿಯಾಗಿದ್ದು, ಅಪಾರ ಕ್ಷೇತ್ರಕಾರ್ಯ ಅನುಭವದಿಂದ ರಚಿಸಲಾದ ಕೃತಿಯಾಗಿದೆ. ಇದು ಸಮಗ್ರ ಕರ್ನಾಟಕದ ವ್ಯಾಪ್ತಿಯನ್ನು ಹೊಂದಿರುವುದು ವಿಶೇಷವಾಗಿದೆ. ಈ ಕೃತಿಯೂ ಸಹಿತ ಈ ತೆರನಾದ ಕಾರ್ಯ ಕೈಗೊಳ್ಳುವವರಿಗೆ ಒಂದು ಅತ್ಯುತ್ತಮ ಕೈಪಿಡಿಯಾಗಿ ಸಹಾಯ ಮಾಡುತ್ತದೆ. ಈ ಬೆರಳೆಣಿಕೆಯ ಕೃತಿಗಳನ್ನು ಹೊರತು ಪಡಿಸಿದರೆ ಇನ್ನು ಕೆಲವು ಕೃತಿಗಳು ವಿವಿಧ ವಿಶ್ವವಿದ್ಯಾಲಯಗಳಿಂದ ಎಂ.ಫಿಲ್. ಹಾಗೂ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧಗಳಾಗಿವೆ.



ಹಾವೇರಿ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ಶಿವಮೊಗ್ಗ ಜಿಲ್ಲೆಯ ಸ್ಥಳನಾಮಗಳ ಅಧ್ಯಯನದಂತ ಜಿಲ್ಲೆ ಹಾಗೆ ತಾಲೂಕುಗಳನ್ನು ಕೇಂದ್ರೀಕರಿಸಿಕೊಂಡು ರಚಿಸಿದ ಪ್ರಬಂಧಗಳು ಈ ನಿಟ್ಟಿನಲ್ಲಿ ನಡೆದ ಪ್ರಮುಖ ಅಧ್ಯಯನಗಳಾಗಿವೆ. ಇತ್ತೀಚಿಗಾಗಿ ಶಿಗ್ಗಾವಿ ಬಳಿ ಇರುವ ಗೋಟಗೋಡಿಯ ಜಾನಪದ ವಿಶ್ವವಿದ್ಯಾಲಯವು ಸ್ಥಳನಾಮಗಳ ಅಧ್ಯಯನದ ಬಗ್ಗೆ ಹೆಚ್ಚಿನ ಒಲವು ತೋರಿಸಿದ್ದು ಗಮನಾರ್ಹ. ಕರ್ನಾಟಕದ ೩೬,೦೦೦ ಹಳ್ಳಿಗಳನ್ನು ಅಧ್ಯಯನಕ್ಕೆ ಒಳಪಡಿಸಿ, ಎಲ್ಲ ಗ್ರಾಮಗಳ ಗ್ರಾಮ ನಾಮ ಚರಿತ್ರೆಗಳನ್ನು ಸಂಗ್ರಹಿಸುವ ಕಿರು ಪ್ರಬಂಧ ಯೋಜನೆಯನ್ನು ಜಾರಿಗೆ ತಂದಿದ್ದು ಈ ಕಾರ್ಯ ಪ್ರಗತಿಯ ಹಂತದಲ್ಲಿದೆ. ಈ ತೆರನಾಗಿ ಪಾಶ್ಚಾತ್ಯದಲ್ಲಿ ಅದನ್ನು ಅಧ್ಯಯನಗಳು ನಮ್ಮಲ್ಲಿ ನಡೆಯುದಿದ್ದರೂ ಬೆರಳೆಣಿಕೆಯ ಕೆಲಸ-ಕಾರ್ಯಗಳಿದ್ದರೂ ಬಹಳ ಮೌಲಿಕಗಳೆನಿಸಿವೆ. ಇದರ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆಯಬೇಕೆಂದರೆ ನಾಡೋಜ ದೇಜಗೌರವರು ಹೇಳುವಂತೆ ರಾಷ್ಟ್ರೀಯ ಸ್ಥಳನಾಮ ನಿಘಂಟಿನ ಜರೂರು ಅಗತ್ಯವಿದೆ.

**ಪರಾಮರ್ಶನ ಗ್ರಂಥಗಳು :**

೧. ಊರ ಹೆಸರಿನ ಕತೆಗಳು – ಪಿ.ಕೆ. ರಾಜಶೇಖರ
೨. ಕರ್ನಾಟಕ ಗ್ರಾಮನಾಮ ಸೂಚಿ – ಶ್ರೀನಿವಾಸ ರಿತ್ತಿ
೩. ಸ್ಥಳನಾಮ ಅಧ್ಯಯನಗಳು – ಪ್ರೊ. ಗೋಪಾಲಕೃಷ್ಣ
೪. ಜನತೆಯ ಸಂಸ್ಕೃತಿ – ಮಾಸ್ತಿ ವೆಂಕಟೇಶ ಅಯ್ಯಂಗಾರ
೫. ಕೆಲವು ದೇಶನಾಮಗಳು – ಸೇಡಿಯಾಪು ಕೃಷ್ಣಭಟ್ಟ
೬. ಸ್ಥಳನಾಮ ವ್ಯಾಸಂಗ – ದೇ.ಜ.ಗೌ.
೭. ಸ್ಥಳನಾಮಗಳು – ಡಾ. ಎಂ. ಗಂಗಯ್ಯ ಹೊಂಗನೂರು
೮. ಕರ್ನಾಟಕದ ಸ್ಥಳನಾಮಗಳು ಒಂದು ಅಧ್ಯಯನ – ಶ್ರೀ ಎಸ್.ಎಲ್.ದೇಶಪಾಂಡೆ
೯. ನಾಗಮಂಗಲ ತಾಲೂಕಿನ ಮಹತ್ವದ ಸ್ಥಳಗಳು – ಡಾ. ಎಚ್.ಎಂ.ನಾಗರಾಜು
೧೦. ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ – ಸಂಪುಟ ೦೧, ಸಂಪುಟ ೦೨ – ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು
೧೧. ಹಾಸನ ತಾಲೂಕಿನ ಸ್ಥಳನಾಮಗಳು – ಅಮರಾದೇವಿ ಎಂ., ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
೧೨. ಕನ್ನಡ ನಾಮ ವಿಜ್ಞಾನ – ಡಾ. ಎಂ.ಎಂ.ಕಲಬುರ್ಗಿ

ಕನ್ನಡ ಸಹಾಯಕ ಪ್ರಾಧ್ಯಾಪಕ, ಬಿ.ಪಿ.ಪಿ. ಮತ್ತು ವ್ಹಿ.ವ್ಹಿ.ಎಸ್, ಕಾಲೇಜು, ಸಿಂದಗಿ




**Avirbhav**-A collection of Articles by various scholars

| | | |
|---|---|---|
| Editor's Name | : | **Dr. Nagaraj D. Murgod** |
| Published by | : | **Avva Pustak Prakashan, Belagavi**<br>Avva Gramabhivraddhi Mattu<br>Samajik Seva Sangh, Mamadapur,<br>Tq: Gokak, Dist: Belagavi-591233 |
| First Impression | : | 2021 |
| Copies | : | 1000 |
| Pages | : | xii + 160 = 172 |
| Price | : | Rs. 150/- |
| Size | : | Demy 1/8th |
| Paper Used | : | 70 GSM |
| Copy Right | : | Editor |
| Cover Design | : | Chittar Kala Balaga, Dharawad |
| DTP | : | Ravi Kammar |
| Printers | : | B G Printers, Dharwad |
| ISBN | : | 978-81-949726-5-5 |

**ಅವಿರ್ಭಾವ** – ಸಂಶೋಧನ ಪ್ರಬಂಧಗಳ ಸಂಚಯ

| | | |
|---|---|---|
| ಸಂಪಾದಕರು | : | ಡಾ.ನಾಗರಾಜ ಡಿ.ಮುರಗೋಡ |
| ಪ್ರಕಾಶಕರು | : | ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ<br>ಅವ್ವ ಗ್ರಾಮಾಭಿವೃದ್ಧಿ ಮತ್ತು ಸಾಮಾಜಿಕ ಸೇವಾ ಸಂಘ,<br>ಮಮದಾಪುರ, ಗೋಕಾಕ,<br>ಬೆಳಗಾವಿ-೫೯೧೨೩೩ |
| ಪುಟಗಳು | : | xii + ೧೬೦ |
| ಪ್ರಥಮ ಮುದ್ರಣ | : | ೨೦೨೧ |
| ಹಕ್ಕುಗಳು | : | ಸಂಪಾದಕರು |
| ಬೆಲೆ | : | ರೂ. ೧೫೦/- |
| ಅಕ್ಷರ ಸಂಯೋಜನೆ | : | ರವಿ ಕಮ್ಮಾರ |
| ಮುಖಪುಟ | : | ಚಿತ್ತಾರ ಕಲಾ ಬಳಗ, ಧಾರವಾಡ |
| ಮುದ್ರಕರು | : | ಬಿ. ಜಿ. ಪ್ರಿಂಟರ್ಸ್, ಧಾರವಾಡ |

# ವೀರಶೈವ ಲಿಂಗಾಯತ ಮಠಗಳ ಹುಟ್ಟು-ಬೆಳವಣಿಗೆ, ಪ್ರಾಚೀನತೆ ಮತ್ತು ಪ್ರಕಾರಗಳು

ಡಾ. ನಾಗರಾಜ ವಿ. ಮುರಗೋಡ

ಪ್ರಾಚೀನ ಕಾಲದಿಂದಲೂ ಭಾರತೀಯರಿಗೆ ಮಠಗಳ ಪರಿಚಯವಿದ್ದರೂ ಭಾರತ ದೇಶದಲ್ಲಿ ಯಾವಾಗ ಮಠಗಳು ಜನ್ಮ ತಾಳಿದವು ಎಂದು ನಿಶ್ಚಿತವಾಗಿ ಅವುಗಳ ಕಾಲವನ್ನು ಹೇಳುವುದು ಕಷ್ಟಸಾಧ್ಯವಾಗಿದೆ.

ನಮ್ಮ ಪ್ರಾಚೀನರು ಆಧ್ಯಾತ್ಮ ಚಿಂತನಕ್ಕಾಗಿ ದೇವರ ಸೃಷ್ಟಿ, ಆತ್ಮ-ಮೋಕ್ಷ ಮುಂತಾದ ವಿಷಯಗಳ ಮಂಥನಕ್ಕಾಗಿ ಕಾಡಿಗೆ ಹೋಗಿ ಗಡ್ಡೆ-ಗೆಣಸುಗಳನ್ನು ತಿನ್ನುತ್ತಾ ತಪಸ್ಸನ್ನು ಆಚರಿಸುವ ಮೂಲಕವಾಗಿ ಆಧ್ಯಾತ್ಮಿಕ ಜ್ಞಾನವನ್ನು ಪಡೆದುಕೊಳ್ಳುತ್ತಿದ್ದರು. ಹಿಂದೂ ಧರ್ಮದಲ್ಲಿರುವ 4 ಆಶ್ರಮಗಳನ್ನು ಅಭ್ಯಸಿಸಿದಾಗ ವಾನಪ್ರಸ್ಥಾಶ್ರಮ ಮತ್ತು ಸನ್ಯಾಸ ಆಶ್ರಮಗಳಲ್ಲಿ 50 ಕ್ಕಿಂತಲೂ ಹೆಚ್ಚಿನ ವಯಸ್ಸುಳ್ಳವರು ಕಾಡಿಗೆ ಹೋಗಿ ಏಕಾಂತ ಸ್ಥಳವನ್ನು ಆರಿಸಿ ಅಲ್ಲಿಯೇ ಇರುತ್ತಿದ್ದರು. ಇಂತಹ ಋಷಿಗಳು ವಾಸಿಸುವ ಈ ಕಾಡುಗಳಲ್ಲಿರುವ ಕುಟೀರಗಳು ಮುಂದೆ ಆಶ್ರಮಗಳೆನಿಸಿಕೊಂಡವು. ಜನರು ಇವುಗಳನ್ನೇ ಋಷ್ಯಾಶ್ರಮಗಳೆಂದು ಕರೆದರು.

ಉಪನಿಷತ್ತ ಮತ್ತು ಮಹಾಭಾರತಗಳು ರಚಿಸಲ್ಪಟ್ಟ ಕಾಲದಲ್ಲಿ ಈ ಆಶ್ರಮಗಳು ರಾಜ ಮಹಾರಾಜರ ಮತ್ತು ಸಾಮಾನ್ಯ ಪ್ರಜೆಗಳ ಲಕ್ಷ್ಯವನ್ನು ತಮ್ಮತ್ತ ಸೆಳೆದವು. ಹೀಗಾಗಿ ಅರಸರು ಮತ್ತು ಪ್ರಜೆಗಳು ಸಾಮಾನ್ಯವಾಗಿ ಅಡವಿಗಳತ್ತ ಹೋಗಿ ಈ ಋಷಿ ಮುನಿಗಳನ್ನು ಭೇಟಿಯಾಗತೊಡಗಿದರು. ನಂತರ ಈ ಋಷಿಗಳ ಮೇಲೆ ದೈವತ್ವ ಭಾವನೆ ಬೆಳೆಯತೊಡಗಿತು. ಅವರೂ ಸಹ ತಮ್ಮ ಬಳಿ ಬಂದ ರಾಜ-ಮಹಾರಾಜರುಗಳಿಗೆ ಮಾರ್ಗದರ್ಶನವನ್ನು ಮಾಡತೊಡಗಿದರು. ಕಾಲಾನಂತರದಲ್ಲಿ ಈ ರಾಜ ಮಹಾರಾಜರು ತಮ್ಮ ಮಕ್ಕಳನ್ನು ಈ ಆಶ್ರಮಗಳಿಗೆ ವಿದ್ಯೆ ಕಲಿಯಲು ಕಳಿಸತೊಡಗಿದರು. ಹೀಗಾಗಿ ಇವು ವಿದ್ಯಾಕೇಂದ್ರಗಳಾಗಿ ಮಾರ್ಪಾಡಾಗತೊಡಗಿದವು. ಕೆಲವೊಂದು ಸಂದರ್ಭದಲ್ಲಿ ಋಷಿಗಳೇ ಅರಮನೆಗಳಿಗೆ ಬಂದು ರಾಜ ಕುಮಾರರಿಗೆ ಪಾಠ ಬೋಧನೆಗಳನ್ನು ಮಾಡಿದ್ದು ಇತಿಹಾಸ ಪುಟಗಳಿಂದ ತಿಳಿಯುವುದು. ಹೀಗೆ ಆಶ್ರಮಗಳು ವಿದ್ಯಾಕೇಂದ್ರಗಳಾಗಿ ಗುರುಕುಲಗಳೆನಿಸಿಕೊಂಡವು.

ಈ ಗುರುಕುಲಗಳಿಗೆ ಸಾಮಾನ್ಯ ಪ್ರಜೆಗಳ ಮಕ್ಕಳು ಹಾಗೂ ರಾಜಕುಮಾರರು ವಿದ್ಯಾರ್ಜನೆಗಾಗಿ ಹೋಗುತ್ತಿದ್ದರು. ರಾಜಕುಮಾರರಿಗೆ ವಿದ್ಯೆ ನೀಡುವ ಋಷಿಗಳು ರಾಜಗುರುಗಳಾದರೆ, ಸಾಮಾನ್ಯ ಹುಡುಗರಿಗೆ ವಿದ್ಯೆ ನೀಡುವ ಋಷಿಗಳು ಧರ್ಮ



ಗುರುಗಳಾಗಿರಬಹುದು. ಹೀಗೆ ಇವರು ಬೋಧಿಸುವ ತತ್ವಚಿಂತನೆ, ತತ್ವಬೋಧನೆಗಳ ಆಡುವ ಹುಟ್ಟು ಹಳ್ಳಿ ಪಟ್ಟಣಗಳತ್ತ ಬಂದಾಗ ಅವು ಮಠಗಳಾಗಿ ಜನ್ಮ ತಳೆದಿರಬಹುದು.

"ಅಮರ ಕೋಶವು ಛತ್ರಾದಿಗಳ ನೆಲೆಯನ್ನು ಮಠ ಎಂದು ಹೇಳುತ್ತದೆ. ಛತ್ರ ಎಂದರೆ ಶಿಷ್ಯ ಅಥವಾ ವಿದ್ಯಾರ್ಥಿ ಎಂದರ್ಥ. ಆದುದರಿಂದ ಅಮರಕೋಶದ ಪ್ರಕಾರ ಛಾತ್ರಾದಿಗಳು ವಾಸಿಸುವ ನಿಲಯಗಳೇ ಮಠಗಳು".[1] (1: ಅಮರಕೋಶ ಸಂ: ಡಾ. ಎಚ್. ಪಿ. ಮಲ್ಲೇದೇವರು ಪು- 1005)

"ಕನ್ನಡವಿಶ್ವಕೋಶವು ಸನ್ಯಾಸಿಗಳು ವಾಸಿಸುವ ಕುಟೀರ, ತಪಸ್ವಿನ ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರ ಕ್ರಮೇಣ ಆಶ್ರಮ, ಗುರುಮನೆ, ಗುರುಕುಲಗಳಾಗಿ ಕಾಲ ಕಳೆದಂತೆ ವಿದ್ಯಾಪ್ರಸಾರ, ಜ್ಞಾನಪ್ರಸಾರ ಕೇಂದ್ರಗಳಾಗಿ ಬೆಳೆದಿವೆ ಎಂದು ತಿಳಿಸುತ್ತದೆ".[2] (2: ಕನ್ನಡ ವಿಶ್ವಕೋಶ ಸಂಪುಟ ಹನ್ನೆರಡು ಪು- 1004)

"ಮ್ಯಾಕ್ ಡೊನೆಲ್ ಸಂಸ್ಕೃತ ಶಬ್ದಕೋಶವು ಮಠವೆಂದರೆ ತಪಸ್ವಿಯ ಇಲ್ಲವೇ ವಿದ್ಯಾರ್ಥಿಗಳ ಗುಡಿಸಲು, ಒಂದು ವಿದ್ಯಾಸಂಸ್ಥೆ ಎಂದು ತಿಳಿಸುತ್ತದೆ".

"ವಿದ್ಯಾರ್ಥಿಗಳ ಜ್ಞಾನಬೋಧನೆಯನ್ನು ಪಡೆಯುವ ಕೇಂದ್ರಗಳೇ ಮಠಗಳೆಂದು ಶಬ್ದಕಲ್ಪದ್ರುಮ ತಿಳಿಸುತ್ತದೆ".[3] (3: ಬಿ.ವ್ಹಿ. ಮಲ್ಲಾಪೂರ: ವೀರಶೈವ ಮಠಗಳ ಹಿನ್ನೆಲೆ ಪು.509, ಜಿ.ಎಚ್. ಹನ್ನೆರಡುಮಠ ಸಂಪಾದಿತ, ವಿಶ್ವಪ್ರಭೆ )

"ಸನ್ಯಾಸಿಗಳಾದವರು ಶಿಷ್ಯರಿಗೆ ಜ್ಞಾನ ಬೋಧನೆ ಮಾಡುತ್ತಾ ವಾಸಿಸುವ ಸ್ಥಳಗಳೇ ಮಠಗಳೆಂದು ಸಂಸ್ಕೃತ ಶಬ್ದಕೋಶ ಹೇಳುತ್ತದೆ.

ವಿರಕ್ತರು, ಸ್ವಾಮಿಗಳು, ಸನ್ಯಾಸಿಗಳು ವಾಸವಾಗಿರುವ ನಿಲಯಗಳಿಗೆ ಓದು, ಬರಹ ಹಾಗೂ ಶಾಸ್ತ್ರಗಳನ್ನು ಕಲಿಯಲು ಬರುವ ವಿದ್ಯಾರ್ಥಿಗಳು ತಮ್ಮ ಶಿಕ್ಷಣಕ್ಕಾಗಿ ಅವರಲ್ಲಿಯೇ ವಾಸವಾಗಿರುವುದಕ್ಕೆ ಮಠವೆಂದು ಕರೆಯಲಾಗುತ್ತದೆ ಎಂದು ನಮ್ಮ ಇತಿಹಾಸದ ಪುಟಗಳು ತಿಳಿಸುತ್ತವೆ.

ಮೇಲಿನ ಈ ಎಲ್ಲ ವಿವಿಧ ವ್ಯಾಖ್ಯಾನಗಳ ಅರ್ಥಗಳನ್ನು ಕ್ರೋಢೀಕರಿಸಿ ಹೇಳುವುದಾದರೆ ನೀತಿಬೋಧೆ, ಜ್ಞಾನಬೋಧೆ ಮಾಡುತ್ತ ವಿದ್ಯಾರ್ಥಿಗಳೊಂದಿಗೆ ಸನ್ಯಾಸಿಗಳು ವಾಸವಾಗಿದ್ದ ನಿಲಯಗಳನ್ನು ಮಠಗಳೆಂದು ಕರೆಯಬಹುದು.

ಈ ಹಿಂದೆ ತಿಳಿಸಿದಂತೆ ಮಠಗಳು ಹುಟ್ಟಿದ ಕಾಲವನ್ನು ಖಚಿತವಾಗಿ ಹೇಳಲು ಸಾಧ್ಯವಾಗದಿದ್ದರೂ ಅವುಗಳ ಹುಟ್ಟು ಸಿಂಧೂ ಸಂಸ್ಕೃತಿಯಷ್ಟೇ ಪ್ರಾಚೀನತಮವಾದುದು ಎಂದು ಕೆಲವು ದೊರೆತ ಉತ್ಖನನಗಳಿಂದ ಹೇಳಬಹುದು.

ಕ್ರಿ.ಪೂ. 2000 ಕಾಲದ ಸಿಂಧೂ ಸಂಸ್ಕೃತಿಗೆ ಸಂಬಂಧಿಸಿದ ಯೋಗ ಮುದ್ರೆಯಲ್ಲಿರುವ ವ್ಯಕ್ತಿಯ ಲಿಂಗದ ಚಿತ್ರವಿರುವ ಶಿಲ್ಪಗಳು ದೊರೆತಿವೆ. ಹೀಗೆ



ಮುಂತಾದ ಆಧಾರಗಳಿಂದಲೇ ಆ ಕಾಲದಲ್ಲಿ ಮಠಗಳು ಅಸ್ತಿತ್ವದಲ್ಲಿದ್ದವೆಂದು ಊಹಿಸಬಹುದಾದರೂ ಇದಕ್ಕೆ ಇನ್ನೂ ಹೆಚ್ಚಿನ ಖಚಿತ ಆಧಾರಗಳ ಅವಶ್ಯಕತೆ ಇದೆ.

ಒಟ್ಟಾರೆ ಪ್ರಾಚೀನ ಕಾಲದಲ್ಲಿ ಆಶ್ರಮಗಳು, ಗುರುಕುಲಗಳು, ಜೈನ ಬಸದಿಗಳು, ಬೌದ್ಧ ವಿಹಾರಗಳು ಹಾಗೂ ಶೈವಪಂಥಗಳಾದ ಪಾಶುಪಥ, ಲಕುಲಿಶ, ಕಾಳಾಮುಖಿ, ಕಾಪಾಲಿಕ ಶಿವಾಲಯಗಳು ತಮ್ಮ ತಮ್ಮ ಧರ್ಮದ ಹಿನ್ನೆಲೆಯಲ್ಲಿ ಹಲವು ಹೆಸರುಗಳನ್ನು ಇಟ್ಟುಕೊಂಡ ಆಧ್ಯಾತ್ಮಿಕ ಧಾರ್ಮಿಕ ಕೇಂದ್ರಗಳಾಗಿದ್ದವು. ಆದರೆ ಇವೆಲ್ಲವುಗಳು ಇಂದಿನ ವೀರಶೈವ ಲಿಂಗಾಯತ ಮಠಗಳ ಸ್ವರೂಪದಲ್ಲಿರದೆ ಆಯಾ ಕಾಲದ, ಆಯಾ ಧರ್ಮದ ರೀತಿ-ನೀತಿಗಳಿಗೆ ಅನುಗುಣವಾಗಿದ್ದವು.

● ವೀರಶೈವ ಲಿಂಗಾಯತ ಮಠಗಳ ಪ್ರಾಚೀನತೆ :

ಕೆಲವೊಂದು ವೀರಶೈವ ಲಿಂಗಾಯತ ಮಠಗಳು ತಮ್ಮ ಸ್ಥಾಪನೆಯ ಬಗ್ಗೆ ಬಹಳ ಪ್ರಾಚೀನ ಕಾಲವನ್ನು ಹೇಳುತ್ತವೆ. ಆದರೆ ಅವುಗಳಿಗೆ ಯಾವುದೇ ಪುರಾವೆಗಳಿಲ್ಲ ಹಾಗೂ ಆ ಮಠಗಳ ಪೀಠ ಪರಂಪರೆಯ ಗುರುಗಳ ಹೆಸರು ಸಹ ನಮಗೆ ದೊರೆಯುವುದಿಲ್ಲ. ಒಟ್ಟಾರೆ ಉಪಲಬ್ಧ ಆಧಾರಗಳಿಂದ ಮಠಗಳು ಅಸ್ತಿತ್ವಕ್ಕೆ ಬಂದಿದ್ದು ಕ್ರಿ.ಶ. 8ನೇ ಶತಮಾನದಿಂದ ಇತ್ತೀಚೆಗೆ ಎಂದು ಹೇಳಬಹುದು.

ಬಸವಣ್ಣನವರ ಕಾಲದಲ್ಲಿ ಸಾಮಾಜಿಕ, ಧಾರ್ಮಿಕ ಸಂಘಟನೆಗಳಾಗಿ ಸಾಮಾಜಿಕ ಸುಧಾರಣೆಗಾಗಿ ಚಿಂತನೆ ಮಾಡಲು ನಾಡಿನ ಹಲವು ಚಿಂತಕರು ಒಂದೆಡೆ ಸೇರಲು ಪ್ರಾರಂಭಿಸಿದರು. ಆಗಿನ ಅನುಭವ ಮಂಟಪ ಇದಕ್ಕೆ ಒಂದು ಪ್ರಶಸ್ತ ಸ್ಥಾನವಾಯಿತು. ಇಲ್ಲಿಗೆ ಎಲ್ಲರೂ ಬರತೊಡಗಿದರು. ಅಲ್ಲಮ ಮತ್ತು ಬಸವಣ್ಣನವರ ನೇತೃತ್ವದಲ್ಲಿ ಚಿಂತನ-ಮಂಥನಗಳು ಪ್ರಾರಂಭವಾದವು. ಹಾಗೆ ನೋಡಿದರೆ ಇದನ್ನು ವೀರಶೈವ ಲಿಂಗಾಯತ ಧರ್ಮದ ಮಠವೆಂದೇ ಕರೆಯಬಹುದು. ಹೀಗೆ ಅನುಭವ ಮಂಟಪವು ರಾಜಾಶ್ರಯವನ್ನು ಧಿಕ್ಕರಿಸಿ, ಜ್ಞಾನ ಪ್ರಸಾರ ಕಾರ್ಯಕ್ಕೆ ತೊಡಗಿತು.

ನಂತರ ಇದರ ಮಾದರಿಯಲ್ಲಿ ನಾಡಿನಾದ್ಯಂತ ಹಲವಾರು ವೀರಶೈವ ಲಿಂಗಾಯತ ಮಠಗಳು ಹುಟ್ಟಿಕೊಂಡು ಅನ್ನದಾಸೋಹ, ಜ್ಞಾನದಾಸೋಹ, ಧರ್ಮದಾಸೋಹವಂತ ತ್ರಿವಿಧ ದಾಸೋಹಗಳ ಮೂಲಕ ಕಾಲದಿಂದ ಕಾಲಕ್ಕೆ ಬೆಳೆಯುತ್ತ ಬರತೊಡಗಿದವು. ಕಲ್ಯಾಣ ಕ್ರಾಂತಿಯ ನಂತರ ಈ ಮಠಗಳ ಜವಾಬ್ದಾರಿ ಹೆಚ್ಚಾಯಿತು. ಸಮಾಜ ಸುಧಾರಣೆಯ ಉದ್ದೇಶದಿಂದ ಹುಟ್ಟಿಕೊಂಡ ವೀರಶೈವ ಲಿಂಗಾಯತ ಮಠಗಳು ದಿನದಿಂದ ದಿನಕ್ಕೆ-ಕಾಲದಿಂದ ಕಾಲಕ್ಕೆ ಬಹು ಸಂಖ್ಯೆಯಲ್ಲಿ ಅಸ್ತಿತ್ವಕ್ಕೆ ಬಂದವು. ಕಾಲಕ್ರಮೇಣ ಇತರ ಶೈವಪಂಥದ ಮಠಗಳು ವೀರಶೈವ ಲಿಂಗಾಯತ ಮಠಗಳಲ್ಲಿ ಸಮಾವೇಶಗೊಳ್ಳುತ್ತಾ ಬಂದವು.

ಕಳೆದ 800 ವರ್ಷಗಳಿಂದ ವೀರಶೈವ ಲಿಂಗಾಯತ ಧರ್ಮ ಪ್ರಸಾರಕ್ಕಾಗಿ ಬೇರೆ ಬೇರೆ ನಿಟ್ಟಿನಿಂದ, ಬೇರೆ ಬೇರೆ ಕಾಲದಲ್ಲಿ ಅದರ ಅನುಯಾಯಿಗಳು, ಮಠಾಧೀಶರು ಸೇರಿ ತ್ಯಾಗ, ಸೇವೆ, ನಿಸ್ವಾರ್ಥ ಭಾವನೆಗಳಿಂದ ವೀರಶೈವ ಲಿಂಗಾಯತ ಧರ್ಮವನ್ನು ಕಟ್ಟಿ ಬೆಳೆಸುವಲ್ಲಿ ಯಶಸ್ವಿಯಾಗಿದ್ದಾರೆ. ಅಂತೆಯೇ ಇಂದು ವೀರಶೈವ ಲಿಂಗಾಯತ ಮಠಗಳು ನಾಡಿನಾದ್ಯಂತ ಬಹು ಸಂಖ್ಯೆಯಲ್ಲಿವೆ.

ಇಂದಿನ ವೀರಶೈವ ಲಿಂಗಾಯತ ಮಠಗಳ ಮಾದರಿಯಲ್ಲಿ ಮಠಗಳನ್ನು ಪ್ರಥಮವಾಗಿ ಸ್ಥಾಪಿಸಿದವರು ಕ್ರಿ.ಶ. 8ನೇ ಶತಮಾನದಲ್ಲಿದ್ದ ಶಂಕರಾಚಾರ್ಯರು. ಅವರು ಭಾರತದ ನಾಲ್ಕು ದಿಕ್ಕಿನಲ್ಲಿ ಒಂದೊಂದು ಮಠಗಳನ್ನು ಸ್ಥಾಪಿಸಿದರು. ಅವು ಶೃಂಗೇರಿ, ಬದರಿನಾಥ, ಪುರಿ, ದ್ವಾರಕಾಗಳಲ್ಲಿವೆ. ಇದಕ್ಕೆ ಪುರಾವೆ ಎಂಬಂತೆ ಮಠಗಳನ್ನು ಕುರಿತು ಅಧ್ಯಯನ ನಡೆಸಲು ಕೇಂದ್ರ ಸರ್ಕಾರ ನೇಮಿಸಿದ ಸಮಿತಿಯು (Hindu Religion Endowment Commission ) ಪ್ರಕಾರ ಆದಿ ಶಂಕರಾಚಾರ್ಯರು ಬೌದ್ಧ ಮತ್ತು ಜೈನ ಧರ್ಮಗಳ ಪ್ರಭಾವ ಕಡಿಮೆ ಮಾಡಿ ವೇದೋಪನಿಷತ್ ಪ್ರತಿಪಾದಿತ ಧರ್ಮವನ್ನು ಪ್ರತಿಪಾದಿಸಲು ಮೊಟ್ಟಮೊದಲು ಇಂದಿನ ಮಾದರಿ ಮಠಗಳನ್ನು ಅಂದು ಸ್ಥಾಪಿಸಲು ಆರಂಭಿಸಿದರು. ಇತರ ಶೈವ ಪಂಥಿಯರು ಸಹ ಅವರನ್ನೇ ಅನುಸರಿಸಿ ಮಠಗಳ ನಿರ್ಮಾಣ ಮಾಡಿದರು. ವೀರಶೈವ ಲಿಂಗಾಯತ ಮಠಗಳು ಕೂಡಾ ಇವುಗಳನ್ನೆ ಅನುಸರಿಸಿ ಹುಟ್ಟಿಕೊಂಡವೆಂದು, ಬಸವಣ್ಣನವರ ಕಾಲದಲ್ಲಿ ಸಮಾಜ ಸಂಘಟನೆ ಉದ್ದೇಶದಿಂದ ಅಂತಹ ಮಠಗಳ ಸಂಖ್ಯೆಯು ಹೆಚ್ಚಿತೆಂದು ವರದಿ ಹೇಳುತ್ತದೆ.[1] (1: ಸಾರಂಗಮಠ : ಒಂದು ಅಧ್ಯಯನ, ಶ್ರೀ. ಎಸ್.ಬಿ. ಹಿರೇಮಠ)

12ನೇ ಶತಮಾನದ ಬಸವಣ್ಣನವರಿಗಿಂತ ಪೂರ್ವದಲ್ಲಿ ಲಕುಲೀಶ, ಕಾಳಾಮುಖರ ಮಠಗಳಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ. ಹಿಂದೆ ಲಕುಲೀಶ ಮಠಗಳಿದ್ದ ಕಡೆಗಳಲ್ಲಿ ವೀರಶೈವ ಲಿಂಗಾಯತ ಮಠಗಳಿವೆ. ಹಾಗೂ ಪ್ರಾಚೀನ ಲಕುಲೀಶರ ಕೆಲವು ತತ್ವ ಆಚರಣೆಗಳಿಗೂ ವೀರಶೈವ ಲಿಂಗಾಯತರ ಕೆಲವು ತತ್ವ ಆಚರಣೆಗಳಿಗೂ ಸಾಮ್ಯವಿದೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಅಂದರೆ ಕಾಳಾಮುಖ ಲಕುಲೀಶ ಶೈವಪಂಥಗಳ ಮಠಗಳ ಪರಂಪರೆಯನ್ನೆ ಅನುಸರಿಸಿ ಇಂದಿನ ವೀರಶೈವ ಲಿಂಗಾಯತ ಮಠಗಳು ನಿರ್ಮಾಣಗೊಂಡಿವೆ ಎಂದಾಗುತ್ತದೆ.

● **ವೀರಶೈವ ಲಿಂಗಾಯತ ಮಠಗಳ ಪ್ರಕಾರಗಳು :**

ಪರಂಪರೆ ಮತ್ತು ಸಂಪ್ರದಾಯದ ದೃಷ್ಟಿಯಿಂದ ವೀರಶೈವ ಲಿಂಗಾಯತ ಮಠಗಳಲ್ಲಿ ಎರಡು ಪ್ರಕಾರಗಳನ್ನು ಮಾಡುವರು.



● **ಗುರುವರ್ಗದ ಮಠಗಳು**

● **ವಿರಕ್ತವರ್ಗದ ಮಠಗಳು**

ಈ ಎರಡು ಮಠಗಳ ಗುರಿ ವೀರಶೈವಲಿಂಗಾಯತ ಧರ್ಮದ ಪ್ರಸಾರ ಮತ್ತು ಭಕ್ತೋದ್ಧಾರಗಳೇ ಆಗಿದ್ದರೂ, ಗುರುವರ್ಗದ ಮಠಗಳು ಸಾಂಪ್ರದಾಯಿಕ ಮೌಲ್ಯಗಳಿಗೆ ಹೆಚ್ಚಿನ ಮಾನ್ಯತೆಯನ್ನು ನೀಡಿದರೆ, ವಿರಕ್ತ ಮಠಗಳು ವಿಶೇಷವಾಗಿ ಬಸವಾದಿ ಶರಣರ ವಚನ, ತತ್ವಗಳನ್ನು ಆದರ್ಶವಾಗಿಟ್ಟುಕೊಂಡಿರುತ್ತವೆ.

● **ಗುರುವರ್ಗದ ಮಠಗಳು :**

ಪಂಚ ಪೀಠಗಳು (ಉಜ್ಜಯನಿ, ಕಾಶಿ, ಕೇದಾರ, ಬಾಳೆಹೊನ್ನೂರು ಮತ್ತು ಶ್ರೀಶೈಲ) ಮತ್ತು ಇವುಗಳ ಅಧೀನ ಮಠಗಳಿಗೆ ಗುರುವರ್ಗದ ಮಠಗಳೆಂದು ಕರೆಯುವರು. ಈ ಮಠಗಳು ವೀರಶೈವರ ಲಿಂಗಾಯತ ಧಾರ್ಮಿಕ ಆಗುಹೋಗುಗಳನ್ನು, ಶಿಕ್ಷೆ- ರಕ್ಷೆಗಳನ್ನು ನೋಡಿಕೊಳ್ಳುವ ಧರ್ಮರಕ್ಷಕರವಿದ್ದಂತೆ.

● **ವಿರಕ್ತವರ್ಗದ ಮಠಗಳು :**

ವಿರಕ್ತ ಎಂದರೆ ಪ್ರಾಪಂಚಿಕ ವ್ಯವಹಾರಗಳಿಂದ ದೂರವಿದ್ದು, ವೈಭವ ಮತ್ತು ಆಡಂಬರವಿಲ್ಲದೆ, ವೈಯಕ್ತಿಕ ಸಾಧನೆ ಜಪ-ತಪಗಳಲ್ಲಿ ತೊಡಗಿ ಸದಾ ಸಂಚಾರದಲ್ಲಿದ್ದು ಜನರಿಗೆ ಆಧ್ಯಾತ್ಮಿಕ ಮತ್ತು ಧಾರ್ಮಿಕ ಜ್ಞಾನವನ್ನು ನೀಡುವವರಾಗಿದ್ದಾರೆ.

ಇವರು ಯಾವುದೇ ವೈಭವದ ಆಶೆ- ಆಕಾಂಕ್ಷೆ ಹೊಂದಿರದೇ ಆಸ್ತಿ ಮಾಡುವ, ಮಠ ಸ್ಥಾಪಿಸುವ ಗುರಿಯನ್ನು ಹೊಂದಿಲ್ಲವಾದರೂ ಇವರಿಗೆ ಹಿಂದಿನಿಂದಲೂ ಭಕ್ತರು, ರಾಜ ಮಹಾರಾಜರು ಮಠ ಕಟ್ಟಿಸಿಕೊಟ್ಟು ಆಸ್ತಿದಾನ ಮಾಡಿದ್ದಾರೆ. ಹೀಗಾಗಿ ಈ ಮಠಗಳು ಭವ್ಯ ಪರಂಪರೆಯನ್ನು ಉಳಿಸಿ-ಬೆಳೆಸಿಕೊಂಡು ಬಂದಿವೆ. ಇವು ಗುರುವರ್ಗದ ಮಠಕ್ಕಿಂತಲೂ ಹೆಚ್ಚು ಕ್ರಿಯಾತ್ಮಕವಾಗಿದ್ದು ಜನಾಭಿಮುಖಿಯಾಗಿವೆ.

ಈ ವಿರಕ್ತ ಮಠಗಳ ಚರಿತ್ರೆಯಲ್ಲಿ ಶೂನ್ಯ ಸಿಂಹಾಸನವನ್ನೇರಿದ ಅಲ್ಲಮನೇ ನಿರಂಜನ ಜಂಗಮ ಪರಂಪರೆಗೆ ಮೊದಲು ಮಾಡಿದನೆನ್ನುವುದು ಸಾಂಪ್ರದಾಯಿಕರ ಮಾತಾಗಿದೆ. ಅಂತೆಯೇ ಇಂದಿನ ಪ್ರಸಿದ್ಧ ಮಠಗಳು ತಮ್ಮ ಪರಂಪರೆಯನ್ನು ಅಲ್ಲಮ ಪ್ರಭುದೇವನಿಂದ ಪ್ರಾರಂಭಿಸುತ್ತವೆ.

"ತೋಂಟದ ಸಿದ್ಧಲಿಂಗ ಯತಿಗಳ ನಂತರ ಇವರ ನಾಲ್ಕು ಶಿಷ್ಯರಾದ ಮುರುಘಯ್ಯ, ಚಿಲ್ಲಾಳಯ್ಯ, ಕುಮಾರಯ್ಯ, ಕೆಂಪಯ್ಯ, ಇವರ ಪರಸ್ಪರ ಭಿನ್ನಾಭಿಪ್ರಾಯ ಕಾರಣವಾಗಿ ಮುರುಘಾ ಸಮಯ, ಚಿಲ್ಲಾಳ ಸಮಯ ಕುಮಾರ



ಸಮಯ, ಕೆಂಪಿನ ಸಮಯಗಳೆಂದು ನಾಲ್ಕು ಸಮಯಗಳಾಗುತ್ತವೆ. ಚಿತ್ರದುರ್ಗದ ಮುರುಘಾ ಸಮಯದ, ಹುಬ್ಬಳ್ಳಿಯಲ್ಲಿ ಕುಮಾರ ಸಮಯದ, ಗದುಗಿನ ಚಿಲ್ಲಾಳ ಸಮಯದ, ಉರವಕೊಂಡದಲ್ಲಿ ಕೆಂಪಿನ ಸಮಯದ ಜಗದ್ಗುರು ಪೀಠಗಳಿವೆ. ನಾಡಿನಾದ್ಯಂತವಿರುವ ಪ್ರತಿಯೊಂದು ವಿರಕ್ತಮಠವೂ ಈ ಸಮಯಗಳ ಯಾವುದಾದರೊಂದು ಸಮಯಕ್ಕೆ ಸಂಬಂಧಿಸಿರುತ್ತವೆ.[2] (2: ನಾಗನೂರು ಶ್ರೀ. ರುದ್ರಾಕ್ಷಿಮಠ ಒಂದು ಅಧ್ಯಯನ ಎಫ್.ಜಿ. ಜಲರಡ್ಡಿ)

ಗ್ರಂಥ ಋಣ


● ಬೆಳಗಾವಿ ಸಿರಿ ಸ್ಮರಣ ಸಂಚಿಕೆ : ಪ್ರ.ಸಂ. ಡಾ. ಎಸ್.ಎಂ. ಹರದಗಟ್ಟಿ- 2003

● ಅರಳು: ಪ್ರ.ಸಂ: ಡಾ. ಗುರುಲಿಂಗ ಕಾಪಸೆ, ಪ್ರ. ಶ್ರೀ ಗುರು ಚೆನ್ನಬಸವೇಶ್ವರ ಗ್ರಂಥಮಾಲೆ, ಶ್ರೀ ಮೋಟಗಿ ಮಠ ಅಥಣಿ-2003.

● ಬಿದರಿ ಶ್ರೀ ಕುಮಾರೇಶ್ವರ ಪುರಾಣ: ಲೇ: ಶ್ರೀ ಸದಾಶಿವ ಕವಿಗಳು ಇಟ್ನಾಗಿಮಠ, ಹುಕ್ಕೇರಿ- 1951.

● ನಾಗನೂರ ಶ್ರೀ ರುದ್ರಾಕ್ಷಿಮಠ ಒಂದು ಅಧ್ಯಯನ: ಎಫ್.ಜಿ. ಜಲರಡ್ಡಿ, ಪ್ರ: ಲಿಂಗಾಯತ ಅಧ್ಯಯನ ಸಂಸ್ಥೆ ಶ್ರೀ ವಿರಕ್ತಮಠ ದೇಶನೂರು- 1997.

● ವಚನ ಕಾರಂಜಿ: ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಹುಕ್ಕೇರಿ- 2011.

● ಬೆಳಗಾವಿ ಸಂಸ್ಕೃತಿ : ಸಂ: ಡಾ. ಸರಜೂ ಕಾಟ್ಕರ್, ಬೆಳದಿಂಗಳು ಪ್ರಕಾಶನ, ಬೆಳಗಾವಿ-2011.

● ಬೆಳಗಾವಿ ಬೆಳಕು- ಸಂಸ್ಮರಣ ಸಂಪುಟ, ಅಖಿಲ ಭಾರತ 70ನೇ ಕನ್ನಡ ಸಾಹಿತ್ಯ ಸಮ್ಮೇಳನ, ಬೆಳಗಾವಿ ಸಂ: ಡಾ.ಆರ್.ಎಸ್. ಗುಂಜಾಳ - 2007.

● ಚಿಂತನ: ಶ್ರೀ ಸಿದ್ಧರಾಮ ಸ್ವಾಮಿಗಳು ರುದ್ರಾಕ್ಷಿಮಠ: ಪ್ರ: ಲಿಂಗಾಯತ ಅಧ್ಯಯನ ಸಂಸ್ಥೆ ವಿರಕ್ತಮಠ ದೇಶನೂರು- 2011.

● ಒಲವಿನ ಒರತೆ: ಪ್ರಭುಚನ್ನಬಸವ ಸ್ವಾಮೀಜಿ-2007.


ಕನ್ನಡ ಸಹಾಯಕ ಪ್ರಾಧ್ಯಾಪಕರು, ಜಿ.ಪಿ.ಪಿ. ಮತ್ತು ಪ್ರಿ.ಪ್ರಿ.ಎಸ್. ಕಾಲೇಜು, ಸಿಂದಗಿ





**BELAGAVI JILLEYA VEERASHAIVA LINGAYAT MATHAGALU**

*(UGC Funded Research Book-MRP)*

| | | |
|---|---|---|
| Author's | : | Dr. Nagaraj D. Murgod |
| Published by | : | Avva Pustaka Prakashan, Belagavi |
| Revised First Impression | : | 2021 |
| Copies | : | 1000 |
| Pages | : | XII+92 = 104 |
| Price | : | Rs. 110/- |
| Paper Used | : | 70 GSM (Demy 1/8") |
| Copy Right | : | Author |
| Cover Design | : | Nagaraj T. Nandaragi, Hubbali-31 |
| DTP | : | Ravi Kammar |
| Printers | : | N. P. Printers, Dharwad |
| ISBN | : | 978-81-949726-2-4 |

**ಬೆಳಗಾವಿ ಜಿಲ್ಲೆಯ ವೀರಶೈವ ಲಿಂಗಾಯತ ಮಠಗಳು :**

(ಯು.ಜಿ.ಸಿ. ಧನಸಹಾಯ ಪಡೆದ ಕಿರು ಸಂಶೋಧನ ಪ್ರಬಂಧ–MRP)

| | | |
|---|---|---|
| ಲೇಖಕರು | : | ಡಾ. ನಾಗರಾಜ ಡಿ. ಮುರಗೋಡ |
| ಪ್ರಕಾಶಕರು | : | ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಪುಟಗಳು | : | XII+92 = 104 |
| ಪರಿಷ್ಕೃತ ಪ್ರಥಮ ಮುದ್ರಣ | : | ೨೦೨೧ |
| © | : | ಲೇಖಕರು |
| ಬೆಲೆ | : | ರೂ. ೧೧೦/- |
| ಅಳತೆ | : | ಡೆಮಿ ೧/೮ |
| ಅಕ್ಷರ ಸಂಯೋಜನೆ | : | ರವಿ ಕಮ್ಮಾರ |
| ಮುಖಪುಟ | : | ನಾಗರಾಜ ನಂದರಗಿ, ಹುಬ್ಬಳ್ಳಿ-೩೧ |
| ಮುದ್ರಕರು | : | ಎನ್. ಪಿ. ಪ್ರಿಂಟರ್ಸ್, ಧಾರವಾಡ |
| ISBN | : | 978-81-949726-2-4 |

## ಪರಿವಿಡಿ

**


೧. ಪ್ರವೇಶ ... ೧
೨. ಬೆಳಗಾವಿ ಜಿಲ್ಲೆಯ ಸಾಂಸ್ಕೃತಿಕ ಹಿನ್ನೆಲೆ ... ೫
೩. ಮಠಗಳ ಹುಟ್ಟು ಬೆಳವಣಿಗೆ ... ೧೩
೪. ವೀರಶೈವ ಲಿಂಗಾಯತ ಮಠಗಳ ಪ್ರಾಚೀನತೆ ಮತ್ತು ಪ್ರಕಾರಗಳು ... ೧೬
೫. ಶ್ರೀ ಮಠಗಳ ಧಾರ್ಮಿಕ ಸೇವೆ ... ೧೯
೬. ಶ್ರೀ ಮಠಗಳ ಸಾಮಾಜಿಕ ಸೇವೆ ... ೨೫
೭. ಶ್ರೀ ಮಠಗಳ ಶೈಕ್ಷಣಿಕ ಸೇವೆ ... ೩೬
೮. ಶ್ರೀ ಮಠಗಳ ಸಾಹಿತ್ಯ ಸೇವೆ ... ೪೦
೯. ಶ್ರೀ ಮಠಗಳ ಕುರಿತು ಸಾಹಿತ್ಯ ಸೇವೆ ... ೫೯
೧೦. ಸಮಾರೋಪ ... ೬೭
ಅನುಬಂಧ ... ೭೧
- ಬೆಳಗಾವಿ ಜಿಲ್ಲೆಯ ಒಟ್ಟು ವೀರಶೈವ ಲಿಂಗಾಯತ ಮಠಗಳ ವಿವರ
- ಮಾಹಿತಿ ನೀಡಿದವರು
- ಗ್ರಂಥ ಋಣ
- ಛಾಯಾ ಚಿತ್ರಗಳು


***





**BELAGAVI JILLEYA VEERASHAIVA LINGAYAT MATHAGALU**

*(UGC Funded Research Book-MRP)*

| | | |
|---|---|---|
| Author's | : | Dr. Nagaraj D. Murgod |
| Published by | : | Avva Pustaka Prakashan, Belagavi |
| Revised First Impression | : | 2021 |
| Copies | : | 1000 |
| Pages | : | XII+92 = 104 |
| Price | : | Rs. 110/- |
| Paper Used | : | 70 GSM (Demy 1/8") |
| Copy Right | : | Author |
| Cover Design | : | Nagaraj T. Nandaragi, Hubbali-31 |
| DTP | : | Ravi Kammar |
| Printers | : | N. P. Printers, Dharwad |
| ISBN | : | 978-81-949726-2-4 |

**ಬೆಳಗಾವಿ ಜಿಲ್ಲೆಯ ವೀರಶೈವ ಲಿಂಗಾಯತ ಮಠಗಳು :**

(ಯು.ಜಿ.ಸಿ. ಧನಸಹಾಯ ಪಡೆದ ಕಿರು ಸಂಶೋಧನ ಪ್ರಬಂಧ–MRP)

| | | |
|---|---|---|
| ಲೇಖಕರು | : | ಡಾ. ನಾಗರಾಜ ಡಿ. ಮುರಗೋಡ |
| ಪ್ರಕಾಶಕರು | : | ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಪುಟಗಳು | : | XII+92 = 104 |
| ಪರಿಷ್ಕೃತ ಪ್ರಥಮ ಮುದ್ರಣ | : | ೨೦೨೧ |
| © | : | ಲೇಖಕರು |
| ಬೆಲೆ | : | ರೂ. ೧೧೦/- |
| ಅಳತೆ | : | ಡೆಮಿ ೧/೮ |
| ಅಕ್ಷರ ಸಂಯೋಜನೆ | : | ರವಿ ಕಮ್ಮಾರ |
| ಮುಖಪುಟ | : | ನಾಗರಾಜ ನಂದರಗಿ, ಹುಬ್ಬಳ್ಳಿ-೩೧ |
| ಮುದ್ರಕರು | : | ಎನ್. ಪಿ. ಪ್ರಿಂಟರ್ಸ್, ಧಾರವಾಡ |
| ISBN | : | 978-81-949726-2-4 |



## ಪರಿವಿಡಿ

**

೧. ಪ್ರವೇಶ ... ೧
೨. ಬೆಳಗಾವಿ ಜಿಲ್ಲೆಯ ಸಾಂಸ್ಕೃತಿಕ ಹಿನ್ನೆಲೆ ... ೫
೩. ಮಠಗಳ ಹುಟ್ಟು ಬೆಳವಣಿಗೆ ... ೧೩
೪. ವೀರಶೈವ ಲಿಂಗಾಯತ ಮಠಗಳ ಪ್ರಾಚೀನತೆ ಮತ್ತು ಪ್ರಕಾರಗಳು ... ೧೬
೫. ಶ್ರೀ ಮಠಗಳ ಧಾರ್ಮಿಕ ಸೇವೆ ... ೧೯
೬. ಶ್ರೀ ಮಠಗಳ ಸಾಮಾಜಿಕ ಸೇವೆ ... ೨೫
೭. ಶ್ರೀ ಮಠಗಳ ಶೈಕ್ಷಣಿಕ ಸೇವೆ ... ೩೬
೮. ಶ್ರೀ ಮಠಗಳ ಸಾಹಿತ್ಯ ಸೇವೆ ... ೪೦
೯. ಶ್ರೀ ಮಠಗಳ ಕುರಿತು ಸಾಹಿತ್ಯ ಸೇವೆ ... ೫೯
೧೦. ಸಮಾರೋಪ ... ೬೭
ಅನುಬಂಧ ... ೭೧
- ಬೆಳಗಾವಿ ಜಿಲ್ಲೆಯ ಒಟ್ಟು ವೀರಶೈವ ಲಿಂಗಾಯತ ಮಠಗಳ ವಿವರ
- ಮಾಹಿತಿ ನೀಡಿದವರು
- ಗ್ರಂಥ ಋಣ
- ಛಾಯಾ ಚಿತ್ರಗಳು

***






ಧರ್ಮ ಕೇಂದ್ರಗಳು

| | | |
|---|---|---|
| ಸಂಪಾದಕರ ವಿಳಾಸ | : | **ಡಾ.ವ್ಹಿ.ಬಿ. ಸಣ್ಣಸಕ್ಕರಗೌಡರ,**<br>ಉಪನ್ಯಾಸಕರು ಶ್ರೀ.ಎಸ್.ಎಫ್.ಹೊಸಗೌಡ್ರ<br>ಕಾಲೋನಿ, 3ನೆಯ ಅಡ್ಡರಸ್ತೆ, ಜಯನಗರ<br>ಬಾದಾಮಿ-587201, ಮೊ: 9901510259,<br>**ಪ್ರೊ. ಆರ್.ಎ. ಬಡಿಗೇರ,**<br>ಮೊ: ೯೭೪೩೧೩೦೯೯೩, ಅಥಣಿ |
| ಪ್ರಕಾಶಕರು | : | **ಎಸ್.ಎಲ್.ಎಸ್. ಪಬ್ಲಿಕೇಷನ್**<br>ನಂ. 3437, (ನೆಲಮಾಳಿಗೆ)<br>4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ<br>ಶಾಸ್ತ್ರೀನಗರ, ಬನಶಂಕರಿ 2ನೇ ಹಂತ,<br>ಬೆಂಗಳೂರು-28. ಮೊ:9972129376 |
| ಐಎಸ್‌ಬಿಎನ್ ನಂ. | : | **978-81-953786-8-5** |
| ಪ್ರಥಮ ಮುದ್ರಣ | : | 2021 |
| ಹಕ್ಕುಗಳು | : | ಲೇಖಕರದ್ದು |
| ಕಾಗದದ ಬಳಕೆ | : | 70 ಜಿ.ಎಸ್.ಎಂ. ಮ್ಯಾಪ್ಲಿಥೋ |
| ಪುಸ್ತಕದ ಅಳತೆ | : | 1/8 ಡೆಮ್ಮಿ |
| ಪುಟಗಳು | : | xvi+184=200 |
| ಪ್ರತಿಗಳು | : | 1000 |
| ಬೆಲೆ | : | **ರೂ. 200-00** |
| ಮುಖ ಪುಟ ವಿನ್ಯಾಸ | : | ಕೆ.ಕೆ.ಮಕಾಳೆ, ಹಂಪಿ |
| ಅಕ್ಷರ ಜೋಡಣೆ | : | ಸಹನಾ ಗ್ರಾಫಿಕ್ಸ್, ಬೆಂಗಳೂರು 9342196255 |
| ಮುದ್ರಣ | : | ಓಂ ಶ್ರೀ ಪ್ರಿಂಟರ್ಸ್<br>ಕಸ್ತೂರಿಬಾ ನಗರ, ಬೆಂಗಳೂರು |

# ೬. ಬೆಳಗಾವಿ ಜಿಲ್ಲೆಯ ಮಠಗಳ ಧಾರ್ಮಿಕ ಸೇವೆ

– ಡಾ. ನಾಗರಾಜ ಡಿ. ಮುರಗೋಡ

ಬೆಳಗಾವಿ ಜಿಲ್ಲೆಯ ಶ್ರೀ ಮಠಗಳು ಜನರಲ್ಲಿ ಧಾರ್ಮಿಕ ಪ್ರವೃತ್ತಿಗಳನ್ನು ಉಳಿಸಲು- ಬೆಳೆಸಲು ಅವರಲ್ಲಿ ಆಧ್ಯಾತ್ಮಿಕ ಜ್ಞಾನವನ್ನು ತುಂಬಲು ಪರಂಪರಾಗತವಾಗಿ ಹಲವಾರು ವಿಭಿನ್ನ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ. ನಿತ್ಯ ಗದ್ದುಗೆ ಪೂಜೆ, ಸಂಸ್ಕೃತ, ವೇದ ಹಾಗೂ ಯೋಗಾಭ್ಯಾಸಗಳು, ಧರ್ಮಜಾಗೃತಿ ನಡಿಗೆ, ಜಾತ್ರೆ, ಉತ್ಸವ, ರಥೋತ್ಸವ, ಪಲ್ಲಕ್ಕಿ ಉತ್ಸವ, ಮಹಾಪ್ರಸಾದ, ಪುರಾಣ-ಪ್ರವಚನಗಳು, ಶ್ರಾವಣ ಮಾಸದ ಕಾರ್ಯಕ್ರಮಗಳು, ಜನರಲ್ಲಿ ಧಾರ್ಮಿಕ ಸಮನ್ವಯ ಭಾವನೆ ಮೂಡಿಸುವಿಕೆ, ಅಮವಾಸ್ಯೆ-ಹುಣ್ಣಿಮೆ ಕಾರ್ಯಕ್ರಮಗಳು, ವಾರದ ಕಾರ್ಯಕ್ರಮಗಳು, ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ಕಾರ್ಯಕ್ರಮಗಳು ಇಂಥ ಹತ್ತು-ಹಲವು ವಿವಿಧ ಧಾರ್ಮಿಕ ಆಚರಣೆಗಳನ್ನು ಮಠಗಳು ನಡೆಸುತ್ತಾ ಬಂದಿವೆ. ಅವುಗಳಲ್ಲಿ ಪ್ರಮುಖವಾದ ಕೆಲವು ಧಾರ್ಮಿಕ ಆಚರಣೆಗಳ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ.

### ಗದ್ದುಗೆ ಪೂಜೆ :



ಮಠಗಳ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ ಮಾಡಲಾಗುತ್ತದೆ. ಲಿಂಗೈಕ್ಯರಾದ ಹಿಂದಿನ ಎಲ್ಲಾ ಪೀಠಾಧಿಪತಿಗಳ ಗದ್ದುಗೆಗಳಿಗೆ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಲಾಗುತ್ತದೆ. ಅಭಿಷೇಕದಂತ ಕಾರ್ಯಕ್ರಮಗಳನ್ನು ಮಾಡಿಸುವ ಪದ್ಧತಿಯೂ ಸಹಿತ ಉಂಟು. ಕೆಲವೊಂದು ಮಠಗಳಲ್ಲಿ ಕರ್ತೃಗದ್ದುಗೆಗಳಿಗೆ ತ್ರಿಕಾಲಪೂಜೆ ನಡೆಯುತ್ತದೆ.

### ಜಾತ್ರೆ:

ಬೆಳಗಾವಿ ಜಿಲ್ಲೆಯ ಬಹುತೇಕ ಮಠಗಳ ಜಾತ್ರೆಯು ಶ್ರಾವಣ ಮಾಸದಲ್ಲಿ ನಡೆಯುತ್ತವೆ. ಈ ಜಾತ್ರೆಗಳ ಪೂರ್ವ ಸಿದ್ಧತೆಯನ್ನು ಮಠದ ಆಪ್ತಭಕ್ತರು ಹಾಗೂ ಊರಿನ ಪ್ರಮುಖರು ಸೇರಿ ಮಾಡಿಕೊಳ್ಳುತ್ತಾರೆ. ಆ ಜಾತ್ರೆಗಾಗಿ ಖರ್ಚು ವೆಚ್ಚದ ಪಟ್ಟಿಯನ್ನು ಎಲ್ಲರೂ ಸೇರಿ ತಯಾರಿಸಿ ನಂತರ ಊರಲ್ಲಿ ವಂತಿಗೆ ಎತ್ತುತ್ತಾರೆ. ರೈತಾಪಿ ವರ್ಗದವರಿಂದ ಪ್ರಸಾದ ವ್ಯವಸ್ಥೆಗಾಗಿ ಬೆಲ್ಲ, ಸಕ್ಕರೆ, ದವಸ ಧಾನ್ಯಗಳನ್ನು ಸಹಿತ ಸಂಗ್ರಹಿಸುತ್ತಾರೆ. ಪ್ರತಿಯೊಂದು ಗ್ರಾಮದಲ್ಲಿ ಶ್ರೀ ಮಠಗಳ ಜಾತ್ರೆ ಬಂತೆಂದರೆ ಸಾಕು ಗ್ರಾಮಬಾಂಧವರು ಅತೀ ಸಂತೋಷದಿಂದ ತಮ್ಮ ಬೀಗರು-ಬಂಧು-ಬಾಂಧವರನ್ನು ಕರೆಯಿಸಿಕೊಳ್ಳುತ್ತಾರೆ. ಪ್ರತಿಯೊಂದು ಮನೆಯವರು ಉತ್ಸಾಹದಿಂದ ತಮ್ಮ ಮನೆಗೆ ಸುಣ್ಣ-ಬಣ್ಣ ಬಳೆದು ಶೃಂಗರಿಸಿ, ತಳಿರು- ತೋರಣ ಕಟ್ಟಿ ಜಾತ್ರೆಯಲ್ಲಿ ಉತ್ಸುಕತೆಯಿಂದ ಭಾಗವಹಿಸುತ್ತಾರೆ. ಹೊಸ ಬಟ್ಟೆಗಳನ್ನು – ಕನಕಾದಿ ಆಭರಣಗಳನ್ನು ಧರಿಸಿಕೊಂಡಿರುತ್ತಾರೆ. ತಮ್ಮ ಮನೆಗಳಲ್ಲಿ ಸಿಹಿ ಊಟವನ್ನು ತಯಾರಿಸಿ ಜಾತ್ರೆಯ ಮಠಗಳಿಗೆ ಹೋಗಿ ನೈವೇದ್ಯವನ್ನು ಅರ್ಪಿಸಿ ಬರುತ್ತಾರೆ. ವಿಶೇಷವಾಗಿ ಈ ಜಾತ್ರೆಗಳಲ್ಲಿ ಹೆಣ್ಣು ಮಕ್ಕಳು, ಮುತ್ತೈದೆಯರು ಹೊಸ ಬಟ್ಟೆಗಳನ್ನು ಧರಿಸಿಕೊಂಡು ಅತೀ ಉತ್ಸುಕತೆಯಿಂದ ಭಕ್ತಿಭಾವದಿಂದ ಪಾಲ್ಗೊಂಡಿರುತ್ತಾರೆ. ಜಗದ್ಗುರು ಶಿವಲಿಂಗೇಶ್ವರ ಕುಮಾರೇಂದ್ರ ಸಿದ್ಧ ಸಂಸ್ಥಾನ ಮಠ, ಸಾವಳಗಿಯಲ್ಲಿ ಜಾತ್ರೆಯ ನಿಮಿತ್ಯ ದೊಡ್ಡ ಪ್ರಮಾಣದ ದನಗಳ ಜಾತ್ರೆಯನ್ನು ಹಮ್ಮಿಕೊಂಡಿರುತ್ತಾರೆ. ಈ ಜಾತ್ರೆಯಲ್ಲಿ ಬೇರೆ ಜಿಲ್ಲೆ ರಾಜ್ಯಗಳಿಂದ ದನಗಳನ್ನು ತಂದಿರುತ್ತಾರೆ. ಅದರ ಕ್ರಯ-ವಿಕ್ರಯಗಳು ಸಹ ನಡೆದಿರುತ್ತದೆ. ಇಲ್ಲಿ ಧವನದ ಹುಣ್ಣಿಮೆಯಿಂದು ಆದ್ದೂರಿಯಾಗಿ ೯



ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಈ ಜಾತ್ರೆಗಳ ಸಂದರ್ಭಗಳಲ್ಲಿ ಧರ್ಮೋಪದೇಶದ ಜೊತೆಗೆ ಸಾಹಿತ್ಯ, ಸಾಂಸ್ಕೃತಿಕ ಘೋಷ್ಠಿಗಳು ಸಹಿತ ಜರುಗುವುದು ವಿಶೇಷವಾಗಿದೆ.

### ರಥೋತ್ಸವ :

ಸಾಮಾನ್ಯವಾಗಿ ರಥೋತ್ಸವವು ನಮ್ಮ ನಾಡಿನ ಎಲ್ಲ ಜಾತ್ರೆಗಳಲ್ಲಿ ನಡೆಯುವ ಪ್ರಮುಖ ಕ್ರಿಯಾಚರಣೆಯಾಗಿದೆ. ಜಾತ್ರೆ ಎಂದರೆ ಅದರಲ್ಲಿ ರಥೋತ್ಸವ ಇರಲೇಬೇಕು ಅಂದಾಗ ಮಾತ್ರ ಆ ಜಾತ್ರೆಗೆ ಮೆರಗು ಬರುತ್ತದೆ. "ತೇರು ಇಲ್ಲದ ಜಾತ್ರೆಯಲ್ಲ; ಹೋಳಿಗೆ ಇಲ್ಲದ ಹಬ್ಬವಲ್ಲ" ಎನ್ನುವ ಜನಪದ ಮಾತು ಜಾತ್ರೆಯಲ್ಲಿ ತೇರು ಎಳೆಯಲೇಬೇಕು. ಹಬ್ಬ ಹರಿದಿನಗಳಲ್ಲಿ ಹೋಳಿಗೆ ಯಾಗಲೇಬೇಕು ಇದು ಸಂಪ್ರದಾಯ.

ಬೆಳಗಾವಿ ಜಿಲ್ಲೆಯ ಬಹುತೇಕ ಮಠಗಳಲ್ಲಿ ಜಾತ್ರೆಯ ಸಂದರ್ಭಗಳಲ್ಲಿ ಸಾಯಂಕಾಲ ೫ ಗಂಟೆಗೆ ರಥೋತ್ಸವ ನೆರವೇರುತ್ತದೆ. ಮಠದ ಮುಂದಿರುವ ರಥವನ್ನು ಅಲಂಕರಿಸಿ, ಹಗ್ಗಕಟ್ಟಿ ಹಲವು ಜಯ ಘೋಷಗಳೊಂದಿಗೆ ಎಳೆಯುತ್ತಾರೆ. ನೋಡಲಿಕ್ಕೆ ಬಂದ ಅಪಾರ ಭಕ್ತ ಸಮೂಹ ಆ ರಥಕ್ಕೆ ಉತ್ತತ್ತಿ, ಬೆಂಡು ಬೆತ್ತಾಸು, ಬಾಳೆಹಣ್ಣು, ತೂರಿ ಕೈಮುಗಿದು ಕೃತಾರ್ಥರಾಗುತ್ತಾರೆ.

### ಪಲ್ಲಕ್ಕಿ ಉತ್ಸವ :

ಜಾತ್ರೆಯ ದಿನ ರಥೋತ್ಸವ ಸಾಯಂಕಾಲ ಜರುಗಿದರೆ ಪಲ್ಲಕ್ಕಿ ಉತ್ಸವ ಮುಂಜಾನೆ ಜರುಗುತ್ತದೆ. ಈ ಪಲ್ಲಕ್ಕಿಯಲ್ಲಿ ಮೂಲಕರ್ತೃ ಸ್ವಾಮಿಗಳ ಮೂರ್ತಿಯನ್ನು ಇಟ್ಟು ಹಲವು ಜನ ಸೇರಿ ಪಲ್ಲಕ್ಕಿಯನ್ನು ಮೆರವಣಿಗೆಯೊಂದಿಗೆ ಊರಲ್ಲಿ ಒಯ್ಯುತ್ತಾರೆ. ಈ ಪಲ್ಲಕ್ಕಿಯ ಜೊತೆಗೆ ಆರತಿ ಹಿಡಿದ ಮುತ್ತೈದೆಯರು, ಭಜನಾ ಮೇಳಗಳು, ಕೋಲಾಟದ ಮೇಳಗಳು, ಭಕ್ತವೃಂದ ಇರುತ್ತದೆ. ಮಧ್ಯಾಹ್ನದ ಹೊತ್ತಿಗೆ ಪಲ್ಲಕ್ಕಿ ನಿಗದಿತ ಸ್ಥಾನಕ್ಕೆ ಬಂದು ಕುಳಿತಾಗ ಭಕ್ತಾದಿಗಳು ಕಾಯಿ-ಕರ್ಪೂರ ನೈವೇದ್ಯವನ್ನು ಅರ್ಪಿಸುವುದು ಈ ಜಿಲ್ಲೆಯಲ್ಲಿ ಸಾಮಾನ್ಯವಾಗಿದೆ.



### ಮಹಾ ಪ್ರಸಾದ :

ಊರಿನ ಪ್ರತಿಯೊಂದು ಮಠದ ಜಾತ್ರೆಯಲ್ಲಿಯೂ ಪಲ್ಲಕ್ಕಿ ಉತ್ಸವ ಮುಗಿದ ತರುವಾಯ ಎಲ್ಲ ಭಕ್ತ ವೃಂದಕ್ಕೂ ಮಹಾ ಪ್ರಸಾದದ ವ್ಯವಸ್ಥೆ ಇರುತ್ತದೆ. ಇದಕ್ಕೆ ಹಲವು ದಿನಗಳಿಂದಲೇ ಪೂರ್ವ ತಯಾರಿ ಮಾಡಿಕೊಂಡಿರುತ್ತಾರೆ. ಖಡಕರೊಟ್ಟಿ, ಚಪಾತಿ, ಸಜ್ಜಕ ಅಥವಾ ಗೋದಿ-ಹುಗ್ಗಿ, ಅನ್ನ-ಸಾರು ಇವು ಪ್ರಸಾದದ ಪದಾರ್ಥಗಳಾಗಿವೆ. ಇದರಲ್ಲಿ ಜಾತಿ-ಬೇಧ ಭಾವವಿಲ್ಲದೇ ಸಾವಿರಾರು ಭಕ್ತರು ಬಂದು ಪ್ರಸಾದವನ್ನು ಸ್ವೀಕರಿಸುತ್ತಾರೆ.

### ಪುರಾಣ ಪ್ರವಚನಗಳು :

ಬೆಳಗಾವಿ ಜಿಲ್ಲೆಯ ಮಠ ಮಾನ್ಯಗಳು ಜನರಲ್ಲಿ ಸದಾಚಾರ ಬಿತ್ತಿ ಅವರನ್ನು ಸನ್ಮಾರ್ಗದತ್ತ ಕೊಂಡೊಯ್ಯಲು ವರ್ಷದಲ್ಲಿ ಒಂದೆರಡು ಬಾರಿ ಪುರಾಣ ಪ್ರವಚನ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಂಡಿರುತ್ತವೆ. ವಿಶೇಷವಾಗಿ ಇಂಥ ಪುರಾಣಗಳು ಶ್ರಾವಣ ಮಾಸದಲ್ಲಿ ಜರುಗುತ್ತವೆ. ಪ್ರತಿ ದಿನ ಸಾಯಂಕಾಲ ೭ ರಿಂದ ೯ ರವರೆಗೆ ಜರುಗುತ್ತವೆ. ಕೆಲವು ಮಠಗಳಲ್ಲಿ ನಂತರ ಪ್ರಸಾದ ವ್ಯವಸ್ಥೆಯನ್ನು ಮಾಡಿರುತ್ತಾರೆ. ಪ್ರತಿವರ್ಷ ಒಬ್ಬೊಬ್ಬ ಮಹಾತ್ಮರ ಪುರಾಣವನ್ನು ಭಕ್ತರಿಗೆ ಹೇಳಸಲಾಗುತ್ತದೆ. ಇಟಗಿ ಭೀಮಾಂಬಿಕಾ ಪುರಾಣ, ಗೊಡಚಿ ಈರಣ್ಣನ ಪುರಾಣ, ಸವದತ್ತಿ ಯಲ್ಲಮ್ಮನ ಪುರಾಣ, ಮುರಗೋಡ ಮಹಾಂತ ಶಿವಯೋಗಿಗಳ ಪುರಾಣ ಹೀಗೆ ಹಲವಾರು ಸತ್ಪುರುಷರ ದೇವಾನು ದೇವತೆಗಳ ಪುರಾಣಗಳನ್ನು ಹೇಳಿಸುತ್ತಾರೆ.

### ಶ್ರಾವಣ ಮಾಸದ ಕಾರ್ಯಕ್ರಮಗಳು :

ವೀರಶೈವರಿಗೆ ಶ್ರಾವಣ ಮಾಸ ಶ್ರದ್ಧಾ ಭಕ್ತಿಯ ಪವಿತ್ರ ಮಾಸವಾಗಿದೆ. ಹೀಗಾಗಿ ಈ ತಿಂಗಳಲ್ಲಿ ವೀರಶೈವ ಮಠಗಳು ಹೆಚ್ಚಿನ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತವೆ. ಜಾತ್ರೆ- ಉತ್ಸವಗಳು ಸಹಿತ ಈ ತಿಂಗಳಲ್ಲಿನಲ್ಲಿಯೇ ಹೆಚ್ಚಾಗಿ ನಡೆದಿರುತ್ತವೆ.

**ಧಾರ್ಮಿಕ ಸಮನ್ವಯ ಭಾವನೆ :**

ಬೆಳಗಾವಿ ಜಿಲ್ಲೆಯ ವೀರಶೈವ ಮಠಗಳು ಧಾರ್ಮಿಕ ಸಮನ್ವಯ ಭಾವನೆಯ ಸಂಕೇತಗಳಂತಿವೆ. ಈ ಜಿಲ್ಲೆಯ ಗೋಕಾಕ ತಾಲೂಕಿನ ಸುಣಧೋಳಿಯ ಜಡಿಸಿದ್ಧೇಶ್ವರಮಠದ ಮಠಾಧಿಪತಿಗಳನ್ನು "ಶ್ರೀ ಕಬೀರಪ್ಪ" ಎಂದೇ ಕರೆಯುವರು.

ಗೋಕಾಕ ತಾಲೂಕಿನ ಸಾವಳಗಿಯ ಜಗದ್ಗುರು ಶಿವಲಿಂಗೇಶ್ವರ ಕುಮಾರೇಂದ್ರ ಸಿದ್ಧ ಸಂಸ್ಥಾನ ಮಠವು ಹಿಂದೂ-ಮುಸ್ಲಿಂ ಧಾರ್ಮಿಕ ಸೌಹಾರ್ದತೆಯ ಕೇಂದ್ರ ಬಿಂದುವಾಗಿದೆ. ಈ ಮಠಕ್ಕೆ ವೀರಶೈವರು ಭಕ್ತಾದಿಗಳಿರುವಂತೆ ಮುಸ್ಲಿಂರು ಭಕ್ತಾಧಿಗಳಿದ್ದಾರೆ. ಜಾತ್ರೆ ಉತ್ಸವಗಳನ್ನು ಎಲ್ಲರೂ ಸೇರಿ ಆಚರಿಸುತ್ತಾರೆ. ಆಗ "ದೀನ ಹರ ಹರಾ" ಎಂದೇ ಪ್ರಾರ್ಥಿಸುತ್ತಾರೆ. ಈ ಮಠದ ಕಟ್ಟಡದ ನೆಲಮಾಳಿಗೆಯಲ್ಲಿ ಜಗದ್ಗುರು ಶ್ರೀ ಶಿವಲಿಂಗೇಶ್ವರರ ಗದ್ದುಗೆ, ಅದರ ಮೇಲಂತಸ್ತಿನ ಮಾಳಿಗೆಯಲ್ಲಿ ಬಂದೇನವಾಜರ ತೋರುಗದ್ದುಗೆ, ಅದರ ಮೇಲಿನ ಮೂರನೆಯ ಅಂತಸ್ತಿನಲ್ಲಿ ಬಂದೇನವಾಜ ಮತ್ತು ಶ್ರೀ ಶಿವಲಿಂಗೇಶ್ವರರು ಕುಳಿತು ಚರ್ಚಿಸುತ್ತಿದ್ದ ಮಂಚ ಹಾಗೂ ಕುರ್ಚಿಗಳಿವೆ.

ಪೂಜ್ಯ ಶ್ರೀ ಶಿವಲಿಂಗೇಶ್ವರರ ಪ್ರಭಾವ ಕೇಳಿ ಮೊಗಲ ದೊರೆ ಔರಂಗಜೇಬನು ದಕ್ಷಿಣ ದೇಶಗಳ ಮೇಲೆ ದಂಡೆತ್ತಿ ಬಂದಾಗ ಪೂಜ್ಯರ ಆಶೀರ್ವಾದ ಪಡೆಯಲು ಅವರ ಸಾನ್ನಿಧ್ಯಕ್ಕೆ ಬಂದು ರಾಜಮರ್ಯಾದೆಯೊಂದಿಗೆ ಮುಸ್ಲಿಂ ರಾಜ – ಮಹಾರಾಜರು ತೊಡುತ್ತಿದ್ದ ಹಸಿರು ರಾಜ ಪೋಷಾಕನ್ನು ಪೂಜ್ಯರಿಗೆ ತೊಡಿಸಿ, ತನ್ನ ಗುರುತಿನ ಮುದ್ರೆ ಉಂಗುರವನ್ನು ನೀಡಿ "ರಾಜ ಜಗದ್ಗುರು" ಎಂಬ ಬಿರುದನ್ನು ನೀಡಿದ್ದನೆಂದು ತಿಳಿದು ಬರುತ್ತದೆ. ಈ ಐತಿಹಾಸಿಕ ಘಟನೆಗೆ ಪುರಾವೆ ಒದಗಿಸಲು ಪೀಠದಲ್ಲಿ ಈಗಲೂ ಸಹ ಹಸಿರು ಪೋಷಾಕು, ಮುದ್ರೆ, ಉಂಗುರ ಹಾಗೂ ಕುಠಾರಿಗಳಿವೆ. ವಿಜಯ ದಶಮಿಯ ದಿನ ಪೀಠಾಧಿಪತಿಗಳು ಇವುಗಳನ್ನು ಧರಿಸುವರು.



**ಧರ್ಮ ಪ್ರಚಾರ:**

ಜಿಲ್ಲೆಯ ಮಠಾಧೀಶರು ತಮ್ಮ ಜನೋಪಯೋಗಿ ಕಾಯಕದ ಜೊತೆ ತಮ್ಮ ಧರ್ಮ ಪ್ರಚಾರ ಕಾರ್ಯವನ್ನು ಸಹ ಮಾಡುವರು. ತಮ್ಮ ಧರ್ಮಕ್ಕೆ ಅಪಚಾರ ಉಂಟಾದಾಗ ಹಲವು ಬಾರಿ ಪ್ರತಿಭಟಿಸಿದ್ದು ಉಂಟು. ಚಿಂಚಣಿಯ ಪ್ರಭುದೇವರ ಮಠದ ಪೂಜ್ಯ ಶ್ರೀ ಸಿದ್ಧ ಪ್ರಭು ಸ್ವಾಮಿಗಳು ಧರ್ಮ ಜಾಗೃತಿಗಾಗಿ ತಮ್ಮ ಭಕ್ತರೊಡಗೂಡಿ ೭೫ ಕಿ.ಮೀ. ದೂರ ಕ್ರಮಿಸಿ ವೀರಶೈವ ಧರ್ಮದ ಪ್ರಚಾರ ಮಾಡುತ್ತಾ ಪಾದಯಾತ್ರೆ ಕೈಗೊಂಡಿದ್ದಾರೆ.

**ಆಧ್ಯಾತ್ಮಿಕ ಮನೋಭಾವನೆ ಬೆಳೆಸುವುದು :**

ಸಂಸಾರ ಜಂಜಾಟದಲ್ಲಿ ತೊಳಲಿ ಬಳಲಿದ ಪ್ರಾಪಂಚಿಕರಿಗೆ ಆಧ್ಯಾತ್ಮಿಕ ಮಾರ್ಗದರ್ಶನ ಮಾಡುತ್ತ ಅವರಲ್ಲಿ ಆಧ್ಯಾತ್ಮಿಕ ಮನೋಭಾವನೆಯನ್ನು ಹುಟ್ಟುಹಾಕುವಲ್ಲಿ ಜಿಲ್ಲೆಯ ಪ್ರತಿಯೊಂದು ಮಠದವರು ಸಹ ಕಾರ್ಯ ತತ್ಪರರಾಗಿದ್ದಾರೆ.

**ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವುದು :**

ಇಂದಿನ ಮಕ್ಕಳೇ ನಾಳಿನ ನಾಗರಿಕರು. ದೇಶದ ಬುನಾದಿ ಅವರೇ. ಅವರನ್ನು ಕೇಂದ್ರೀಕರಿಸಿದರೇ ಭವ್ಯ ಭಾರತವನ್ನು ಸದೃಢವಾಗಿ ಕಟ್ಟಬಹುದು ಎಂಬ ಹೆಬ್ಬಯಕೆಯಿಂದ ಇಲ್ಲಿನ ಮಠಗಳು ವರ್ಷದಲ್ಲಿ ಒಂದೆರಡು ಬಾರಿ ಮಕ್ಕಳಿಗಾಗಿ ವಿವಿಧ ಸಾಂಸ್ಕೃತಿಕ ಹಾಗೂ ಮನೋವಿಕಾಸದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ. ಅವರಿಗೆ ಉತ್ತಮ ಸಂಸ್ಕಾರ ನೀಡಲು ಸಾಕಷ್ಟು ಶ್ರಮಿಸುತ್ತಿವೆ.

**ಹುಣ್ಣಿಮೆ ಕಾರ್ಯಕ್ರಮಗಳು :**

ಜಿಲ್ಲೆಯ ಬಹುತೇಕ ಮಠಗಳು ಹುಣ್ಣಿಮೆಯ ದಿನ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತವೆ. ಸಾಯಂಕಾಲ ೭ ರ ಸಮಯದ



ಬೆಳದಿಂಗಳಲ್ಲಿ ವಿಶೇಷ ಉಪನ್ಯಾಸ- ಪ್ರವಚನ ಕಾರ್ಯಕ್ರಮಗಳನ್ನು ಏರ್ಪಡಿಸಿರುತ್ತವೆ. ಅಂದು ಮಠಕ್ಕೆ ಬಂದ ಭಕ್ತಾದಿಗಳಿಗೆಲ್ಲ ಜ್ಞಾನದೂಟದ ಜೊತೆಗೆ ಅನ್ನ ಪ್ರಸಾದವನ್ನು ಸಹ ಉಣಬಡಿಸಲಾಗುತ್ತದೆ.

**ಭಕ್ತರು ಮತ್ತು ನಂಬಿಕೆಗಳು :**

ಮಾನವನ ಜೀವನ ಸಂಪೂರ್ಣವಾಗಿ ನಿಂತಿರುವುದು ಅವನ ನಂಬಿಕೆಯ ಮೇಲೆಯೇ. ನಾವು ಮಾಡುವ ಪ್ರತಿಯೊಂದು ಕಾಯಕಕ್ಕೂ ನಂಬಿಕೆಯು ಬುನಾದಿಯಾಗಿದೆ. ಬೆಳಗಾವಿ ಜಿಲ್ಲೆಯ ವೀರಶೈವ ಬಾಂಧವರು ಮಾತ್ರವಲ್ಲದೇ ಇತರ ಜಾತಿ, ಧರ್ಮದವರೂ, ಸಹಿತ ಇಲ್ಲಿನ ಶ್ರೀ ಮಠಗಳ ಮೇಲೆ ಅಪಾರವಾದ ನಂಬಿಕೆಯನ್ನು ಇಟ್ಟಿದ್ದಾರೆ.

ಈ ಭಕ್ತರು ತಮ್ಮ ತಮ್ಮ ಇಷ್ಟದ ಮಠಗಳ ಮೇಲೆ ಅಪಾರವಾದ ನಂಬಿಕೆಗಳನಿಟ್ಟುಕೊಂಡು ಆ ಮಠಗಳ ಸ್ವಾಮಿಜೀಯವರ ಮುಂದೆ, ಲಿಂಗೈಕ್ಯರಾದ ತಪೋನಿರತ ಮಠಾಧೀಶರ ಗದ್ದುಗೆಗಳ ಮುಂದೆ ಬಂದು ತಮ್ಮ ಅಳಲನ್ನು ತೊಡಿಕೊಳ್ಳುತ್ತಾರೆ. ಯಾರಿಗೂ ಹೇಳಲಿಕ್ಕೆ ಸಾಧ್ಯವಾಗದ ಗುಪ್ತ ವಿಚಾರಗಳನ್ನು, ನೋವುಗಳನ್ನು, ಕಷ್ಟಗಳನ್ನು ಭಗವಂತ ಸ್ವರೂಪಿ ಆ ಗದ್ದುಗೆಗಳ ಮುಂದೆ ಅಳುತ್ತಾ ನನ್ನನ್ನು ಇದರಿಂದ ಪಾರು ಮಾಡು ಎಂದು ಹಂಬಲಿಸುತ್ತ ಬೇಡುತ್ತಾರೆ. ತಮಗೆ ಸುಖವಾಗಲಿ ಎಂದು ಮಕ್ಕಳಾಗಲಿ ಎಂದು ತಮ್ಮ ಕುಟುಂಬವರ್ಗದವರು ಸೌಖ್ಯದಿಂದ ಇರಲಿ ಎಂದು ಹೀಗೆ ನಾನಾ ತೆರನಾಗಿ ತಮ್ಮ ದೈವದ ಮುಂದೆ ಪ್ರಾರ್ಥಿಸಿಕೊಳ್ಳುತ್ತಾರೆ. ಅದು ನೆರವೇರಿದ ನಂತರ ಬಹಳ ಸಂತೋಷದಿಂದ ತಾವು ಅಂದುಕೊಂಡ ಕಾಣಿಕೆಗಳನ್ನು, ಹರಕೆಗಳನ್ನು ತೀರಿಸುತ್ತಾರೆ.

ಸವದತ್ತಿ ತಾಲೂಕಿನ ಮುರಗೋಡದ ಶ್ರೀ ದುರುದುಂಡೇಶ್ವರ ಮಠದಲ್ಲಿರುವ ಲಿಂ. ಪೂಜ್ಯ ಶ್ರೀ ಮಹಾಂತ ಶಿವಯೋಗಿಗಳ ಗದ್ದುಗೆಯ ಮುಂದೆ ನಿಂತು ವಿನಮ್ರವಾಗಿ ತಮ್ಮ ಇಷ್ಟಾರ್ಥಗಳನ್ನು ಬೇಡಿಕೊಂಡು ಇಷ್ಟು ಸಮಯದೊಳಗೆ ಅದು ಈಡೇರಬೇಕು ಎಂದು ಕೇಳಿಕೊಂಡರೆ ನಿಜವಾಗಿಯೂ ಆಶ್ಚರ್ಯಕರದ ರೀತಿಯಲ್ಲಿ ಆ ಕೆಲಸವು ಆಗುತ್ತದೆ



ಆದರೆ ಆ ಬೇಡಿಕೆಯು ಧರ್ಮ ಮಾರ್ಗದಲ್ಲಿ ಇರಬೇಕು ಎಂಬುದು ಇಷ್ಟಾರ್ಥಗಳನ್ನು ಸಿದ್ಧಿಸಿಕೊಂಡವರು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಹೇಳಿದ್ದಾರೆ.

ಇಲ್ಲಿನ ರೈತಾಪಿ ವರ್ಗದವರು ತಾವು ಹೊಲದಲ್ಲಿ ಬಿತ್ತುವ ಪೂರ್ವದಲ್ಲಿ ಆ ಬೀಜಗಳನ್ನು ತಂದು ಮಠಗಳ ಗದ್ದುಗೆಗಳ ಮುಂದೆ ಇಟ್ಟು ನಮಸ್ಕರಿಸಿ ಮತ್ತೆ ಕೆಲವೊಂದಿಷ್ಟನ್ನು ತೆಗೆದುಕೊಂಡು ತಾವು ಬಿತ್ತುವ ಕಾಳಿನಲ್ಲಿ ಕೂಡಿಸಿ ಬಿತ್ತುತ್ತಾರೆ. ಇದರಿಂದ ತಮ್ಮ ಫಸಲು ಚೆನ್ನಾಗಿ ಬರುತ್ತದೆ ಎಂಬ ನಂಬಿಕೆ ಅವರದು. ನಂತರ ರಾಶಿಯಾದ ಕೂಡಲೇ ಮೊದಲು ದವಸ – ಧಾನ್ಯಗಳನ್ನು, ಕಾಯಿ-ಪಲ್ಲೆಗಳನ್ನು ತಮ್ಮ ಇಷ್ಟದ ಮಠಗಳಿಗೆ ಹೋಗಿ ಸಲ್ಲಿಸಿದ ನಂತರವೇ ಉಳಿದವುಗಳನ್ನು ತಮ್ಮ ಮನೆಗಳಿಗೆ ಒಯ್ಯುತ್ತಾರೆ. ಹೀಗೆ ಭಕ್ತಾದಿಗಳು ಮಠಗಳ ಮೇಲೆ ಅಪಾರವಾದ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ಹೀಗೆ ನಿತ್ಯ ಮಠಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರಗುತ್ತಿರುತ್ತವೆ.

**ಗ್ರಂಥ ಋಣ**


- ಬೆಳಗಾವಿ ಸಿರಿಸ್ಮರಣ ಸಂಚಿಕೆ : ಪ್ರಸಂ. ಡಾ. ಎಸ್.ಎಂ. ಹಿರದಗಟ್ಟಿ- ೨೦೦೩
- ಅರಳು: ಪ್ರಸಂ: ಡಾ. ಗುರುಲಿಂಗ ಕಾಪಸೆ, ಪ್ರ. ಶ್ರೀ ಗುರು ಚೆನ್ನಬಸವೇಶ್ವರ ಗ್ರಂಥಮಾಲೆ, ಶ್ರೀ ಮೋಟಗಿ ಮಠ ಅಥಣಿ- ೨೦೦೩.
- ನಾಗನೂರ ಶ್ರೀ ರುದ್ರಾಕ್ಷಿಮಠ ಒಂದು ಅಧ್ಯಯನ: ಎಫ್.ಜಿ. ಜಲರಡ್ಡಿ, ಪ್ರ. ಲಿಂಗಾಯತ ಅಧ್ಯಯನ ಸಂಸ್ಥೆ ಶ್ರೀ ವಿರಕ್ತಮಠ ದೇಶನೂರು- ೧೯೯೭.
- ವಚನ ಕಾರಂಜಿ: ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು , ಹುಕ್ಕೇರಿ- ೨೦೧೧.
- ಅಥಣೇಶ: ಡಾ. ವ್ಹಿ.ಎಸ್. ಮಾಳಿ, ಪ್ರ. ಶ್ರೀ ಗುರು ಚೆನ್ನಬಸವೇಶ್ವರ ಗ್ರಂಥಮಾಲೆ, ಅಥಣಿ -೨೦೧೦.





**Gokak Tallukin Sanskratik Parisar**

*Research Thesis*

| | |
|---|---|
| Author's | : Dr. Nagaraj D. Murgod |
| Published by | : Avva Pustaka Prakashan, Belagavi |
| First Impression | : 2021 |
| Copies | : 1000 |
| Pages | : XVI+444=460 |
| Price | : Rs. 350/- |
| Paper Used | : 70 GSM |
| Copy Right | : Publisher's |
| Cover Design | : Nagaraj Nandaragi, Hubballi-31. |
| DTP | : Ravi Kammar |
| Printers | : B G Printers, Dharwad |
| ISBN | : 978-81-953734-4-4 |

---

**ಗೋಕಾಕ ತಾಲ್ಲೂಕಿನ ಸಾಂಸ್ಕೃತಿಕ ಪರಿಸರ**

ಸಂಶೋಧನಾ ಪ್ರಬಂಧ

| | |
|---|---|
| ಲೇಖಕರು | : ಡಾ. ನಾಗರಾಜ ಡಿ. ಮುರಗೋಡ |
| ಪ್ರಕಾಶಕರು | : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಪುಟಗಳು | : XVI+444=460 |
| ಪ್ರಥಮ ಮುದ್ರಣ | : ೨೦೨೧ |
| © | : ಪ್ರಕಾಶಕರು |
| ಬೆಲೆ | : ರೂ. ೩೫೦/- |
| ಅಕ್ಷರ ಸಂಯೋಜನೆ | : ರವಿ ಕಮ್ಮಾರ |
| ಮುಖಪುಟ | : ನಾಗರಾಜ ನಂದರಗಿ, ಹುಬ್ಬಳ್ಳಿ-೩೧ |
| ಮುದ್ರಕರು | : ಬಿ. ಜಿ. ಪ್ರಿಂಟರ್ಸ್, ಧಾರವಾಡ |
| ISBN | 978-81-953734-4-4 |






**KANNADA SAHITYADALLI ANUBHAVA**

| | |
|---|---|
| Edit by | : Prof B. B. Denganavar<br>Dr. Y. Y. Kokkanavar<br>Prof. Deepa Lagali |
| Published by | : Beladingalu Prakashana, Belagavi |
| Rights | : Author |
| First Edition | : 2020 |
| Copies | : 1000 |
| Pages | : xxii + 454 |
| Cover page Design | : Chittara Arts, Dharwad |
| D.T.P. | : Smt. Swati. Y. Kokkanavar |
| Book Size | : Demi 1/8 |
| Used Paper | : 70 G.S.M. Book Print |
| Printed at | : B.G. Printers, Dharwad |

**ಕನ್ನಡ ಸಾಹಿತ್ಯದಲ್ಲಿ ಅನುಭಾವ**

| | |
|---|---|
| ಸಂಪಾದಕರು | : ಪ್ರೊ. ಬಿ. ಬಿ. ಡೆಂಗನವರ<br>ಡಾ.ವಾಯ್.ವಾಯ್.ಕೊಕ್ಕನವರ<br>ಪ್ರೊ. ದೀಪಾ ಲಗಳಿ |
| ಪ್ರಕಾಶಕರು | : ಬೆಳದಿಂಗಳು ಪ್ರಕಾಶನ, ಬೆಳಗಾವಿ |
| ಪ್ರಥಮ ಮುದ್ರಣ | : 2020 |
| ಪ್ರತಿಗಳು | : 1000 |
| ಪುಟಗಳು | : xxii + 454 |
| ಮುಖಪುಟ ವಿನ್ಯಾಸ | : ಚಿತ್ತಾರ ಆರ್ಟ್ಸ್, ಧಾರವಾಡ |
| ಅಕ್ಷರ ಜೋಡಣೆ | : ಶ್ರೀಮತಿ ಸ್ವಾತಿ. ವಾಯ್. ಕೊಕ್ಕನವರ |
| ಪುಸ್ತಕ ಆಕಾರ | : ಡೆಮಿ 1/8 |
| ಬಳಸಿದ ಕಾಗದ | : 70 ಜಿ.ಎಸ್.ಎಂ. ಬುಕ್‌ಪ್ರಿಂಟ್ |
| ಮುದ್ರಕರು | : ಬಿ.ಜಿ. ಪ್ರಿಂಟರ್ಸ್, ಧಾರವಾಡ |

## 72. ಶಿಶುನಾಳ ಶರೀಫರ ಬದುಕೇ, ನಮಗೊಂದು ಅನುಭಾವ

**ಡಾ. ನಾಗರಾಜ ಡಿ. ಮುದಗೋಡ,** ಸಹಾಯಕ ಪ್ರಾಧ್ಯಾಪಕರು, ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ. ವ್ಹಿ. ಸಾಲಿಮಠ, ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ, ವಿಜಯಪುರ

ಭೂಮಂಡಲದಲ್ಲಿ ಅಧರ್ಮ ತಾಂಡವಾಡುತ್ತಿರುವಾಗ ಪುನಃ ಪುನಃ ನಾನು ಹುಟ್ಟಿ ಬರುತ್ತೇನೆ ಎಂದು ಉವಾಚಿಸಿದ ಶ್ರೀ ಕೃಷ್ಣ ಪರಮಾತ್ಮ, ತಾನು ಬರದೇ ಹೋದರೂ ತನ್ನಂಶಗಳನ್ನು ಹೊಂದಿರುವ ಸತ್ಪುರುಷರನ್ನು ಧರ್ಮ ಪಾಲನೆಗಾಗಿ ಮತ್ತು ಧರ್ಮ ಸಮನ್ವಯತೆಗಾಗಿ ಆಗಾಗ ಭೂಲೋಕಕ್ಕೆ ಕಳಿಸುತ್ತಿರುವುದಂತೂ ದಿಟ. ಅಂತ ಮಹಾಪುರುಷರಲ್ಲಿ ಸಂತ ಶಿಶುನಾಳ ಶರೀಫ ಸಾಹೇಬರು ಓರ್ವರು. ಅವರು ಬದುಕಿದ ಪಥವೇ, ನಮಗೊಂದು ತತ್ವಪದವಾಗಿದೆ.

1819 ರಿಂದ 1889ರವರೆಗೆ ಜೀವಿಸಿದ ಶಿಶುನಾಳಾಧೀಶ ನಮಗೋರ್ವ ಇಚ್ಛಾ ಮರಣಿಯಾಗಿ ಕಾಣಿಸುತ್ತಾರೆ. ಸುಮಾರು 1860–70 ರ ದಶಕದಲ್ಲಿ ಅವರು ಬರೆದಿರುವ ತತ್ವಪದಗಳು ನಮಗೆ ಇಂದಿಗೂ ಪ್ರಸ್ತುತವೆನಿಸಿವೆ. ಅವು ಚಿರಂತನ ಮೌಲ್ಯಗಳನ್ನು ಹೊತ್ತುಕೊಂಡು ಅನುದಿನವೂ ಅನುಕ್ಷಣವೂ ನಮ್ಮ ನಾಲಿಗೆಯ ಮೇಲೆ ನರ್ತಿಸಿ, ನಮಗೆ ಅನುಭವದ ಸಾಕ್ಷಾತ್ಕಾರವನ್ನು ನೀಡುತ್ತಿರುವುದು, ಅವುಗಳ ನವ ನಾವೀನ್ಯತೆಗೆ ಸಾಕ್ಷಿಯಾಗಿದೆ.

ಶಿಶುನಾಳಾಧೀಶರ ಬದುಕೇ ಒಂದು ಪವಾಡದಂತೆ ಗೋಚರಿಸುತ್ತದೆ. ಅವರ ಹುಟ್ಟು–ಸಾವು, ಬದುಕಿದ ಪರಿ, ಮೊದಮೊದಲು ಸಂಸಾರ ಬಂಧದಲ್ಲಿದ್ದರೂ ಅದರಾಚೆಯ ನಿಸ್ಸೀಮನಂತೆ ವರ್ತಿಸುವಿಕೆ, ಅವರಲ್ಲಿರುವ ಗಡಸುತನ, ನಿಷ್ಕಲ್ಮಶ ಹೃದಯ, ಅಪಾರ ಗುರುಭಕ್ತಿ, ನಿರ್ಮಲಭಾವ, ಮಾತೃ ಹೃದಯ ಇವೆಲ್ಲವುಗಳು ಶರೀಫ ಸಾಹೇಬರನ್ನು ನಮಗರಿವಿಲ್ಲದಂತೆ ಒಪ್ಪುವ– ಪೂಜಿಸುವ ಮನೋಇಂಗಿತ ವನ್ನು ಹುಟ್ಟಿಸುತ್ತವೆ.

ಕುಂದಗೋಳ ತಾಲೂಕಿನ ಶಿಶುನಾಳ ಗ್ರಾಮದಲ್ಲಿ ಗೌರವಯುತವಾಗಿ ಬಾಳನ್ನು ನೂಕಿಕೊಂಡು ಸಾಗುತ್ತಿರುವ ಸಾತ್ವಿಕ ದಂಪತಿಗಳಾದ ಇಮಾಮಸಾಹೇಬ ಮತ್ತು ಹಜ್ಜುಮಾರವರಿಗೆ ಸುಖ–ಸಂಪತ್ತು–ಸಮೃದ್ಧಿಗಳೆಲ್ಲವು ಇದ್ದರೂ ಮಕ್ಕಳಿಲ್ಲವೆಂಬ ಒಂದು ಕೊರಗು ಅವರನ್ನು ಸದಾ ಕಾಡುತ್ತಿತ್ತು. ಅಪಾರ ದೈವಭಕ್ತನಾದ ಇಮಾಮಸಾಹೇಬ ಇದರಿಂದ ಅಷ್ಟೇನೂ ಘಾಸಿಗೊಳ್ಳದಿದ್ದರೂ ಮುಗ್ಧ ಸ್ವಭಾವದ ತಾಯಿ ಹಜ್ಜುಮಾ ಮಾತ್ರ ಅದೇ ಕೊರಗಿನಲ್ಲಿಯೇ ಜೀವ ಒತ್ತುತ್ತಿದ್ದಳು. ಅಕಸ್ಮಾತ ಒಂದು ದಿನ ಆ ತಾಯಿಯ ತಲೆಯಲ್ಲಿ ಒಂದು ಹೊಸ ಆಲೋಚನೆ ಹೊಳೆಯಿತು. ತಮ್ಮ ಸಮೀಪದ ಗ್ರಾಮವಾದ ಹುಲಗೂರಿನ ಪವಾಡ ಪುರುಷ ಸಂತ ಖಾದರಲಿಂಗನ ಉರುಸು ಸಮೀಪಿಸುತ್ತಿದೆ. ಆ ಮಹಾಸಂತನಲ್ಲಿ ತಮ್ಮ ನಿವೇದನೆಯನ್ನು ಏಕೆ ಅರ್ಪಿಸಬಾರದೆಂದು ಅವಳ ಮನಸ್ಸು ಚಡಪಡಿಸತೊಡಗಿತು. ಆ ಕೂಡಲೇ ಹಜ್ಜುಮಾ



ಏನನ್ನು ಯೋಚಿಸದೇ ತನ್ನ ಮನದಾಸೆಯನ್ನು ಪತಿಯಲ್ಲಿ ನಿವೇದಿಸಿಕೊಂಡಳು. ಮಡದಿಯ ಇಷ್ಟಾರ್ಥಗಳನ್ನು ಪೂರೈಸುವುದು ಧರ್ಮವೆಂದು ಅರಿತಿದ್ದ ಇಮಾಮಸಾಹೇಬ ಮರುಮಾತನಾಡದೇ ಅವಳ ಮಾತಿಗೆ ಒಪ್ಪಿಕೊಂಡ. ಇಬ್ಬರು ಸೇರಿ ಸಂತ ಖಾದರಲಿಂಗನ ಉರಸ್‌ನಲ್ಲಿ ಪಾಲ್ಗೊಳ್ಳಲು ಎತ್ತಿನ ಬಂಡಿಯಲ್ಲಿ ತಮ್ಮ ನೆರೆಯ ಗ್ರಾಮವಾದ ಹುಲಗೂರಿಗೆ ಪ್ರಯಾಣ ಬೆಳೆಸಿದರು.

ಸಂತ ಖಾದರಲಿಂಗನ ಉರುಸನ್ನು ಕಣ್ತುಂಬಿಕೊಂಡ ಸತಿ–ಪತಿಗಳು, ತಮ್ಮ ಮನದ ಬಯಕೆಯನ್ನು ಈಡೇರಿಸು ತಂದೆ ಎಂದು ಖಾದರಲಿಂಗನಲ್ಲಿ ಬೇಡಿಕೊಂಡರು. ಇದಾದ ಒಂದು ವರುಷದೊಳಗೆ ಸತಿ–ಪತಿಗಳು ಕೃತಾರ್ಥರಾದರು. ಮದುವೆಯಾದ 14–15 ವರ್ಷಗಳ ನಂತರ ಗಂಡು ಸಂತಾನವಾಗಿದ್ದಕ್ಕೆ ಸಂತಸಪಟ್ಟು ಇದು ಸಂತ ಖಾದರಲಿಂಗನ ವರಪ್ರಸಾದವೆಂದೇ ಭಾವಿಸಿದರು. ಆ ಮಗುವಿಗೆ ಮೊಹಮ್ಮದ್ ಶರೀಫ ಎಂದು ಹೆಸರಿಟ್ಟರು.

ಬಹಳ ವರ್ಷಗಳ ನಂತರ ಹುಟ್ಟಿದ ಶರೀಫನನ್ನು ತಂದೆ ತಾಯಿಗಳು ಬಹಳ ಅಕ್ಕರತೆಯಿಂದ ಪೋಷಣ ಮಾಡತೊಡಗಿದರು. ತಮ್ಮ ಮಗನಿಗೆ ಒಳ್ಳೆಯ ಶಿಕ್ಷಣ ದೊರೆಯಲಿ ಎಂದು ಭಾವಿಸಿ ಅವರೂರಲ್ಲೆ ಇರುವ ಕೂಲಿ ಮಠಕ್ಕೆ ತಮ್ಮ ಮಗನನ್ನು ಕಳುಹಿಸತೊಡಗಿದರು. ಬಹು ತೀಕ್ಷ್ಣಮತಿಯಾದ ಶರೀಫ ಬಹುಬೇಗನೆ ಶಾಲೆಯ ಇತರ ಮಕ್ಕಳಿಗೆ–ಊರಿನವರಿಗೆ ಅಚ್ಚುಮೆಚ್ಚಾದ. ದಿನವಿಡಿ ಕೂಲಿಮಠದಲ್ಲಿ ಅಭ್ಯಸಿಸುತ್ತಿದ್ದ ಶರೀಫನಿಗೆ ಸಾಯಂಕಾಲವಾದರೆ, ವೈರಾಗ್ಯಮೂರ್ತಿಯಾದ ತಂದೆಯಿಂದ ರಾಮಾಯಣ ಮತ್ತು ಮಹಾಭಾರತದ ಕಥೆಗಳನ್ನು ಹೇಳಿಸಿಕೊಳ್ಳುವ ಭಾಗ್ಯ ದೊರಕಿತ್ತು. ತಂದೆಯ ಸಮನ್ವಯಭಾವ ಮತ್ತು ವೈರಾಗ್ಯತನ ಬಾಲಕನಾದ ಶರೀಫನ ಮೇಲೆ ಗಂಭೀರ ಪರಿಣಾಮ ಬೀರಿತ್ತು. ಅದಾಗಲೇ ಶರೀಫನು ಮುಲ್ಕೀ ಪರೀಕ್ಷೆ ಪಾಸಾಗಿದ್ದನು.

ತಂದೆಯ ಪ್ರಭಾವ ಮತ್ತು ಸಂತ ಖಾದಿರಶಾರ ಪ್ರೇರಣೆಯಿಂದ ಸಹಜವಾಗಿ ಶರೀಫರಲ್ಲಿ ವೈರಾಗ್ಯದ ಕುರುಹುಗಳು ಗೋಚರಿಸತೊಡಗಿದವು. ಅದಾಗಲೆ ಅವರ ಸಮೀಪದ ಗ್ರಾಮವಾದ ಕಾರಡಗಿಯಲ್ಲಿ ಪ್ರಾಥಮಿಕ ಶಾಲೆಯೊಂದು ಪ್ರಾರಂಭಗೊಂಡಿತ್ತು. ಶರೀಫರು ಆ ಶಾಲೆಗೆ ಜೀವನ ವೃತ್ತಿಗಾಗಿ ಸೇರಿಕೊಂಡು ವೃತ್ತಿ ಜೀವನ ನಡೆಸತೊಡಗಿದರು. ಇದನ್ನೇ ನೆನೆಸಿಕೊಂಡು ಮುಂದೊಂದು ದಿನ ಶರೀಫರು,

**"ಸಾಲಿಯ ನೋಡಿದೆಯಾ ಸರ್ಕಾರದ ಸಾಲಿಯ ನೋಡಿದೆಯಾ**

**ಸಾಲಿ ಸದ್ಗುರುವಿನ ಮಾಲು ಮಂಟಪದೊಳು....."** ಎಂಬ ಪದವೊಂದನ್ನು ಹಾಡುತ್ತಾರೆ.

ಶಿಶುನಾಳ ಗ್ರಾಮದ ಆದಿ ದೈವನಾದ ಬಸವಣ್ಣನ ಮೇಲೆ ಶರೀಫರಿಗೆ ಎಲ್ಲಿಲ್ಲದ ಭಕ್ತಿ, ಹಬ್ಬ–ಹರಿದಿನಗಳಲ್ಲಿ ಅಲ್ಲಿ ಏರ್ಪಡಿಸುವ ಭಜನೆ ಮತ್ತು ಪ್ರಸಾದ ವ್ಯವಸ್ಥೆಗಳಲ್ಲಿ ಮುಂದಾಳತ್ವ ವಹಿಸಿಕೊಂಡು ಸೇವೆ ಮಾಡತೊಡಗಿದವರು. ಶರೀಫರು ಇಸ್ಲಾಂ ಧರ್ಮದ ಕುಟುಂಬದಲ್ಲಿ ಜನಿಸಿದರೂ ಸಹ ಆ ಧರ್ಮಕ್ಕಷ್ಟೇ ತನ್ನನ್ನು



ಸೀಮಿತಗೊಳಿಸಿಕೊಳ್ಳದೇ, ಜಾತಿ, ಮತ, ಪಂಥಗಳ ಹಂಗು ಹರಿದು ಎಲ್ಲರಿಗೂ ಬೇಕಾದವನಾಗಿ ಬೆಳೆದಿದ್ದ. ಶಿಶುವಿನಾಳದ ಹಿರಿಯ ಮಠದ ವಿಭೂತಿ ಬಸಯ್ಯ ಮತ್ತು ಫಕೀರಯ್ಯನವರು ಶರೀಫನ ಸೇವಾ ಭಾವವನ್ನು ಗುರುತಿಸಿ ವೀರಶೈವ ಶಿವಶರಣರ ಸಾಹಿತ್ಯದ ಅಧ್ಯಯನವನ್ನು ಮಾಡಿಸಿದರು. ಇದರಿಂದ ಶರೀಫರು ಉತ್ಸುಕರಾಗಿ ವಚನ ಸಾಹಿತ್ಯವನ್ನು ಓದತೊಡಗಿದರು. ಬಸವಾದಿಯಾಗಿ ಹಲವು ಶಿವಶರಣರ ಪ್ರಭಾವದಿಂದ ಶರೀಫರ ಆಧ್ಯಾತ್ಮದ ನಿಲುವು ಬದಲಾಗತೊಡಗಿತ್ತು.

"ಶಿವ ಒಲಿದಂತೆ ಹಾಡುವೆ" ಎನ್ನುವಂತೆ ಶರೀಫ ಸಾಹೇಬರು ಸ್ವತಃ ಪದಗಳನ್ನು ರಚಿಸಿ ಹಾಡತೊಡಗಿದರು. ಆ ತತ್ವಪದಗಳ ಅಂಕಿತವನ್ನಾಗಿ 'ಶಿಶುನಾಳಾಧೀಶ'ನನ್ನೇ ಬಳಸಿಕೊಂಡರು. ಹೀಗಾಗಿ ಅವರ ಅಂಕಿತನಾಮ ಶಿಶುನಾಳಾಧೀಶವಾಯಿತು. ಹೀಗೆ ತಮ್ಮ ಬದುಕಿನಲ್ಲಿ ಆಧ್ಯಾತ್ಮಿಕತೆಯನ್ನು ಅಳವಡಿಸಿಕೊಂಡು ಜಾತಿ–ಧರ್ಮಗಳ ಸಂಕೋಲೆಯ ಬಂಧನಕ್ಕೆ ಒಳಗಾಗದೇ ನಿರ್ಮೋಹಯುತವಾಗಿ ಪದಗಳನ್ನು ಹಾಡುತ್ತಾ ಸಾಗಿದರು.

ಅವರ ಆಧ್ಯಾತ್ಮಿಕ ಬದುಕು ಎಷ್ಟು ಗಟ್ಟಿಯಾಗಿತ್ತೆಂದರೆ; ಅವರು ಶಿಕ್ಷಕ ವೃತ್ತಿಯಲ್ಲಿದ್ದಾಗ ಶಿಶುವಿನಾಳದಿಂದ ಕಾರಡಗಿಗೆ ಕಾಲ್ನಡಿಗೆಗೆ ಹೋಗಿ ಬರುತ್ತಿದ್ದರು. ಹೀಗಿರುವಾಗ ಶರೀಫರಲ್ಲಿ ಮೋಹಗೊಂಡ ಓರ್ವ ಸುಂದರ ತರುಣಿ ಕತ್ತಲು ಕವಿದ ಒಂದು ಸಾಯಂಕಾಲ ಶರೀಫರು ಬರುವ ಹಾದಿಯಲ್ಲಿಯೇ ನಿಂತು – ಕಾದು, ಅವರಲ್ಲಿ ತನ್ನ ಮನೋಇಂಗಿತವನ್ನು ಅರುಹುತ್ತಾಳೆ. ಇದರಿಂದ ದಿಗಿಲುಗೊಂಡ ಶರೀಫರು ಕ್ಷಣಕಾಲ ಚಂಚಲತೆಯಿಂದ ಕ್ಷೋಭೆಗೊಂಡ ಮನಸ್ಸನ್ನು ಮತ್ತೆ ಸಹಜ ಸ್ಥಿತಿಗೆ ತಂದುಕೊಂಡದ್ದನ್ನು ಅವರೇ ಪದಕಟ್ಟಿ ಹಾಡಿದ ಪರಿ ನಿಚ್ಚಳಗೊಳಿಸುತ್ತದೆ.

**ಹಾವ ತುಳಿದೆನೇ ಮಾನಿನಿ**
**ಹಾವ ತುಳಿದೆನೇ**
**ಹಾವ ತುಳಿದು ಹಾರಿ ನಿಂತೆ**
**ಚೀವತ್ರಯ ಕಳವಳಿಸಿತು ಗೆಳತಿ**
**ಭಾವಶೃತಿಯು ತಪ್ಪಿ ಮನದಿ**
**ದೇವಾ ನೀನೆ ಗತಿಯು ಎಂದು**

ಹೀಗೆ ಮಹಮ್ಮದ ಶರೀಫ ಸಾಹೇಬರು ವೃತ್ತಿ ಜೀವನದ ಜೊತೆಗೆ ಆಧ್ಯಾತ್ಮದ ನಂಟಿನೊಂದಿಗೆ ಬಹು ಆನಂದದಿಂದ ತನ್ಮಯರಾಗಿದ್ದಾಗ ತಂದೆ–ತಾಯಿಗಳ ಒತ್ತಾಸೆ ಕರ್ತವ್ಯ ಭಾವದಿಂದ ಕುಂದಗೋಳದ ಫಕೀರಸಾಹೇಬರ ಜೇಷ್ಠ ಪುತ್ರಿ ಫಾತಿಮಾಳನ್ನು ವಿವಾಹರಾದರು.

ಶರೀಫ ಮತ್ತು ಫಾತಿಮಾಳರ ದಾಂಪತ್ಯ ಜೀವನ, ಸರೋವರದಲ್ಲಿ ಅರಳಿದ ಸಹಜ ಕಮಲದಂತೆ ಅನ್ಯೋನ್ಯವಾಗಿತ್ತು. ಪತಿಗೆ ತಕ್ಕ ಸತಿ ಫಾತಿಮಾ ಇವರ

ಆಧ್ಯಾತ್ಮಿಕ ನಡೆಗೆ ಎಂದಿಗೂ ಅಡ್ಡ ಬರಲಿಲ್ಲ. ಹೀಗಾಗಿಯೇ ಶರೀಫರು ಸಮಕಾಲೀನ ಪವಾಡ ಪುರುಷರಾದ ನವಲಗುಂದದ ಅಜಾತ ನಾಗಲಿಂಗ ಮಹಾ ಸ್ವಾಮಿಗಳು, ಗರಗದ ಶಿವಾನಂದ ಸ್ವಾಮಿಗಳು, ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳು, ಗುಡಗೇರಿಯ ಸಂಗಮೇಶ್ವರ ಸ್ವಾಮಿಗಳು ಮತ್ತು ಹುಬ್ಬಳ್ಳಿಯ ಸಿದ್ಧಾರೂಢ ಮಹಾಸ್ವಾಮಿಗಳ ಸಂಪರ್ಕ ಬೆಳೆಸಿದರು.

ಶರೀಫ ಸಾಹೇಬರು ಇಂತಹ ಮಹಿಮಾ ಪುರುಷರ ಒಡನಾಟದೊಂದಿಗೆ ಸಂಸಾರ ಮತ್ತು ಆಧ್ಯಾತ್ಮವನ್ನು ತೂಗು ತಕ್ಕಡಿಯ ಸಮನಾಗಿ ಕಾಯ್ದುಕೊಂಡರು. ಒಂದು ಸಲ ನವಲಗುಂದದ ನಾಗಲಿಂಗ ಅಜ್ಜನು, ಶರೀಫರೂ ಕೂಡಿಕೊಂಡು ಹುಲಗೂರಿಗೆ ಹೋಗಿದ್ದಾಗ ಅಲ್ಲಿಯ ದ್ಯಾಮವ್ವ ದೇವಿಯ ದರ್ಶನ ಪಡೆದುಕೊಂಡು ಲೋಕಾಭಿರಾಮವಾಗಿ ಮಾತನಾಡುತ್ತಿರುವಾಗ ನಾಗಲಿಂಪ್ಪನವರು ಶರೀಫರ ಹೆಗಲ ಮೇಲಿದ್ದ ಟಾವೆಲ್‌ನ್ನು ಕಿತ್ತೆಸೆದರು. ಇದನ್ನರಿತ ಶರೀಫರು ಏನು ಯಜ್ಜಾ ನನ್ನ ಮಗಳು ತೀರಿದ್ದು ನನಗೆ ಗೊತ್ತಿಲ್ಲ ಎಂದು ಭಾವಿಸಿದ್ಧಿಯಾ ಎಂದಾಗ, ಅದಾದ ಕೆಲವೇ ಗಂಟೆಗಳಲ್ಲಿ ಶಿಶುನಾಳದಿಂದ ಬಂದ ವ್ಯಕ್ತಿಯೊಬ್ಬ ಕಾಲರಾ ಬೇನೆಯಿಂದ ಮಗಳು ಸತ್ತ ಸುದ್ಧಿಯನ್ನು ಇವರಿಗೆ ಮುಟ್ಟಿಸುತ್ತಾನೆ. ಆಗ ಶರೀಫರು "ದುಃಖಿಮೇ ಪಡಾ ಮನ್ ಸುಖಿನ ಹಿಂ ಪಾಯಾ" ಎಂದು ಹಿಂದಿ ಭಾಷೆಯಲ್ಲಿ ಹಾಡುತ್ತಾರೆ. ಹೀಗೆ ಮಹಾ ಅನುಭವಿಗಳಾದ ಶರೀಫರಿಗೆ ಘಟನಾವಳಿಗಳ ಅರಿವು ಮೊದಲೇ ಮೂಡುತ್ತಿತ್ತು. ಹೀಗೆ ಮತ್ತೊಂದು ಘಟನೆಯಲ್ಲಿ ನಾಗಲಿಂಗ ಅಜ್ಜನು ಇವರು ಕೂಡಿ ಹೊರಟಾಗ ಕೆರೆಯ ನೀರನ್ನು ಕುಡಿದು ಮರದ ಕೆಳಗೆ ವಿಶ್ರಮಿಸಿ ಏಳಬೇಕೆಂದಾಗ ನಾಗಲಿಂಗಪ್ಪನವರು ಶರೀಫರ ತಲೆಯ ಮೇಲಿದ್ದ ರುಮಾಲನ್ನು ಕಿತ್ತೆಸೆದರು. ಆಗ ಶರೀಫರು "ಮೋಹದ ಹೆಂಡತಿ ತೀರಿದ ಬಳಿಕ ಮಾವನ ಮನಿಯ ಹಂಗಿನ್ಯಾಕೋ" ಎಂಬ ಪದವನ್ನು ಹಾಡುತ್ತ, "ಫಾತಿಮಾ ಶಾನು ಹೋಗುವ ವಿಷಯವನ್ನು ನಿನ್ನೆಯೇ ಹೇಳಿದ್ದಳು". ನನಗೆ ಗೊತ್ತಿಲ್ಲೆನೂ ಎಂದುಕೊಂಡಿಯಾ ಎನ್ನುತ್ತ, ನಿರ್ವಿಕಾರ ಭಾವದಿಂದ, ಈಗ ಯಾವ ಬಂಧನವೂ ಇಲ್ಲದಂತಾಯಿತು ಬಿಡು ಎಂದರಂತೆ. ಈ ಎರಡು ಘಟನೆಗಳು ಇವರು ಮಹಿಮಾ ಪುರುಷರು ಎಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

ಮೋಹದ ಹೆಂಡತಿ ತೀರಿದ ಬಳಿಕ ಶರೀಫರು ಹೀಗೆನೆ ಕಾಲ ನೂಕುವಾಗ ಅವರೂರಿಗೆ ವಾಕ್ ಸಿದ್ಧಿಪುರುಷರು, ಮಹಾತಪಸ್ವಿಗಳೂ ಮತ್ತು ಗೊಡ್ಡು ಬ್ರಾಹ್ಮಣಿಕೆಯ ಢಂಬಾಚಾರಗಳನ್ನು ತೊರೆದವರು ಆದ ಕಳಸದ ಗುರು ಗೋವಿಂದ ಭಟ್ಟರು ತತ್ವಜ್ಞಾನವನ್ನು ಬಿತ್ತರಿಸುತ್ತ ಬಂದು ಬಸವಣ್ಣನ ದೇವಾಲಯಲ್ಲಿ ತಂಗಿದ್ದರು. ಇದನ್ನರಿತ ಇಮಾಮಸಾಹೇಬ ಅವರನ್ನು ತನ್ನನೆಗೆ ಕರೆಯಿಸಿ ಯಥೋಚಿತ ಆದರಾಥಿತ್ಯಗೈದು ಹೆಂಡತಿ, ಮಗಳನ್ನು ಕಳೆದುಕೊಂಡ ಶರೀಫನ ಕಡೆಗೆ ಕೈ ಮಾಡಿ ತೋರಿಸುತ್ತ, ಇವನನ್ನು ಶಿಷ್ಯನಾಗಿ ಸ್ವೀಕರಿಸಿ ಎಂದರು. ಆಗ ಗುರು



ಶರೀಫನನ್ನೇ ನೋಡುತ್ತ "ನಿಮ್ಮಪ್ಪ ಯಾರಪ್ಪ" ಶರೀಫ ಎಂದು ಕೇಳಿದರು. ಆಗ ತಟ್ಟನೇ ಶರೀಫರು "ಗುರುವೇ ನಿಮ್ಮಪ್ಪನೇ ನನ್ನಪ್ಪ" ಎಂದು ಉದ್ಗರಿಸಿದಾಗ ಇಮಾಮಸಾಹೇಬ ಸಹಿತ ಅಲ್ಲಿ ಸೇರಿದ ಜನ ಸಮುದಾಯ ಗಲಿಬಿಲಿಗೊಂಡಿತು. ಆಗ ಇಮಾಮಸಾಹೇಬ ನಡೆದ ಅಚಾತುರ್ಯವನ್ನು ಸರಿಪಡಿಸಲು ಗುರುಗಳೇ, ಮೊದಲೇ ಹೆಂಡತಿ – ಮಗಳನ್ನು ಕಳೆದುಕೊಂಡು ತಲೆ ಕೆಟ್ಟವನಂತೆ ವರ್ತಿಸುತ್ತಿದ್ದಾನೆ. ಅವನ ಮಾತನ್ನು ಮನಸ್ಸಿಗೆ ತೆಗೆದುಕೊಳ್ಳದಿರಿ ಎಂದಾಗ, ಗುರುಗೋವಿಂದ ಭಟ್ಟರು ಅವನು ನನ್ನ ಪ್ರಶ್ನೆಗೆ ತಕ್ಕ ಉತ್ತರವನ್ನೇ ಕೊಟ್ಟಿದ್ದಾನೆ. ಇನ್ನು ಇವನ ವಿಚಾರ ನನಗಿರಲಿ, ನನಗೊಪ್ಪಿಸಿಬಿಡು ಎಂದಾಗ ಇಮಾಮ ಸಾಹೇಬರ ಕಣ್ಣಂಚಿನಲ್ಲಿ ನೀರೂರಿದವು. ಗುರುಗಳ ಅಸ್ಖಲಿತ ವಾಣಿ, ತೇಜಸ್ ಪೂರ್ಣ ಮುಖಚರ್ಯೆ ಗಮನಿಸಿದ ಶರೀಫ ಆದಾಗಲೇ ಅವರನ್ನು ಗುರುಗಳೆಂದು ಸ್ವೀಕರಿಸಿದ್ದ.

**ದೊರಕಿದಾ ಗುರು ದೊರಕಿದಾ**
**ಪರಮಾನಂದ ಬೋಧದ ರವಿನೊಳಗೆ ಬಂದು**

ಎಂದು ಕುಣಿಯುತ್ತ ಹಾಡಿ ಬಿಟ್ಟರು. ಅಲ್ಲಿಂದ ಗುರು-ಶಿಷ್ಯ ಏಕೋಭಾವದಿಂದ ಊರಿಂದೂರಿಗೆ ಅಲೆಯುತ್ತ ತಮ್ಮ ತತ್ವಾದರ್ಶಗಳನ್ನು ಜನರಿಗೆ ಬಿತ್ತರಿಸುತ್ತ ನಡೆದರು.

ಹೀಗೆ ಹಾಡುತ್ತ – ಕುಣಿಯುತ್ತ ಗುರುವಿನ ಒಲುಮೆಯಲ್ಲಿ ಸಾಗಿದ ಶರೀಫರ ಗುರುವಿನ ಮೇಲಿರುವ ಅಪಾರ ಗೌರವ, ಗೋವಿಂದ ಭಟ್ಟರ ಶಿಷ್ಯ ಪ್ರೇಮವನ್ನು ಜನ ಸಹಿಸಲಿಲ್ಲ. ಬ್ರಾಹ್ಮಣ ಆಚಾರ್ಯರ ತಿಲಕನಂತಿದ್ದ ಗುರುಗೋವಿಂದ ಭಟ್ಟರನ್ನು ಅವರದೇ ಜನ ಹಿಯಾಳಿಸತೊಡಗಿದರು. ಮುಸಲ್ಮಾನನೊಬ್ಬನನ್ನು ಶಿಷ್ಯನಾಗಿ ಮಾಡಿಕೊಂಡು ಈರ್ವರು ಸೇರಿ ಸೇಂದಿ ಕುಡಿದು ಗಾಂಜಾ ಸೇದುತ್ತಾರೆ. ಇದರಿಂದ ಧರ್ಮ ಕೆಟ್ಟಿತು ಎಂದು ಪುಕಾರ ಎಬ್ಬಿಸುತ್ತಾರೆ. ಈಕಡೆ ಬ್ರಾಹ್ಮಣನನ್ನು ತನ್ನ ಗುರುವನ್ನಾಗಿ ಮಾಡಿಕೊಂಡು ಹಿಂದುಗಳು ಮಠ ಮಾನ್ಯಗಳಲ್ಲಿ ವೇದಾಂತ ಹೇಳುತ್ತ, ಹಿಂದೂ ದೇವತೆಗಳನ್ನು ಪೂಜಿಸುವ ಶರೀಫ ಧರ್ಮ ಬಾಹೀರ ವ್ಯಕ್ತಿ ಎಂದು ಅವರದೇ ಜನ ಶರೀಫನನ್ನು ಅಲ್ಲಗಳೆಯ ತೊಡಗಿದರು. ಆಗ ಗುರುನಿಂದನೆಗೆ ಬೇಸತ್ತು ಕೆರಳಿದ ಶರೀಫರು–

**ಸದ್ಗುರು ಸಾಕಿದ ಮುದ್ದಾಗಿ ಬರುತಿದೆ**
**ಎದ್ದು ಹೋಗಿರಿ ಇದ್ದ ನಿಂದಕರು**
**ಬಿದ್ದು ಈ ಭವದೊಳು ಹೊರಳ್ಯಾಡು ಜನರನ್ನು**
**ಉದ್ಧಾರ ಮಾಡುತ ಬರುತಲಿದೆ**
**ಆಕಾಶ ನೋಡುತ ವಾಯುವು ನುಂಗುತ**
**ಝೇಂಕರಿಸುತಲದು ಬರುತಲಿದೆ**
**ಓಂಕಾರದೊಳು ಮನಮಗ್ನವಾಗಿ ತಾ**
**ಆನಂದ ಭರಿತವಾಗಿ ಬರುತಲಿದೆ ........**



ಎಂದು ಹೀಗೆ ಹಾಡುತ್ತ ತಮ್ಮ ಆಧ್ಯಾತ್ಮಿಕ ಲೋಕದಲ್ಲಿ ವಿವರಿಸತೊಡಗಿದರು. ಈ ಗುರು ಶಿಷ್ಯರ ಆಧ್ಯಾತ್ಮದ ಮನೋ ವೈಖರಿಯನ್ನು ಹಾಗೂ ಹತ್ತು- ಹಲವು ಪವಾಡಗಳನ್ನು ಕಣ್ಣಾರ ಕಂಡು ಇವರನ್ನೇ ನಿಂದಿಸುವ ಜನ ಇವರಲ್ಲಿಯೇ ಬಂದು ಭಯ-ಭಕ್ತಿಯಿಂದ ತಪ್ಪೊಪ್ಪಿಕೊಂಡು ಇವರ ಶಿಷ್ಯರಾಗತೊಡಗಿದರು. ಇದನ್ನೆಲ್ಲ ನೋಡಿದ ಶರೀಫ ತಮ್ಮ ಗುರುಗಳ ಮಹಿಮೆಯನ್ನು ಹಾಡಿನಲ್ಲಿ ಕೊಂಡಾಡತೊಡಗಿದರು. ತಮ್ಮ ಗುರು ಕೋಳಿಯಂತೆ ಕಂಡರೂ ಅವರ ಸ್ವರೂಪ ಮಾತ್ರ ಅಗಾಧವಾದದ್ದು ಎನ್ನುತ್ತ

**ಕ್ಯಾಡಗನ್ನ ಕೋಳಿ ನುಂಗಿತ್ತ ನೋಡವ್ವ ತಂಗಿ**
**ಕ್ಯಾಡಗನ್ನ ಕೋಳಿ ನುಂಗಿತ್ತ**
**ಆಡು ಆನೆಯ ನುಂಗಿ ಗ್ವಾಡಿ ಸುಣ್ಣವ ನುಂಗಿ**
**ಆಡಲು ಬಂದ ಪಾತರದವಳ ಮದ್ದಿ ನುಂಗಿತ್ತ ..................**

ಎನ್ನುತ್ತಾ, ಗುರುಗಳಲ್ಲಿ ನನ್ನಂಥ ಹಲವಾರು ಕೊಡಗಗಳನ್ನು ಆಪೋಷಣ ಮಾಡುವ ಶಕ್ತಿ ಇದೆ ಎಂದು ಅವರ ಶಕ್ತಿತ್ವದ ಬಗ್ಗೆ ಹಾಡಿದರು. ಇನ್ನೊಂದು ಸಂದರ್ಭದಲ್ಲಿ–

**ಹಾಕಿದ ಜನಿವಾರವಾ ಸದ್ಗುರುನಾಥ**
**ಹಾಕಿದ ಜನಿವಾರವಾ ಸದ್ಗುರುನಾಥ**
**ಹಾಕಿದ ಜನಿವಾರ ನೂಕಿದ ಭವಭಾರ**
**ಲೋಕದೇ ಬ್ರಹ್ಮಜ್ಞಾನ ನೀ ಪಡೆ ಎಂದು**

ಎಂದು ಹಾಡುತ್ತ ಗುರುವಿನ ಮಹಿಮೆಯನ್ನು ಬಣ್ಣಿಸುತ್ತಾರೆ. ಇವರ ಅಪಾರ ಗುರುಭಕ್ತಿಗೆ ಮೆಚ್ಚಿದ ಗುರುವು ಸಹಿತ ಶರೀಫಾ ನಾನು ಗುರುವಾಗಿ ಜನ್ಮವೆತ್ತಿ ನಿನ್ನಂಥ ಶಿಷ್ಯನನ್ನು ಪಡೆದ ನಾನೇ ಕೃತಾರ್ಥ ಎಂದು ಉದ್ಗರಿಸುತ್ತಿದ್ದರು.

ಹೀಗೆ ಅನುಭಾವ ಪದಗಳನ್ನು ಹಾಡುತ್ತ – ಕುಣಿಯುತ್ತ ಆಧ್ಯಾತ್ಮ ಮತ್ತು ವೈರಾಗ್ಯದ ತುತ್ತ ತುದಿ ಏರಿದ ಶರೀಫರ ಪ್ರತಿಯೊಂದು ಹಾಡುಗಳನ್ನು ಅಪರಿಮಿತ ಸ್ಮರಣ ಶಕ್ತಿಯನ್ನು ಹೊಂದಿದ ಗುಡುಗೇರಿಯ ಕುಂಬಾರ ಮನೆತನದ ಬಸಪ್ಪನವರು ಬರೆದು ಸಂಗ್ರಹಿಸುತ್ತಿದ್ದರು. ಅವರ ಮಗಳು ಬಸಮ್ಮ ಇವುಗಳಿಗೆ ಸ್ವರ ಸಂಯೋಜನೆ ಮಾಡಿ ಇಂಪಾಗಿ ಹಾಡುತ್ತಿದ್ದಳು.

ಹೀಗೆ ಹಾಡಿ-ಕುಣಿದ ಶರೀಫರ ಅನುಭಾವ ಪದಗಳು ಇಂದಿಗೂ ಕನ್ನಡ ನಾಡಿನ ಜನರ ನಾಲಿಗೆಯ ಮೇಲೆ ನರ್ತಿಸುತ್ತಿವೆ. ಶರೀಫ ಸಾಹೇಬರು ತಮ್ಮ ಕೊನೆ ಉಸಿರಿರುವವರೆಗೂ ಹೀಗೆ ಹಾಡಿದರು. ಪ್ರಾಣಬಿಡುವಾಗಲೂ ಸಹ

**"ಬಿಡತೀನ ದೇಹ ಬಿಡತೀನಿ,**
**ಬಿಡತೀನಿ ಮಹಿಮರ ನಡತೀ ಹಿಡಿದ ನಾನು"**

ಎನ್ನುತ್ತ, ತಮ್ಮ ದೇಹ ತ್ಯಾಗ ಮಾಡುವರು. ಹೀಗೆ ಶಿಶುನಾಳಧೀಶನು ಬದುಕಿದ ಬದುಕೇ ನಮಗೊಂದು ದೊಡ್ಡ ಅನುಭಾವವಾಗಿದೆ.



ಕುರುಂಬೆಟ್ಟ ಅಥವಾ ಮಮದಾಪೂರ ಎಂಬುದು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಒಂದು ಹಳ್ಳಿ. ಆದರೆ ಮಮದಾಪೂರವನ್ನು ಇತರ ಹಳ್ಳಿಗಳಂತೆ ಒಂದು ಹಳ್ಳಿ ಎಂದು ಹಗುರಾಗಿ ನೋಡುವಂತಿಲ್ಲ. ಮಮದಾಪೂರಕ್ಕೆ ಒಂದು ಐತಿಹಾಸಿಕ ಪರಂಪರೆಯ ಮಹತ್ವವಿದೆ. ಡಾ. ಮುರಗೋಡ ಅವರು ಮಮದಾಪೂರದ 'ಬಿಳುಕೋಣಿ ಬಸವೇಶ್ವರ' ನಂದಿಯ ಮೇಲಿನ ಭಕ್ತಿಯಿಂದ ಮಾತ್ರವೇ ಅಲ್ಲ, ಮಮದಾಪೂರದ ವಿಷಯಕವಾಗಿ ಸಂಶೋಧನ ದೃಷ್ಟಿಯಿಂದಲೂ ಕೃತಿಯ ರಚನೆಯನ್ನು ಕೈಕೊಂಡಿದ್ದಾರೆ. 'ಮಮದಾಪೂರದ ಸಾಂಸ್ಕೃತಿಕ ಪಕ್ಷಿನೋಟ' ಎಂಬ ತಮ್ಮ ಲೇಖನದಲ್ಲಿ ಮಮದಾಪೂರದ ಜನಸಂಖ್ಯೆಯಿಂದ ಹಿಡಿದು ಅಲ್ಲಿಯ ಬೇರೆ ಬೇರೆ ವೃತ್ತಿಯ ಜನ, ಅಲ್ಲಿಂದ ಮೂಡಿ ಬಂದಿರುವ ಸಾಹಿತಿಗಳು, ವಿದ್ವಾಂಸರು, ಕಲಾವಿದರು ಹೀಗೆ ವಿವಿಧ ವಿಷಯಗಳ ಬಗ್ಗೆ ಸ್ಥೂಲ ವಿವೇಚನೆ ಮಾಡಿದ್ದಾರೆ. ಮಮದಾಪೂರ ಗ್ರಾಮದ ಸಾಹಿತ್ಯಿಕ, ಸಾಂಸ್ಕೃತಿಕ ವಿಷಯ ಸಂಪತ್ತಿಗೆ ಸಹಜವಾಗಿಯೇ ಹೆಚ್ಚಿನ ಮಹತ್ವ ಬಂದಿದೆ...

ಡಾ. ಮುರಗೋಡ ಅವರು ರಚಿಸಿದ ಈ ಕೃತಿ ಗ್ರಾಮ ಚರಿತ್ರೆಗಳ ಬಗ್ಗೆ ಆಸಕ್ತಿ ಇರುವ ಎಲ್ಲರಿಗೂ ಮೆಚ್ಚುಗೆಯಾಗುತ್ತದೆ. ಲೇಖಕರು ಈ ಕೃತಿ ರಚನೆಗೆ ತುಂಬ ಶ್ರಮಿಸಿದ್ದಾರೆ. ಭಕ್ತಿ, ಶ್ರದ್ಧೆ, ವಿವೇಚನೆಗಳಿಂದ ಕೂಡಿರುವ ಈ ಕೃತಿಗಾಗಿ ಡಾ. ನಾಗರಾಜ ಮುರಗೋಡ ಅವರನ್ನು ಅಭಿನಂದಿಸುತ್ತೇನೆ...

...ಮುನ್ನುಡಿಯಿಂದ

ಡಾ. ಎಸ್. ಎಸ್. ಅಂಗಡಿ
ಪ್ರಾಧ್ಯಾಪಕರು,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುರುಂಬೆಟ್ಟ

ಅವ್ವ ಪುಸ್ತಕ ಪ್ರಕಾಶನ
ಬೆಳಗಾವಿ

ISBN : 978-81-953734-2-0




**KURUMBETT**
*(A collection of Articles)*

| | |
|---|---|
| Author's | : Dr. Nagaraj D. Murgod |
| Published by | : Avva Pustaka Prakashan, Belagavi |
| First Impression | : 2022 |
| Copies | : 1000 |
| Pages | : X+80=90 |
| Price | : Rs. 110/- |
| Paper Used | : 70 GSM |
| Copy Right | : Publisher's |
| Cover Design | : Nagaraj Nandaragi, Hubballi-31. |
| DTP | : Ravi Kammar |
| Printers | : B G Printers, Dharwad |
| ISBN | : 978-81-953734-2-0 |

ಕುರುಂಬೆಟ್ಟ :
(ಗ್ರಾಮ ಚರಿತ್ರೆಯ ಸಂಶೋಧನಾ ಲೇಖನಗಳು)

| | |
|---|---|
| ಲೇಖಕರು | : ಡಾ. ನಾಗರಾಜ ಡಿ. ಮುರಗೋಡ |
| ಪ್ರಕಾಶಕರು | : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಪುಟಗಳು | : X+80=90 |
| ಪ್ರಥಮ ಮುದ್ರಣ | : ೨೦೨೨ |
| © | : ಪ್ರಕಾಶಕರು |
| ಬೆಲೆ | : ರೂ. ೧೧೦/- |
| ಅಕ್ಷರ ಸಂಯೋಜನೆ | : ರವಿ ಕಮ್ಮಾರ |
| ಮುಖಪುಟ | : ನಾಗರಾಜ ನಂದರಗಿ, ಹುಬ್ಬಳ್ಳಿ-೩೧ |
| ಮುದ್ರಕರು | : ಬಿ.ಜಿ. ಪ್ರಿಂಟರ್ಸ್, ಧಾರವಾಡ |
| ISBN | : 978-81-953734-2-0 |

## ಪರಿವಿಡಿ

*


| | | |
|---|---|---|
| ೧. ಮುಮದಾಪೂರದ ಸಾಂಸ್ಕೃತಿಕ ಪಕ್ಷಿನೋಟ | ... | ೧ |
| ೨. ಮಾನ್ಯ ಶ್ರೀ ಬಿ. ಬಿ. ಮಮದಾಪೂರ | ... | ೨೩ |
| ೩. ರಾವಸಾಹೇಬ ಪ್ರೊ. ವ್ಹಿ. ಸಿ. ಪಾವಟೆ | ... | ೪೨ |
| ೪. ರಾಂಗ್ಲರ್ ಡಾ. ಡಿ. ಸಿ. ಪಾವಟೆ | ... | ೬೧ |
| ೫. ಡಾ. ಎಸ್. ಸಿ. ನಂದಿಮಠ | ... | ೭೧ |


***





## MAHILE - SAHITYA MATTU SAMSKRUTI

*A collection of Articles by various scholars*

| | |
|---|---|
| Editor's Name | : Dr. Nagaraj D. Murgod |
| Published by | : Avva Pustaka Prakashan, Belagavi |
| First Impression | : 2021 |
| Copies | : 1000 |
| Pages | : X+114 |
| Price | : Rs. 150/- |
| Paper Used | : 70 GSM (Demy 1/8th) |
| Copy Right | : Publisher's |
| Cover Design | : Nagaraj Nandaragi Hubballi-31. |
| DTP | : Ravi Kammar |
| Printers | : B G Printers, Dharwad |
| ISBN | : 978-81-950975-7-9 |

**ಮಹಿಳೆ–ಸಾಹಿತ್ಯ ಮತ್ತು ಸಂಸ್ಕೃತಿ:** ಸಂಶೋಧನ ಪ್ರಬಂಧಗಳ ಸಂಕಲನ
(ಈ ಪುಸ್ತಕದಲ್ಲಿರುವ ಲೇಖನಗಳ ವಿಷಯ ಲೇಖಕರ ವಿವೇಚನೆಗಳಿಂದ ಹೊರಬಂದವುಗಳು. ಇದಕ್ಕೆ ಸಂಪಾದಕರಾಗಲಿ ಹಾಗೂ ಪ್ರಕಾಶಕರಾಗಲಿ ಜವಾಬ್ದಾರರಲ್ಲ.)

| | |
|---|---|
| ಸಂಪಾದಕರು | : ಡಾ. ನಾಗರಾಜ ಡಿ. ಮುರಗೋಡ |
| ಪ್ರಕಾಶಕರು | : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಪುಟಗಳು | : X+114 |
| ಪ್ರಥಮ ಮುದ್ರಣ | : ೨೦೨೧ |
| © | : ಪ್ರಕಾಶಕರು |
| ಬೆಲೆ | : ರೂ. ೧೫೦/– |
| ಅಳತೆ | : ಡೆಮಿ ೧/೮ |
| ಅಕ್ಷರ ಸಂಯೋಜನೆ | : ರವಿ ಕಮ್ಮಾರ |
| ಮುಖಪುಟ | : ನಾಗರಾಜ ನಂದರಗಿ, ಹುಬ್ಬಳ್ಳಿ-೩೧ |
| ಮುದ್ರಕರು | : ಬಿ. ಜಿ. ಪ್ರಿಂಟರ್ಸ್, ಧಾರವಾಡ |
| ISBN | : 978-81-950975-7-9 |



## ಭರತ ಖಂಡದ ವಿದ್ಯಾವತಿಯರು

– ಡಾ. ನಾಗರಾಜ ಡಿ. ಮುರಗೋಡ

ಭರದ ಖಂಡದ ಇತಿಹಾಸದ ಆದಿಯಲ್ಲಿ ನಮ್ಮ ಪೂರ್ವಜ ಋಗಳು ಘೋರಾರಣ್ಯದಲ್ಲಿ ಕುಟೀರಗಳನ್ನು ಕಟ್ಟಿಕೊಂಡು ಸ್ವಚ್ಛಂದವಾಗಿ ಕುಟುಂಬದೊಂದಿಗೆ, ಪರಿಸರ ಮಧ್ಯದ ಆ ಕಾಡು ಪ್ರಾಣಿ ಮತ್ತು ಪಕ್ಷಿಗಳೊಂದಿಗೆ ಆರಾಮದಾಯಕ ಜೀವನ ಸಾಗಿಸುತ್ತಿದ್ದರು. ವೇದ-ಮಂತ್ರ ಪಠಣಗಳೊಂದಿಗೆ ಸ್ತ್ರೀ ಮತ್ತು ಪುರುಷರು ಯಾವುದೇ ಅಂತಸ್ತಿನ ಭೇದ ಭಾವವಿಲ್ಲದೆ ಸಮಾನವಾಗಿ ಜೀವಿಸುತ್ತಿದ್ದರು. ಈ ಸಮಾನತೆಯ ಕಾರಣದಿಂದ ಅಂದಿನ ಕಾಲದ ಸಾಕಷ್ಟು ಮಹಿಳೆಯರು ತಮ್ಮ ನಿತ್ಯದ ಮನೆಗೆಲಸಗಳನ್ನು ಮತ್ತು ಮಕ್ಕಳ ಲಾಲನೆ ಪಾಲನೆಗಳನ್ನು ಮಾಡುವುದರ ಜೊತೆಗೆ, ನಾವು ಇಂದಿಗೂ ಸಹ ಅವರ ಹೆಸರನ್ನು ನೆನಪಿಟ್ಟುಕೊಳ್ಳುವಂತಹ ಕಾರ್ಯಗಳನ್ನು ಮಾಡಿದ್ದಾರೆ. ಅಂದಿನ ಋಷಿ ಪತ್ನಿಯರು, ಸಹೋದರಿಯರು ಮತ್ತು ಹೆಣ್ಣು ಮಕ್ಕಳು ಪುರುಷನ ಸಮಾನವಾಗಿ ಬದುಕಿ ಭಾರತೀಯ ಇತಿಹಾಸ ಪುಟದಲ್ಲಿ ತಮ್ಮ ಹೆಸರನ್ನು ಚಿರಸ್ಥಾಯಿಗೊಳಿಸಿಕೊಂಡು ಇಂದಿನ ಆಧುನಿಕ ಸಮಾಜಕ್ಕೆ ಆದರ್ಶಪ್ರಾಯರಾಗಿದ್ದಾರೆ.

**'ವಿಶ್ವವಾರಾ'** ಎಂಬುವವಳು ಆಗಿನ ಕಾಲದ ವಿದ್ಯಾವತಿಯಾಗಿದ್ದು ಋಗ್ವೇದದಲ್ಲಿ ಅಗ್ನಿಯ ಕುರಿತಾಗಿ ರಚಿಸಿದ ಒಂದು ಪುಸ್ತಕವಿದೆ.

**'ವಾಕ್'** ಅಥವಾ **'ವಾಗ್ದೇವಿ'** ಎಂಬುವವಳು ಋಗ್ವೇದದ ಹತ್ತನೆಯ ಮಂಡಲದ ೧೨೫ನೇ ಸೂಕ್ತದ ೮ ಮಂತ್ರಗಳನ್ನು ರಚಿಸಿದ್ದಾಳೆ. ಈ ಮಂತ್ರಗಳು ದೇವಿ ಸೂಕ್ತವೆಂದು ಪ್ರಸಿದ್ಧವಾಗಿವೆ. ಶಂಕರಾಚಾರ್ಯರರ ಅದ್ವೈತ ಮತವನ್ನು ಹೋಲುವ ತತ್ವಗಳನ್ನು ಇವಳು ಅಂದೇ ಪ್ರಚಾರಪಡಿಸಿದ್ದಳು. ಇವಳು 'ಅಂಭೃಣ'ನೆಂಬ ಋಷಿಯ ಮಗಳಾಗಿದ್ದಳು.

ಪತಿಧರ್ಮಕ್ಕೆ ಹೆಸರುವಾಸಿಯಾದ **'ಲೋಪಾಮುದ್ರೆ'** ಎಂಬ ವಿದ್ಯಾವತಿಯು ವಿದರ್ಭ ದೇಶದ ಅರಸನ ಮಗಳು ಮತ್ತು ಅಗಸ್ತ್ಯ ಋಷಿಯ ಹೆಂಡತಿ. ಇವಳು ಋಗ್ವೇದದ ಕೆಲವು ಋಕ್ಕುಗಳನ್ನು ರಚಿಸಿದ್ದಾಳೆ.

'ಊರ್ವಶಿ'ಯು ಓರ್ವ ಅಪ್ಸರ ಸ್ತ್ರೀಯಾಗಿದ್ದು ಪುರೂರವನೆಂಬ ರಾಜನ ಜೊತೆ ಇವಳ ವಿವಾಹವಾಗಿತ್ತು. ತದನಂತರ ಅವರಿಬ್ಬರಿಗೆ ವಿಯೋಗವಾದಾಗ ಅವರಲ್ಲಿ ನಡೆದ ಸಂವಾದವು ಋಗ್ವೇದದ ಕೆಲವು ಋಕ್ಕುಗಳಲ್ಲಿವೆ. ಇವುಗಳನ್ನು ಊರ್ವಶಿಯೇ ರಚಿಸಿದ್ದಾಳೆ ಎಂದು ಹೇಳುವರು.

'ಸೂರ್ಯಾ' ಎಂಬ ವಿದ್ಯಾವತಿಯು ಋಗ್ವೇದದ ೧೦ನೆಯ ಮಂಡಲದ ೮೫ನೇ ಸೂಕ್ತದ ಕೆಲವು ಋಕ್ಕುಗಳನ್ನು ರಚಿಸಿದ್ದಾಳೆ. ಇದರಲ್ಲಿ ಮದುಮಕ್ಕಳಿಗೆ ಆಶೀರ್ವಾದ ರೂಪದ ಹಾರೈಕೆಗಳಿವೆ.

'ಮೈತ್ರೇಯಿ' ಎಂಬ ವಿದ್ಯಾವತಿಯು ಮಿತ್ರನೆಂಬ ಋಷಿಯ ಮಗಳು. ಇವನು ದೊಡ್ಡ ವಿದ್ವಾಂಸನಾಗಿದ್ದು ಮಗಳಿಗೂ ಸಹ ಬೋಧನೆ ಮಾಡಿ ಅವಳನ್ನು ವಿದ್ಯಾವತಿಯನ್ನಾಗಿ ಮಾಡಿ ಮುನಿಗಳಲ್ಲಿಯೇ ಶ್ರೇಷ್ಠ ಮುನಿಯಾದ ಯಾಜ್ಞವಲ್ಕ್ಯನಿಗೆ ಇವಳನ್ನು ಕೊಟ್ಟು ಮದುವೆ ಮಾಡಿದ್ದನು. ಬೃಹದಾರಣ್ಯಕೋಪನಿಷತ್ತಿನಲ್ಲಿ ಇವಳ ಜಾಣತನವನ್ನು ಕಾಣಬಹುದು.

'ಗಾರ್ಗಿ' ಎಂಬ ವಿದ್ಯಾವತಿಯು ವಚಕ್ನು ಮುನಿಯ ಮಗಳಾಗಿದ್ದು, ಯಾಜ್ಞವಲ್ಕ್ಯ ಮುನಿಯ ಸಮಕಾಲೀನಳಾಗಿದ್ದಳು. ಒಂದು ಸಂದರ್ಭದಲ್ಲಿ ಜನಕ ಮಹಾರಾಜನು ದೊಡ್ಡ ಯಜ್ಞವನ್ನು ಮಾಡಿ ಅಲ್ಲಿ ನೆರೆದಿರುವ ಶ್ರೇಷ್ಠರಾದ ಬ್ರಹ್ಮರ್ಷಿಗೆ ನೀವು ಇದರಲ್ಲಿ ಯಾರು ಶ್ರೇಷ್ಠರೋ ಅವರು ನಾನು ದಾನ ಕೊಡಲೆಂದು ನಿಶ್ಚಯಿಸಿದ ಈ ಸಾವಿರ ಆಕಳುಗಳನ್ನು ತೆಗೆದುಕೊಂಡು ಹೋಗಿರಿ ಎಂದನು. ಆಗ ಎಲ್ಲ ಬ್ರಹ್ಮಜ್ಞಾನಿಗಳು ಒಬ್ಬರ ಮುಖವನ್ನು ಒಬ್ಬರು ನೋಡಿಕೊಳ್ಳುತ್ತ ಸುಮ್ಮನೇ ಕುಳಿತರು. ಆಗ ಸಾವಿರ ಆಕಳುಗಳ ದಾನವನ್ನು ಪಡೆಯಲು ಯಾಜ್ಞವಲ್ಕ್ಯ ಮುನಿಯು ಎದ್ದನು. ಅವನು ಅವರೆಲ್ಲರಲ್ಲಿ ನಿಜವಾಗಿಯೂ ಶ್ರೇಷ್ಠನಾಗಿದ್ದನು ಆ ಸಂದರ್ಭದಲ್ಲಿ ಅದೇ ಯಜ್ಞದಲ್ಲಿ ಭಾಗವಹಿಸಿದ್ದ ವಿದ್ಯಾವತಿಯಾದ ಗಾರ್ಗಿಯು ಎದ್ದು ನಿಂತು ನೀವು ಇಲ್ಲಿರುವ ಎಲ್ಲ ಪಂಡಿತರಿಗಿಂತ ಬ್ರಹ್ಮಜ್ಞಾನಿಯೋ? ಎಂದು ಪ್ರಶ್ನೆ ಮಾಡಿದ್ದಳು. ಅದಕ್ಕೆ ಆ ಮುನಿಯು ಸಹಿತ ಹೌದು ಎಂದು ಉತ್ತರಿಸಿದ್ದನು. ನಂತರ ಅವಳು ಆ ಮುನಿಗೆ ಹಲವು ಪ್ರಶ್ನೆಗಳನ್ನು ಕೇಳಿದಳು. ಇದರಿಂದ ಅವಳ ಅಪಾರ ಜ್ಞಾನವು ಆಳಿದ ಯಜ್ಞಕರಿಗೆ ತಿಳಿಯಿತು. ಅವರಿಬ್ಬರ ನಡುವೆ ನಡೆದ ವಾದ-ವಿವಾದದಿಂದ ಮಹಿಳಾ ಕುಲದಲ್ಲಿಯೇ ಗಾರ್ಗಿ ಸರ್ವ ಶ್ರೇಷ್ಠ ಬ್ರಹ್ಮಜ್ಞಾನಿಯೆಂದು ಸಾಬೀತಾಯಿತು.

'ದೇವಹೂತಿ' ಎಂಬ ವಿದ್ಯಾವತಿಯು ಸ್ವಯಂಭುವಮನು ಎಂಬ ಅರಸನ ಮಗಳು. ಇವಳ ತಾಯಿ ಹೆಸರು ರಾಣಿ ಶತರೂಪಾ. ಬಾಲ್ಯದಿಂದಲೇ



ವಿದ್ಯಾಸಕ್ತಳಾದ ದೇವಹೂತಿಯು ರಾಜಕುಮಾರರನ್ನು ಮದುವೆಯಾಗಲು ನಿರಾಕರಿಸಿ ಅನುಪಮ ಜ್ಞಾನಿಯನ್ನು ವಿವಾಹವಾಗುವುದಾಗಿ ನಿಶ್ಚಯಿಸಿದ್ದಳು. ಈ ಮನೋ ಇಂಗಿತವನ್ನು ತನ್ನ ತಂದೆಗೆ ಹೇಳಿದ್ದಳು. ಆ ಕಾಲದ ದೊಡ್ಡ ವಿದ್ವಾಂಸನೆಂದರೆ ಕರ್ದಮನೆಂಬ ಋಷಿಯು. ಆ ಋಷಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಬೇಕೆಂದು ಸ್ವಯಂಭುವಮನು ಆ ರಾಜಋಷಿಯಲ್ಲಿ ಭಿನ್ನವಿಸಿಕೊಂಡನು. ಅನುಪಮ ಸುಂದರಿಯಾದ ರಾಜಕುಮಾರಿ ದೇವಹೂತಿಯನ್ನು ನೋಡಿದ ಋಷಿಯು ಇದಕ್ಕೆ ಸಮ್ಮತಿಸಿ ವಿವಾಹವಾದ. ರಾಜಕುಮಾರಿ ದೇವಹೂತಿ ತಂದೆಯ ಮನೆಯ ಅಷ್ಟೈಶ್ವರ್ಯಗಳನ್ನು ತ್ಯಜಿಸಿ ಋಷಿಯನ್ನು ವಿವಾಹವಾಗಿ ಅರಣ್ಯವಾಸಿಯಾದಳು. ಬಾಲ್ಯದಿಂದ ವಿದ್ಯಾಸಕ್ತಳಾದ ಮತ್ತು ತನ್ನನ್ನು ಅತೀ ಪ್ರೀತಿಯಿಂದ ಕಾಣುತ್ತಿದ್ದ ಪತ್ನಿ ದೇವಹೂತಿಗೆ ಆ ಋಷಿ ತನ್ನೆಲ್ಲ ಜ್ಞಾನವನ್ನು ನೀಡಿದ. ಇದರಿಂದ ದೇವಹೂತಿ ಬ್ರಹ್ಮಜ್ಞಳಾದಳು. ಅಷ್ಟರಲ್ಲಿ ಅವಳಿಗೆ ಅನೇಕ ಹೆಣ್ಣು ಮಕ್ಕಳು ಮತ್ತು ಒಂದು ಗಂಡು ಮಗುವಿನ ಜನನವಾಗಿತ್ತು. ಅವರೆಲ್ಲರಿಗೂ ತಕ್ಕ ವಿದ್ಯೆಯನ್ನು ದೇವಹೂತಿಯು ನೀಡಿದಳು. ಅವರಲ್ಲಿ ಪ್ರಮುಖರು ವಶಿಷ್ಠ ಋಷಿಯ ಹೆಂಡತಿಯಾದ ಅರುಂಧತಿ ಮತ್ತು ಅತ್ರಿ ಋಷಿಯ ಹೆಂಡತಿಯಾದ ಅನಸೂಯೆ. ಇವರಿಬ್ಬರು ಪತಿವ್ರತಾಶಿರೋಮಣಿಗಳಾಗಿದ್ದಾರೆ. ಇವರ ಪಾತಿವ್ರತ್ಯವು ಜಗತ್ತಿಗೆ ಉದಾಹರಣವಾಗಿದೆ. ಇನ್ನೂ ಇವಳ ಗಂಡು ಮಗ ಸಾಂಖ್ಯ ದರ್ಶನವನ್ನು ಮಾಡಿದ ಕಪಿಲ ಮಹಾಮುನಿಯೆಂದು ಹೆಸರುವಾಸಿಯಾದ ಮುನಿ. ಇವಳಿಗೆ ಮನುಷ್ಯನ ಅಂತರಂಗವನ್ನು ಪರಿಶೀಲಿಸುವ ಸ್ವಭಾವವು ಕರಗತವಾಗಿತ್ತು.

ಗಂಧರ್ವ ಕುಲದ ವಿದ್ಯಾವತಿಯಾದ 'ಮದಾಲಸೆ' ಎಂಬುವಳು ಋತಧ್ವಜನೆಂಬ ಮಹಾರಾಜನ ಹೆಂಡತಿ. ಇವರಿಗೆ ವಿಕ್ರಾಂತ, ಸುಬಾಹು, ಶತ್ರುಮರ್ದನ ಮತ್ತು ಅಲರ್ಕ ಎಂಬ ನಾಲ್ಕು ಮಕ್ಕಳಿದ್ದರು. ಇವಳ ಉಪದೇಶ ಮತ್ತು ಶಿಕ್ಷಣ ನೀಡುವಿಕೆಯಿಂದ ಮೂರು ಮಕ್ಕಳು ಬ್ರಹತ್ ಜ್ಞಾನಿಗಳಾಗಿ ಸಂಸಾರದಲ್ಲಿ ವಿರಕ್ತಿಯನ್ನು ಹೊಂದಿ ಸನ್ಯಾಸಿಗಳಾದರು. ಇದರಿಂದ ನೊಂದುಕೊಂಡ ಋತಧ್ವಜನು ಮದಾಲಸಾಗೆ ಕೊನೆಯ ಮಗನು ಹೀಗೆ ಸನ್ಯಾಸಿಯಾಗದ ಮುಂದೆ ರಾಜ್ಯದ ಗತಿಯೇನು ಎಂದು ಹೇಳಿ ನೊಂದುಕೊಳ್ಳುವನು. ಇದರಿಂದ ಮದಾಲಸೆಯು ಕೊನೆಯ ಮಗನಾದ ಅಲರ್ಕನಿಗೆ ರಾಜನೀತಿ ವ್ಯಾಸಂಗವನ್ನು ಮಾಡಿಸಿ ಅವನನ್ನು ಸಮರ್ಥ ಯುವರಾಜನಾಗಿ ನಿರ್ಮಾಣಗೊಳಿಸಿದಳು. ಹೀಗೆ ಮದಾಲಸಾ ಸಕಲ ವಿಷಯಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದಳು. ಈ ದಂಪತಿಗಳ ಕುರಿತಾಗಿ ಮಾರ್ಕಂಡೇಯ ಪುರಾಣದಲ್ಲಿ ಒಂದು ಕಥೆ ಬರುವುದು.



'ಆತ್ರೇಯಿ' ಎಂಬ ವಿದ್ಯಾರ್ಥಿಯು ಸಕಲ ವಿದ್ಯೆ ಪಡೆಯಬೇಕೆಂಬ ಉತ್ಕಟ ಆಸೆಯಿಂದ ವಾಲ್ಮೀಕಿ ಆಶ್ರಮಕ್ಕೆ ಹೋಗಿ ಅಲ್ಲಿ ಅವರ ಶಿಷ್ಯಳಾಗಿದ್ದಳು. ತದನಂತರ ಅಲ್ಲಿಂದ ನಿರ್ಗಮಿಸಿ ಬಹು ದೂರದ ಅಗಸ್ತ್ಯ ಮುನಿಯ ಆಶ್ರಮಕ್ಕೆ ಹೋಗಿ ಅಲ್ಲಿ ಅವರ ಶಿಷ್ಯಳಾಗಿ ವಿದ್ಯಾಭ್ಯಾಸ ಪೂರೈಸಿ ಮಹಾ ಪಂಡಿತಳಾಗಿದ್ದಳು.

'ಭಾರತೀ'ಯು ಮಂಡನಮಿಶ್ರನೆಂಬ ಮಹಾಪಂಡಿತನ ಹೆಂಡತಿ. ಇವಳು ಸಹ ವಿದ್ಯಾವತಿಯಾಗಿದ್ದು ನಾಲ್ಕು ವೇದಗಳು, ಆರು ವೇದಾಂಗಗಳು, ಆರು ದರ್ಶನಗಳಲ್ಲದೆ ಇತರ ಎಲ್ಲ ವಿಷಯಗಳಲ್ಲಿ ನಿಪುಣತೆಯನ್ನು ಸಂಪಾದಿಸಿದ್ದಳು. ಇವಳ ಕಂಠ ಬಹು ಇಂಪಾಗಿರುವುದರಿಂದ ಎಲ್ಲರು ಇವಳನ್ನು 'ಸರಸವಾಣಿ' ಎಂದು ಹಾಗೂ ಇವಳು ಬಹು ದೊಡ್ಡ ಜ್ಞಾನಿಯಾಗಿರುವುದರಿಂದ ಸಾಕ್ಷಾತ್ 'ಸರಸ್ವತಿ ದೇವಿಯ ಅವತಾರ' ಎಂದು ಆಗಿನ ಜನರು ಬಗೆದಿದ್ದರು. ಒಂದು ಸಂದರ್ಭದಲ್ಲಿ ಮಂಡನಮಿಶ್ರನಿಗೂ ಶ್ರೀ ಶಂಕರಾಚಾರ್ಯರಿಗೂ ವಾದ ನಡೆದಿತ್ತು ಇದರಲ್ಲಿ ಯಾರು ಸೋಲುತ್ತಾರೋ ಅವರು ಮತ್ತೊಬ್ಬರ ಶಿಷ್ಯರಾಗಬೇಕೆಂಬ ಶರತ್ತನ್ನು ಮೊದಲೇ ಇಡಲಾಗಿತ್ತು. ಇವರಿಬ್ಬರು ಮಹಾಜ್ಞಾನಿಗಳ ಸೋಲು-ಗೆಲವುಗಳನ್ನು ನಿರ್ಣಯಿಸುವ ನಿರ್ಣಾಯಕದ ಸ್ಥಾನ ಭಾರತಿಗೆ ದೊರೆತಿತ್ತು. ಇದರಿಂದ ಇವಳ ಅಪಾರ ಜ್ಞಾನದ ಅರಿವು ನಮಗಾಗುತ್ತದೆ. ಇವರಿಬ್ಬರ ನಡುವಿನ ವಾದದಲ್ಲಿ ಶಂಕರಾಚಾರ್ಯರು ಗೆಲ್ಲುತ್ತಾರೆ. ನಿರ್ಣಯ ನೀಡಿದ ಭಾರತಿದೇವಿಯು ಶಂಕರಾಚಾರ್ಯರ ಕುರಿತು ಮಹಾಸ್ವಾಮಿಗಳೇ ಗಂಡನ ಅರ್ಧಾಂಗವೆನಿಸಿದ ಹೆಂಡತಿಯನ್ನು ಜಯಿಸದ ಹೊರತು ನಿಮಗೆ ಜಯ ಸಂದುವುದಿಲ್ಲವೆಂದು ದಿಟ್ಟತನದಿಂದ ಅಂದಳು. ಹೀಗಾಗಿ ಅವರಿಬ್ಬರ ಮಧ್ಯದಲ್ಲಿ ಪುನಃ ವಾದವು ಪ್ರಾರಂಭವಾಯಿತು. ಆಗ ಶಂಕರಾಚಾರ್ಯರು ನಾನು ಅನೇಕ ಪಂಡಿತರೊಂದಿಗೆ ವಾದ ಮಾಡಿದ್ದೇನೆ ಆದರೆ ನಿನ್ನಂತಹ ವಿದ್ಯಾವತಿಯನ್ನು ನಾನು ಎಂದೂ ಕಂಡಿಲ್ಲವೆಂದು ಉದ್ಗಾರ ತೆಗೆದಿದ್ದರು. ನಂತರ ಮಂಡನಮಿಶ್ರ ಮತ್ತು ಭಾರತಿಯು ಅವರ ಶಿಷ್ಯರಾದರು ಎಂಬ ಕಥೆಯೊಂದು ಕೇಳಬರುವುದು.

ವಿದ್ಯಾವತಿಯಾದ 'ಲೀಲಾವತಿ' ಯು ಪಂಡಿತ ಭಾಸ್ಕರಾಚಾರ್ಯರ ಮಗಳು. ಭಾಸ್ಕರಾಚಾರ್ಯರು ಜ್ಯೋತಿಷ್ಯಶಾಸ್ತ್ರದಲ್ಲಿ ಅದ್ವಿತೀಯ ಪಂಡಿತರಾಗಿದ್ದರು. ಇವರು ಮಗಳ ಸಲುವಾಗಿ ಬರೆದ 'ಲೀಲಾವತಿ' ಎಂಬ ಗ್ರಂಥವು ಜಗತ್ಪ್ರಸಿದ್ಧವಾಗಿದೆ. ಇವಳಿಗೆ ಬಾಲ್ಯದಲ್ಲಿಯೇ ವೈಧವ್ಯವು ಉಂಟಾದ್ದರಿಂದ ತಂದೆಯ ಪಾಲನೆಯಲ್ಲಿಯೇ ಬೆಳೆದು ತನ್ನ ಜೀವಮಾನವೆಲ್ಲ ವಿದ್ಯಾ ವ್ಯಾಸಂಗದಲ್ಲಿಯೇ ಕಳೆದಿದ್ದಾಳೆ. ಇವಳು ಗಣಿತ ಲೆಕ್ಕದಿಂದ ಗಿಡದ ಎಲೆಗಳ ಸಂಖ್ಯೆಯನ್ನು ಹೇಳುತ್ತಿದ್ದಳು.



ಜ್ಯೋತಿಷ್ಯಶಾಸ್ತ್ರದಲ್ಲಿ ಅಪಾರ ವಿದ್ಯಾವತಿಯಾದವಳು 'ಖನೆ' ಎಂಬುವಳು. ಇವಳು ವಿಕ್ರಮಾದಿತ್ಯ ರಾಜನ ಸಭೆಯ ನವರತ್ನಗಳಲ್ಲೊಬ್ಬನಾದ 'ವರಾಹ'ನ ಮಗನಾದ 'ಮಿಹಿರ'ನ ಹೆಂಡತಿಯು. ಗಂಡ-ಹೆಂಡಿರಿಬ್ಬರು ಜ್ಯೋತಿಷ್ಯಶಾಸ್ತ್ರದಲ್ಲಿ ಅಪಾರ ಜ್ಞಾನವನ್ನು ಹೊಂದಿದವರು. ಗಂಡ ಮಿಹಿರನಿಗಿಂತ ಅತಿ ಹೆಚ್ಚು ಜ್ಯೋತಿಷ್ಯಶಾಸ್ತ್ರದಲ್ಲಿ ಇವಳು ಜ್ಞಾನಿಯಾಗಿದ್ದಳೆಂಬುದು ಅವಳ ಚರಿತ್ರೆಯಿಂದ ತಿಳಿದುಬರುತ್ತದೆ. ಗಣಿತಶಾಸ್ತ್ರ ಮೂಲಕವಾಗಿ ಇವಳು ಜ್ಯೋತಿಷ್ಯಶಾಸ್ತ್ರವನ್ನು ಅಧ್ಯಯನಿಸಿದ್ದಳು.

ರಾಷ್ಟ್ರಕೂಟ ಅರಸರ ಭೃತ್ಯರಾಗಿದ್ದ 'ಬಂಕರಸ'ನೆಂಬ ಮಾಂಡಲಿಕ ರಾಜನ ಕಾಂತೆಯಾದ 'ವಿಜಯಾಂಕಾ' ಎಂಬುವವಳು ಆ ಕಾಲದ ಶ್ರೇಷ್ಠ ವಿದ್ಯಾವತಿಯಾಗಿದ್ದಳು. ಭಾಸಕವಿ, ಕಾಳಿದಾಸ, ಭವಭೂತಿ, ಬಾಣ ಮೊದಲಾದ ಪ್ರಾಚೀನ ಮಹಾಕವಿಗಳ ಶ್ರೇಷ್ಠತೆಯ ಸಾಲಿನಲ್ಲಿ ಗುರುತಿಸಿಕೊಳ್ಳುವ ವಿದ್ವತ್ ವಾಗೆಂದರೆ ಅವಳೇ ವಿಜಯಾಂಕಾ ಎನ್ನುವಷ್ಟು ಕೀರ್ತಿಶಾಲಿಯಾಗಿದ್ದಾಳೆ.

ದ್ವಾರ ಸಮುದ್ರದಲ್ಲಿ ವಿಷ್ಣುವರ್ಧನ ಬಲ್ಲಾಳನೆಂಬ ರಾಜನು ಆಳ್ವಿಕೆ ಮಾಡುತ್ತಿದ್ದನು. ಅವನ ಸಭೆಯಲ್ಲಿ ಅನೇಕ ಪಂಡಿತರಿದ್ದರು ಅವರಲ್ಲಿ 'ಕಂತಿ' ಎಂಬುವಳು ಶ್ರೇಷ್ಠ ಕವಿಯಿತ್ರಿ ಆಗಿದ್ದಳು. ಇವಳು 'ಅಭಿನವ ಪಂಪ' ಎಂದೇ ಖ್ಯಾತನಾದ ನಾಗಚಂದ್ರ ಕವಿಯ ಸಮಕಾಲೀನಳಾಗಿದ್ದಳು. ಕವಿ ನಾಗಚಂದ್ರನು ಇವಳಿಗೆ ಎಷ್ಟೋ ಕವಿತ್ವದ ಸಮಸ್ಯೆಗಳನ್ನು ನೀಡಿ ಪೂರ್ಣಗೊಳಿಸಲು ತಿಳಿಸಿದ್ದನಂತೆ. ಅವೆಲ್ಲವುಗಳನ್ನು ಪೂರ್ತಿಮಾಡಿ ನಾಗಚಂದ್ರನ ವಿರುದ್ಧ ಕಂತಿ ಗೆದ್ದಿದ್ದಳಂತೆ. ಅವೆಲ್ಲವುಗಳು ಹಾಡಿನ ರೂಪದಲ್ಲಿದ್ದು ಅವುಗಳ ಒಂದು ಕೃತಿಯೇ ನಿರ್ಮಾಣವಾಗಿದೆ. ಅದಕ್ಕೆ 'ಕಂತಿ ಹಂಪನ ಸಮಸ್ಯೆಗಳು' ಎಂದು ಹೆಸರಿಸಲಾಗಿತ್ತು. ಆದರೆ ಇಂದು ಈ ಕೃತಿ ಅನುಪಲಬ್ಧ. ಹೀಗಾಗಿ ಕಂತಿಯ ಬಗ್ಗೆ ಹೆಚ್ಚಿನ ಮಾಹಿತಿಗಳು ನಮಗೆ ಲಭಿಸುವದಿಲ್ಲ. ಕನ್ನಡದ ಮೊದಲ ಕವಯಿತ್ರಿ ಇವಳೇ ಆಗಿದ್ದಳೆಂಬ ಭರವಸೆ ಎಲ್ಲರಲ್ಲಿಯೂ ಇದೆ. ಆ ಕಾಲದಲ್ಲಿ ಇವಳಿಗೆ 'ಅಭಿನವ ವಾಗ್ದೇವಿ' ಎಂಬ ಬಿರುದು ಲಭಿಸಿತ್ತು.

ವಿದ್ಯಾವತಿಯಾಗಿದ್ದ 'ಮೀರಾಬಾಯಿ' ಯು ಅತ್ಯಂತ ಕೃಷ್ಣ ಭಕ್ತಿಯುಳ್ಳ ಧಾರ್ಮಿಕ ಮಹಿಳೆ ಎಂದು ಪ್ರಸಿದ್ಧಿಪಡೆದಿದ್ದಳು. ಅತಿ ಸುಂದರಿಯಾದ ಇವಳು ತನ್ನ ಸೌಂದರ್ಯದಿಂದ ಮತ್ತು ಸಂಗೀತ ಮಾಧುರ್ಯದಿಂದ ಎಲ್ಲರನ್ನು ಮಂತ್ರ ಮುಗ್ಧಳಾಗಿಸುತ್ತಿದ್ದಳು. ಈ ರೀತಿ ಮಂತ್ರ ಮುಗ್ಧನಾದ ಚಿತ್ತೂರಿನ ಅರಸನಾದ ಕುಂಭಸಿಂಗನು ಇವಳಿಗೆ ತನ್ನ ಹೃದಯವನ್ನು ಒಪ್ಪಿಸಿ ಇವಳನ್ನು ಮದುವೆಯಾಗಿದ್ದ ಇದರಿಂದ ಸಾಮಾನ್ಯ ವಿಷ್ಣು ಭಕ್ತಳಾದ

ಮೀರಾಬಾಯಿಯು ಚಿತ್ತೂರಿನ ರಾಜಸಿಂಹಾಸನದಲ್ಲಿ ಮಹಾರಾಣಿಯಾಗಿದ್ದಳು. ತದನಂತರ ತನ್ನ ಅರಮನೆಯ ಆವರಣದಲ್ಲಿಯೇ ಗಂಡನಿಂದ ಅನುಮತಿ ಪಡೆದು 'ರಣಛೋಡ' ದೇವರ ಗುಡಿಯನ್ನು ಕಟ್ಟಿಸಿ ಹಗಲಿರುಳು ವಿಷ್ಣು ಭಕ್ತರೊಡನೆ ನಾಮ ಕೀರ್ತನದಲ್ಲಿ ತೊಡಗುತ್ತಿದ್ದಳು. ಹೀಗೆ ಮೀರಾಬಾಯಿ ನಾಮ ಕೀರ್ತನದಲ್ಲಿ ತೊಡಗಿದಾಗ ಎಷ್ಟೋ ಸಲ ಮೈ ಮರೆದು ಬೀಳುತ್ತಿದ್ದಳು. ಕೊನೆಗಾಲದಲ್ಲಿ ಮೀರಾಬಾಯಿಯು ವೃಂದಾವನಕ್ಕೆ ಹೋಗಿ ಶ್ರೀ ಕೃಷ್ಣನ ಚರಣ ಸನ್ನಿಧಿಯಲ್ಲಿ ಕೃತಾರ್ಥಳಾಗಿದ್ದಳು. ಮೀರಾಬಾಯಿಯು ಶ್ರೀ ಕೃಷ್ಣನ ಕುರಿತಾಗಿ ಅನೇಕ ಪದಗಳನ್ನು ರಚಿಸಿ ಹಾಡುತ್ತಿದ್ದಳು. ಇವಳ ಹೆಸರಿನಲ್ಲಿ ಇಂದು 'ಮೀರಾ ಸಂಪ್ರದಾಯ' ಎಂಬ ಒಂದು ಧರ್ಮ ಪಂಥವೇ ನಿರ್ಮಾಣವಾಗಿದೆ.

'**ಪ್ರವೀಣಾಬಾಯಿ**' ಎಂಬುವಳು ವಿದ್ಯಾವತಿಯಾಗಿದ್ದು ಆ ಕಾಲದಲ್ಲಿ ಚಿಕ್ಕ-ಪುಟ್ಟ ಕವಿತೆಗಳನ್ನು ರಚಿಸಿ ಬಹಳ ಹೆಸರುವಾಸಿಯಾಗಿದ್ದಳು. ಬುಂದೇಲಖಂಡದ ಅರಸನಾದ ಇಂದ್ರಜಿತ್‌ಸಿಂಹನ ಆಸ್ಥಾನದ ಹಲವು ಕವಿ ರತ್ನಗಳಲ್ಲಿ ಇವಳು ಪ್ರಧಾನಳಾಗಿದ್ದಳು. ಇವಳ ಕವಿತ್ವದ ಸುದ್ದಿ ಕೇಳಿದ ಅಕ್ಬರ ಬಾದಶಾಹನು ತನ್ನ ದರಬಾರಿಗೆ ಆಹ್ವಾನಿಸಿ ಇವಳಿಂದ ಕವಿತೆಗಳನ್ನು ಕೇಳಿ ಇವಳನ್ನು ಗೌರವಪೂರ್ವಕವಾಗಿ ಸನ್ಮಾನಿಸಿದ್ದನಂತೆ.

'**ಮಧುರವಾಣಿ**' ಎಂಬ ವಿದ್ಯಾವತಿಯು ತಂಜಾವೂರ ಅರಸನಾದ ರಘುನಾಥ ಭೂಪಾಲನ ಆಸ್ಥಾನದ ವಿದ್ವಾಂಸ ಮತ್ತು ವಿದುಷಿಯರಲ್ಲಿ ಪ್ರಮುಖಳು. ಅತಿ ಶೀಘ್ರದಲ್ಲಿ ಕವಿತೆಗಳನ್ನು ರಚಿಸುವ ಕಲೆ ಇವಳಿಗೆ ಕರಗತವಾಗಿದ್ದು ಅದರಲ್ಲಿ ಇವಳು ಅಗ್ರಗಣ್ಯಳಾಗಿದ್ದಳು. ಇವಳ ವೀಣೆಯ ಆಲಾಪವು ಸಾಕ್ಷಾತ್ ಸರಸ್ವತಿ ದೇವಿಯನ್ನೇ ನೆನಪಿಸಿಕೊಳ್ಳುವಂತೆ ಭಾಸವಾಗುತ್ತಿತ್ತು.

ದಿಲ್ಲಿಯ ಮೊಗಲ್ ಚಕ್ರವರ್ತಿಯಾದ ಬಾಬರನ ಮಗಳು ಹಾಗೂ ಹುಮಾಯುನನ ಸಹೋದರಿಯಾದ 'ಗುಲಬದನ ಬೇಗಮ್'. ಆ ಕಾಲದ ಇನ್ನೋರ್ವ ಪ್ರಮುಖ ವಿದ್ಯಾವತಿಯಾಗಿದ್ದಳು. ಇವಳು ಬಹು ಜಾಣೆಯಾಗಿದ್ದು ರಾಜಕೀಯದಲ್ಲಿ ಚಾಣಾಕ್ಷಳಾಗಿದ್ದಳಂತೆ. ಸಹೋದರ ಹುಮಾಯುನನ ಎಲ್ಲ ಪ್ರಮುಖ ಕಾರ್ಯಗಳಲ್ಲಿ ಇವಳು ಭಾಗಿಯಾಗುತ್ತಿದ್ದಳು. ಬಾದಶಹ ಹುಮಾಯುನನ ಜೀವನ ಚರಿತ್ರೆಯನ್ನು ಬಿಂಬಿಸುವ "ಹುಮಾಯೂನ-ನಾಮಾ" ಎಂಬ ಗ್ರಂಥವನ್ನು ಇವಳೇ ಬರೆದಿದ್ದಾಳೆ.

ಮೊಗಲ್ ರಾಜನಾದ ಔರಂಗಜೇಬನ ಮಗಳಾದ 'ಜೇಬಉನ್ನೀಸಾ'ಳು ಅರಬ್ಬಿ ಮತ್ತು ಪಾರ್ಶಿ ಭಾಷೆಗಳಲ್ಲಿ ವಿಶೇಷ ಜ್ಞಾನವನ್ನು ಹೊಂದಿದ್ದಳು.



ಬಾಲ್ಯದಲ್ಲಿಯೇ ಅಪಾರ ಕವಿತ್ವ ಶಕ್ತಿಯನ್ನು ಪಡೆದ ಇವಳು ವಿದ್ಯಾ ಪ್ರೇಮಿಯೂ ಆಗಿದ್ದಳು. ಆ ಕಾಲದ ಅನೇಕ ಬರಹಗಾರರಿಗೆ, ಕವಿಗಳಿಗೆ ಮತ್ತು ಧಾರ್ಮಿಕರಿಗೆ ಇವಳು ಮುಕ್ತಳಾಗಿ ದಾನ ನೀಡುತ್ತಿದ್ದಳೆಂದು ತಿಳಿದು ಬರುತ್ತದೆ. ಇವಳು ರಾಜನೀತಿಯಲ್ಲಿಯೂ ಸಹ ನಿಪುಣಳಾಗಿದ್ದು ತಂದೆ ಔರಂಗಜೇಬನಿಗೆ ರಾಜಕಾರ್ಯದಲ್ಲಿ ಸಹಾಯ ಮಾಡುತ್ತಿದ್ದಳು. ಇವಳ ಅದೆಷ್ಟೋ ಕವಿತೆಗಳು ಇಂದು ಪ್ರಮುಖ ಪ್ರೇಮ ಗೀತೆಗಳಾಗಿವೆ.

ಮಿಥಿಲೆಯ ಅರಸನಾದ ಚಂದ್ರಸಿಂಹನ ಪಟ್ಟದ ರಾಣಿಯಾದ 'ಲಕ್ಷ್ಮೀದೇವಿ'ಯು ಬಹಳ ವಿದ್ಯಾವತಿಯಾಗಿದ್ದಳು. ಇವಳಿಗೆ ದರ್ಶನ ಶಾಸ್ತ್ರದಲ್ಲಿ ಅಪಾರ ಜ್ಞಾನವಿದ್ದಿತ್ತು. ಇವಳು ತನ್ನ ಆಸ್ಥಾನದಲ್ಲಿ ಅನೇಕ ಪಂಡಿತರಿಗೆ ಆಶ್ರಯ ನೀಡಿದ್ದಳು ಎಂಬುದು ತಿಳಿದು ಬರುತ್ತದೆ.

ಇವರಲ್ಲದೆ ಪ್ರಾಚೀನ ಕಾಲದ ಇನ್ನೂ ಅನೇಕ ಮಹಿಳಾ ಮಣಿಯರು ವಿದ್ಯಾವತಿಯರಾಗಿದ್ದರು. ಅವರಲ್ಲಿ ವೈಜಯಂತಿ, ಮಾನಿನಿದೇವಿ, ಪ್ರಿಯವಂದೆ, ಮಹಾಲಕ್ಷ್ಮೀ, ಅಭಯಾದ, ಮಲ್ಲಿ, ಮೋಹನಾಂಗಿಣಿ, ನೀಲಲೋಚನ, ಬಿಜ್ಜಳದೇವಿ, ಅಕ್ಕಮಹಾದೇವಿ ಹಾಗೂ ಸಂಚಿ ಹೊನ್ನಮ್ಮರಂತಹ ಮುಂತಾದವರನ್ನು ಇಲ್ಲಿ ಹೆಸರಿಸಬಹುದು.

ಗ್ರಂಥ ಋಣ :


- ಭಾರತೀಯ ವಿದುಷಿಯರು-ಮ.ಪ್ರ. ಪೂಜಾರ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ


ಕನ್ನಡ ಸಹಾಯಕ ಪ್ರಾಧ್ಯಾಪಕ, ಜಿ.ಪಿ.ಪಿ. ಮತ್ತು ವ್ಹಿ.ವ್ಹಿ.ಎಸ್., ಕಾಲೇಜು, ಸಿಂದಗಿ





Muttin Tene - A Collection of Articles compiled by Dr. Prakash N. Naragund, Asst. Professor, Dept. of Kannada, M. G. V. C. Degree College, Muddebihal, Dist : Vijayapur. Tel : 9986767832

Published By : VAIBHAV PUBLICATIONS
Near Vatsalya Hospital
Vidyanagar, Masari,
GADAG-582101

Size : 1/8 Demy
Pages : 256 (xii+244)
Paper Used : 70 GSM N. S. Maplitho
© : Author
First Edition : 2021
Copies : 500
Price Rs : Rs. 250/-
ISBN NO : 978-81-947130-3-6

ಮುತ್ತಿನ ತೆನೆ

ಸಂಪಾದಕರು : ಡಾ. ಪ್ರಕಾಶ ಎನ್. ನರಗುಂದ
ಕನ್ನಡ ಉಪನ್ಯಾಸಕರು,
ಎಮ್.ಜಿ.ವಿ.ಸಿ. ಪದವಿ ಕಾಲೇಜು, ಮುದ್ದೇಬಿಹಾಳ
ಜಿ: ವಿಜಯಪುರ ಫೋನ : 9986767832
ಪ್ರಕಾಶಕರು : ವೈಭವ ಪಬ್ಲಿಕೇಷನ್ಸ್, ಗದಗ
ವಾತ್ಸಲ್ಯ ಆಸ್ಪತ್ರೆ ಹತ್ತಿರ,
ವಿದ್ಯಾನಗರ, ಮಸಾರಿ,
ಗದಗ–582101
ಹಕ್ಕುಗಳು : ಲೇಖಕರದು
ಪುಟಗಳು : 256 (xii+244)
ಪ್ರಥಮ ಮುದ್ರಣ : 2021
ಪ್ರತಿಗಳು : 500
ಬೆಲೆ : ರೂ.250/–
ಕಾಗದ : 70 ಜಿಎಸ್ಎಂ ಎನ್. ಎಸ್. ಮ್ಯಾಪಲಿಥೊ
ಐ. ಎಸ್. ಬಿ. ಎನ್. ನಂ : 978–81–947130–3–6
ಮುದ್ರಣ : ಜೆ. ಎ. ಪ್ರಿಂಟ್ಸ್, ಗದಗ. 9886708168



## ಮಮದಾಪೂರ ಗ್ರಾಮ ಚರಿತ್ರೆ

ಡಾ. ನಾಗರಾಜ ಡಿ. ಮುರಗೋಡ
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ ಜೆ.ಪಿ.ಪೋರವಾಲ ಕಲಾ.ವಾಣಿಜ್ಯ ಹಾಗೂ ವ್ಹಿ.ವ್ಹಿ ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ,ಸಿಂದಗಿ.

ಗ್ರಾಮವೆಂಬುದು ಭಾರತೀಯರಿಗೆ ಸುಮಾರು ೮೫೦೦ ವರ್ಷಗಳಿಂದಲೂ ಸುಪರಿಚಿತವಾದ ಸಮುದಾಯ. ಅದನ್ನು ಭಾರತದ ಬೇರೆ ಬೇರೆ ಕಡೆಗಳಲ್ಲಿ ಹಳ್ಳಿ, ಪಳ್ಳಿ, ಊರ, ಪಾದ್ರ, ಖೇಡ್, ಗಾಂವ, ಗುಡಾ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿದೆ. ಕ್ರಿಪೂ. ೬೫೦೦ ರ ಸುಮಾರಿಗೆ ಭಾರತದಲ್ಲಿ ಗ್ರಾಮಗಳು ಉದಯವಾಗಿರಬೇಕೆಂಬ ಅಭಿಪ್ರಾಯವಿದೆ. ಈ ಗ್ರಾಮಗಳ ಏಳ್ಗೆಯಾಗದೆ ದೇಶದ ಏಳ್ಗೆ ಅಸಾಧ್ಯ ಎಂದು ಬಲವಾಗಿ ನಂಬಿರುವ ಮಹಾತ್ಮಾ ಗಾಂಧೀಜಿಯವರು ಹಳ್ಳಿಗಳ ಏಳ್ಗೆಗಾಗಿ ತಮ್ಮ ಸಮಗ್ರ ಬದುಕನ್ನೇ ಮುಡುಪಾಗಿಟ್ಟರು. ನಮ್ಮ ಯುವಕ ಮತ್ತು ಯುವತಿಯರು ಶಿಕ್ಷಣ ಮುಗಿಸಿದ ತಕ್ಷಣ ತಮ್ಮ ಸ್ವಗ್ರಾಮಗಳಿಗೆ ಮರಳಬೇಕೆಂದು ಕರೆ ನೀಡಿದ್ದರು. ಸ್ವದೇಶಿ ಆಂದೋಲನ, ಅಸ್ಪೃಶ್ಯತೆ ಮತ್ತು ಮೂಢ ನಂಬಿಕೆಗಳ ನಿವಾರಣೆ, ಖಾದಿಯ ಪ್ರಚಾರ, ಗೃಹ ಕೈಗಾರಿಕೆಗಳ ಬೆಳವಣಿಗೆ , ನಿಸರ್ಗ ಚಿಕಿತ್ಸೆ, ಆಧುನಿಕ ಬೇಸಾಯದಂತ ಮುಂತಾದ ಚಟುವಟಿಕೆಗಳ ಮೂಲಕ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಯುವಕರಲ್ಲಿ ಮೂಡಿಸಿದರು. ಆ ಮೂಲಕ ಯುವಕರಿಂದ ರಾಮರಾಜ್ಯದ ಕನಸನ್ನು ನನಸಾಗಿಸಿಕೊಳ್ಳಬೇಕೆಂಬ ಕನಸನ್ನು ಕಂಡಿದ್ದರು. ಆದರೆ ಗ್ರಾಮಗಳ ಬಡತನ, ನಿರುದ್ಯೋಗ, ಅನಕ್ಷರತೆ, ಅಜ್ಞಾನ, ಜಾತೀಯತೆ, ಮದ್ಯಪಾನ, ವೇಶ್ಯಾವಾಟಿಕೆ, ಮತೀಯ ಗಲಭೆಗಳಂತ ಸಮಸ್ಯೆಗಳು ಗ್ರಾಮೀಣ ಪ್ರಗತಿಯನ್ನೇ ಕುಂಠಿತಗೊಳಿಸಿವೆ. ಇಂದು ಬಹುಸಂಖ್ಯಾತ ಗ್ರಾಮವಾಸಿಗಳು ಬಡತನ ರೇಖೆಯ ಕೆಳಗೆ ಬದುಕನ್ನು ಸಾಗಿಸುತ್ತಲಿದ್ದಾರೆ. ಮೂಲಭೂತ ಅವಶ್ಯಕತೆಗಳಾದ ಆಹಾರ, ವಸತಿ, ಬಟ್ಟೆ, ಶಿಕ್ಷಣ, ಔಷಧ ಮುಂತಾದ ಕನಿಷ್ಠ ಬೇಡಿಕೆಗಳನ್ನು ಪೂರೈಸಿಕೊಳ್ಳಲಾಗದ ಅರ್ಹತೆ ಸಹ ಗ್ರಾಮೀಣರಲ್ಲಿ ಇಲ್ಲವಾಗಿದೆ. ಇದಕ್ಕೆ ಮೂಲಕಾರಣ ಗ್ರಾಮೀಣರಲ್ಲಿರುವ ಮೂಢನಂಬಿಕೆ, ಅಜ್ಞಾನ ಮತ್ತು ಅನಕ್ಷರತೆ. ಭಾರತದ ಹಳ್ಳಿಗಳ ಪರಿಸ್ಥಿತಿ ಹೀಗಿರುವಾಗ



ಇದಕ್ಕೆ ಅಪವಾದ ಎಂಬುವಂತೆ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಮಮದಾಪೂರ ಎಂಬ ಗ್ರಾಮವು ಪ್ರಗತಿಪರವಾಗಿದ್ದು ವಿದ್ಯಾವಂತರನ್ನು ಹೊಂದಿದ ಶೈಕ್ಷಣಿಕ ತವರೂರಾಗಿದೆ.

ಕರ್ನಾಟಕಕ್ಕೆ ಅಷ್ಟೆ ಏಕೆ? ಇಡೀ ಹಿಂದೂಸ್ಥಾನಕ್ಕೆ ಶೈಕ್ಷಣಿಕ ಕ್ಷೇತ್ರದ ದಿಗ್ಗಜರನ್ನು ಕೊಡುವುದರ ಮೂಲಕ ಚಿರಪರಿಚಿತವಾದ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ 'ಮಮದಾಪೂರ' ಒಂದು ಪುಟ್ಟ ಗ್ರಾಮ. ಪ್ರೊ. ಬಿ.ಬಿ.ಮಮದಾಪೂರ, ಡಾ. ಸಿ.ಜಿ.ನಂದಿಮಠ, ಡಾ. ಡಿ.ಸಿ. ಪಾವಟೆ, ಪ್ರೊ. ವಿ.ಸಿ.ಪಾವಟೆ ಹೀಗೆ ಇಲ್ಲಿನ ಶಿಕ್ಷಣ ತಜ್ಞರ ಹೆಸರನ್ನು ಹೇಳುತ್ತ ಹೋದರೆ ಒಂದು ಪಟ್ಟಿಯೇ ತಯಾರಾಗುತ್ತದೆ. ಮಮದಾಪೂರ ಗ್ರಾಮ ಪುಟ್ಟ ಗ್ರಾಮವಾಗಿದ್ದರೂ ಶೈಕ್ಷಣಿಕ ಕ್ಷೇತ್ರದಲ್ಲಿ ಸಂಪದ್ಭರಿತ ಇತಿಹಾಸವನ್ನು ಸೃಷ್ಟಿಸಿದೆ.

ಗೋಕಾಕದಿಂದ ಪೂರ್ವ ದಿಕ್ಕಿಗೆ ಯರಗಟ್ಟಿಗೆ ಹೋಗುವ ಮಾರ್ಗದಲ್ಲಿ ಗೋಕಾಕ ತಾಲೂಕ ಕೇಂದ್ರದಿಂದ ೧೨ ಕಿ.ಮೀ ನಂತರ ಎಡಗಡೆ ಒಂದು ಬೃಹತ್ ದ್ವಾರಬಾಗಿಲು ಕಾಣಿಸುವುದು. ಅದರ ಮೇಲೆ ಏಳುಕೋಟಿ ಬಸವಣ್ಣನ ದೇವಾಲಯ ಎಂದು ಬರೆದಿದೆ. ಅದರ ಒಳಗಡೆ ಸರಿಸುಮಾರು ೩ ಕಿ.ಮೀ ಹೋದರೆ ಎರಡು ಗುಡ್ಡಗಳ ನಡುವೆ ಪುಟ್ಟ ಹಳ್ಳಿಯೊಂದು ಗೋಚರಿಸುತ್ತದೆ. ಅದುವೇ ಮಮದಾಪೂರ ಗ್ರಾಮ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೯೪೮ ಹೆಕ್ಟೇರ್. ಇದು ೧೯೪೧ ರಲ್ಲಿಯೇ ಗ್ರಾಮ ಪಂಚಾಯಿತಿಯನ್ನು ಹೊಂದಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಈಗ ಈ ಪಂಚಾಯಿತಿ ವ್ಯಾಪ್ತಿಯಲ್ಲಿ ದುಂಡಾನಟ್ಟಿ, ಅಜ್ಜನಕಟ್ಟಿ ಮತ್ತು ಮರಡಿ ಶಿವಾಪುರ ಎಂಬ ಮೂರು ಹಳ್ಳಿಗಳಿವೆ. ಇಲ್ಲಿ□□ ವಾರ್ಡಗಳಿದ್ದು, □□ ಗ್ರಾಮ ಪಂಚಾಯತಿ ಸದಸ್ಯರಿದ್ದಾರೆ. ಒಂದು ತಾಲೂಕಾ ಪಂಚಾಯತಿ ಸದಸ್ಯ ಸ್ಥಾನವಿದ್ದು, ಜಿಲ್ಲಾ ಪಂಚಾಯತಿಗೆ ಮಮದಾಪೂರ ಪ್ರಮುಖ ಕ್ಷೇತ್ರವಾಗಿದೆ.

ಇದು ಸೋಮವಾರದಂದು ಸಂತೆ ಸೇರುವ ಪ್ರಮುಖ ಸ್ಥಳವಾಗಿದ್ದು, ಸುತ್ತಲಿನ ಐಳೆಂಟು ಹಳ್ಳಿಯವರು ಇಲ್ಲಿಗೆಯೇ ಸಂತೆ ಮಾಡಲು ಬರುತ್ತಾರೆ. ಬ್ರಿಟಿಷರ ಆಡಳಿತ ಕಾಲದಲ್ಲಿ ಇದೊಂದು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತೆಂದು ತಿಳಿದು ಬರುತ್ತದೆ. ಇದಕ್ಕೆ ಎರಡು ಬಸ್ ನಿಲ್ದಾಣಗಳಿದ್ದು, ಈ ಮಾರ್ಗವಾಗಿ ಶಿವಾಪುರ, ಬೆಟಗೇರಿ, ತಪಸಿ, ಕೌಜಲಗಿ, ಕುಲಗೋಡ ತಳಕಟ್ನಾಳ, ಢವಳೇಶ್ವರ, ಪಿ. ಹುಂಚಾಳ ಬಸ್ಸುಗಳು ಹಾದು ಹೋಗುತ್ತವೆ.

ಈ ಊರಿನ ಮೂಲ ಉದ್ಯೋಗ ಒಕ್ಕಲುತನ. ಇಲ್ಲಿನ ಬಹುತೇಕರು ರೈತಾಪಿ ಕುಟುಂಬಕ್ಕೆ ಸೇರಿದ್ದು, ಇವರ ಮುಖ್ಯ ಕಸಬು ವ್ಯವಸಾಯವೇ ಆಗಿದೆ. ಇತ್ತಿತ್ತಲಾಗಿ ಹೈನುಗಾರಿಕೆಯಲ್ಲಿ ಹೆಚ್ಚಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಲ್ಲಿ

ಹೆಚ್ಚು ಮಧ್ಯಮ ವರ್ಗದ ಕುಟುಂಬಗಳಿದ್ದು ಬಡತನ ಸ್ವಲ್ಪ ಕಡಿಮೆ ಎಂದೇ ಹೇಳಬಹುದು. ಊರಿನ ಉತ್ತರಕ್ಕೆ ಫಲವತ್ತಾದ ಎರೆ ಮಣ್ಣಿನ ಭೂಮಿಗಳಿದ್ದರೆ, ಪೂರ್ವಕ್ಕೆ ಅತ್ಯುತ್ತಮವಾದ ಕೆಂಪು ಮಿಶ್ರಿತ ಮಸಾರಿ ಭೂಮಿಗಳು ಹಾಗೂ ಬರಗಿ ಎಂದು ಕರೆಯಿಸಿಕೊಳ್ಳುವ ಕಟಕ ಮಣ್ಣನ್ನು ಹೊಂದಿದ ಭೂಮಿ ಇದೆ. ಈ ಊರಿನ ಪಶ್ಚಿಮಕ್ಕೆ ಇಂದ್ರವೇಣಿ ಹೆಸರಿನ ಹಳ್ಳ ಹರಿಯುತ್ತಿದ್ದು ಅದರ ದಂಡೆಯ ಗುಂಟ ಹಲವಾರು ಬಾವಿಗಳಿವೆ. ಹೀಗಾಗಿ ಇಲ್ಲಿ ಮೊದಲಿನಿಂದಲೂ ತೋಟಗಾರಿಕೆ ನಡೆಯುತ್ತಿದೆ. ಉಳಿದ ಪ್ರದೇಶ ಒಣ ಬೇಸಾಯವನ್ನು ಹೊಂದಿದ್ದು ಶೇಂಗಾ, ಜೋಳ, ತೊಗರಿ, ಅಲಸಂದಿ, ಹೆಸರು, ಕಡಲೆ, ಕುಸುಬೆ, ಅಗಸಿ, ನವಣೆ ಹಾಗೂ ಹುರುಳಿಗಳನ್ನು ಯಥೇಚ್ಛವಾಗಿ ಬೆಳೆಯಲಾಗುತ್ತಿತ್ತು. ಈಗ ಘಟಪ್ರಭಾ ನದಿಯ ಬಲದಂಡೆ ಕಾಲುವೆಯ ನೀರಾವರಿಯಿಂದ ಕಬ್ಬು, ದಾಳಿ, ಗೋವಿನ ಜೋಳ, ಅರಿಶಿಣ, ಸದಕ, ಗೋಧಿಗಳನ್ನು ಬೆಳೆಯಲಾಗುತ್ತಿದೆ. ಹಾಗೂ ಕಾಯಿಪಲ್ಲೆ ಬೆಳೆಗಳಾದ ಗಜ್ಜರಿ, ಬೀಟ್‌ರೂಟ್, ಟೋಮೆಟೊ, ಉಳ್ಳಾಗಡ್ಡಿ ಸೌತೆಕಾಯಿಗಳನ್ನು ಮತ್ತು ವಿವಿಧ ತರಕಾರಿಯನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ನೀರಾವರಿ ಬರುವುದಕ್ಕಿಂತ ಪೂರ್ವದಲ್ಲಿ ಇಲ್ಲಿ ಜೋಳವನ್ನು ಹೆಚ್ಚಾಗಿ ಬೆಳೆಯುವುದರಿಂದ ಅವುಗಳನ್ನು ಸಂರಕ್ಷಿಸಲು ಮನೆ ಮುಂದೆ ಹಾಗೂ ಹಿಂದೆ ಹಿತ್ತಲಿನಲ್ಲಿ ಹಗೆಗಳನ್ನು ತೋಡಿಸಿರುವುದನ್ನು ನಾವು ಇಂದಿಗೂ ಕಾಣಬಹುದು. ಈ ಗ್ರಾಮದ ವ್ಯಾಪ್ತಿಯಲ್ಲಿ ೨೦ ಹೇಕ್ಟರ್ ಅರಣ್ಯವಿದ್ದು, ದನಕರುಗಳಿಗೆ ಮೇಯಲು ಯೋಗ್ಯವಾದ ಹುಲ್ಲುಗಾವಲಿದ್ದು, ಅದು ಗೋಮಾಳ ಪ್ರದೇಶವಾಗಿದೆ. ಊರಿನ ೧/೬ ರಷ್ಟು ಜನರು ತೋಟಪಟ್ಟಿಯಲ್ಲಿಯೇ ವಾಸವಾಗಿದ್ದಾರೆ. ಇಲ್ಲಿ ೨೦೦ ಕ್ಕಿಂತ ಹೆಚ್ಚಿನ ಪಂಪಸೆಟ್ಟುಗಳನ್ನು, ಹಾಗೂ ೧೫೦ ಕ್ಕಿಂತ ಹೆಚ್ಚಿನ ಬಾವಿಗಳನ್ನು ನೀರಾವರಿಗಾಗಿ ಉಪಯೋಗಿಸಲಾಗುತ್ತಿದೆ. ಇಲ್ಲಿ ಮಳೆಯ ಸರಾಸರಿ ಪ್ರಮಾಣ ವರ್ಷಕ್ಕೆ ೩-೫ ಸೆಂ.ಮೀ. ಇಲ್ಲಿ ಗ್ರಾಮೀಣ ಸಣ್ಣ ಗುಡಿ ಕೈಗಾರಿಕೆಗಳು ಜೀವಂತವಾಗಿದ್ದು ದಿನನಿತ್ಯ ಕುಂಬಾರಿಕೆ, ಕಂಬಾರಿಕೆ, ಪತ್ತಾರಿಕೆ, ಹಗ್ಗ ತಯಾರಿಕೆ, ಬುಟ್ಟಿ ಹೆಣಿಕೆ, ಚರ್ಮಗಾರಿಕೆ ಹಾಗೂ ಬಡಿಗತನ ಕೆಲಸಗಳು ನಡೆದಿರುತ್ತವೆ.

## ಗ್ರಾಮ ನಾಮ ವಿವೇಚನೆ

ಮಮದಾಪೂರ ಗ್ರಾಮವು ಹಿಂದೆ ಕುರುಂಬೆಟ್ಟ, ಕುರುಬ್ಯಾಟ, ಗಚ್ಚಿನ ಕುರಬೇಟ, ಕೊಡ್ಲಿ ಕುರಬೇಟ, ಕುರಬೇಟ ಎಂದು ಬೇರೆ-ಬೇರೆ ಹೆಸರುಗಳಿಂದ ಕರೆಯಿಸಿಕೊಳ್ಳುತ್ತ, ಇಂದು ಮಮದಾಪೂರ ಎಂಬ ಹೆಸರನ್ನು ಪಡೆದುಕೊಂಡಿದೆ.

ಇದರ ಪ್ರಾಚೀನ ಹೆಸರು ಕುರುಂಬೆಟ್ಟ, ಕುರುಂಬ ಎಂದರೆ ಕುರಿ ಸಾಕುವವನು ಅಥವಾ ಕುರಿಗಾಹಿ. ಬೆಟ್ಟ ಇದರ ಅರ್ಥ ಗುಡ್ಡ. ಹೀಗಾಗಿ ಕುರಿಕಾಯುವ ಜನರನ್ನು ಹೊಂದಿದ ಈ ಬೆಟ್ಟದ ಪ್ರದೇಶ ಕುರುಂಬೆಟ್ಟ ಎಂದು ಕರೆಯಿಸಿಕೊಂಡಿದೆ.



ಇದಕ್ಕೆ ಸಾಕ್ಷಿಯಾಗಿ ಈಗಲೂ ಸಹ ಊರಿನ ಪಶ್ಚಿಮ ದಿಕ್ಕಿನಲ್ಲಿ ಗುಡ್ಡವು (ಕೋಟೆ) ಇದ್ದು ಅದರ ಕೆಳಗಡೆ ಕುರುಬ ಜನಾಂಗದವರು ವಾಸಿಸುತ್ತಿದ್ದಾರೆ.

ಗ್ರಾಮದ ಪಶ್ಚಿಮಕ್ಕೆ ಇಂದ್ರವೇಣಿ ಎಂಬ ಹೆಸರಿನ ಒಂದು ಹಳ್ಳ ಹರಿಯುವದರಿಂದ ಅದರ ಎರಡು ಬದಿಯಲ್ಲಿ ಸಹಜವಾಗಿ ಗಿಡ-ಮರ-ಬಳ್ಳಿಗಳು ಬೆಳೆದಿರುತ್ತವೆ. ಹಾಗೂ ಅಲ್ಲಿ ಸಹಜವಾಗಿ ಹುಲ್ಲು ಸಾಕಷ್ಟು ಬೆಳೆಯುತ್ತಿದ್ದುದರಿಂದ ಕುರಿ ಸಂಗೋಪನೆ ನಡೆಯುತ್ತಿತ್ತು. ಮತ್ತು ಈ ಹಳ್ಳದ ಪಕ್ಕದಲ್ಲಿ ಬರುವ ಗುಡ್ಡದ ಕೆಳಗೆ ಕುರುಬರು ವಾಸಮಾಡಲು ಪ್ರಾರಂಭಿಸಿದ್ದರಿಂದ ಇದು 'ಕುರುಬರಬೆಟ್ಟ' ಎಂದು ಕರೆಯಿಸಿಕೊಂಡು ಮುಂದೆ ಕುರುಬೆಟ್ಟವಾಗಿ ಹಳ್ಳಿಗರ ಬಾಯಿಯಲ್ಲಿ ಕುರುಬ್ಯಾಟವಾಗಿದೆ.

ಈ ಗ್ರಾಮದ ದಕ್ಷಿಣ ದಿಕ್ಕಿಗೆ ಸಣ್ಣ-ಪುಟ್ಟ ನಾಲ್ಕಾರು ಗುಡ್ಡಗಳಿದ್ದು ಮನೆಕಟ್ಟಲು ಹೇರಳವಾಗಿ ಬಿಳಿಯಬಣ್ಣದ ಕಲ್ಲುಗಳು ದೊರೆಯುತ್ತವೆ. ಹೀಗಾಗಿ ಈ ಗ್ರಾಮದ ಬಹುತೇಕ ಮನೆಗಳು ಕಲ್ಲಿನಿಂದ ಕಟ್ಟಿದವುಗಳಾಗಿವೆ. ಮನೆ ಕಟ್ಟಲು ಅಂದಿನ ಕಾಲದಲ್ಲಿ ಈ ಊರಿನ ಹೆಚ್ಚಿನ ಜನರು ಗಚ್ಚನ್ನು ಉಪಯೋಗಿಸುತ್ತಿದ್ದರಿಂದ ಅಲ್ಲಿಯ ಮನೆಗಳೆಲ್ಲವೂ ಕಲ್ಲು ಮತ್ತು ಗಚ್ಚಿನಿಂದ ನಿರ್ಮಾಣವಾಗಿವೆ. ಗಚ್ಚನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರಿಂದ ಇದು 'ಗಚ್ಚಿನ ಕುರುಬೇಟ' ಎಂಬ ಹೆಸರನ್ನು ಪಡೆದುಕೊಂಡಿತು.

ಈ ಮೊದಲೇ ಹೇಳಿದಂತೆ ಈ ಊರು ಕುರುಬ ಜನಾಂಗದವರ ವಾಸಸ್ಥಾನ. ಆ ಕುರುಬ ಜನಾಂಗದವರ ಮುಖ್ಯ ಸಲಕರಣೆ ಕೊಡ್ಲಿ. ಹೀಗಾಗಿ ಈ ಗ್ರಾಮ ಮುಂದೆ ಕೊಡ್ಲಿ ಕುರುಬೇಟ ಎಂಬ ನಾಮಾಂಕಿತವನ್ನು ಪಡೆದುಕೊಂಡಿತು. ಇನ್ನೊಂದು ಕ್ಷೇತ್ರಕಾರ್ಯ ವರದಿಯಂತೆ ಕ್ರಿ.ಶ ೧೯೨೦-೧೯೫೫ ರವರೆಗೆ ಈ ಊರಿನ ಜನಗಳ ವೈಯಕ್ತಿಕ ದ್ವೇಷಗಳಿಂದ ಇಲ್ಲಿ ಸಾಕಷ್ಟು ಕೊಲೆಗಳು ನಡೆದವು ಎಂದು, ಹೀಗಾಗಿ ಈ ಗ್ರಾಮಕ್ಕೆ 'ಕೊಡ್ಲಿ ಕುರುಬೇಟ' ಎಂಬ ಹೆಸರು ತಾತ್ಕಾಲಿಕವಾಗಿ ಬಂದಿತೆಂದು ಹೇಳುವರು.

ಹೀಗೆ ಕುರುಂಬೆಟ್ಟ ಎಂಬುವುದು ಗ್ರಾಮೀಣರ ಬಾಯಲ್ಲಿ ಸಿಕ್ಕು ಕುರಬೇಟವಾಗಿ, ಕುರುಬ್ಯಾಟವಾಗಿ ನಂತರ ಗಚ್ಚಿನಕುರಬೇಟವಾಗಿ ತದನಂತರ ಕೊಡ್ಲಿ ಕುರಬೇಟವಾಗಿ ಜನ ಸುಶಿಕ್ಷಿತರಾದಂತೆ ಕೊಡ್ಲಿ ಶಬ್ದವು ಕಳಚಿ ಕುರುಬೇಟವಾಗಿದೆ.

ಬ್ರಿಟಿಷರ ಆಳ್ವಿಕೆಯ ಪೂರ್ವದಲ್ಲಿ ಬಿಜಾಪೂರದ ಆದಿಲ್ ಶಾಹಿಯ ಒಂದು ಮನೆತನ ಯಾದಗಿರಿಯನ್ನು ಕೇಂದ್ರ ಸ್ಥಳವನ್ನಾಗಿಸಿಕೊಂಡು ಆಳುತ್ತಿತ್ತು. ಈ ಮನೆತನದ ಸಂಬಂಧಿಕನಾದ ಮಹ್ಮದಶಾಹಿ ಎಂಬುವವನು ಈ ಗ್ರಾಮವನ್ನು ಮುಖ್ಯ ಕೇಂದ್ರವಾಗಿಟ್ಟುಕೊಂಡು ಇಲ್ಲಿನ ಸುತ್ತಮುತ್ತಲಿನ ಪ್ರದೇಶವನ್ನು



ಆಳುತ್ತಿದ್ದನೆಂದು ತಿಳಿದು ಬರುತ್ತದೆ. (ಅದರ ಕುರುಹಿಗೆ ಈಗಲೂ ಊರಿನಲ್ಲಿ ಹಾಳು ಬಿದ್ದ ಕೋಟೆಯನ್ನು, ಈ ಕೋಟೆಯ ಸುತ್ತಲೂ ಹತ್ತಾರು ಬುರಜುಗಳು, ಒಂದು ಸುರಂಗಮಾರ್ಗ ಇರುವುದನ್ನು ಕಾಣಬಹುದು. ಈ ಕೋಟೆಯ ಹೆಬ್ಬಾಗಿಲು ಈವತ್ತಿನವರೆಗೂ ಗಟ್ಟಿಯಾಗಿದ್ದು ಊರಿನ ಗತ ವೈಭವವನ್ನು ಸಾರುತ್ತಿದೆ.) ಈ ಮಹ್ಮದಶಾಹಿಯ ಆಡಳಿತಕ್ಕೆ ಒಳಪಟ್ಟ ಈ ಕುರಬೇಟ ಗ್ರಾಮವು ಅವನ ಹೆಸರಿನಲ್ಲಿ ಸಹಜವಾಗಿ 'ಮಮದಾಪೂರ' ಎಂದು ಬದಲಾಗಿದೆ. ನಂತರ ಬ್ರಿಟಿಷರು ತಮ್ಮ ಆಳ್ವಿಕೆಯ ಸಂದರ್ಭದಲ್ಲಿ ಈ ಗ್ರಾಮಕ್ಕೆ ಅಧಿಕೃತವಾಗಿ 'ಮಮದಾಪೂರ' ಎಂಬ ಹೆಸರಿನ ಮುದ್ರೆಯನ್ನು ಒತ್ತಿದ್ದಾರೆ.

### ಐತಿಹಾಸಿಕ ಹಿನ್ನೆಲೆ:

ಈ ಗ್ರಾಮದ ಇತಿಹಾಸವನ್ನು ಕೆದಕಿದಾಗ ಇದರ ಪ್ರಾಚೀನತೆ ಬಹಳ ಹಿಂದಕ್ಕೆ ಹೋಗುತ್ತದೆ. ಇಲ್ಲಿ ಎರಡು ಪುರಾತನ ದೇವಾಲಯಗಳು ಹಾಗೂ ಒಂದು ಶಿಲಾ ಶಾಸನವಿದೆ. ಇವುಗಳು ಈ ಊರಿನ ಸಾಂಸ್ಕೃತಿಕ ಮತ್ತು ಚಾರಿತ್ರಿಕ ನೋಟವನ್ನು ಕಟ್ಟಿ ಕೊಡುವಲ್ಲಿ ಬಹಳ ಸಹಕಾರಿಯಾಗಿವೆ. ಸುಮಾರು ೧೧-೧೨ ನೇ ಶತಮಾನಕ್ಕೆ ಸೇರಿದ ಕೆಂಪು ಮರಳು ಶಿಲೆಯಲ್ಲಿ ಊರಿನ ಹೊರಗೆ ನಿರ್ಮಾಣವಾದ ಕಲ್ಲಪ್ಪನ ದೇವಾಲಯವಿದ್ದು, ಈ ದೇವಾಲಯವು ಈಗ ಸಂಪೂರ್ಣ ಬಿದ್ದುಹೋಗಿ ಅಂತರಾಳ ಮಾತ್ರ ಉಳಿದುಕೊಂಡಿದೆ.

ಕ್ರಿ.ಶ ೧೨೪೬ ರ ಕಾಲದಲ್ಲಿ ನಿರ್ಮಾಣವಾದ ಬಸವಣ್ಣನ ದೇವಾಲಯ ಈ ಊರಿನ ಮಧ್ಯ ಭಾಗದಲ್ಲಿ ಇದ್ದು, ಕೆಂಪು ಮರಳು ಶಿಲೆಯಲ್ಲಿ ನಿರ್ಮಾಣವಾಗಿ ತ್ರಿಕೂಟಾಚಲ ಮಾದರಿಯಲ್ಲಿದ್ದು, ಮೂರು ಗರ್ಭಗೃಹಗಳನ್ನು ಹೊಂದಿದೆ. ಪಶ್ಚಿಮಾಭಿಮುಖವಾಗಿರುವ ಮುಖ್ಯ ಗರ್ಭಗೃಹವು ಚೌಕಾಕಾರವಾಗಿದ್ದು ಮಧ್ಯದಲ್ಲಿ ಲಿಂಗವಿದೆ. ಅಷ್ಟ ಕೋನಾಕೃತಿಯ ಛತ್ತಿನ ಮಧ್ಯದಲ್ಲಿ ಪದ್ಮದ ಅಲಂಕಾರವಿದೆ. ದಕ್ಷಿಣಾಭಿಮುಖವಾಗಿರುವ ಬಲಬದಿಯ ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಲಿಂಗವಿದೆ. ಅಷ್ಟ ಕೋನಾಕೃತಿಯ ಛತ್ತಿನ ಮಧ್ಯದಲ್ಲಿ ಪದ್ಮದ ಅಲಂಕಾರವಿದೆ. ಉತ್ತರಾಭಿಮುಖವಾಗಿರುವ ಎಡಬದಿಯ ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಲಿಂಗವಿದೆ. ಅಷ್ಟಕೋನಾಕೃತಿಯ ಛತ್ತಿನ ಮಧ್ಯದಲ್ಲಿ ಪದ್ಮದ ಅಲಂಕಾರವಿದೆ. ಈ ಮೂರು ಗರ್ಭಗೃಹದ ದ್ವಾರಗಳಿಗೆ ಹೊಂದಿಕೊಂಡಂತೆ ಅಂತರಾಳವಿದ್ದು, ಅಂತರಾಳದ ಅಷ್ಟಕೋನಾಕೃತಿಯ ಛತ್ತಿನ ಮಧ್ಯದಲ್ಲಿ ಪದ್ಮದ ಅಲಂಕಾರವಿದೆ ಹಾಗೂ ಈ ಮೂರು ಗರ್ಭಗೃಹಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದ್ದು ಮಧ್ಯದಲ್ಲಿ ನಂದಿಯಿದೆ. ಸಭಾಮಂಟಪದಲ್ಲಿ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ಅಷ್ಟಕೋನಾಕೃತಿಯ ಛತ್ತಿನ ಮಧ್ಯದಲ್ಲಿ ಪದ್ಮದ ಅಲಂಕಾರವಿದೆ. ಗೋಡೆಯಲ್ಲಿ ಆರು ಕೋಷ್ಠಗಳಿವೆ. ಸಭಾಮಂಟಪದ ಪ್ರವೇಶ ದ್ವಾರದ ಬಳಿಯ



ಮೂಲೆಯಲ್ಲಿ ಕ್ರಿ.ಶ ೧೨೪೬ದ ಸೇಊಣರ ಶಾಸನವಿದೆ. ಇದರ ಮೇಲ್ಭಾಗದಲ್ಲಿ ಮೂರು ಗರ್ಭಗೃಹಗಳುಳ್ಳ ದೇವಾಲಯದ ಪ್ರತಿಕೃತಿಯಿರುವ ಉಬ್ಬುಶಿಲ್ಪವಿದ್ದು, ಅದಕ್ಕೆ ಭಾಂಸನಾ ರೀತಿಯ ಶಿಖರಗಳಿವೆ. ಮಧ್ಯದಲ್ಲಿ ಶಿವಲಿಂಗವಿದ್ದು, ಇಕ್ಕೆಲಗಳಲ್ಲಿ ವಿಷ್ಣು ಹಾಗೂ ಬ್ರಹ್ಮ ದೇವರ ವಿಗ್ರಹಗಳಿವೆ. ಮೂಲತಃ ಇದು ತ್ರೈಪುರುಷ ದೇವಾಲಯವಾಗಿರುವ ಸಾಧ್ಯತೆ ಇದೆ.

ಈ ದೇವಾಲಯದಲ್ಲಿರುವ ಈ ಶಾಸನವು ಕನ್ನಡ ಲಿಪಿಯನ್ನು ಹೊಂದಿದ ಸಂಸ್ಕೃತ ಭಾಷೆಯಲ್ಲಿರುವ, ಸೇಊಣ ರಾಜವಂಶದ ಕನ್ನರದೇವ ಅರಸನು ಹೊರಡಿಸಿದ ಶಾಸನವಾಗಿದೆ. (ಇಂಡಿಯನ್ ಅಂಟಿಕ್ವೆರಿ ಸಂಪುಟ-೧೯, ಪು-೨೬) ಶಿವಚಂದ್ರಶೇಖರ ಸ್ತುತಿಯೊಂದಿಗೆ ಆರಂಭವಾಗಿ ಸಮುದ್ರದ ವರ್ಣನೆ, ಮೇರುಪರ್ವತ, ಜಂಬೂದ್ವೀಪ, ಭರತವರ್ಷ, ಕುಂತಳನಾಡು ಮುಂತಾದ ಪ್ರಾಕೃತಿಕ ವರ್ಣನೆಯನ್ನು ಮತ್ತು ಕುಹೂಂಡಿನಾಡು, ಕುರುಂಬೆಟ್ಟ ಇತ್ಯಾದಿ ಆಡಳಿತ ವಿಭಾಗಗಳನ್ನು ಕುಂತಳನಾಡು, ಕುಹೂಂಡಿ ಮೂರುಸಾವಿರ, ಕುರುಂಬೆಟ್ಟಕಂಪಣ ದ್ವಾರಾವತಿ, ದೇವಗಿರಿ, ಸೇತುಹಿಮಾಲಯ, ಕೊಂಕಣ, ಹುಲಿಗೆರೆ, ಸಬ್ಬೆಟ್ಟು ಬಾಗವಾಡಿ, ಬನ್ನಿಯ್ಯಾವೊಳಿ, ಕಾಕತೀಯಬಾಡ ಇತ್ಯಾದಿ ಭೌಗೋಳಿಕ ಹೆಸರುಗಳನ್ನು ತಿಳಿಸುತ್ತದೆ. ನಂತರ ಯದುಕುಲದ ರಾಜಾವಳಿಯನ್ನು ಹೇಳುತ್ತದೆ.

ಯಾದವ ಅರಸ ಭಿಲ್ಲಮ

↓

೧ನೇ ಜೈತುಗಿ

↓

ಸಿಂಘಣ

↓

ಕನ್ನರದೇವ

ಪ್ರಸ್ತುತ ಶಾಸನವು ಈ ಕನ್ನರದೇವನ ಆಳ್ವಿಕೆಗೆ ಸಂಬಂಧಿಸಿದ್ದಾಗಿದ್ದು, ಇವನು ಮಾಳವ, ಗೂರ್ಜ್ಜರರನ್ನು ಸೋಲಿಸಿದ ಉಲ್ಲೇಖವಿದೆ. ಇವನ ರಾಜಧಾನಿ ದೇವಗಿರಿ ಎಂದು ತಿಳಿಸುತ್ತದೆ. ನಂತರ ಇವನ ಮಂತ್ರಿಯಾದ ಬೀಚನು ಚಿಕ್ಕದೇವನ ಮಗನಾಗಿದ್ದನೆಂದು, ಇವನು ರಾಜ್ಯದ ಅರ್ಧಭಾಗವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಇವನ ಹಿರಿಯ ಮಗ ಮಲ್ಲ, ಮಲ್ಲನ ಮಗನಾದ ಚಾಮುಂಡನು ಪಾಂಡ್ಯರ ರಾಜಧಾನಿಯನ್ನು, ಕೊಂಕಣ ಪ್ರದೇಶವನ್ನು, ಕಾವೇರಿ ನದಿಯ ಸುತ್ತಲಿನ ಭಾಗವನ್ನು ವಶಪಡಿಸಿಕೊಂಡನೆಂದು ತಿಳಿಸುತ್ತದೆ. ಇವನು ಅನೇಕ ಶಿವನ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿದನೆಂದು ಹೇಳಲಾಗಿದೆ. ಚಾಮುಂಡನು ಹೊಯ್ಸಳ ಅರಸ ಸೋಮೇಶ್ವರನನ್ನು ಸೋಲಿಸಿ ಸಪ್ಪೇರ ಲಿಂಗವನ್ನು ಪ್ರತಿಷ್ಠಾಪಿಸಿದನೆಂದು

ಉಲ್ಲೇಖಿಸಿದೆ. ಅನೇಕ ಮುನಿಗಳ ಹೆಸರುಗಳು, ದಾನ-ದತ್ತಿಗಳನ್ನು ನೀಡಿದ ವಿವರ ಹೀಗೆ ಹಲವು ವಿವರಗಳು ಈ ಶಾಸನದಲ್ಲಿವೆ. ಈ ಶಾಸನದ ಹಲವಾರು ಉಪಲಬ್ಧ ದಾಖಲೆಗಳ ಆಧಾರದಿಂದ ಈ ಗ್ರಾಮ ೧೨ ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ಒಂದು ಸಾಂಸ್ಕೃತಿಕ ಕೇಂದ್ರವಾಗಿತ್ತೆಂದು ಊಹಿಸಬಹುದು.

ಕ್ರಿ.ಶ. ೧೬೦೦ರ ಪೂರ್ವದ ಬಿಜಾಪೂರದ ಆದಿಲ್‌ಶಾಹಿಗಳ ಆಡಳಿತದ ಸಮಯದಲ್ಲಿ ಅವರ ರಕ್ತ ಸಂಬಂಧಿಕ ರಾಯಚೂರದ ಮಹ್ಮದಶಾಹಿ ರಾಜನ ಆಳ್ವಿಕೆಗೆ ಈ ಗ್ರಾಮ ಒಳಪಟ್ಟಿದ್ದ ದಾಖಲೆಗಳು ಲಭಿಸುತ್ತವೆಯಾದರು ಮಹ್ಮದಶಾಹಿ ವಾಸಿಸುತ್ತಿದ್ದ ರಾಜವಾಡೆಯಾಗಲಿ, ಅವನ ಪರಿವಾರದವರು ವಾಸಮಾಡುತ್ತಿದ್ದ ಮನೆಗಳ ಕುರುಹುಗಳಾಗಲಿ ಈ ಗ್ರಾಮದಲ್ಲಿ ದೊರೆಯದಿರುವದು ಆಶ್ಚರ್ಯದ ಸಂಗತಿ. ಬಹುಶಃ ಈ ಸುಲ್ತಾನ ಕೋಟೆಯನ್ನು ನಿರ್ಮಿಸಿದ ಕೆಲವೇ ದಿನಗಳಲ್ಲಿ ಮರಣ ಹೊಂದಿರಬಹುದು ಅಥವಾ ಈ ಗ್ರಾಮ ಇವನ ಕೇಂದ್ರಸ್ಥಳ ಯಾದಗಿರಿಯಿಂದ ಬಹಳ ದೂರವಿರುವುದರಿಂದ ಅವನಿಗೆ ಇಲ್ಲಿ ಬಂದು ವಾಸಿಸಲು ಸಾಧ್ಯವಾಗಿಲ್ಲದಿರಬಹುದು ಅಥವಾ ಅವನು ಕೋಟೆಯನ್ನು ನಿರ್ಮಿಸಿದ ಕೆಲವೇ ದಿನಗಳಲ್ಲಿ ಬ್ರಿಟಿಷರ ಆಳ್ವಿಕೆ ಪ್ರಾರಂಭವಾಗಿರಬಹುದು. ಹೀಗೆ ನಾವು ಇದಕ್ಕೆ ಸಂಬಂಧಿಸಿದಂತೆ ಅನೇಕ ಊಹೆಗಳನ್ನು ಮಾಡಬಹುದು. ಆದರೆ ಇತ್ತೀಚಿಗೆ ಅವಸಾನ ಹೊಂದಿದ ಕೋಟೆಯ ಒಳಗಡೆ ಅಗೆದಾಗ, ಸಂಪೂರ್ಣವಾಗಿ ಕಲ್ಲುಮಣ್ಣುಗಳಿಂದ ಭೂಗತವಾಗಿದ್ದ ಮೂರು ಕೋಣೆಯ ಹಿಂದೂ ದೇವಾಲಯವೊಂದು ಕಾಣಿಸಿಕೊಂಡಿದ್ದು, ಇದು ಪ್ರಾಯಶಃ ಶಿವದೇವಾಲಯವಾಗಿದ್ದು ಅಲ್ಲಿಯ ಕಲೆ ಮತ್ತು ವಾಸ್ತು ಶಿಲ್ಪ ವೀಕ್ಷಿಸಿದಾಗ ಚಾಲುಕ್ಯ ಶೈಲಿಯಲ್ಲಿರುವಂತೆ ಕಂಡುಬಂದಿದೆ. ಹೀಗಾಗಿ ಮಹ್ಮದಶಾಹಿಯ ಪೂರ್ವದಲ್ಲಿ ಈ ಗ್ರಾಮವು ಹಿಂದೂಗಳ ಆಳ್ವಿಕೆಗೆ ಒಳಪಟ್ಟಿತೆಂದು ತಿಳಿದು ಬರುತ್ತದೆ. ಇದರ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯಬೇಕಾದ ಅವಶ್ಯಕತೆ ಇದೆ.

■■



# PRATIBINBA

(A Collection of Articles by various Scholars)

| | |
|---|---|
| Editor's Name | : Mangal B. N. |
| Published by | : Avva Pustaka Prakashan, Belagavi |
| First Impression | : 2021 |
| Copies | : 1000 |
| Pages | : IX+202 = 214 |
| Price | : Rs. 220/- |
| Paper Used | : 70 GSM |
| Copy Right | : Publisher's |
| Cover Design | : Chittar Kala Balaga, Dharawad |
| DTP | : Ravi Kammar |
| Printers | : B G Printers, Dharwad |
| ISBN | : 978-81-949726-7-9 |

ಪ್ರತಿಬಿಂಬ

ಸಂಶೋಧನ ಪ್ರಬಂಧಗಳ ಸಂಕಲನ

(ಈ ಪುಸ್ತಕದಲ್ಲಿರುವ ಲೇಖನಗಳ ವಿಷಯ ಲೇಖಕರ ವಿವೇಚನೆಗಳಿಂದ ಹೊರಬಂದವುಗಳು. ಇದಕ್ಕೆ ಸಂಪಾದಕರಾಗಲಿ ಹಾಗೂ ಪ್ರಕಾಶಕರಾಗಲಿ ಬಾಧ್ಯರಲ್ಲ.)

| | |
|---|---|
| ಸಂಪಾದಕರು | : ಮಂಗಳ ಬಿ. ಎನ್. |
| ಪ್ರಕಾಶಕರು | : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಮೋಬೈಲ್ | : [illegible] |
| ಪುಟಗಳು | : IX+202 = 214 |
| ಪ್ರಥಮ ಮುದ್ರಣ | : ೨೦೨೧ |
| ಹಕ್ಕು | : ಪ್ರಕಾಶಕರು |
| ಬೆಲೆ | : ರೂ. ೨೨೦/- |
| ಅಕ್ಷರ ಸಂಯೋಜನೆ | : ರವಿ ಕಮ್ಮಾರ |
| ಮುಖಪುಟ | : ಚಿತ್ತಾರ ಕಲಾ ಬಳಗ ಧಾರವಾಡ |
| ಮುದ್ರಕರು | : ಬಿ. ಜಿ. ಪ್ರಿಂಟರ್ಸ್, ಧಾರವಾಡ |
| ISBN | : 978-81-949726-7-9 |




## ಬೆಳಗಾವಿ ಜಿಲ್ಲೆಯ ಮಠಗಳ ಕುರಿತು ಸಾಹಿತ್ಯ ಸೇವೆ

– ಡಾ. ನಾಗರಾಜ ಡಿ. ಮುರಗೋಡ

ಭಾರತ ದೇಶವು ಅದರದಲ್ಲೂ ವಿಶೇಷವಾಗಿ ಕನ್ನಡ ನಾಡು ಹಲವಾರು ಶರಣರ, ಸಂತರ, ಅನುಭಾವಿಗಳ ತವರು ನೆಲವಾಗಿದೆ. ಬಸವಣ್ಣ, ಅಲ್ಲಮ ಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣರಂತಹ ಶರಣ ಶರಣೆಯರು ಬೆಳಗಿ ಹೋದ ನಾಡು ಇದಾಗಿದೆ. ಕನಕದಾಸರು, ಪುರಂದರದಾಸರು ವ್ಯಾಸರಾಯರು ಹಾರಾಡಿದ ಪುಣ್ಯ ಭೂಮಿ ಇದಾಗಿದೆ. ನಿಜಗುಣ ಶಿವಯೋಗಿಗಳು, ಭೂಷಣರು, ಶಿಶುನಾಳ ಶರೀಫ ಸಾಹೇಬರು ನಡೆದಾಡಿದ ಪಾವನ ನೆಲ ಇದಾಗಿದೆ. ಇವರು ಬಿತ್ತಿ ಬೆಳೆದು ಹೋದ ಉದಾತ್ತ ಸಂಸ್ಕೃತಿ ಉನ್ನತ ಆಚಾರ ವಿಚಾರಗಳಿಂದ ಪ್ರಸಿದ್ಧವಾಗಿದ್ದು ಮುಂದಿನವರಿಗೆ ದಾರಿದೀಪಗಳಾಗಿವೆ. ಈ ನಿಟ್ಟಿನಲ್ಲಿ ಬೆಳಗಾವಿ ಜಿಲ್ಲೆಯ ವೀರಶೈವ ಮಠಗಳು ಸಾಕಷ್ಟು ಸಾಂಸ್ಕೃತಿಕ ಕೆಲಸ ಕಾರ್ಯಗಳನ್ನು ಕೈಗೊಂಡಿವೆ. ಅಲ್ಲಿನ ಮಠಾಧೀಶರು ಶರಣ ಸಂಸ್ಕೃತಿ ಪರಂಪರೆಯನ್ನು ಮುಂದುವರಿಸುತ್ತ ನವ ಸಮಾಜ ನಿರ್ಮಾಣಕ್ಕೆ ಪಣ ತೊಟ್ಟವರಾಗಿದ್ದಾರೆ. ಮಠಕ್ಕೆ ಬಂದಾಗ ಭಕ್ತಾದಿಗಳ ಕಷ್ಟ ಸುಖಗಳಲ್ಲಿ ಬೆರೆತು ಅವರಿಗೆ ಜೀವನೋತ್ಸಾಹವನ್ನು ತುಂಬುವ ಕಾಯಕದಲ್ಲಿ ನಿರತರಾಗಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾಗಿ, ಸಂಗೀತಗಾರರಾಗಿ, ವಿದ್ವಾಂಸರಾಗಿ, ಪ್ರವಚನ ಪಟುಗಳಾಗಿ, ಆಧ್ಯಾತ್ಮಿಕ ಮೇರುಶಿಖರಗಳಾಗಿ, ಆಯುರ್ವೇದಿಕ ವೈದ್ಯರಾಗಿ, ಸಮಾಜ ಸುಧಾರಕರಾಗಿ, ರೈತರಾಗಿ, ಧರ್ಮಪಂತರಾಗಿ, ಪವಾಡ ಪುರುಷರಾಗಿ ಅಲ್ಲದೇ ಭಕ್ತಾದಿಗಳ ಪಾಲಿಗೆ ಸಾಕ್ಷಾತ ಶಿವ ಸ್ವರೂಪಿಗಳಾಗಿ ನಿಸ್ವಾರ್ಥ ಸೇವೆಗಯ್ಯುತ್ತಿದ್ದಾರೆ. ಇಂಥ ಶ್ರೀ ಮಠಗಳ ಹಾಗೂ ಮಠಾಧಿಪತಿಗಳ ಕುರಿತು ವಿವಿಧ ರೀತಿಯ ಅಪಾರ ಸಾಹಿತ್ಯ ಕೃತಿಗಳು ಪ್ರಕಟವಾಗಿವೆ. ನಾಡಿನ ದೊಡ್ಡ ದೊಡ್ಡ ಲೇಖಕರು, ವಿದ್ವಾಂಸರು, ಭಕ್ತರು, ಪ್ರಾಧ್ಯಾಪಕರು ಹಾಗೂ ಸ್ವತಃ ಮಠಾಧಿಪತಿಗಳೇ ಸಾಕಷ್ಟು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಶ್ರೀ ಮಠಗಳ ಸಮಾಜೋದ್ಧಾರ ಕಾರ್ಯಗಳು, ಮಠಾಧೀಶರ ಪವಾಡಗಳು, ಲೀಲೆಗಳು, ದಾಸೋಹ,ಕಾಯಕನಿಷ್ಠೆ ಶಿಕ್ಷಣ ಪ್ರೀತಿ ಇತ್ಯಾದಿ ವಿಷಯಗಳನ್ನೊಳಗೊಂಡಂತೆ ಗದ್ಯ ಪದ್ಯಗಳಲ್ಲಿ ಸಾಕಷ್ಟು ಕೃತಿ ಕುಸುಮಗಳು ಹೊರಬಂದಿವೆ.

ಮಠಗಳ ಇತಿಹಾಸ, ಪರಂಪರೆ, ಆರ್ಥಿಕ ಮೂಲ, ಪೀಠ ಪರಂಪರೆ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಹೀಗೆ ಪ್ರತಿಯೊಂದು ಅಂಶದಲ್ಲಿಯೂ ಶ್ರೀ ಮಠಗಳ ಸಂಶೋಧನಾತ್ಮಕ ಲೇಖನಗಳು, ಪುಸ್ತಕಗಳು ಹೊರಬಂದಿವೆ. ಅದೆಷ್ಟೋ ಸಂಶೋಧಕರು ಈ ಜಿಲ್ಲೆಯ ಮಠಗಳ ಮೇಲೆ ಸಂಶೋಧನೆಗಳನ್ನು ಕೈಗೊಂಡು ಎಂ.ಫಿಲ್. ಹಾಗೂ ಪಿಎಚ್.ಡಿ. ಪದವಿಗಳನ್ನು ಪಡೆದುಕೊಂಡಿದ್ದಾರೆ. ಶ್ರೀಮಠಗಳ ಮೇಲೆ ಹಲವಾರು ಜಾನಪದ ಹಾಡುಗಳು, ಕವನ ಸಂಕಲನಗಳು, ನಾಟಕಗಳು, ದಂತ ಕಥೆಗಳು, ಪವಾಡ, ಲೀಲಾ ಪುಸ್ತಕಗಳು, ಸ್ಮರಣ ಸಂಚಿಕೆಗಳು, ಅಭಿನಂದನ ಗ್ರಂಥಗಳು, ಬಿಡಿ ಲೇಖನಗಳು ಅಲ್ಲದೇ ಇನ್ನಿತರ ಹಲವಾರು ಕೃತಿಗಳು ಪ್ರಕಟಗೊಂಡಿರುವುದು ಶ್ರೀ ಮಠಗಳ ಜನಪ್ರಿಯತೆಗೆ ಸಾಕ್ಷಿಯಾಗಿವೆ.

ಪ್ರಸ್ತುತ ಈ ಅಧ್ಯಯನದಲ್ಲಿ ಶ್ರೀ ಮಠಗಳ ಕುರಿತು ರಚನೆಯಾದ ಸಾಹಿತ್ಯ ಕೃತಿಗಳನ್ನು ಕವನ ಸಂಕಲನಗಳು, ಸ್ಮರಣ ಸಂಚಿಕೆಗಳು, ಅಭಿನಂದನ ಗ್ರಂಥಗಳು, ಎಂ.ಫಿಲ್. ಮತ್ತು ಪಿಎಚ್.ಡಿ. ಪ್ರಬಂಧಗಳು ಎಂದು ವಿಭಾಗಿಸದೇ ಅಧ್ಯಯನದ ಅನುಕೂಲತೆಗೋಸ್ಕರ ಒಟ್ಟಿಗೆ ಸೇರಿಸಿ ಮಠಗಳ ಹೆಸರಿನ ಶಿರೋನಾಮೆಯೊಂದಿಗೆ ಕೊಡಲಾಗಿದೆ.

**ನಾಗನೂರಿನ ರುದ್ರಾಕ್ಷಿಮಠದ ಡಾ॥ಶಿವಬಸವ ಸ್ವಾಮಿಗಳ ಕುರಿತು ರಚನೆಯಾದ ಸಾಹಿತ್ಯ :**

೧. **ಮಹಾಪ್ರಸಾದಿ :** ಈ ಕೃತಿಯನ್ನು ಕಾದಂಬರಿ ರೂಪದಲ್ಲಿ ಡಾ. ಸಾ. ಸಿ. ಮರುಳಯ್ಯನವರು ರಚಿಸಿದ್ದಾರೆ. ಕೃತಿಯ ಉದ್ದಕ್ಕೂ ಗುರು, ಶಿಷ್ಯರ ಸಂಭಾಷಣೆ ಇದೆ. ಡಾ. ಶಿವಬಸವ ಸ್ವಾಮಿಗಳು, ತಮ್ಮ ಬದುಕಿನ ಘಟನೆಗಳನ್ನು ಒಂದೊಂದಾಗಿ ತಮ್ಮ ಶಿಷ್ಯ ಶ್ರೀ ಪ್ರಭು ಸ್ವಾಮಿಗಳಿಗೆ ಹೇಳಿದಂತೆ ಕೃತಿ ರಚಿಸಲಾಗಿದೆ.

೨. **ಕಾಯಕಯೋಗಿ :** ಡಾ. ಶಿವಬಸವ ಸ್ವಾಮಿಗಳ ಜೀವನ ಸಾಧನೆ ಒಳಗೊಂಡ ಒಂದು ಜೀವನ ಚರಿತ್ರೆ ಇದಾಗಿದೆ. ಇದನ್ನು ಖ್ಯಾತ ಸಂಶೋಧಕ ಸಾಹಿತಿಗಳಾದ ಡಾ. ವ್ಹಿ. ಎಸ್. ಕಂಬಿಯವರು ರಚಿಸಿದ್ದಾರೆ. ಶಿವಬಸವ ಸ್ವಾಮಿಗಳ ಶತಮಾನೋತ್ಸವ ಸಮಿತಿ ಇದನ್ನು ೧೯೯೦ರಲ್ಲಿ ಪ್ರಕಟಿಸಿದೆ.

೩. **ಮಹಾಪ್ರಸಾದಿ ಶಿವಬಸವ ಸ್ವಾಮಿಗಳು :** ಈ ಕೃತಿಯನ್ನು ಶ್ರೀಗಳ ಸಾನಿಧ್ಯ ಸೇವೆಯಲ್ಲಿ ಇದ್ದ ಹಾಗೂ ಅವರ ಬದುಕಿನ ಹಲವಾರು ಘಟನೆ ಹಾಗೂ ಸಾಧನೆಗಳನ್ನು ಬಹು ಹತ್ತಿರದಿಂದ ನೋಡಿದ ಶ್ರೀ ವೀಣಾ ಶೀಲವಂತರು ಈ ಕೃತಿಯನ್ನು ರಚಿಸಿದ್ದಾರೆ. ಡಾ॥ ಆರ್.ಸಿ. ಹಿರೇಮಠರು ಈ ಕೃತಿಗೆ ಮುನ್ನುಡಿ ಬರೆದಿದ್ದಾರೆ. ಶ್ರೀ ಶಿವಶರಣೆ ಅಕ್ಕಮಹಾದೇವಿ ಅಕ್ಕನ ಬಳಗ, ಬೆಳಗಾವಿ ಇವರು ೧೯೯೭ರಲ್ಲಿ ಇದನ್ನು ಪ್ರಕಟಿಸಿದ್ದಾರೆ. ಶ್ರೀಗಳ ಬದುಕಿನ ಘಟನೆ ಸಾಧನೆ ಸಿದ್ಧಿಗಳನ್ನು ಬಹಳ ಸರಳ ಶೈಲಿಯಲ್ಲಿ ಒಂದೊಂದಾಗಿ ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಶ್ರೀಗಳ ಈ ಜೀವನ ಚರಿತ್ರೆ ಕೃತಿಯು ಓದುಗರನ್ನು ಬಹಳ ಆಕರ್ಷಿಸುತ್ತದೆ.



೪. **ಚಿರಂತನ ಚೇತನ :** ಈ ಕೃತಿಯನ್ನು ವೃತ್ತಿಯಿಂದ ನ್ಯಾಯಾಧೀಶರಾಗಿದ್ದು, ಪ್ರವೃತ್ತಿಯಿಂದ ಸಾಹಿತಿಗಳಾದ ಶ್ರೀ. ಬಿ.ಎಸ್. ಪಾಟೀಲರು ರಚಿಸಿದ್ದಾರೆ. ಈ ಗ್ರಂಥವು ಎರಡು ಭಾಗಗಳನ್ನು ಒಳಗೊಂಡಿದ್ದು ಭಾಗ- ೧ರಲ್ಲಿ ಡಾ॥ ಶಿವಬಸವ ಸ್ವಾಮಿಗಳ ಬದುಕಿನ ಘಟನೆಗಳ ಬಗ್ಗೆ ಹಾಗೂ ಅವರ ವ್ಯಕ್ತಿತ್ವ ಸಾಧನೆಗೈದ ಬಗ್ಗೆ ಬೆಳಕು ಚೆಲ್ಲುವ ಲೇಖನಗಳಿವೆ. ಮತ್ತು ೨ನೇ ಭಾಗದಲ್ಲಿ ವೀರಶೈವ ಧರ್ಮ, ತತ್ವ ಶರಣರನ್ನು ಕುರಿತು ಕೌಲನಿಕವಾಗಿ ಬರೆದ ಒಂಭತ್ತು ಲೇಖನಗಳಿವೆ. ಇದಕ್ಕೆ ಶ್ರೀ ಎಸ್. ಎಸ್. ಒಡೆಯರ ರವರು ಮೌಲಿಕ ಮುನ್ನುಡಿ ಬರೆದಿದ್ದಾರೆ. ಈ ಗ್ರಂಥವನ್ನು ೧೯೯೩ ರಲ್ಲಿ ಶ್ರೀ ಮ. ನಿ. ಪ್ರ. ಸಿದ್ಧರಾಮ ಸ್ವಾಮಿಗಳು, ರುದ್ರಾಕ್ಷಿಮಠ ನಾಗನೂರು ಬೆಳಗಾವಿರವರು ಪ್ರಕಟಿಸಿದ್ದಾರೆ.

೫. **ಶಿವದೀಪ್ತಿ :** ಇದು ಡಾ॥ ಶಿವಬಸವ ಸ್ವಾಮಿಗಳ ಅಭಿನಂದನಾ ಗ್ರಂಥವಾಗಿದೆ. ಶ್ರೀಗಳ ಶತಮಾನೋತ್ಸವ ಸಂದರ್ಭದಲ್ಲಿ ಡಾ॥ ಆರ್.ಸಿ. ಹಿರೇಮಠರವರ ಸಂಪಾದಕತ್ವದಲ್ಲಿ ೧೯೯೦ ರಲ್ಲಿ ಈ ಕೃತಿ ಪ್ರಕಟಗೊಂಡಿದೆ. ೭೪೧ ಪುಟಗಳನ್ನು ಒಳಗೊಂಡ ೫ ಭಾಗಗಳನ್ನು ಒಳಗೊಂಡ ಈ ಗ್ರಂಥವು ನಾಡಿನ ಹಲವಾರು ವಿದ್ವಾಂಸರ ಲೇಖಕರ, ಕವಿಗಳ, ಲೇಖನ, ಕವನಗಳನ್ನೊಳಗೊಂಡಿದೆ.

೬. **ಶಿವ ಪ್ರಸಾದ :** ಇದು ನೂತನ ಕುಮಾರೇಶ್ವರ ಪ್ರಸಾದ ನಿಲಯದ ಉದ್ಘಾಟನಾ ಸಮಾರಂಭದ ಸ್ಮೃತಿ ಗ್ರಂಥವಾಗಿದೆ. ಇದು ನಾಲ್ಕು ಭಾಗಗಳನ್ನು ಒಳಗೊಂಡಿದ್ದು ವಿವಿಧ ಲೇಖಕರ, ಕವಿಗಳ ಲೇಖನ ಮತ್ತು ಕವನಗಳಿಂದ ಕೂಡಿದೆ. ಈ ಗ್ರಂಥವನ್ನು ೧೯೭೮ರಲ್ಲಿ ನಾಗನೂರು ಶ್ರೀ ಶಿವಬಸವ ಸ್ವಾಮೀಜಿ ಶಿಕ್ಷಣ ಸಂಸ್ಥೆ ಬೆಳಗಾವಿಯವರು ಪ್ರಕಟಿಸಿದ್ದಾರೆ.

೭. **ಶಿವ ಚೇತನ :** ಶ್ರೀ ಡಾ॥ ಶಿವಬಸವ ಸ್ವಾಮಿಗಳ ಶತಮಾನೋತ್ಸವದ ಅಂಗವಾಗಿ ಶಿವ ಚೇತನ ಎಂಬ ಸ್ಮರಣ ಸಂಚಿಕೆಯನ್ನು ೧೯೯೦ರಲ್ಲಿ ಶ್ರೀಗಳ ಶತಮಾನೋತ್ಸವ ಸಮಿತಿ ಪ್ರಕಟಿಸಿದೆ. ಇದರಲ್ಲಿ ನಾಡಿನ ಗಣ್ಯರಿಂದ ಬಂದ ಶುಭ ಸಂದೇಶಗಳು ಮತ್ತು ಶ್ರೀಗಳ ರಚನಾತ್ಮಕ ಕಾರ್ಯದ ಬಗ್ಗೆ ಅನಿಸಿಕೆಗಳು ಹಾಗೂ ಶ್ರೀಗಳ ಕುರಿತಾದ ಲೇಖನ ಮತ್ತು ಕವನಗಳಿವೆ.

೮. **ಶ್ರೀ ಬೆಳಗು :** ಆರ್.ಎನ್. ಶೆಟ್ಟಿ ಪಾಲಿಟೆಕ್ನಿಕ್ ಕಾಲೇಜು ಕಟ್ಟಡದ ಉದ್ಘಾಟನೆಯ ಸಮಾರಂಭದ ಅಂಗವಾಗಿ ಈ ಹೆಸರಿನ ಸ್ಮರಣಿಕೆಯನ್ನು ೧೯೯೦ರಲ್ಲಿ ಹೊರತಲಾಗಿದೆ ಇದು ಮೂರು ಭಾಗಗಳನ್ನು ಒಳಗೊಂಡಿದೆ.

೯. **ನೆನಪು ನಂದಾದೀಪ :** ಇದು ಶ್ರೀ ಸಿದ್ಧರಾಮೇಶ್ವರ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯ ಹಾಗೂ ಶ್ರೀ ಕುಮಾರೇಶ್ವರ ಪ್ರಸಾದ ನಿಲಯಗಳ ರಜತಮಹೋತ್ಸವದ ಸ್ಮರಣ ಸಂಚಿಕೆ. ಈ ಕೃತಿಯ ಸಂಪಾದಕರು ಪ್ರೊ. ಗುರುದೇವಿ ಹುಲ್ಲೇಪ್ಪನವರಮಠ.



**ಕವನ ಸಂಕಲನಗಳು :**

* ವಚನ ವನ : ಇದು ೧೧೧ ವಚನಗಳನ್ನೊಳಗೊಂಡ ವಚನ ಸಾಹಿತ್ಯ ಕೃತಿಯಾಗಿದೆ. ೧೨ನೇ ಶತಮಾನದ ಶಿವಶರಣರು ತಮ್ಮ ಆರಾಧ್ಯ ದೈವದ ಅಂಕಿತದಲ್ಲಿ ವಚನಗಳನ್ನು ರಚಿಸಿದಂತೆ ಇಲ್ಲಿ ಶ್ರೀ ಹೊಂಡಪ್ಪನವರು ತಮ್ಮ ಆರಾಧ್ಯ ದೇವನಾದ ಶಿವಬಸವ ಸ್ವಾಮಿಗಳ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾರೆ. ಎನ್ನ ಪರಮಾರಾಧ್ಯ ಗುರ ನಾಗನೂರ ಶಿವಬಸವೇಶ ಎಂಬುದು ಇವರ ವಚನಗಳ ಅಂಕಿತವಾಗಿದೆ. ಈ ವಚನಗಳ ವಚನಕಾರ ಶ್ರೀ ಹೊಂಡಪ್ಪ ಬಸವಪ್ಪ ತಲ್ಲೂರು.
* **ನಾಗನೂರ ಶಿವಬಸವ ಗೀತೆ :** ಶ್ರೀ ಹೊಂಡಪ್ಪ ತಲ್ಲೂರರವರ ೧೬ ಪದ್ಯಗಳನ್ನೊಳಗೊಂಡ ಕವನ ಸಂಕಲ ಇದಾಗಿದೆ. ಈ ಕೃತಿಯಲ್ಲಿ ಡಾ॥ ಶಿವಬಸವ ಸ್ವಾಮಿಗಳ ವ್ಯಕ್ತಿತ್ವವನ್ನು ಬಣ್ಣಿಸುವ ಹಾಗೂ ತಮ್ಮ ಆಧ್ಯಾತ್ಮಿಕ ಅನುಭವ, ಭಕ್ತಿ, ಸರ್ವಸಮರ್ಪಣಾ ಮನೋಭಾವವನ್ನು ಬಿಂಬಿಸುವ ಪದ್ಯಗಳಿವೆ.

**ಶ್ರೀ ಮೋಟಗಿಮಠ ಅಥಣಿ :**

* **ಅರಳು :** ಇದು ಅಥಣಿ ಶ್ರೀ ಮೋಟಗಿಮಠದ ಪೂಜ್ಯ ಶ್ರೀ ಚನ್ನಬಸವ ದೇವರ ಸಮಾಜಸೇವಾ ದೀಕ್ಷಾ ಮಹೋತ್ಸವ ಸಂಪುಟ. ಈ ಕೃತಿಯ ಪ್ರಧಾನ ಸಂಪಾದಕರು. ಡಾ॥ ಗುರುಲಿಂಗ ಕಾಪಸೆ, ಸಂಪಾದಕರು, ಡಾ॥ ಬಸವರಾಜ ಜಗಜಂಪಿ, ಡಾ॥ ವಿ.ಎಸ್. ಮಾಳಿ, ೨೦೦೩ ರಲ್ಲಿ ಶ್ರೀ ಗುರು ಚೆನ್ನಬಸವೇಶ್ವರ ಗ್ರಂಥಮಾಲೆ ಶ್ರೀ ಮೋಟಗಿಮಠ ಅಥಣಿ ಜಿ: ಬೆಳಗಾವಿಯವರಿಂದ ಪ್ರಕಟನಗೊಂಡಿದೆ.

ಈ ಕೃತಿ ಪುಷ್ಪದಲ್ಲಿ ಚೇತನ, ಸ್ಪಂದನ, ಚಂದನ, ದರ್ಶನ, ಚಿಂತನ ಮತ್ತು ಮಂಥನಗಳೆಂಬ ಆರು ವಿಭಾಗಗಳಿವೆ. ಚೇತನವು ಮೋಟಗಿ ಮಠದ ಶ್ರೀ ಚನ್ನಬಸವ ದೇವರ ವ್ಯಕ್ತಿತ್ವ ಹಾಗೂ ಸಾಹಿತ್ಯವನ್ನು ಪರಿಚಯಿಸುತ್ತದೆ. ಶ್ರೀ ಚನ್ನಬಸವ ದೇವರು ಆಧುನಿಕ ವಚನ ಸಾಹಿತ್ಯದ ಆಶಾಕಿರಣ. ಅವರು ನಡೆದು ಬಂದ ದಾರಿ ಮುಟ್ಟಿ – ದೇಶಾದ ಗುರಿ, ಅವರ ಕವನ. ವಚನ ಮತ್ತು ಚಿಂತನಗಳನ್ನು ಇಲ್ಲಿ ನಾವು ಕಾಣಬಹುದು ಶ್ರೀ ಚನ್ನಬಸವ ದೇವರನ್ನು ನಮ್ಮ ವಿದ್ವಾಂಸರು, ಅನುಭಾವಿಗಳು ಹೇಗೆ ಕಂಡಿದ್ದಾರೆ. ಎಂಬುವುದೇ ಸ್ಪಂದನ. ಈ ಭಾಗದ ಮಠಾಧೀಶರ ಮತ್ತು ಮಠಗಳ ವಿವರಗಳನ್ನು ಚಂದನ ಒಳಗೊಂಡಿದೆ. ದರ್ಶನವು ಅಥಣಿ ತಾಲೂಕಿನ ಬಗ್ಗೆ ಬೆಳಕನ್ನು ಚೆಲ್ಲುತ್ತದೆ. ಚಿಂತನದಲ್ಲಿ ಮಠಾಧಿಪತಿಗಳು ಮಾಡಿದ್ದು, ಮಾಡಬೇಕಾದದ್ದು, ಮಠಗಳು ಸಾಧಿಸಿದ್ದನ್ನು ಎತ್ತಿ ತೋರಿಸಲಾಗಿದೆ. ಮಂಥನದಲ್ಲಿ ಶಿವಶರಣರ ವೈಚಾರಿಕ ಆಲೋಚನೆಗಳ ಮಂಥನವಿದೆ. ಸಂಪಾದಕರು ಈ ಕೃತಿಯು ಬಸವ ಪ್ರಜ್ಞೆಯ 'ಬೆಳಕಿಂಡಿ' ಯಾಗಬಹುದೆಂದು ಆಶಯ ವ್ಯಕ್ತಪಡಿಸಿದ್ದಾರೆ. ೬೮ ಲೇಖನಗಳನ್ನು ಒಳಗೊಂಡಂತೆ ೩೧೪ ಪುಟಗಳನ್ನು ಒಳಗೊಂಡಿದೆ.



**ಅಥಣೀಶ–ಅಥಣಿಯ ಶ್ರೀ ಮೋಟಗಿಮಠ ದರ್ಶನ :**

೨೦೧೦ರಲ್ಲಿ ಶ್ರೀ ಗುರು ಚೆನ್ನಬಸವೇಶ್ವರ ಗ್ರಂಥಮಾಲೆ ಶ್ರೀ ಜಂಗಮಲಿಂಗ ಕ್ಷೇತ್ರ ಶ್ರೀ ಮೋಟಗಿಮಠ ಅಥಣಿ ರವರಿಂದ ಪ್ರಕಟವಾದ ಕೃತಿಯ ಲೇಖಕರು ಡಾ॥ ವ್ಹಿ. ಎಸ್. ಮಾಳಿ. ಇದು ೧೫೬ ಪುಟಗಳ ಒಂದು ಸುಂದರವಾದ ಕೃತಿ ಪುಷ್ಪವಾಗಿದೆ. ಸುಕ್ಷೇತ್ರ ಗೋಟ ಖಂಡಿಮಠ, ಜಂಗಮಲಿಂಗಕ್ಷೇತ್ರ ಶ್ರೀ ಮೋಟಗಿಮಠ, ಶ್ರೀ ಮಠದ ಗುರುಪರಂಪರೆ ಹಾಗೂ ಅಥಣೀಶರ ಪಾದಯಾತ್ರೆ, ಜನಜಾಗೃತಿ, ಕನ್ನಡ, ನೆಲ–ಜಲ ರಕ್ಷಕರಾಗಿ, ಅವರ ಬಸವ ತತ್ವ ಪ್ರಸಾದ ಸಂಸ್ಥೆ ಇವೆಲ್ಲವುಗಳ ಕುರಿತು ಸಮಗ್ರವಾದ ಮಾಹಿತಿ ಲಭಿಸುತ್ತದೆ ಹಾಗೂ ಕೃತಿಯಲ್ಲಿ ಸುಂದರವಾದ ಫೋಟೋ ಚಿತ್ರಗಳನ್ನು ಕಾಣಬಹುದು.

* ಜಂಗಮಲಿಂಗ ಕ್ಷೇತ್ರ ಶ್ರೀ ಮೋಟಗಿ ಮಠ – ಒಂದು ಸಾಂಸ್ಕೃತಿಕ ಅಧ್ಯಯನ ಇದು ಪ್ರೊ.ವಸಂತ ಕಲ್ಯಾಣಿಯವರ ಎಂ.ಫಿಲ್. ಪ್ರಬಂಧವಾಗಿದ್ದು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಮಂಡಿಸಲ್ಪಟ್ಟಿದೆ.
* ಮೋಟಗಿಮಠ ಒಂದು ಅಧ್ಯಯನ (ಎಂ.ಫಿಲ್.) – ಶ್ರೀ ಟಕಾರೆಯವರ ಎಂ.ಫಿಲ್. ಪ್ರಬಂಧವಾಗಿದ್ದು ಕ.ವಿ.ವಿ. ಧಾರವಾಡಕ್ಕೆ ಮಂಡಿಸಲ್ಪಟ್ಟಿದೆ.
* ಅಥಣೀಶನ ಆಧುನಿಕ ವಚನಗಳು ಒಂದು ಅಧ್ಯಯನ (ಎಂ.ಫಿಲ್.)– ಶ್ರೀ ರಾಜಶೇಖರ ಹಿರೇಮಠರವರ ಎಂ.ಫಿಲ್. ಪ್ರಬಂಧ. ಬಾಂಬೆ ವಿಶ್ವವಿದ್ಯಾಲಯ ಬಾಂಬೆಗೆ ಮಂಡಿಸಲ್ಪಟ್ಟಿದೆ.

**ಶ್ರೀ ಗಚ್ಚಿನಮಠ ಅಥಣಿ :**

* ಆ ಸುಕ್ಷೇತ್ರ ಅಥಣಿ ಶ್ರೀ ಗಚ್ಚಿನಮಠ ದರ್ಶನ ಹಾಗೂ ಮಂಗಳಾರತಿ ಪದಗಳು– ೨೮ ಪುಟಗಳ ವರೆಗೆ ಶ್ರೀ ಗಚ್ಚಿನಮಠದ ಇತಿಹಾಸ ಪೀಠ ಪರಂಪರೆ, ಪೂಜ್ಯರ ಕಾಯಕಗಳ ಬಗ್ಗೆ ವಿವರಣೆ ಇದ್ದರೆ, ಇನ್ನುಳಿದ ೨೦ ಪುಟಗಳು ಮಂಗಳಾರತಿ ಪದಗಳಿಗೆ ಮೀಸಲಾಗಿದೆ. ಡಾ॥ ಮಹಾಂತೇಶ ಎಸ್. ಉಕ್ಕಲಿ ಈ ಕೃತಿಯ ಲೇಖಕರು. ೨೦೦೬ ರಲ್ಲಿ ಶ್ರೀ ಶಿವಯೋಗಿ ಮುರುಘೇಂದ್ರ ಸ್ವಾಮಿಗಳು ಗಚ್ಚಿನಮಠ ಅಥಣಿಯವರಿಂದ ಪ್ರಕಟಗೊಂಡಿದೆ.
* **ಅಥಣಿಯ ಅನ್ನದೇವರು ಶ್ರೀ ಸಿದ್ಧಲಿಂಗ ದೇಶಿಕರು :** ಶ್ರೀ ಲಕ್ಷ್ಮಣ ಎನ್. ಬಳ್ಳೊಳ್ಳಿಯವರಿಂದ ರಚನೆಗೊಂಡ ೭೪ ಪುಟಗಳ ಈ ಕೃತಿಯು ಅ.ಮ. ಪಾಟೀಲ ಪ್ರತಿಷ್ಠಾನ, ಅಥಣಿಯವರಿಂದ ೨೦೦೯ ರಲ್ಲಿ ಪ್ರಕಟಗೊಂಡಿದೆ. ಅಥಣಿ ಗಚ್ಚಿನಮಠದ ಶ್ರೀ. ಸಿದ್ಧಲಿಂಗ ಸ್ವಾಮಿಗಳ ವ್ಯಕ್ತಿತ್ವ ಬದುಕು ಸಮಾಜ ಸೇವೆಗಳ ಮೇಲೆ ಬೆಳಕು ಚೆಲ್ಲುತ್ತದೆ.
* **ಶ್ರೀ ಮದಥಣಿ ಶಿವಯೋಗೀಶ್ವರ ಚರಿತ್ರೆ :** ೩೯೧ ಪುಟಗಳಿಂದ ಕೂಡಿದ ಒಂದು ದೊಡ್ಡ ಗ್ರಂಥ ಇದಾಗಿದೆ. ಪಂಡಿತ ಶ್ರೀ ಚಂದ್ರಶೇಖರ ಶಾಸ್ತ್ರೀಗಳು, ಶಿಲಗಿಮಠ, ದಾವಣಗೆರೆ ಮತ್ತು ಶ್ರೀ ಬಸವಲಿಂಗಶಾಸ್ತ್ರೀಗಳು, ಮೋಟಗಿಮಠ, ಅಥಣಿ, ಶ್ರೀ. ಮ.ನಿ. ಪ್ರ ಚನ್ನಬಸವ ಮಹಾಸ್ವಾಮಿಗಳು ಮಠಾಧ್ಯಕ್ಷರು.

ಶ್ರೀ ಗಚ್ಚಿನಮಠ, ಅಥಣಿ ಹಾಗೂ ಅಗಡಿ ಈ ಕೃತಿ ಪುಸ್ತಕ ಪ್ರಕಾಶನ. ಅಥಣಿಯ ಪೂಜ್ಯರಾದ ಅಥಣಿ ಶಿವಯೋಗಿಗಳ ಪವಾಡಗಳು, ಅವರು ಮಾಡಿದ ಸಾಮಾಜಿಕ ಸೇವಾ ಕಾರ್ಯಗಳು ಧಾರ್ಮಿಕ ಕಾರ್ಯಗಳ ಬಗ್ಗೆ ಈ ಗ್ರಂಥವು ಬೆಳಕು ಚೆಲ್ಲುತ್ತದೆ.

ವಿರಕ್ತಮಠ, ಶೇಗುಣಸಿ :

* **ರವಿ ಕಿರಣ :** ಶ್ರೀ ಎಲ್.ಎಮ್. ಪಾಟೀಲರವರಿಂದ ರಚನೆಗೊಂಡ ೮೪ ಪುಟಗಳ ಈ ಪುಟ್ಟ ಕೃತಿಯು ೧೯೮೮ರಲ್ಲಿ ಪ್ರಕಟಗೊಂಡಿದೆ. ಇದು ಎರಡು ಭಾಗಗಳನ್ನು ಒಳಗೊಂಡಿದ್ದು, ರವಿಯೆಡೆಗೆ ಎಂಬಲ್ಲಿ ಶ್ರೀಮದ್ ನಿ.ಪ್ರ.ಸ್ವ. ಶ್ರೀ ಶ್ರೀ ಮುರುಘೇಂದ್ರ ಮಹಾಸ್ವಾಮಿಗಳ ಪೂಜ್ಯರ ಬಗ್ಗೆ ಹಾಗೂ "ಕಿರಣ" ಎಂಬ ಭಾಗವು ಮ.ನಿ.ಪ್ರ. ಪೂಜ್ಯ ಶ್ರೀ ಶ್ರೀ ಶಂಕರ ಸ್ವಾಮಿಗಳ ಕಾಯಕನಿಷ್ಠೆ, ಅವರ ತಪೋಮಹಿಮೆ, ಭಕ್ತರನ್ನು ಉದ್ಧಾರಗೊಳಿಸಿದ ಬಗೆಯನ್ನು ತಿಳಿಸುತ್ತದೆ.
* **ಶೇಗುಣಸಿ ಈಶಾ ಶ್ರೀ ಮುರುಘೇಶಾ-(ಧ್ವನಿಸುರುಳಿ)** ಪ.ಪೂ. ಶ್ರೀ ನಿಜಗುಣ ದೇವರು ಮಧುರ ಖಂಡಿರವರ ಸಾಹಿತ್ಯ ರಾಗ ಸಂಯೋಜನೆ ಮತ್ತು ಬಿ.ವಿ. ಶ್ರೀನಿವಾಸರವರ ಸಂಗೀತ ಸೇವೆಯಿಂದ ಕೂಡಿದ ಈ ೩೦ ಭಕ್ತಿ ಗೀತೆಗಳ ಆಗರವಾಗಿದೆ.

ಹಿರೇಮಠ, ತೆಲಸಂಗ :

* **ತೆಲಸಂಗ ಪೂಜ್ಯ ಬಸವಲಿಂಗ ಸ್ವಾಮಿಗಳು :** ೭೮ ಪುಟಗಳ, ಡಾ॥ ಎಂ. ಎಸ್. ವಾಲಿಯವರಿಂದ ರಚಿಸಲ್ಪಟ್ಟ, ಭುವನೇಶ್ವರಿ ಪ್ರಕಾಶನ, ವಿಜಾಪುರರವರಿಂದ ೨೦೦೭ರಲ್ಲಿ ಪ್ರಕಟಗೊಂಡ ಚಿಕ್ಕ ಕೃತಿ ಇದಾಗಿದೆ. ಪೂಜ್ಯ ಬಸವಲಿಂಗ ಸ್ವಾಮಿಗಳ ಜನನ- ಬಾಲ್ಯ ವಿದ್ಯಾಭ್ಯಾಸ. ಅವರ ತಪಃಶಕ್ತಿ, ಅವರ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳು ಹಾಗೂ ಪ್ರವಚನದಲ್ಲಿ ಅವರಿಗಿರುವ ಪ್ರಾವಿಣ್ಯತೆಯನ್ನು ತಿಳಿಸಿಕೊಡುತ್ತದೆ.

ಶೆಟ್ಟರ ಮಠ ಅಥಣಿ :

ಭಾಮಿನಿ ಷಟ್ಪದಿಯಲ್ಲಿ ರಚನೆಯಾದ ಈ ಕೃತಿಯು ಅಥಣಿ ಶೆಟ್ಟರ ಮಠದ ಶ್ರೀ ಮರುಳಸಿದ್ಧ ಶಿವಯೋಗಿಗಳ ಚರಿತ್ರೆಯನ್ನು ಒಳಗೊಂಡಿದೆ. ೨೦೦೬ ರಲ್ಲಿ ಶ್ರೀ ಮುರುಘೇಂದ್ರ ಶಿವಯೋಗಿ ವಿಶ್ವಸ್ಥ ವಿದ್ಯಾಪೀಠ ಅಥಣಿ ಅವರಿಂದ ಪ್ರಕಾಶನಗೊಂಡಿದೆ. ಶ್ರೀ ಮೋಹನ ಆಗಪ್ಪನವರ ಇದನ್ನು ಭಾವಾನುವಾದ ಸಹಿತ ರಚಿಸಿದ್ದಾರೆ.

ಸಿದ್ಧ ಸಂಸ್ಥಾನ ಮಠ ಚಿಂಚಣಿ :

* **ಸಿರಿಗನ್ನಡ ತೇರು :** ಶ್ರೀಪಾದ ಕುಂಬಾರರವರಿಂದ ರಚನೆಗೊಂಡ ಈ ಕೃತಿಯು ಶ್ರೀ ಚಿಂಚಣಿ ಮಠವು ವಿಶಿಷ್ಟ ರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಿಸುವ ಬಗೆ ಮತ್ತು ಸಿರಿಗನ್ನಡ ತೇರು ಎಳೆಯುವ ವೈಶಿಷ್ಟವನ್ನು ಹೇಳಿದೆ. ಶ್ರೀ ಮಠದ ಜಾಗೃತಿ ಪುಸ್ತಕ ಮಾಲೆಯಿಂದ ೨೦೦೮ ರಲ್ಲಿ ಪ್ರಕಟಗೊಂಡಿದೆ.



* **ಕನ್ನಡ ಜಾಗೃತಿ ಕೇಂದ್ರ ಚಿಂಚಣಿಮಠ :** ಇದು ಮೂಲತಃ ಎಂ.ಫಿಲ್. ಪ್ರಬಂಧವಾಗಿದ್ದು, ಗಡಿ ಭಾಗದಲ್ಲಿರುವ ಚಿಂಚಣಿ ಮಠದ ಹಾಗೂ ಮಠಾಧೀಪತಿಗಳಾದ ಪೂಜ್ಯ ಶ್ರೀ ಅಲ್ಲಮ ಪ್ರಭುಗಳ ಕನ್ನಡ ಪ್ರೇಮವನ್ನು ಅನಾವರಣಗೊಳಿಸಿದೆ. ಶ್ರೀಶೈಲ ಮಠಪತಿಯವರಿಂದ ರಚಿತವಾದ ಕೃತಿ ೨೦೧೧ ರಲ್ಲಿ ಚಿಂಚಣಿ ಮಠದ ಪ್ರಕಾಶನದಿಂದ ಪ್ರಕಟಗೊಂಡಿದೆ.

ಶ್ರೀ ಮಹಾಂತ ದುರುದುಂಡೇಶ್ವರ ಮಠ, ಮುರಗೋಡ :

ಮುರಗೋಡದ ಶ್ರೀ ಮಹಾಂತ ದುರುದುಂಡೇಶ್ವರ ಮಠದ ಮೇಲೆ ಡಾ. ಆ. ಪ್ರ. ಪುರಾಣಿಕರು ಮಹಾಂತ ಪಂಚತಲ ಎಂಬ ಕೃತಿಯನ್ನು ರಚಿಸಿದ್ದಾರೆ. ಈ ಗ್ರಂಥದ ಹೆಸರೇ ಸೂಚಿಸುವಂತೆ ಇದನ್ನು ಪಂಚತಲಗಳಾಗಿ ವಿಭಜಿಸಿ ಶ್ರೀ ಮಠದ ಹಾಗೂ ಶ್ರೀ ಮಠದ ಮಠಾಧೀಶರ ಬಗ್ಗೆ ಸಾಹಿತ್ಯ ಕೃಷಿ ಕೈಗೊಂಡಿದ್ದಾರೆ. ಇದಕ್ಕೆ ಕನ್ನಡದ ಖ್ಯಾತ ವಿದ್ವಾಂಸರಾದ ಡಾ. ಸಂಗಮೇಶ ಸವದತ್ತಿಮಠರವರು, ಮುನ್ನುಡಿ ಬರೆದಿದ್ದಾರೆ. ಈ ಕೃತಿಯಲ್ಲದೇ ಈಗೀನ ಪೀಠಾಧಿಪತಿಗಳಾದ ಪೂಜ್ಯ ನೀಲಕಂಠ ಮಹಾ ಸ್ವಾಮಿಗಳ ಮೇಲೆ ಆದರ್ಶ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಶ್ರೀ ಉಳವೇಶ ಹೂಲಿಯಪ್ಪನವರ ಮಠರವರು ಶ್ರೀ ಮ.ನಿ. ಪ್ರ. ನೀಲಕಂಠ ಮಹಾಸ್ವಾಮಿಗಳು ಎಂದು ಕೃತಿ ರಚಿಸಿದ್ದಾರೆ.

ಶ್ರೀ ಮಠಗಳ ಕುರಿತು ಸಾಹಿತ್ಯ ರಚನೆ. ಪ್ರಸ್ತುತ ಈ ಅಧ್ಯಾಯದಲ್ಲಿ ಅದೇಷ್ಟೋ ವಿಷಯಗಳು, ಪುಸ್ತಕಗಳ ಹೆಸರುಗಳು ಶ್ರೀ ಮಠಗಳ ಸಾಹಿತ್ಯ ಸೇವೆ ಎಂಬ ಅಧ್ಯಾಯದಲ್ಲಿ ಬಂದಿವೆ. ಹೀಗಾಗಿ ಪುನರಾವರ್ತನೆ ಯಾಗಬಾರದು ಎಂದು ಇಲ್ಲಿ ಕೆಲವೊಂದನ್ನು ಬಿಡಲಾಗಿದೆ.

ಗ್ರಂಥ ಋಣ :


* ಬೆಳಗಾವಿ ಸಿರಿ ಸ್ಮರಣ ಸಂಚಿಕೆ: ಪ್ರಸಂ. ಡಾ. ಎಸ್.ಎಂ. ಹರದಗಟ್ಟಿ-೨೦೦೩.
* ಅರಳು: ಪ್ರಸಂ: ಡಾ. ಗುರುಲಿಂಗ ಕಾಪಸೆ, ಪ್ರ. ಶ್ರೀ ಗುರು ಚೆನ್ನಬಸವೇಶ್ವರ ಗ್ರಂಥಮಾಲೆ, ಶ್ರೀ ಮೋಟಗಿ ಮಠ ಅಥಣಿ-೨೦೦೩.
* ನಾಗನೂರ ಶ್ರೀ ರುದ್ರಾಕ್ಷಿಮಠ ಒಂದು ಅಧ್ಯಯನ.ಎಫ್.ಟಿ. ಹಲಗಡ್ಡಿ, ಪ್ರ. ಲಿಂಗಾಯತ ಅಧ್ಯಯನ ಸಂಸ್ಥೆ ಶ್ರೀ ವಿರಕ್ತಮಠ ದೇಶನೂರು-೧೯೯೭.
* ವಚನ ಕಾರಂಜಿ: ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು,ಹುಕ್ಕೇರಿ-೨೦೧೧.
* ಅಥಣೀಶ: ಡಾ. ವ್ಹಿ.ಎಸ್. ಮಾಳಿ. ಪ್ರ. ಶ್ರೀ ಗುರು ಚೆನ್ನಬಸವೇಶ್ವರ ಗ್ರಂಥಮಾಲೆ, ಅಥಣಿ-೨೦೧೦.
* ಶರಣ ಕಿರಣ ಸ್ಮರಣ ಸಂಚಿಕೆ. ಪ್ರಸಂ. : ಡಾ. ಗುರುಲಿಂಗ ಕಾಪಸೆ-೧೯೯೯.
* ಸಿರಿಗನ್ನಡ ತೇರು:ಸಂ. ಶ್ರೀಪಾದ ಕುಂಬಾರ ಪ್ರ.ಕನ್ನಡ ಜಾಗೃತಿ ಪುಸ್ತಕ ಮಾಲೆ, ಅಲ್ಲಮಪ್ರಭು, ಜನ ಕಲ್ಯಾಣ ಸಂಸ್ಥೆ, ಸಿದ್ಧ ಸಂಸ್ಥಾನಮಠ, ಚಿಂಚಣಿ-೨೦೦೮.
* ಬೆಳಗಾವಿ ಭಾಗ್ಯ: ಪ್ರಸಂ. ಡಾ. ಬಸವರಾಜ ಜಗಜಂಪಿ ಪ್ರ. ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಬೆಳಗಾವಿ-೨೦೧೦.
* ವೀರಶೈವ ಧರ್ಮದ ಕೈಪಿಡಿ- ಮೂಲ. ಡಾ. ಎಸ್.ಸಿ. ನಂದಿಮಠ. ಅನುವಾದ, ಪ್ರೇಮಾದೇವಿ ಮಳಿಮಠ-೧೯೯೦.






**ಪುನರ್ನವ** ಭಾಗ-೨

| | |
|---|---|
| ಸಂಪಾದಕರು | : ಡಾ. ಈರಣ್ಣ ಇಂಜಗನೇರಿ<br>ಡಾ. ಶಿವಾನಂದ ಬ. ಟವಳಿ |
| ಪ್ರಕಾಶಕರು | : ಬಸು ಪ್ರಕಾಶನ, ಧಾರವಾಡ,<br>ಮೊ. ೯೭೩೮೬೬೪೮೭೭ |
| ಮೊದಲಮುದ್ರಣ | : ೨೦೨೦ |
| ಪುಟಗಳು | : xx + ೩೧೬ |
| ಪ್ರತಿಗಳು | : ೧೦೦೦ |
| ಹಕ್ಕುಗಳು | : ಪ್ರಕಾಶಕರದು |
| ಬಳಸಿದ ಕಾಗದ | : ೮೦ ಜಿ.ಎಸ್.ಎಮ್. |
| ಬೆಲೆ | : ರೂ. ೩೦೦/- |
| ಮುಖಪುಟ ವಿನ್ಯಾಸ | : ಶ್ರೀ ರವಿ ಗೋವನಕೊಪ್ಪ |
| ಮುದ್ರಕರು | : ಬಿ. ಜಿ. ಪ್ರಿಂಟರ್ಸ್, ಧಾರವಾಡ. ೯೮೪೫೨ ೭೦೧೧೪ |

**PUNARNAVA- Part-2**

| | |
|---|---|
| Editors | : **Dr. Iranna Injaganeri**<br>Lecturer, Dept. of Kannada,<br>HIPU College, Dharwad. Cell No.- 9901669309<br>**Dr. Shivanand B. Tavali**<br>Lecturer, Dept. of Kannada,<br>J.S.S. College, Dharwad. Cell No.- 9844035788 |
| Published by | : **Basu Prakashana, Dharwad**<br>Cell No.- 9738664877<br>Email-basuprakashana@gmail.com |
| Rights | : Publications |
| First Impression | : 2020 |
| Copies | : 1000 |
| Pages | : xx + 316 |
| Price | : 300/- |
| Size | : 1/8 Demi |
| Paper | : 80 GSM Maplitho |
| Printed at | : B.G. Printers, Dharwad. 98452 70114 |
| **ISBN No** | : **978-81-939340-6-7** |


## ನಿರಂತರ ಓದುಗರನ್ನು ಹೊಂದಿದ ದಿನಪತ್ರಿಕೆ ಸಾಹಿತ್ಯ

– ಡಾ. ನಾಗರಾಜ ಡಿ. ಮುರಗೋಡ

ಕನ್ನಡ ಸಾಹಿತ್ಯ ಪ್ರಾರಂಭವಾಗಿದ್ದೇ ಪದ್ಯಸಾಹಿತ್ಯದಿಂದ ಪದ್ಯ ಬರೆಯಬಲ್ಲವ ಮಾತ್ರ ಕವಿ-ಸಾಹಿತಿ ಎಂದೆನಿಸಿಕೊಳ್ಳುವ ಕಾಲ ಒಂದಿತ್ತು. ಪದ್ಯಗಳ ಗುಚ್ಛದಲ್ಲಿ ಗದ್ಯಕ್ಕೆ ಅಲ್ಲಲ್ಲಿ ಮಾತ್ರ ಪ್ರಾಧಾನ್ಯತೆ ಇತ್ತು. ಅದು ಕ್ಲಿಷ್ಟತ್ವಾಗಿ ಮಾತ್ರ ಬಳಕೆಯಾಗುತ್ತಿತ್ತು. ಗದ್ಯ ಸಾಹಿತ್ಯವನ್ನು ಬರೆದವನು ನೀರಸ ಸಾಹಿತಿ ಎನಿಸಿಕೊಳ್ಳುತ್ತಿದ್ದ. ಚಂಪೂ ಯುಗ ಕ್ರಮಿಸಿದ ನಂತರ ರಗಳೆ ಸಾಹಿತ್ಯವನ್ನು ವಿಪುಲವಾಗಿ ಬಳಸಿಕೊಂಡ ಕವಿ ಹರಿಹರನೇ ಹಾಸ್ಯಾಸ್ಪದಕ್ಕೆ ಒಳಗಾಗಿದ್ದು, ತದನಂತರ ಗಿರಿಜಾ ಕಲ್ಯಾಣವೆಂಬ ಚಂಪೂ ಕಾವ್ಯವನ್ನು ಬರೆಯುವ ಅನಿವಾರ್ಯತೆಗೆ ಒಳಗಾಗಿದ್ದು ಇತಿಹಾಸ. ಇಷ್ಟೊಂದು ಪದ್ಯಪ್ರಿಯವಾಗಿದ್ದ ಕಾಲದಿಂದ ಗದ್ಯ ಸಾಹಿತ್ಯದವರೆಗೆ ವ್ಯಹಿಸಿದ ಅದೆಷ್ಟೋ ಗದ್ಯ ಬರಹಗಾರರು ಸಾಹಿತ್ಯದಲ್ಲಿ ತಮ್ಮ ಛಾಪನ್ನು ಮೂಡಿಸಲಿಕ್ಕೆ ಕಷ್ಟಪಟ್ಟಿದ್ದು ಸರ್ವವಿಧಿತವಾಗಿದೆ. ಹೀಗೆ ಗದ್ಯಸಾಹಿತ್ಯ ಕನ್ನಡ ಜನ-ಮಾನಸವನ್ನು ತಲುಪಿ ಅವರಿಗೆ ಅಪ್ಯಾಯಮಾನವಾಗಿ ನಿಲ್ಲಲಿಕ್ಕೆ ಪತ್ರಿಕಾ ಸಾಹಿತ್ಯದ ಶ್ರೇಯಸ್ಸು ಸಾಕಷ್ಟಿದೆ.

ನಮ್ಮ ಜನ ಈ ಸಾಹಿತ್ಯವನ್ನು ಎಷ್ಟು ಪ್ರೀತಿಸತೊಡಗಿದರೆಂದರೆ ಮುಂಜಾನೆ ಎದ್ದ ಕೂಡಲೇ ಚಹಾ-ಕಾಫಿ-ತಿಂಡಿಗಳನ್ನು, ದೇಹಾದಿ ಕ್ರಿಯಾ-ಬಾಧೆಗಳನ್ನು ತೀರಿಸಿಕೊಳ್ಳುವುದಕ್ಕಿಂತ ಮೊದಲು ತಮ್ಮ ಮುಂದೆ ದಿನಪತ್ರಿಕೆ ಇರಬೇಕು ಅಷ್ಟೇ. ಪ್ರಕೃತಿ ಸಹಜವಾದ ಮಳೆ, ಗಾಳಿ, ಪ್ರತಿಕೂಲ ವಾತಾವರಣದ ಸ್ಥಿತಿಯಿಂದ ತಮ್ಮ ಮನೆಗೆ ಪತ್ರಿಕೆ ಬರುವುದು ತಡವಾದರೇ ಏನನ್ನೋ ಕಳೆದುಕೊಂಡ ಚಡಪಡಿಕೆ. ಯಾವುದನ್ನೋ ಕಾಯುವ ಕಾತುರ. ದಿನಪತ್ರಿಕೆಯ ಜೀವಂತಿಕೆಗೆ ಸಾಕ್ಷಿಯಾಗಿ ನಿಂತಿದೆ.

ಇಂತಹ ವಿಫುಲ ಓದುಗ ಬಳಗವನ್ನು ಹೊಂದಿದ ದಿನಪತ್ರಿಕಾ ಸಾಹಿತ್ಯ ತಾನೂ ಬೆಳೆಯುತ್ತ, ಭಾಷೆಯನ್ನೂ ಬೆಳೆಸುತ್ತ ತನ್ನ ಓದುಗರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳತೊಡಗಿತು. ಪದ್ಯಾಯಮಾನರಾಗಿದ್ದ ಕನ್ನಡಿಗರನ್ನು ಗದ್ಯಾಯಮಾನರನ್ನಾಗಿಸತೊಡಗಿತು. ಬರಬರುತ್ತ ಭಾಷೆಯನ್ನು ವಿಫುಲವಾಗಿ ಬಳಸಿಕೊಂಡು ಅದನ್ನು ಸರಳೀಕೃತಗೊಳಿಸುವ ನಿಟ್ಟಿನತ್ತ ಸಾಗಿತು. ಕಾಫಿ, ಟೀ, ಬಸ್ಸು, ಕಾರು, ಝುರಾಕ್ಸ್, ಪೊಲೀಸ್ ಮುಂತಾದ ದಿನ ಬಳಕೆಯ ಅನ್ಯ ಭಾಷೀಯ ಶಬ್ದಗಳನ್ನು ಬಳಕೆಮಾಡುತ್ತ ಆ ಶಬ್ದಗಳೆಲ್ಲವನ್ನು ಕನ್ನಡೀಕರಣಗೊಳಿಸುತ್ತ ತನ್ನಲ್ಲಿ ಸೆರೆ ಹಿಡಿಯಿತು. ವಿವಿಧ ಭಾಷೆಯ ದಿನಬಳಕೆಯ ವಿಶಿಷ್ಟ ಶಬ್ದಗಳನ್ನು ಸ್ವೀಕಾರ ಮಾಡಿಕೊಳ್ಳುತ್ತ



ಕನ್ನಡ ಸಾಹಿತ್ಯ ಶಬ್ದಭಂಡಾರಕ್ಕೆ ಅವುಗಳನ್ನು ಸೇರಿಸುವ ಲೀಲಾಜಾಲವಾದ ... ನಿತ್ಯನಿರಂತರ ನಡೆಯತೊಡಗಿತು. ಹೀಗಾಗಿ ಇದು ಕನ್ನಡ ಭಾಷಾ ಬೆಳವಣಿಗೆಗೂ ಸಹ ಅನುವು ನೀಡಿತು. ಇದರ ಶ್ರೇಯಸ್ಸು ಪತ್ರಿಕಾ ಸಾಹಿತ್ಯಕ್ಕೆ ಸಲ್ಲಲೇಬೇಕು.

ಗದ್ಯ ಬರಹವನ್ನು ಓದಲಿಕ್ಕೆ ಎಷ್ಟು ಸರಳೀಕೃತಗೊಳಿಸಬೇಕೋ ಅದಕ್ಕಿಂತ ... ಭಾಷೆಯನ್ನು ಪತ್ರಿಕೆಗಳು ಸರಳಗೊಳಿಸಿದವು. ಯಕಶ್ಚಿತ ಅಕ್ಷರ ಬಲ್ಲವನೂ ... ಓದಿ ಅರ್ಥ ಮಾಡಿಕೊಳ್ಳಬಹುದಾದ ಹೊಸ ಸಾಹಿತ್ಯವೊಂದರ ...ಯಾಯಿತೆಂದರೆ ಅದು ದಿನಪತ್ರಿಕಾ ಸಾಹಿತ್ಯದಿಂದ ಮಾತ್ರ ವಯಸ್ಕ ನಿರಕ್ಷರಿಗಳೂ ಅಕ್ಷರಾಭ್ಯಾಸ ಮಾಡತೊಡಗಿ ಸುಶಿಕ್ಷಿತರಾಗಲು ಹವಣಿಸುತ್ತಿರುವ ಕಾಲಘಟ್ಟದಲ್ಲಿ ಈ ಪತ್ರಿಕಾಸಾಹಿತ್ಯ ಅವರಿಗೆ ಒಂದು ವರದಾನವೇ ಆಯಿತು. ರ, ಠ, ಈ, ಕ ...ದು ಓದಿ ಕಲಿಯುವ ರಾತ್ರಿ ಶಾಲಾ ವಯಸ್ಕ ವಿದ್ಯಾರ್ಥಿಗಳು ತಮ್ಮ ದಿನನಿತ್ಯದ ... ಕಾರ್ಮಿಕತನ, ವ್ಯವಸಾಯದ ಮತ್ತು ಗೃಹಿಣಿಯರು ತಮ್ಮ ಗೃಹೋಪಯೋಗಿ ...ಲ್ಲ ಕಾರ್ಯಗಳನ್ನು ಮುಗಿಸಿಕೊಂಡು ಎಲ್ಲಿಲ್ಲದ ಉತ್ಸಾಹದಿಂದ ತಮ್ಮೂರಿನಲ್ಲಿ ಪ್ರಾರಂಭವಾಗಿರುವ ರಾತ್ರಿ ಶಾಲೆಗೆ ಬಂದು ಅಕ್ಷರಾಭ್ಯಾಸದಲ್ಲಿ ತೊಡಗುವುದರಲ್ಲಿ ಎಲ್ಲಿಲ್ಲದ ಉತ್ಸಾಹವನ್ನು ಹೊಂದಿದ್ದರು. ಹೀಗೆ ಬಂದು ಅಕ್ಷರಾಭ್ಯಾಸದಲ್ಲಿ ನಿರತರಾದ ...ವರು ಕೆಲವೇ ದಿನಗಳಲ್ಲಿ ಓದುವದನ್ನು ಕಲಿತುಕೊಂಡು ಜೀವನದಲ್ಲಿ ಒಂದು ...ವಿಸ್ಮರಣೀಯ ಆನಂದವನ್ನು ಅನುಭವಿಸತೊಡಗಿದರು. ಅವರ ಈ ಆನಂದಕ್ಕೆ ಪ್ರೇರಣೆ ನೀಡಿದ್ದೇ ಈ ದಿನಪತಿಕೆ ಸಾಹಿತ್ಯ.

ಹೀಗೆ ಅಕ್ಷರಾಭ್ಯಾಸ ಪಡೆದುಕೊಂಡ ಬಹುಪಾಲು ಸಾಮಾನ್ಯರು ...ವಾದ ಭಾಷೆಯಲ್ಲಿ ಪ್ರಕಟವಾಗುವ ಪತ್ರಿಕೆಗಳನ್ನು ಓದಲು ಇಷ್ಟಪಡತೊಡಗಿದರು. ಈ ಓದುವಿಕೆಯನ್ನು ಒಂದು ಹವ್ಯಾಸವನ್ನಾಗಿ ಮಾಡಿಕೊಂಡು ಆ ಮೂಲಕ ... ನೆರೆ-ಹೊರೆಗಳಲ್ಲಿನ ಸುದ್ದಿ-ಸಮಾಚಾರಗಳನ್ನು ತಿಳಿದುಕೊಳ್ಳತೊಡಗಿದರು. ... ಬಿಡುವಿನ ವೇಳೆಯಲ್ಲಿ ಅವುಗಳ ಬಗ್ಗೆ ಇತರ ಜನರೊಂದಿಗೆ ...ಸತೊಡಗಿದರು. ಹೀಗೆ ಅವರು ತಮಗೆ ಅರಿವಿಲ್ಲದಂತೆ ರಾಜ್ಯ ಮತ್ತು ರಾಷ್ಟ್ರ ...ಕಾರಣದಲ್ಲಿ ಸಕ್ರೀಯವಾಗತೊಡಗಿದರು. ಅದರಲ್ಲಿಯೂ ರಾಜಕಾರಣಿಗಳನ್ನು ...ಗೂ ಅಧಿಕಾರ ಶಾಹಿಗಳನ್ನು ಪ್ರಶ್ನಿಸುವ ಧೈರ್ಯ ಮತ್ತು ಚಾಕಚಕ್ಯತೆ ಅವರಲ್ಲಿ ...ರತೊಡಗಿತು. ಒಂದು ವಿಷಯದ ಬಗ್ಗೆ ಕೂಲಂಕುಷವಾಗಿ ತಿಳಿದುಕೊಳ್ಳುವ ...ಕ್ತಿ ಬರತೊಡಗಿತು. ತಮಗರಿವಿಲ್ಲದಂತೆ ಆಗಿ ಹೋದ ಅವರ ತಪ್ಪುಗಳು ...ರುಕಳಿಸದಂತೆ ಜಾಗ್ರತೆವಹಿಸತೊಡಗಿದರು. ಹೀಗೆ ದಿನಪತ್ರಿಕಾ ಸಾಹಿತ್ಯ ...ಕ್ರಮೇಣವಾಗಿ ಜನಮಾನಸದ ಹೃದಯವನ್ನು ಹೊಕ್ಕಿ ಅವರ ಹೃದಯವನ್ನು

ಅರಳಿಸುವ ಕಾರ್ಯದ ಜೊತೆಗೆ ಅವರಲ್ಲಿ ಚಿಕಿತ್ಸಕ ಬುದ್ಧಿಯನ್ನು ಮೂಡಿಸಿತು. ಹೀಗೆ ಜನ ಸಾಮಾನ್ಯರನ್ನು ಬೆಳೆಸಿ ತಾನೂ ಬೆಳೆದ ಕನ್ನಡ ದಿನಪತ್ರಿಕಾ ಸಾಹಿತ್ಯ ವಿದ್ಯುನ್ಮಾನ ಹಾಗೂ ಸಮೂಹಮಾಧ್ಯಮಗಳ ಹಾವಳಿಯಲ್ಲಿ, ಎಲ್ಲಿ ತನ್ನತನವನ್ನು ಮತ್ತು ಓದುಗರ ಸಂಖ್ಯೆಯನ್ನು ಕಳೆದುಕೊಳ್ಳುತ್ತದೋ ಎಂಬ ಆತಂಕ ಕೆಲವರನ್ನು ಕಾಡದಿರಲೇ ಇಲ್ಲ.

ಅಪ್ಯಾಯಮಾನವಾಗಿ ಪತ್ರಿಕೆಯನ್ನೇ ನಂಬಿ-ನೆಚ್ಚಿದ್ದ ಜನಸಮುದಾಯ ಮುಂದೆ ಟಿ.ವ್ಹಿ.ಯನ್ನು ನಂಬಿ-ನೆಚ್ಚಿತು. ಸಾಯಂಕಾಲವಾದರೆ ಸಾಕು ತಮ್ಮ ಎಲ್ಲ ಕೆಲಸ-ಕಾರ್ಯಗಳನ್ನು ಬಹು ಬೇಗನೇ ಮುಗಿಸಿ ಟಿ.ವ್ಹಿ. ಮುಂದೆ ಬಂದು ಕುಳಿತುಕೊಳ್ಳುವುದು ನಮ್ಮ ಹಳ್ಳಿ ಜನಕ್ಕೆ ಒಂದು ಫ್ಯಾಶನ್ನೇ ಆಯಿತು. ಅದರಲ್ಲೂ ಮಹಿಳೆಯರಂತೂ ಟಿ.ವ್ಹಿ.ಯನ್ನು ಆರಾಧಿಸತೊಡಗಿದರು. ಅದರಲ್ಲಿಯೇ ತನ್ಮಯರಾಗುತ್ತಾ ಅಲ್ಲಿ ಪ್ರಸಾರವಾಗುವ ಧಾರಾವಾಹಿಗಳ ಮತ್ತು ಪಾತ್ರಗಳ ಜೊತೆ ತಮ್ಮನ್ನು ಸಮೀಕರಣಗೊಳಿಸಿಕೊಳ್ಳತೊಡಗಿದರು. ಸುಶಿಕ್ಷಿತರಾದವರು ಮತ್ತು ಉದ್ಯೋಗವಂತ ಜನಸಮುದಾಯದವರು ತಮ್ಮ ನಿತ್ಯ ಜೀವನದ ಎಲ್ಲ ಆಕರಕ್ಕೂ ಟಿ.ವ್ಹಿ. ಮಾಧ್ಯಮವೇ ಸರ್ವ ಮಾಧ್ಯಮ ಎಂಬಷ್ಟರ ಮಟ್ಟಿಗೆ ಅದರಲ್ಲಿ ಹಾಸುಹೊಕ್ಕಾದರು. ಮುಂಜಾನೆ ಪ್ರಸಾರವಾಗುವ ಭಕ್ತಿಗೀತೆಗಳಿಂದ ಹಿಡಿದು-ಜೋತಿಷ್ಯ, ತಂತ್ರಜ್ಞಾನ-ವಿಜ್ಞಾನ, ರಾಜಕಾರಣ, ಕ್ರೀಡೆ, ಹಾಸ್ಯ ಹೀಗೆ ಹೊಸ ಹೊಸ ವಿಷಯಗಳ ತಿಳುವಳಿಕೆಗೆ ಈ ಮಾಧ್ಯಮವನ್ನೇ ನಂಬತೊಡಗಿದರು.

ಹೊಸ-ಹೊಸ ಆವಿಷ್ಕಾರಗಳು, ತಂತ್ರಜ್ಞಾನ-ವಿಜ್ಞಾನ ಮುಂದುವರೆದಂತೆ ಮನೆಗೊಂದು ಇರುವ ಟಿ.ವ್ಹಿ.ಗಳು ರೂಮಿಗೊಂದೊಂದರಂತೆ ಅವುಗಳ ಸಂಖ್ಯೆ ಹೆಚ್ಚಿದವು. ಜನರ ಭಿನ್ನ, ವಿಭಿನ್ನ ರುಚಿಗೆ ತಕ್ಕಂತೆ ಟಿ.ವ್ಹಿ. ಚಾನಲ್‌ಗಳ ಸಂಖ್ಯೆಯೂ ಬೆಳೆಯತೊಡಗಿದವು. ಆಯಾಯ ಚಾನಲ್‌ಗಳಿಗೆ ನಿರ್ದಿಷ್ಟವಾದ ನೋಡುಗರ ಸಂಖ್ಯೆಯೂ ಹೆಚ್ಚಿತು. ಚಾನಲ್‌ಗಳಷ್ಟೇ ಅಲ್ಲ, ಪ್ರಸಾರವಾಗುವ ನಿರ್ದಿಷ್ಟ ಕಾರ್ಯಕ್ರಮಗಳನ್ನು ವೀಕ್ಷಿಸುವ ಜನಸಮುದಾಯದವರು ಒಂದು ಕಡೆ ಒಗ್ಗಟ್ಟಿನಿಂದ ಕೂಡಿ ನೋಡುವ ಸಂಪ್ರದಾಯ ಮುಂದುವರೆಯಿತು. ಹೀಗೆ ಟಿ.ವ್ಹಿ. ಮಾಧ್ಯಮ ಜನಮಾನಸದಲ್ಲಿ ಹಾಸುಹೊಕ್ಕಿತು. ಹೀಗಿರುವಾಗ ಈ ಟಿ.ವ್ಹಿ. ಮಾಧ್ಯಮ ಮಾಡುವ ಕೆಲಸವನ್ನು ಅಂಗೈಯಲ್ಲಿರುವ ಮೊಬೈಲ್ ಮಾಡತೊಡಗಿತು. ಮೊಬೈಲ್ ಕೇವಲ ಒಬ್ಬರೊಬ್ಬರು ಮಾತನಾಡುವ ಸಲಕರಣೆ ಮಾತ್ರವಾಗಿ ಉಳಿಯದೇ ಗ್ರಾಹಕರ ಎಲ್ಲ ಆಸೆ ಆಕಾಂಕ್ಷೆಗಳನ್ನು ಈಡೇರಿಸುವ, ಎಲ್ಲಿ ಬೇಕಾದರಲ್ಲಿ ಕೊಂಡೊಯ್ಯುವ, ಯಾವಾಗ ಬೇಕಾದಾಗ ವಿದ್ಯುತ್ತಿನ ಸಹಾಯವಿಲ್ಲದೇ ವೀಕ್ಷಿಸುವ, ಜನರನ್ನು ಸಂಪರ್ಕಿಸುವ, ದೂರದಲ್ಲಿದ್ದರೂ ಅವರನ್ನು ಇಲ್ಲೇ ಕುಳಿತು ನೋಡುವ ಬಹು



ಆಕರ್ಷಕ ಸಲಕರಣೆಯಾಯಿತು. ಇಂದು ಮೊಬೈಲ್ ಇಲ್ಲದ ಮನುಷ್ಯರನ್ನೂ ಈಗ ಊಹಿಸಿಕೊಳ್ಳಲು ಸಾಧ್ಯವಿಲ್ಲ. ಮನುಷ್ಯನ ಪ್ರತಿಯೊಂದು ಎಲ್ಲ ಬೇಕು ಬೇಡಗಳಿಗೂ ಇದು ಪೂರಕವಾದ ಸಾಧನವಾಗಿದೆ. ಇಂದು ಅಂಗೈಯಲ್ಲಿಯೇ ಬ್ರಹ್ಮಾಂಡವನ್ನು ವೀಕ್ಷಿಸುವ, ಗೊತ್ತಿಲ್ಲದ ಯಾವುದೇ ವಿಷಯಗಳನ್ನು ತಿಳಿದುಕೊಳ್ಳುವ ಒಂದು ಆಕರ್ಷಕ ತಂತ್ರಜ್ಞಾನವಾಗಿದೆ. ಕ್ಷಣ-ಕ್ಷಣಕ್ಕೂ ಹೊಸ ಹೊಸ ವಿಚಾರಗಳನ್ನು ತಿಳಿದುಕೊಳ್ಳುವ ತಮ್ಮ ಸುತ್ತ-ಮುತ್ತಲಿನ ಸುದ್ದಿ-ಸಮಾಚಾರಗಳನ್ನು ಕ್ಷಣಾರ್ಧದಲ್ಲಿಯೇ ತಿಳಿದುಕೊಳ್ಳುವ ತಂತ್ರಜ್ಞಾನದ ಅತೀ ವೇಗದ ಇಂದಿನ ದಿನಗಳಲ್ಲಿ ದಿನಪತ್ರಿಕೆ ಎಲ್ಲಿ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೋ ಎಂಬಂತಹ ಆತಂಕದ ಸ್ಥಿತಿಯಲ್ಲಿ ಅದು ಅಸ್ತಿತ್ವವನ್ನು ಉಳಿಸಿಕೊಂಡು ಹೊಸ ಮೈದಾನದಲ್ಲಿ ತಲೆ ಎತ್ತಿ ನಿಂತಿರುವುದು ಬಹು ಆಕರ್ಷಕ.

ಬದಲಾದ ಓದುಗರ ಮನೋಭಾವಕ್ಕೆ ತಕ್ಕಂತೆ ತನ್ನ ವಸ್ತು ವಿಷಯವನ್ನು ವೈವಿಧ್ಯಮಯಗೊಳಿಸಿಕೊಂಡು ಹೊಸ ನಾವಿನ್ಯತೆಯಿಂದ ತನ್ನ ಓದುಗರನ್ನು ಇನ್ನೂ ಸಹ ಜೀವಂತವಾಗಿ ಉಳಿಸಿಕೊಂಡಿದೆ ಎಂದರೆ ಅದು ಓದುಗನ ಜೀವಂತಿಕೆಯಲ್ಲ, ದಿನಪತ್ರಿಕೆ ಸಾಹಿತ್ಯದ ಜೀವಂತಿಕೆಯೇ ಸರಿ.

---

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಜಿ.ಪಿ.ಪಿ. ಹಾಗೂ ವ್ಹಿ.ವ್ಹಿ.ಎಸ್. ಪ್ರಥಮ ದರ್ಜೆ ಕಾಲೇಜು, ಸಿಂದಗಿ.



## ಪುನರ್ನವ ಭಾಗ-೪

| | | |
|---|---|---|
| ಸಂಪಾದಕರು | : | **ಡಾ. ಶಿವಾನಂದ ಬ. ಟವಳಿ**<br>ಅಧ್ಯಾಪಕರು, ಕನ್ನಡ ವಿಭಾಗ, ಜೆ.ಎಸ್.ಎಸ್. ಮಹಾವಿದ್ಯಾಲಯ,<br>ವಿದ್ಯಾಗಿರಿ, ಧಾರವಾಡ-೦೪ ದೂ. ಸಂ. ೯೮೪೪೦೩೫೭೮೮ |
| ಪ್ರಕಾಶಕರು | : | **ಭೂಮಿ ಪ್ರತಿಷ್ಠಾನ, ಧಾರವಾಡ**<br>ಸಾ॥ ಬಮ್ಮಿಗಟ್ಟಿ, ತಾ॥ ಕಲಘಟಗಿ<br>ಜಿ॥ ಧಾರವಾಡ- ೫೮೧೨೦೪ ದೂ. ಸಂ.: ೯೭೩೮೬೬೪೮೭೭ |
| ಮೊದಲ ಮುದ್ರಣ | : | ಜನವರಿ ೨೦೨೦ |
| ಪುಟಗಳು | : | xvi+೨೧೨ = ೨೨೮ |
| ಪ್ರತಿಗಳು | : | ೧೦೦೦ |
| ಹಕ್ಕುಗಳು | : | ಪ್ರಕಾಶಕರು |
| ಬಳಸಿದ ಕಾಗದ | : | ೮೦ ಜಿ.ಎಸ್.ಎಮ್. |
| ಬೆಲೆ | : | ರೂ. ೨೫೦/- |
| ಮುಖಪುಟ ವಿನ್ಯಾಸ | : | ಶ್ರೀ ರವಿ ಗೋವನಕೊಪ್ಪ |
| ಒಳಪುಟ ವಿನ್ಯಾಸ | : | ಶ್ರೀಮತಿ ಮಂಜುಳಾ ಶಿವಾನಂದ |
| ಮುದ್ರಕರು | : | ಬಿ.ಜಿ. ಪ್ರಿಂಟರ್ಸ್, ಧಾರವಾಡ ೯೮೪೫೨ ೭೦೧೧೪ |

## PUNARNAVA- Part-4

| | | |
|---|---|---|
| Editors | : | **Dr. Shivanand B. Tavali**<br>Lecturer, Dept. of Kannada,<br>J.S.S. College, Dharwad. Cell No.- 9844035788 |
| Published by | : | **Bhoomi Pratishthana, Dharwad**<br>At:Po: Bammigatti, Tq: Kalaghatagi,<br>Dist: Dharwad -581204 Cell. No.- 9738664877<br>Email-bhumidharwad@gmail.com |
| Rights | : | Publisher's |
| First Impression | : | 2020 |
| Copies | : | 1000 |
| Pages | : | xvi+212 = 228 |
| Price | : | 250/- |
| Size | : | 1/8 Demi |
| Paper | : | 80 GSM Maplitho |
| Printed at | : | B.G. Printers, Dharwad. 98452 70114 |
| **ISBN No** | : | **978-81-949100-1-5** |


ವಿ.ಸೂ.- ಇಲ್ಲಿನ ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳಿಗೆ ಲೇಖಕರೇ ಜವಾಬ್ದಾರರೆ ಹೊರತು ಸಂಪಾದಕರಲ್ಲ.

# ಬೆಳಗಾವಿ ಜಿಲ್ಲೆಯ ಸಾಂಸ್ಕೃತಿಕ ಹಿನ್ನೆಲೆ


ಡಾ. ನಾಗರಾಜ ರ. ಮುರಗೋಡ


### ಬೆಳಗಾವಿ ನಾಮ ವಿವೇಚನೆ

"ಬೆಳಗಾವಿ" ಎಂಬ ಈ ಜಿಲ್ಲೆಯು ಬೇರೆಬೇರೆ ರಾಜರ ಆಳ್ವಿಕೆಯಲ್ಲಿ ಬೇರೆಬೇರೆ ಹೆಸರುಗಳಿಂದ ಕರೆಯಿಸಿಕೊಂಡಿದೆ. ಕ್ರಿ.ಶ.ಪೂ. ಮೂರನೆಯ ಶತಮಾನದಲ್ಲಿ ಬೆಳಗಾವಿಯನ್ನು "ಯದುಗ್ರಾಮ" ಎಂದು ಕರೆಯಲಾಗುತ್ತಿತ್ತು. ಈ ಪ್ರದೇಶವನ್ನು ರಟ್ಟ ದೊರೆಗಳು, ದೇವಗಿರಿಯ ಯಾದವರು, ವಿಜಯನಗರದ ಅರಸರು ಹಾಗೂ ಬಹುಮನಿ ರಾಜರು ಆಳಿದ್ದಾರೆ. ಇತಿಹಾಸವನ್ನು ಕೆದಕುತ್ತ ಹೋದಂತೆ ಈಗ 'ಬೆಳಗಾವಿ' ಎಂಬ ಹೆಸರಿನ ಈ ಸುಂದರ ನಗರವು ಕಾಲಕಾಲಕ್ಕೆ ವಿವಿಧ ಹೆಸರುಗಳಿಂದ ಕರೆಯಿಸಿಕೊಳ್ಳುತ್ತಿತ್ತೆಂದು ಕಂಡುಬರುತ್ತದೆ. ಇಲ್ಲಿ ಬಿದಿರು(ವೇಣು) ಜಾಸ್ತಿ ಬೆಳೆಯುತ್ತಿದ್ದುದರಿಂದ ಇದಕ್ಕೆ "ವೇಣುಗ್ರಾಮ"ವೆಂದು ಕರೆದರು. ಕಬ್ಬಿನ ಬೆಳೆ ಜಾಸ್ತಿಯಾಗಿ ಬೆಳೆದಿದ್ದರಿಂದ ಇದು "ಇಕ್ಷುಗ್ರಾಮ"ವೆಂದು ಕರೆಯಿಸಿಕೊಂಡಿತು. ಬೆಳಗಾವಿಯ ಕೋಟೆಗೆ ಲಗ್ಗೆ ಹಾಕಿ ಗೆದ್ದ ಮುಸ್ಲಿಂ ಸರದಾರ ಮುಸ್ತಾಫಾ ಇದನ್ನು "ಮುಸ್ತಾಫಾಬಾದ್" ವನ್ನಾಗಿಸಿದ. ಮುಂದೆ ಮೊಗಲ ಚಕ್ರವರ್ತಿ ಔರಂಗಜೇಬನ ವಶವಾಯಿತು. ಆತನ ಮಗ 'ಆಝಂನ' ನೆನಪಿಗಾಗಿ ಇದನ್ನು 'ಆಝಂನಗರ'ವೆಂದು ಕರೆಯಲಾಯಿತು. ಆದರೆ ಇತಿಹಾಸದ ಆ ಪುಟಗಳು ಕ್ಷಣಿಕ ಪ್ರಭಾವವನ್ನು ಮಾತ್ರ ಬೀರಲು ಸಾಧ್ಯವಾದವು. ಜನಮಾನಸದಲ್ಲಿ 'ವೇಣುಗ್ರಾಮವ' ಅಪಭ್ರಂಶವಾಗಿ 'ಬೇಳುಗ್ರಾಮ' > 'ಬೇಳುಗಾವ'> 'ಬೆಳಗಾವ'> 'ಬೆಳಗಾವಿ' ಆಯಿತೆನ್ನುವುದು ಭಾಷಾಶಾಸ್ತ್ರಜ್ಞರ ಅಭಿಪ್ರಾಯ. ಮರಾಠಿಗರ ನಾಲಿಗೆಯ ಮೇಲೆ ಈ ಹೆಸರು ಬೆಳಗಾಂವ ಎಂದಾಗಿದೆ". (೬ ಬೆಳಗಾವಿ ಸಂಸ್ಕೃತಿ: ಸಂ.ಡಾ. ಸರಜೂ ಕಾಟ್ಕರ್ , ಪ್ರಸ್ತಾವನೆ ಪು.ಸಂ. ೪-೯).

### ಸಾಂಸ್ಕೃತಿಕ ಹಿನ್ನೆಲೆ

ಕರ್ನಾಟಕ ರಾಜ್ಯದ ಎರಡನೆಯ ರಾಜಧಾನಿ, 2ನೇ ವಿಶ್ವ ಕನ್ನಡ ಸಮ್ಮೇಳದ ನಾಡು, ಕರ್ನಾಟಕದ ಅತಿ ದೊಡ್ಡ ಜಿಲ್ಲೆ, ಕರ್ನಾಟಕದಲ್ಲಿಯೇ ಅತಿ ಹೆಚ್ಚು ತಾಲೂಕುಗಳನ್ನು ಹೊಂದಿರುವ ಬೆಳಗಾವಿಯು ಉತ್ತರ ಕರ್ನಾಟಕದ ಉಕ್ಕಿನಕೋಟೆ. ಉತ್ತರ ಕರ್ನಾಟಕದ ಹೆಬ್ಬಾಗಿಲು. ಉತ್ತರ ಕರ್ನಾಟಕದ ಜೀವನಾಡಿ. ಕನ್ನಡ ಭಾಷೆಯ ಗಂಡುಮೆಟ್ಟಿನ ಸ್ಥಳ. ಗಡಿ ಮತ್ತು ಮಹಾನಗರ ಪಾಲಿಕೆಯ ವಿವಾದದ ಮೂಲಕ ಸದಾ ಸುದ್ದಿಯಲ್ಲಿರುವ ಸಾಂಸ್ಕೃತಿಕ ನಗರಿ. ಹಿತವಾದ ಹವಾಮಾನ, ಉತ್ತಮ ಮಳೆ, ಅತ್ಯಾಕರ್ಷಕ ಪ್ರಾಕೃತಿಕ ರಚನೆ, ಸುಸಂಸ್ಕೃತವಾದ ಜನರು, ಮೂರು ಜಲಾಶಯಗಳನ್ನು ಒಳಗೊಂಡ (ಹಿಡಕಲ್, ನವಿಲುತೀರ್ಥ ಮತ್ತು ರಾಕಸಕೊಪ್ಪ

ಜಲಾಶಯ) ಬೆಳಗಾವಿಯು ಸಪ್ತನದಿಗಳ ನಾಡಾಗಿದೆ. (ಕೃಷ್ಣ ಘಟಪ್ರಭಾ, ಮಲಪ್ರಭಾ, ಮಾರ್ಕಂಡೇಯ, ಹಿರಣ್ಯಕೇಶಿ, ದೂದಗಂಗೆ ಮತ್ತು ವೇದಗಂಗೆ). ಬೆಳಗಾವಿಯು ಸಮುದ್ರ ಮಟ್ಟದಿಂದ 2500 ಅಡಿ(762 ಮೀ) ಎತ್ತರದಲ್ಲಿದೆ. ರಾಜಧಾನಿ ಬೆಂಗಳೂರಿನಿಂದ ವಾಯುವ್ಯಕ್ಕೆ 501 ಕಿ.ಮೀ., ಮಹಾರಾಷ್ಟ್ರದ ರಾಜಧಾನಿ ಮುಂಬೈನಿಂದ ದಕ್ಷಿಣಕ್ಕೆ 550 ಕಿ.ಮೀ., ಆಂಧ್ರದ ರಾಜಧಾನಿ ಹೈದ್ರಾಬಾದದಿಂದ ಪಶ್ಚಿಮಕ್ಕೆ 614 ಕಿ.ಮೀ., ಗೋವಾ ರಾಜಧಾನಿ ಪಣಜಿಯಿಂದ 159 ಕಿ.ಮೀ., ದೂರದ ಸಹ್ಯಾದ್ರಿಯ ಮಡಿಲಿನಲ್ಲಿ ರಾರಾಜಿಸುತ್ತಿದೆ. ಈ ಜಿಲ್ಲೆಯ ಒಟ್ಟು ಕ್ಷೇತ್ರ 13,415 ಚ.ಕಿ.ಮೀ. (ಡೈರೆಕ್ಟೋರೇಟ್ ಆಫ್ ಸರ್ವೆ ಸೆಟಲಮೆಂಟ್ ಆ್ಯಂಡ ಲ್ಯಾಂಡ್ ರಿಕಾರ್ಡ್ಸ್, ಬೆಂಗಳೂರು).

ಇದರ ಪ್ರಾಚೀನತೆಯನ್ನು ಅಭ್ಯಸಿಸಿದಾಗ ಕ್ರಿಪೂ.ದಷ್ಟು ಹಿಂದೆ ಹೋಗುತ್ತದೆ. ಕ್ರಿ.ಪೂ. 2ರಿಂದ ಕ್ರಿ.ಶ. 2ನೆಯ ಶತಮಾನದವರೆಗೆ ವೈಭವದಿಂದ ಕರ್ನಾಟಕದಲ್ಲಿ ರಾಜ್ಯಭಾರ ಮಾಡಿದ ಶಾತವಾಹನರ ಕುರುಹುಗಳು ಈ ನಗರದಲ್ಲಿ ಪತ್ತೆಯಾಗಿವೆ. 70•150 ಅಡಿ ಉದ್ದಗಲದ ಉತ್ತಮ ದರ್ಜೆಯ ರಸ್ತೆಯು ಉತ್ಖನನದಲ್ಲಿ ದೊರೆತಿರುವುದರಿಂದ ಈ ನಗರವು ಹಿಂದೆ ಸಂಪದ್ಭರಿತ ನಾಡಾಗಿತ್ತೆಂದು ಇಲ್ಲಿಯ ಜನರು ಸಾಂಸ್ಕೃತಿಕ ಸಿರಿವಂತಿಕೆಯನ್ನು ಹೊಂದಿದ್ದು ಅರಿವಿಗೆ ಬರುತ್ತದೆ. ಇಲ್ಲಿ ರೋಮ ನಾಣ್ಯಗಳು ಸಿಕ್ಕಿರುವುದರಿಂದ ಈ ನಗರ ರೋಮ ದೇಶದೊಂದಿಗೆ ವ್ಯಾಪಾರ-ವ್ಯವಹಾರವನ್ನು ಹೊಂದಿತ್ತೆಂದು ಹಾಗೂ ಇದು ಒಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಈ ಜಿಲ್ಲೆ ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಐತಿಹಾಸಿಕ, ಸಾಂಸ್ಕೃತಿಕ, ಸಾಹಿತ್ಯಿಕವಾಗಿ ಶ್ರೀಮಂತವಾದ ಜಿಲ್ಲೆಯಾಗಿದೆ. ಸರ್ವವಲಯದಲ್ಲಿಯೂ, ಸರ್ವರಂಗದಲ್ಲಿಯೂ ಲೀಲಾಜಾಲವಾಗಿ ಬೆಳೆದಿದೆ.

ಬೆಳಗಾವಿಯ ಬೆಳವಡಿ ಮಲ್ಲಮ್ಮ ರಾಣಿಯ ನಾಡಿನ ಅಭಿಮಾನ, ಶೌರ್ಯ, ಧೈರ್ಯ, ಕೆಚ್ಚು ಮತ್ತು ಸಾಹಸಗಳನ್ನು ಒಂದು ಸಂದರ್ಭದಲ್ಲಿ ತನ್ನ ಸೈನಿಕರಿಂದ ಕೇಳಿ ತಿಳಿದ ಮರಾಠ ದೊರೆ ಛತ್ರಪತಿ ಶಿವಾಜಿ "ತಾಯಿ ಅರಿಯದೆ ನನ್ನಿಂದಾದ ಅಪರಾಧವನ್ನು ಮನ್ನಿಸು" ಎಂದು ಪ್ರಾರ್ಥಿಸಿದ್ದು ಮಲ್ಲಮ್ಮ ರಾಣಿಯ ಶೌರ್ಯ ಮತ್ತು ಕ್ಷಾತ್ರ ತೇಜಸ್ಸು ಬೆಳಗಾವಿ ಜನರಿಗೆ ಚಿರಂತನ ಸ್ಫೂರ್ತಿಯನ್ನು ನೀಡುತ್ತದೆ. ಭಾರತ ದೇಶದಲ್ಲಿಯೇ ಮೊದಲ ಬಾರಿಗೆ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಕಹಳೆಯನ್ನೂದಿದ ಮಹಿಳಾ ಮುಕುಟಮಣಿ ವೀರರಾಣಿ ಕಿತ್ತೂರು ಚನ್ನಮ್ಮ ಬೆಳಗಾವಿಯವಳು. ಇವಳು ಹೊತ್ತಿಸಿದ ಸ್ವಾತಂತ್ರ್ಯದ ಕಿಡಿಯಿಂದಾಗಿ ಬೆಳಗಾವಿ ಜಿಲ್ಲೆಯ ಮನೆಮನೆಯಲ್ಲಿಯೂ ಸ್ವಾತಂತ್ರ್ಯ ಹೋರಾಟಗಾರರು ಕಾಣಿಸಿಕೊಂಡರು. ಅವರಲ್ಲಿ ಪ್ರಮುಖರಾದ ವೀರ ಸಂಗೊಳ್ಳಿ ರಾಯಣ್ಣ, ಅಮಟೂರು ಬಾಳಪ್ಪರಂತಹ ಕ್ರಾಂತಿವೀರರು ನಾಡಿಗಾಗಿ ತಮ್ಮ ಪ್ರಾಣವನ್ನು ಅರ್ಪಿಸಿದರು.



ಬೆಳಗಾವಿ ನಾಡು ಹಲವು ಪ್ರಥಮಗಳಿಗೆ ಹೆಸರುವಾಸಿಯಾಗಿದೆ. ಕ್ರಿ.ಶ. 1892ರ ಅಕ್ಟೋಬರ್ 15ರಂದು ಸ್ವಾಮಿ ವಿವೇಕಾನಂದರು ದಕ್ಷಿಣ ಭಾರತದತ್ತ ಹೊರಟಿರುವಾಗ ಬೆಳಗಾವಿಗೆ ಬಂದು ಇಲ್ಲಿ ಕೆಲ ದಿನಗಳವರೆಗೆ ತಂಗಿದ್ದರು. ಅವರು ವಾಸವಾಗಿರುವ ಮನೆಯನ್ನು ಈಗ ಶ್ರೀ ರಾಮಕೃಷ್ಣ ಆಶ್ರಮವಾಗಿ ವಿಸ್ತರಿಸಲಾಗಿದೆ. ಈ ಮೂಲಕ ಸ್ವಾಮಿ ವಿವೇಕಾನಂದರು ಪ್ರಪ್ರಥಮವಾಗಿ ಕರ್ನಾಟಕದ ನೆಲದ ಮೇಲೆ ಕಾಲಿರಿಸಿದ್ದು ವಿಶೇಷವಾಗಿದೆ. 1895ರಲ್ಲಿ ಮುಂಬೈ ರಾಜ್ಯದ ರಾಜಕೀಯ ಪರಿಷತ್ತಿನ ಮೊದಲ ಸಭೆ ಜರುಗಿದ್ದು ಬೆಳಗಾವಿಯಲ್ಲಿ. 1920ರ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ರಚನೆಯಾದಾಗ ಅದರ ಮೊದಲ ಅಧ್ಯಕ್ಷರಾಗಿ ಆಯ್ಕೆಯಾದವರು ಬೆಳಗಾವಿಯವರು. ಅವರು ಶ್ರೀ ಗಂಗಾಧರಾವ್ ದೇಶಪಾಂಡೆಯವರು. 1924ರಲ್ಲಿ 39ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಬೆಳಗಾವಿಯಲ್ಲಿ ಜರುಗಿತು. ಇದರ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದವರು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು. ಇವರು ಕೇವಲ ಇದೊಂದೆ ಅಧಿವೇಶನದ ಅಧ್ಯಕ್ಷರಾಗಿರುವುದು ಈ ಸ್ಥಳದ ವಿಶೇಷ. ಅಲ್ಲದೇ ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕದಲ್ಲಿ ಜರುಗಿದ ಒಂದೇ ಒಂದು ಅಧಿವೇಶನ ಇದು. ಹೀಗಾಗಿ ಇದು ಐತಿಹಾಸಿಕ. 2007ರಲ್ಲಿ ಕರ್ನಾಟಕ ವಿಧಾನ ಮಂಡಲ ಅಧಿವೇಶನ ಬೆಂಗಳೂರನ್ನು ಬಿಟ್ಟು ಹೊರಗಡೆ ನಡೆದದ್ದು ಬೆಳಗಾವಿಯಲ್ಲಿಯೇ ಎಂಬುದು ಗಮನಾರ್ಹ.

ಇಲ್ಲಿಯವರೆಗೆ ಬೆಳಗಾವಿಯಲ್ಲಿ ಐದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಹಾಗೂ ಎರಡನೆಯ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವು ಜರುಗಿದ್ದು ಈ ಜಿಲ್ಲೆಯ ವಿಶೇಷವಾಗಿದೆ. 1925ರಲ್ಲಿ ಜರುಗಿದ 11ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಬೆನಗಲ್ ರಾಮರಾಯರು ವಹಿಸಿಕೊಂಡಿದ್ದರು. 1929ರಲ್ಲಿ ಜರುಗಿದ 15ನೇ ಸಮ್ಮೇಳನದ ಅಧ್ಯಕ್ಷತೆಯನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರವರು, 1938ರಲ್ಲಿ ನಡೆದ 24ನೇ ಸಮ್ಮೇಳನದ ಅಧ್ಯಕ್ಷತೆಯನ್ನು ಎಮ್. ಕೃಷ್ಣರಾಯರು, 1980ರಲ್ಲಿ ನಡೆದ 52ನೇ ಸಮ್ಮೇಳನದ ಅಧ್ಯಕ್ಷತೆಯನ್ನು ಕಾದಂಬರಿಕಾರ ಬಸವರಾಜ ಕಟ್ಟೀಮನಿಯವರು, 2003ರಲ್ಲಿ ನಡೆದ ಸಮ್ಮೇಳನದ ಅಧ್ಯಕ್ಷತೆಯನ್ನು ಡಾ. ಪಾಟೀಲ ಪುಟ್ಟಪ್ಪನವರು ವಹಿಸಿಕೊಂಡಿದ್ದರು. ಇದಲ್ಲದೇ ಬೆಳಗಾವಿ ಜಿಲ್ಲೆಯವರೇ ಆದ ಆರು ಜನ ಪ್ರಖ್ಯಾತ ಸಾಹಿತಿಗಳು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದು ಹೆಮ್ಮೆಯ ಸಂಗತಿ. 1952ರಲ್ಲಿ ಬೇಲೂರಿನಲ್ಲಿ ನಡೆದ 35ನೇ ಸಮ್ಮೇಳನದ ಅಧ್ಯಕ್ಷತೆಯನ್ನು ಡಾ. ಎಸ್. ಸಿ. ನಂದೀಮಠರು, 1961ರಲ್ಲಿ ಗದಗದಲ್ಲಿ ಜರುಗಿದ 4ನೇ ಸಮ್ಮೇಳನದ ಅಧ್ಯಕ್ಷತೆಯನ್ನು ಕೆ. ಜಿ. ಕುಂದಣಗಾರರು, 1967ರಲ್ಲಿ ಶ್ರವಣಬೆಳಗೊಳದಲ್ಲಿ ಜರುಗಿದ 46ನೇ ಸಮ್ಮೇಳನದ ಅಧ್ಯಕ್ಷತೆಯನ್ನು ಅ. ನೇ.



ಉಪಾಧ್ಯೆಯವರು, 1980ರಲ್ಲಿ ಬೆಳಗಾವಿಯಲ್ಲಿ ಜರುಗಿದ 52ನೇ ಸಮ್ಮೇಳನದ ಅಧ್ಯಕ್ಷತೆಯನ್ನು ಬಸವರಾಜ ಕಟ್ಟೀಮನಿಯವರು, 1982ರಲ್ಲಿ ಮಡಿಕೇರಿಯಲ್ಲಿ ಜರುಗಿದ 54ನೇ ಸಮ್ಮೇಳನದ ಅಧ್ಯಕ್ಷತೆಯನ್ನು ಶಂಭಾ ಜೋಶಿಯವರು, 2000ದಲ್ಲಿ ಬಾಗಲಕೋಟೆಯಲ್ಲಿ ಜರುಗಿದ 68ನೇ ಸಮ್ಮೇಳನದ ಅಧ್ಯಕ್ಷತೆಯನ್ನು ಶಾಂತಾದೇವಿ ಮಾಳವಾಡರು ಅಲಂಕರಿಸಿದ್ದರು ಹಾಗೂ 2011ರಲ್ಲಿ ಎಲ್ಲ ಭಾಷಿಕರು ಬೆರಗಾಗುವ ಹಾಗೆ 2ನೇ ವಿಶ್ವ ಕನ್ನಡ ಸಮ್ಮೇಳನವು ಅದ್ದೂರಿಯಾಗಿ ಬೆಳಗಾವಿಯಲ್ಲಿಯೇ ಜರುಗಿತು. ಶೈಕ್ಷಣಿಕವಾಗಿಯೂ ಈ ಜಿಲ್ಲೆ ಮುಂದುವರೆದಿದೆ. ಬೆಳಗಾವಿ ನಗರದಲ್ಲಿ ಮೂರು ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯ. ರಾಜ್ಯದ ಎಲ್ಲ ಇಂಜನೀಯರಿಂಗ್ ಕಾಲೇಜುಗಳ ಆಡಳಿತವನ್ನು ಒಳಗೊಂಡ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕೆ.ಎಲ್.ಇ. ಸೊಸೈಟಿಯ ಡೀಮ್ಡ್ ವಿಶ್ವವಿದ್ಯಾಲಯ ಹಾಗೂ ಬೆಳಗಾವಿ, ಬಾಗಲಕೋಟ ಹಾಗೂ ವಿಜಯಪೂರ ಈ ಮೂರು ಜಿಲ್ಲೆಗಳ ಆಡಳಿತವನ್ನು ಹೊಂದಿರುವ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ. ಅಲ್ಲದೇ ದೊಡ್ಡದೊಡ್ಡ ಮಹಾವಿದ್ಯಾಲಯಗಳನ್ನು, ಆಸ್ಪತ್ರೆಗಳನ್ನು, ಕೈಗಾರಿಕಾ ತಾಂತ್ರಿಕತೆಯನ್ನು ಹೊಂದಿದೆ.

ಇಲ್ಲಿಯ ಜನರು ಸರಳ ಸೌಮ್ಯ ಸ್ವಭಾವದವರು, ವಿನಯಶೀಲರು, ಪ್ರಾಮಾಣಿಕರು, ಸತತೋದ್ಯೋಗಿಗಳು, ಹೊಸ ಬದಲಾವಣೆಗಳ ಹರಿಕಾರರು. ಸುಧಾರಣೆ ಸ್ವೀಕರಿಸುವ ಮನೋವೃತ್ತಿಯವರು, ಭಾವನಾ ಜೀವಿಗಳು, ಹೃದಯ ವೈಶಾಲ್ಯರು, ದೇಶಭಕ್ತರು, ಮೇಧಾವಿಗಳು ಹಾಗೂ ಪೂಜ್ಯನೀಯರೂ ಆಗಿದ್ದಾರೆ. ಕಾಯಕಯೋಗಿ ಶಿವಬಸವ ಸ್ವಾಮಿಗಳು, ಡೆಪ್ಯುಟಿ ಚೆನ್ನಬಸಪ್ಪ, ಸಿರಸಂಗಿ ಲಿಂಗರಾಜ, ಅರಟಾಳ ರುದ್ರಗೌಡ, ರಾಜಾ ಲಖಮನಗೌಡ ಸರ್‌ದೇಸಾಯಿ, ರ್‍ಯಾಂಗ್ಲರ್ ಡಾ. ಡಿ.ಸಿ. ಪಾವಟೆ, ಪ್ರೊ. ವಿ.ಸಿ. ಪಾವಟೆ, ಬಿ.ಬಿ. ಮಮದಾಪೂರ, ಎಮ್.ಪಿ. ಪಾಟೀಲ, ಎಸ್.ಜಿ. ಬಾಳೇಕುಂದ್ರಿಯವರಂತಹ ಪುಣ್ಯ ಪುರುಷರನ್ನು, ಸಾಮಾಜಿಕ ಸೇವಾ ದುರಂದರರನ್ನು, ಕೆ.ಜಿ. ಕುಂದಣಗಾರ, ಶಂಬಾ ಜೋಶಿ, ಗಂಗಾಧರ ತುರಮರಿ, ಬೆಟಗೇರಿ ಕೃಷ್ಣಶರ್ಮ, ಎಸ್.ಸಿ. ನಂದೀಮಠ, ಪ್ರ.ಗೋ. ಕುಲಕರ್ಣಿ, ಆ.ನೇ. ಉಪಾಧ್ಯೆ, ಡಿ.ಎಸ್. ಕರ್ಕಿ, ವಿ.ಎಂ. ಇನಾಂದಾರ, ಮಿರ್ಜಿ ಅಣ್ಣಾರಾಯ, ಭುಜೇಂದ್ರ ಮಹಿಷವಾಡಿ ಜ.ಚ.ನಿ. ಬಸವರಾಜ ಕಟ್ಟಿಮನಿ, ಕೃಷ್ಣಮೂರ್ತಿ ಪುರಾಣಿಕ, ಎಂ.ಬಿ. ನೇಗಿನಹಾಳ, ಚಂದ್ರಶೇಖರ ಕಂಬಾರ ಹಾಗೂ ರಾಘವೇಂದ್ರ ಕುಲಕರ್ಣಿರವರಂತಹ ವಿದ್ವತ್ ಪರಂಪರೆಯವರನ್ನು, ಕುಲಗೋಡ ತಮ್ಮಣ್ಣ, ಕುಮಾರ ಗಂಧರ್ವ, ಹುಕ್ಕೇರಿ ಬಾಳಪ್ಪ, ಬಿಣಗಿ ಬಾಳಪ್ಪ ರವರಂತಹ ಜಾನಪದ ಕಲಾವಿದರನ್ನು ಪ್ರಥಮ ರಂಗನಟಿ ನಿಂಗವ್ವಳಂತಹ ಜಾನಪದ ಕಲಾವಿದೆಯನ್ನು, ಪ್ರೊ. ವೀಣಾ ಶಾಂತೇಶ್ವರ, ಡಾ. ವಿಜಯಲಕ್ಷ್ಮೀ ಬಾಳೇಕುಂದ್ರಿ, ಪ್ರೇಮಾ ತಹಶೀಲ್ದಾರ, ಶಕುಂತಲಾ ದಂಡಗಿ, ಅನಸೂಯಾ ಸಿದ್ಧರಾಮ, ಮಂಗಲಾ ಮೆಟಗುಡ್ಡ, ಗುರುದೇವಿ ಹುಲ್ಲೆಪ್ಪನವರಮಠರಂತಹ ಮಹಿಳಾ ಬರಹಗಾರರನ್ನು



ಪಡೆದಿದೆ. ಹಿಂದೂಸ್ತಾನಿ ಸಂಗೀತದ ಕೀರ್ತಿ ಪತಾಕೆಯನ್ನು ವಿದೇಶಗಳಲ್ಲಿ ಹಾರಿಸಿದ ಕುಮಾರ ಗಂಧರ್ವರು, ಗಾನಯೋಗಿ ಪಂಚಾಕ್ಷರಿಗವಾಯಿಗಳ ಪ್ರಮುಖ ಶಿಷ್ಯರಲ್ಲಿ ಒಬ್ಬರಾದ ಮೃತ್ಯುಂಜಯ ಪುರಾಣಿಕಮಠ ಮುಂತಾದ ಸಂಗೀತ ದಿಗ್ಗಜರ ತವರು ನೆಲವಾಗಿದೆ. ಚಿತ್ರಕಲಾವಿದ ವಿಠ್ಠಲ ಪೋತದಾರ, ಬಿ.ಕೆ. ಹುಬಳಿ, ಭೀಮರಾವ್ ಮುರಗೋಡ ಮುಂತಾದ ರಾಷ್ಟ್ರಮಟ್ಟದ ಚಿತ್ರಕಲಾವಿದರನ್ನು ಪಡೆದಿದೆ. ಹಲವು ಧರ್ಮಗಳ, ಜಾತಿಗಳ, ಮತಗಳ, ಭಾಷೆಗಳ ತವರೂರು ಈ ಗಡಿನಾಡು ಪ್ರದೇಶವಾಗಿದೆ. ಈ ಜಿಲ್ಲೆಯು ವೀರಶೈವ ಮಠಗಳಷ್ಟೇ ಪ್ರಸಿದ್ಧವಾಗಿರದೇ ಶಕ್ತಿದೇವತೆಗಳಿಗೂ ಸಹ ಪ್ರಸಿದ್ಧಿ ಪಡೆದುಕೊಂಡಿದೆ. ಸವದತ್ತಿಯ ಎಳುಕೊಳ್ಳದ ಯಲ್ಲಮ್ಮ, ಸಿರಸಂಗಿಯ ಕಾಳಮ್ಮ, ಎಕ್ಕೇರಿ ಕರೆವ್ವ, ರಾಯಭಾಗದ ಚಿಂಚಲಿ ಮಾಯಮ್ಮ, ಗೋಕಾಕದ ದ್ಯಾಮವ್ವ, ಉದಗಟ್ಟಿ ಉದ್ದವ್ವ, ಖಾನಾಪುರ ಕನ್ನಮ್ಮ, ಖಾನಾಪುರದ ಕಕ್ಕೇರಿ ಬಿಷ್ಟಾದೇವಿ. ಇದರ ಬಗ್ಗೆ ಹೆಚ್ಚಿನ ಸಂಶೋಧನೆ ಇಂದು ಅತ್ಯಗತ್ಯವಾಗಿದೆ.

**ಬೆಳಗಾವಿ ಜಿಲ್ಲೆಯ ತಾಲ್ಲೂಕುಗಳ ವೈಶಿಷ್ಟ್ಯ**

ಬೆಳಗಾವಿ ಜಿಲ್ಲೆಯ 10 ತಾಲ್ಲೂಕುಗಳು ಸಹ ಹಲವಾರು ವೈವಿಧ್ಯತೆಗಳನ್ನು ತಮ್ಮ ಗರ್ಭದಲ್ಲಿರಿಸಿಕೊಂಡಿವೆ. ವೀರರಾಣಿ ಕಿತ್ತೂರು ಚನ್ನಮ್ಮಳ ತವರೂರು, ಬೆಳಗಾವಿಯ ಪಕ್ಕದ ಕಾಕತಿ ಗ್ರಾಮವಾಗಿದೆ. ಈ ನಗರದಲ್ಲಿ ದೇಶದ ಪ್ರಸಿದ್ಧ ಹಿಂಡಲಗಾ ಕಾರಾಗೃಹವಿದೆ. ರುದ್ರಾಕ್ಷಿಮಠ, ಕೆ.ಎಲ್.ಇ. ಆಸ್ಪತ್ರೆ ಮಿಲಿಟರಿ ಮಹಾದೇವಪ್ಪನ ದೇವಾಲಯ, ಮಿಲಿಟರಿ ತರಬೇತಿ ಸ್ಥಳ, ಸಿಹಿ ತಿಂಡಿ ಕುಂದಾ, ಈ ತಾಲೂಕಿನ ವೈಶಿಷ್ಟ್ಯವಾಗಿದೆ. ಇಲ್ಲಿ ಒಟ್ಟು 9 ವೀರಶೈವ ಮಠಗಳಿವೆ.

ಇಡೀ ದೇಶಕ್ಕೆ ಪೂಜ್ಯ ಕುಮಾರಸ್ವಾಮಿ ಹಾಗೂ ಪೂಜ್ಯ ಜಚನಿರವರಂತ ವಿಭೂತಿ ಪುರುಷರನ್ನು, ಬೆಳವಡಿ ಮಲ್ಲಮ್ಮ, ಕಿತ್ತೂರು ಚನ್ನಮ್ಮ ಸಂಗೊಳ್ಳಿ ರಾಯಣ್ಣರಂತಹ ಅಪ್ಪಟ ನಾಡ ಪ್ರೇಮಿಗಳನ್ನು ಪಡೆದ ತಾಲೂಕು ಬೈಲಹೊಂಗಲ ಆಗಿದೆ. ಇದು ಕಲ್ಯಾಣ ಕ್ರಾಂತಿಯ ನಂತರ ಶರಣರ ಹೆಜ್ಜೆಯ ಗುರುತುಗಳನ್ನು ಉಳಿಸಿಕೊಂಡ ನಾಡಾಗಿದೆ. ಜಾನಪದ ಲೋಕಕ್ಕೆ "ಸಂಗ್ಯಾಬಾಳ್ಯಾ" ಎಂಬ ಅನುಪಮ ಕೃತಿಯನ್ನು ಈ ತಾಲೂಕು ನೀಡಿದೆ. ಇಲ್ಲಿ ಒಟ್ಟು 16 ವೀರಶೈವ ಮಠಗಳಿವೆ. ಕವಿ, ಸಾಹಿತಿ, ಹಲವು ಧರ್ಮ ಗುರುಗಳ ನಾಡಾಗಿರುವ ಅಥಣಿ ತಾಲೂಕು ಚರ್ಮೋದ್ಯೋಗಕ್ಕೆ ಹೆಸರುವಾಸಿಯಾಗಿದೆ. ಪ್ರಸಿದ್ಧ ಕೊಲ್ಹಾಪೂರ ಚಪ್ಪಲಿಗಳನ್ನು ತಯಾರಿಸುವ ಪ್ರದೇಶ ಇದಾಗಿದೆ. ಇಲ್ಲಿ 10 ವೀರಶೈವ ಮಠಗಳಿವೆ. ಧರ್ಮ, ಸಂಸ್ಕೃತಿ, ಶಿಕ್ಷಣ, ಕವಿ ಸಾಹಿತಿಗಳಿಗೆ ಪ್ರಸಿದ್ಧವಾದ ಚಿಕ್ಕೋಡಿ ತಾಲೂಕು ಡಾ. ಆ.ನೆ. ಉಪಾಧ್ಯ, ಬಿ. ಎ. ಸನದಿ, ಭುಜೇಂದ್ರ ಮಹಿಷವಾಡಿಯವರಂತಹ ಕವಿ ಸಾಹಿತಿಗಳನ್ನು ಪಡೆದಿದೆ. ಈ ತಾಲೂಕು ವಿಸ್ತೀರ್ಣದ ದೃಷ್ಟಿಯಿಂದಲೂ, ಜನಸಂಖ್ಯೆಯ ದೃಷ್ಟಿಯಿಂದಲೂ ರಾಜ್ಯದಲ್ಲಿಯೇ ದೊಡ್ಡ ತಾಲೂಕಾಗಿದೆ. ಇಲ್ಲಿ

ಒಟ್ಟು 8 ವೀರಶೈವ ಮಠಗಳಿವೆ. ಜಲಪಾತ, ಜವಳಿಗಿರಣಿ, ಕರದಂಟುಗಳಿಗೆ ಪ್ರಸಿದ್ಧವಾದಂತೆ ಕಲೆ, ಸಾಹಿತ್ಯ ಧರ್ಮ ಸಾಂಸ್ಕೃತಿಗೂ ಸಹ ಪ್ರಸಿದ್ಧವಾದ ನಾಡಾಗಿದ್ದು, ಕುಲಗೋಡ ತಮ್ಮಣ್ಣ, ಕೌಜಲಗಿ ನಿಂಗಮ್ಮ, ಬಸವರಾಜ ಕಟ್ಟಿಮನಿ, ಕೆ.ಜಿ. ಕುಂದಣಗಾರ, ಸಿ.ಚ. ನಂದೀಮಠ, ಡಾ. ಡಿ.ಸಿ. ಪಾವಟೆಯವರಂತಹ ಮಹಾಮಹಿಮರ ಜನ್ಮಸ್ಥಳವು, ಕೃತಕ ಹಣ್ಣಿನ ಪೆಟ್ಟಿಗೆಗಳಿಗೆ ಜಗತ್ಪ್ರಸಿದ್ಧವಾದ ಕರದಂಟು ನಾಡು ಗೋಕಾಕ ತಾಲೂಕಾಗಿದೆ. ಇಲ್ಲಿ ಪಂಚಪೀಠಗಳೆಂಬ ಮಠಗಳು ಪ್ರಸಿದ್ಧವಾಗಿದ್ದು ಒಟ್ಟು 16 ಮಠಗಳಿವೆ. ಘಟಪ್ರಭಾ ನದಿಯ ಹಿಡಕಲ್ ಮತ್ತು ಧೂಪದಾಳ ಜಲಾಶಯ ಹಾಗೂ ಮಾರ್ಕಂಡೇಯ ನದಿಗೆ ಕಟ್ಟಲಾದ ಜಲಾಶಯಗಳಿಗೆ ತಮ್ಮ ಹೊಲ-ಮನೆಗಳನ್ನು ತ್ಯಾಗ ಮಾಡಿ ರಾಷ್ಟ್ರಪ್ರೇಮ ಮೆರೆದ ಬಾಳೆಕುಂದ್ರಿ ಪಂತ ಮಹಾರಾಜರು ಹುಕ್ಕೇರಿ ತಾಲೂಕಿನವರು. ಈ ತಾಲೂಕು ಬಸವಣ್ಣನವರ ವಂಶಜರು ಬಾಳಿ ಬದುಕಿದ ನಾಡಾಗಿದೆ. (ಇದಕ್ಕೆ ಸಾಕ್ಷಿ ಕ್ರಿ.ಶ. 1260 ರ ಅರ್ಜುನವಾಡ ಶಾಸನ). ಭಾರತದ ಸರ್ವ ಶ್ರೇಷ್ಠ ಕೊಳಲು ವಾದಕ ಸುಲ್ತಾನಪುರದ ಮಲ್ಹಾರಿ ಕುಲಕರ್ಣಿ ಇಲ್ಲಿಯವರು. ಈ ತಾಲೂಕು ಸುಮಾರು 50ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಸೌಲಭ್ಯವನ್ನು ಹೊಂದಿದೆ. ಇಲ್ಲಿ 11 ವೀರಶೈವ ಮಠಗಳು ಅಸ್ತಿತ್ವದಲ್ಲಿವೆ.

ಜಿಲ್ಲೆಯ ರಾಯಭಾಗ ತಾಲೂಕು ಹಿಂದೆ "ಪೂವಿನಬಾಗಿ" ಎಂದು ಕರೆಯಿಸಿಕೊಂಡು ಒಂದು ಶ್ರೇಷ್ಠ ಪ್ರಾಚೀನ ವಿದ್ಯಾಕೇಂದ್ರವಾಗಿತ್ತು. ಕ್ರಿ.ಶ. 1100 ರ ಸಂಕೇಶ್ವರ ಶಾಸನದಲ್ಲಿ ಈ ಪ್ರದೇಶವು ಪ್ರಯಾಗದಷ್ಟೇ ಪ್ರಸಿದ್ಧಿ ಪಡೆದಿತ್ತೆಂದು ಸಾರುತ್ತ "ಪ್ರಯಾಗ ಬಡಗಲು ತೆಂಕಲು ಬಾಗಿ" ಅಂದರೆ ಉತ್ತರದಲ್ಲಿ ಪ್ರಯಾಗ (ಕಾಶಿ) ಎದ್ದೆಗೆ ಹೇಗೆ ಪ್ರಸಿದ್ಧವೋ ಹಾಗೆ ದಕ್ಷಿಣದಲ್ಲಿ ಬಾಗಿ ಸುಪ್ರಸಿದ್ಧವೆಂದು ಹೇಳುತ್ತದೆ. 1 (ರಾಯಭಾಗ ತಾಲೂಕು ದರ್ಶನ: ಪಿ.ಎಂ. ಭಂಡೆ (ಲೇಖಿನ), ಬೆಳಗಾವಿ ಸಿರಿ ಸ್ಮರಣಸಂಚಿಕೆ ಪು. 67). ಒಟ್ಟಾರೆ ಈ ತಾಲೂಕು ನೈಸರ್ಗಿಕ ಸೌಂದರ್ಯದಿಂದ ಫಲವತ್ತಾದ ಭೂಮಿಯಿಂದ ಸುಂದರವಾದ ದೇವಾಲಯ ಗಳಿಂದ, ಜಿನಾಲಯಗಳಿಂದ, ಮುನಿಜನರಿಂದ, ಕಲಾವಿದ, ಕವಿವರ್ಯರಿಂದ ಕೂಡಿದ ನಾಡಾಗಿದೆ. ಸವದತ್ತಿ ತಾಲೂಕು ಏಳು ಕೊಳ್ಳಗಳಿಂದ ಆವೃತ್ತವಾಗಿದ್ದು, ಇತಿಹಾಸ ಪ್ರಸಿದ್ಧ ಪರಸಗಡ ಕೋಟೆ ಇಲ್ಲಿದೆ. ಶಕ್ತಿದೇವತೆ ಶ್ರೀ ರೇಣುಕಾ ಮಾತೆ ದೇವಸ್ಥಾನ ಹಾಗೂ ಶಿರಸಂಗಿ ಕಾಳಮ್ಮ ದೇವಸ್ಥಾನ, ನವಿಲು ತೀರ್ಥ ಹಾಗೂ ಸೊಗಲಗಳೆಂಬ ಪ್ರೇಕ್ಷಣೀಯ ಸ್ಥಳಗಳು, ಶಿವನ ಅವತಾರವೆಂದೆ ಹೆಸರಾದ ಚಿದಂಬರ ದೀಕ್ಷಿತರ ಜನ್ಮಸ್ಥಳ (ಮುರಗೋಡ) ಇದಾಗಿದ್ದು, ಮಹಾದಾನಿ ಲಿಂಗರಾಜ ದೇಸಾಯಿಯವರ ಊರು ಶಿರಸಂಗಿ, ಇದೇ ತಾಲೂಕಿನಲ್ಲಿದೆ. ಇಲ್ಲಿ ಒಟ್ಟು 20 ವೀರಶೈವ ಮಠಗಳಿವೆ. ಹಚ್ಚೇವು ಕನ್ನಡದ ದೀಪದ ಕವಿ ಡಾ. ಡಿ. ಎಸ್. ಕರ್ಕಿಯವರ ತಾಲೂಕು ರಾಮದುರ್ಗ. ಪುಣ್ಯಕ್ಷೇತ್ರ ಜಾಗೃತ ಶ್ರೀ ಗೊಡಚಿಯ ವೀರಭದ್ರ ದೇವಸ್ಥಾನವು ಇದೇ ತಾಲೂಕಿನಲ್ಲಿದೆ. ಈ ತಾಲೂಕು ಪೌರಾಣಿಕ



ಸಂಗತಿಗೂ ಸಹ ಪ್ರಸಿದ್ಧವಾಗಿದೆ. ರಾಮಾಯಣದಲ್ಲಿ ಬರುವ ಬೇಡರ ಶಬರಿಯು ಶ್ರೀರಾಮನಿಗೆ ತಿನ್ನಲು ಬೋರೆ ಹಣ್ಣುಗಳನ್ನು ಕೊಟ್ಟಿದ್ದಳೆಂಬ ಊಹೆಯ ಶಬರಿಕೊಳ್ಳವು ಇಲ್ಲಿದೆ ಹಾಗೂ ಇಲ್ಲಿಯ ಸಿದ್ನಾಳ ಕಲ್ಲುಗಳು ಮನೆ ಕಟ್ಟಲು ಬಹಳ ಪ್ರಸಿದ್ಧವಾಗಿವೆ. ಇಲ್ಲಿ 15 ವೀರಶೈವ ಮಠಗಳಿವೆ.

ಪ್ರಕೃತಿಯ ಸೃಷ್ಟಿ ಸೌಂದರ್ಯದಿಂದ ತುಂಬಿ ತುಳುಕುವ ಪ್ರವಾಸಿ ತಾಣ, ನಾಲ್ಕು ನದಿಗಳ ಉಗಮ ಸ್ಥಾನವನ್ನು ಹೊಂದಿರುವ ತಾಲೂಕು [ಮಲಪ್ರಭಾ (ಕಣಕುಂಬಿ), ಮಹದಾಯಿ(ದೇಗಾಂವ), ಮಾರ್ಕಂಡೇಯ(ಬೈಲೂರು), ಪಂಡರಿ(ಲೊಂಡಾಹತ್ತಿರ)] ವೀರ ಸಂಗೊಳ್ಳಿ ರಾಯಣ್ಣನನ್ನು ಗಲ್ಲಿಗೇರಿಸಿದ ಸ್ಥಳ, ಸಮಾಧಿ ಅದರ ಮೇಲೆ ನೆಟ್ಟ ಆಲದಮರ(ನಂದಗಡ) ಇವೆಲ್ಲವುಗಳಿಗೆ ಪ್ರಸಿದ್ಧವಾಗಿರುವ ತಾಲೂಕು ಖಾನಾಪೂರ. ಕನ್ನಡ ಮತ್ತು ಮರಾಠಿ ಭಾಷೆಗಳ ಬಾಂಧವ್ಯದ ಮಧ್ಯೆ ಹೊಂದಾಣಿಕೆ ಮಾಡಿಕೊಂಡ ಶಾಂತಿಪ್ರಿಯ ಜನರು ಇಲ್ಲಿ ವಾಸಿಸುತ್ತಾರೆ. ಇಲ್ಲಿನ ಮಣ್ಣಿನಿಂದ ತಯಾರಿಸಿದ ಟೇಬಲ ಲ್ಯಾಂಪಗಳನ್ನು ವಿದೇಶಗಳ ಸ್ಟಾರ್ ಹೊಟೇಲುಗಳಿಗೆ ರಫ್ತು ಮಾಡುತ್ತಾರೆ. ಚಿತ್ರರಂಗದಲ್ಲಿ ಹೆಸರಾದ ಚರಣರಾಜ ಇಲ್ಲಿಯವರು. ಹಿಂದಿಯ ಅಭಿಮಾನ ಚಿತ್ರದ ಚಿತ್ರೀಕರಣ ಈ ತಾಲೂಕಿನ ಅಸೋಗಾದಲ್ಲಿ ಆಗಿದೆ. ಇಂತಹ ವೈವಿಧ್ಯಮಯವಾದ ತಾಲೂಕು ಇದಾಗಿದೆ. ಇಲ್ಲಿ ಕೇವಲ ಎರಡು ವೀರಶೈವ ಮಠಗಳಿವೆ.

**ಗ್ರಂಥ ಋಣ**


- ಬೆಳಗಾವಿ ಸಿರಿ ಸ್ಮರಣ ಸಂಚಿಕೆ : ಪ್ರಸಂ. ಡಾ. ಎಸ್.ಎಂ. ಹರದಗಟ್ಟಿ-2003
- ಅರಳು: ಪ್ರಸಂ: ಡಾ. ಗುರುಲಿಂಗ ಕಾಪಸೆ, ಪ್ರ. ಶ್ರೀ ಗುರು ಚೆನ್ನಬಸವೇಶ್ವರ ಗ್ರಂಥಮಾಲೆ, ಶ್ರೀ ಮೋಟಗಿ ಮಠ ಅಥಣಿ-2003.
- ಬಿದರಿ ಶ್ರೀ ಕುಮಾರೇಶ್ವರ ಪುರಾಣ: ಲೇ: ಶ್ರೀ ಸದಾಶಿವ ಕವಿಗಳು ಇಟ್ಟಾಗಿಮಠ, ಹುಕ್ಕೇರಿ- 1951.
- ನಾಗನೂರ ಶ್ರೀ ರುದ್ರಾಕ್ಷಿಮಠ ಒಂದು ಅಧ್ಯಯನ: ಎಫ್.ಜಿ. ಜಲರಡ್ಡಿ, ಪ್ರ: ಲಿಂಗಾಯತ ಅಧ್ಯಯನ ಸಂಸ್ಥೆ ಶ್ರೀ ವಿರಕ್ತಮಠ ದೇಶನೂರು- 1997.
- ವಚನ ಕಾರಂಜಿ: ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು , ಹುಕ್ಕೇರಿ-2011.
- ಬೆಳಗಾವಿ ಸಂಸ್ಕೃತಿ : ಸಂ: ಡಾ. ಸರಜೂ ಕಾಟ್ಕರ್, ಬೆಳದಿಂಗಳು ಪ್ರಕಾಶನ, ಬೆಳಗಾವಿ-2011.
- ಬೆಳಗಾವಿ ಬೆಳಕು- ಸಂಸ್ಮರಣ ಸಂಪುಟ, ಅಖಿಲ ಭಾರತ 70ನೇ ಕನ್ನಡ ಸಾಹಿತ್ಯ ಸಮ್ಮೇಳನ, ಬೆಳಗಾವಿ ಸಂ: ಡಾ. ಆರ್.ಎಸ್. ಗುಂಜಾಳ - 2007.



ಕನ್ನಡ ಸಹಾಯಕ ಪ್ರಾಧ್ಯಾಪಕರು
ಜಿ.ಪಿ.ಪಿ. ಹಾಗೂ ಎ.ಎ.ಎಸ್. ಪ್ರಥಮ ದರ್ಜೆ ಕಾಲೇಜು, ಸಿಂದಗಿ







ಸಾಹಿತ್ಯದ ವಿವಿಧ ಆಯಾಮಗಳು

ಸಂಪಾದಕರು : ಪ್ರೊ. ಮಲ್ಲಪ್ಪ ಎಂ. ಬಾಣಿಗೇರ
ಡಾ. ಮಹಾದೇವಪ್ಪ ಎಸ್. ಪೂಜಾರಿ
ಪ್ರೊ. (ಶ್ರೀಮತಿ) ಶುಭಲಾದೇವಿ ಬಿ. ಬೆಟಗೇರಿ
ಡಾ. ನಾಗರಾಜ ಡಿ. ಮುರಗೋಡ

ಪ್ರಕಾಶಕರು : ಆಧ್ಯ ಪುಸ್ತಕ ಪ್ರಕಾಶನ,
ಬೆಳಗಾವಿ

ಪ್ರತಿಗಳು : ೫೦೦

ಬೆಲೆ : ರೂ. ೨೫೦/-

ಪುಸ್ತಕದ ಆಕಾರ : ಡೆಮಿ ೧/೮

ಅಕ್ಷರ ಜೋಡಣೆ : [illegible]
ವಿದ್ಯಾನಗರ, ಹುಬ್ಬಳ್ಳಿ
ಮೊ. : [illegible]

ISBN : 978-81-949726-3-1



# ಬೆಳಗಾವಿ ಜಿಲ್ಲೆಯ ವೀರಶೈವ ಮಠಗಳ ಸಾಮಾಜಿಕ ಸೇವೆ

ಡಾ. ನಾಗರಾಜ ಡಿ. ಮುರಗೋಡ,
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
[illegible] ಮಹಾವಿದ್ಯಾಲಯ, ಸಿಂದಗಿ, ವಿಜಯಪುರ.
ಮೊ. : [illegible]

ಬೆಳಗಾವಿ ಜಿಲ್ಲೆಯ ವೀರಶೈವ ಮಠಗಳು ಸಾಮಾಜಿಕ ಕಳಕಳಿ ಭಾವದಿಂದ [illegible] ಸಾಮಾಜಿಕ ಸೇವೆಗಳನ್ನು ಸಲ್ಲಿಸುತ್ತ ಬಂದಿವೆ. ಇಲ್ಲಿನ ಮಠಾಧೀಶರು [illegible] ಕೇವಲ ಧಾರ್ಮಿಕ ಕಾರ್ಯಗಳಿಗೆ ಮಾತ್ರ ಮೀಸಲಾಗಿರಿಸಿಕೊಳ್ಳದೇ [illegible]ದಿಂದ ಹೊರಬಂದು ಜನರ ಮಧ್ಯ ಸೇರಿ ಅವರ ಸಮಸ್ಯೆಗಳನ್ನು [illegible]ಕೊಳ್ಳುವುದಲ್ಲದೆ, ಹಲವು ಸಾಮಾಜಿಕ ಪಿಡುಗುಗಳ ನಿವಾರಣೆಗೆ [illegible]ಕರ್ತರಾಗಿದ್ದಾರೆ.

ಈ ಮಠಾಧೀಶರು ವೈಚಾರಿಕ ಮನೋಭಾವನೆಯುಳ್ಳವರಾಗಿದ್ದು ದೇವದಾಸಿ [illegible] ನಿರ್ಮೂಲನೆಗೋಸ್ಕರ ಅವರಿಗಾಗಿ ಪುನರ್ ವಸತಿ ಕೇಂದ್ರಗಳನ್ನು [illegible] ಅವರಿಗೆ ಹೊಸ ಬದುಕನ್ನು ಕಟ್ಟಿಕೊಟ್ಟಿದ್ದಾರೆ. ಅಥಣಿಯಲ್ಲಿ ದೇವದಾಸಿ ವಿಮೋಚನಾ ಸಂಘವನ್ನೇ ಕಟ್ಟಿದ್ದಾರೆ. ಸಮಾಜದಲ್ಲಿ ಬೇರೂರಿರುವ ಮೂಢನಂಬಿಕೆಗಳನ್ನು ಹೋಗಲಾಡಿಸಲು ಸಾಕಷ್ಟು ಪ್ರಯತ್ನಿಸುತ್ತಿದ್ದಾರೆ. ದೇವರ [illegible]ಗಳಲ್ಲಿ ಜಡೆ ಬರುವುದು ದೇಹದ ವಿಕಾರವೇ ಹೊರತು ಅದಕ್ಕೆ ದೇವರು ಕಾರಣವಲ್ಲ ಎಂದು ಹೇಳಿ ಜಿಲ್ಲೆಯಲ್ಲಿ ೧೦ ಸಾವಿರಕ್ಕಿಂತ ಹೆಚ್ಚಿನ [illegible] ಮನವರಿಸಿದ್ದಾರೆ. ಇವೆಲ್ಲವು ಪೂಜ್ಯರಲ್ಲಿರುವ ಸಾಮಾಜಿಕ [illegible] ಕಾಳಜಿಯನ್ನು ಎತ್ತಿ ತೋರಿಸುತ್ತದೆ. ಇವರು ಸಮಾಜಕ್ಕೆ ನೀಡಿದ ಅಮೂಲ್ಯ ಕೊಡುಗೆಯನ್ನು ಒಂದೊಂದಾಗಿ ನೋಡೋಣ.

**ಸ್ವಾತಂತ್ರ್ಯ ಚಳುವಳಿಯಲ್ಲಿ ಮಠಗಳು :**

ಭಾರತದ ಇತಿಹಾಸದಲ್ಲಿ ಸ್ವಾತಂತ್ರ್ಯ ಚಳುವಳಿ ಎಂಬುದೊಂದು ರೋಮಾಂಚನಕಾರಿಯಾದ ವಿಷಯವಾಗಿದೆ. ಭಾರತೀಯರೆಲ್ಲರೂ ಒಗ್ಗೂಡಿ ಹೋರಾಡಿದ ಪ್ರಸಂಗಗಳು ಮೈನವಿರೇಳಿಸುವ ಸಂಗತಿಗಳಾಗಿವೆ. ಇಂಥ ಸ್ವಾತಂತ್ರ್ಯ ಹೋರಾಟದಲ್ಲಿ ಜಾತಿ, ಮತ, ವರ್ಗ, ಬಡವ-ಬಲ್ಲಿದ ಎಂಬ ಭೇದ ಭಾವವನ್ನು ತೊರೆದು ಭಾರತಮಾತೆಯ ಸ್ವಾತಂತ್ರ್ಯಕ್ಕಾಗಿ ಆ ಮಾತ್ರ ರಕ್ತಗಳು ಜೀವದ ಹಂಗು ತೊರೆದು ಹೋರಾಡಿದ್ದು ಇಂದು ಐತಿಹಾಸಿಕ ಘಟನೆಯಾಗಿದೆ. ಈ ಸ್ವಾತಂತ್ರ್ಯ

ಸಂಗ್ರಾಮದಲ್ಲಿ ಬೆಳಗಾವಿ ಜಿಲ್ಲೆಯ ಮಠಗಳ ಮತ್ತು ಮಠಾಧೀಶರ ಪಾತ್ರ ಗಮನಾರ್ಹವಾಗಿದೆ. ಇವರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾರತ ಮಾತೆಯನ್ನು ಬ್ರಿಟೀಷರ ಬಂಧನದಿಂದ ಪಾರು ಮಾಡಲು ತಮ್ಮ ತನು-ಮನ-ಧನಗಳನ್ನು ಅರ್ಪಿಸಿದ್ದಾರೆ.

ಭಾರತದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾದ ಬಾಲಗಂಗಾಧರ ತಿಲಕರು ಅಥಣಿ ಶಿವಯೋಗಿಗಳ ಶಿಷ್ಯರಾಗಿದ್ದು, ದಿನಾಂಕ ೧೫-೦೧-೧೯೧೭ ರಂದು ಅಥಣಿಗೆ ಬಂದು ಶಿವಯೋಗಿಗಳ ದರ್ಶನ ಪಡೆದು ಬ್ರಿಟೀಷರ್ ದಮನಕಾರಿ ಆಡಳಿತ, ದಬ್ಬಾಳಿಕೆ, ಅವರಿಂದ ನಾವು ಸ್ವರಾಜ್ಯ ಅಥವಾ ಸ್ವಾತಂತ್ರ್ಯ ಪಡೆದುಕೊಳ್ಳುವ ಬಗೆ, ನಮ್ಮವರನ್ನು ಯಾವ ರೀತಿ ಜಾಗೃತಗೊಳಿಸಬೇಕು ಎಂಬುದರ ಬಗ್ಗೆ ಸುದೀರ್ಘವಾಗಿ ಅವರ ಜೊತೆ ಚರ್ಚಿಸಿ ಸ್ವರಾಜ್ಯಕ್ಕಾಗಿ ಅವರಿಂದ ಆಶೀರ್ವಾದ ಪಡೆಯುವಾಗ ಪೂಜ್ಯರು ಈ ರೀತಿ ಹೇಳಿದ್ದುಂಟು "ಲೋಕ ಮಾನ್ಯರೇ, ಮಾವು ಮರವನ್ನು ಹಚ್ಚಿದವರಿಗೆ ಅದರ ಫಲವು ದೊರೆಯಲಾರದು, ಅದು ಬೆಳೆದು ದೊಡ್ಡದಾಗಿ ದೊಗ್ಗುಬಿಟ್ಟು, ಪುಷ್ಪ ಅರಳಿ, ಹಣ್ಣು ಕಾಯಿ ಆಗಲಿಕ್ಕೆ ಕೆಲವು ದಿವಸಗಳು ಬೇಕು. ನೀರ ಮೇಲಿನ ಗುಳ್ಳೆಯಂತೆ ಆಯುಷ್ಯವುಂಟು. ಆದುದರಿಂದ ಆ ಮರದ ಫಲವು ಮುಂದಿನವರಿಗೆ ದೊರೆಯುವ್ವದು.೧ (೧. ಚಂದ್ರಶೇಖರ ಶಾಸ್ತ್ರಿಗಳು ಮತ್ತು ಬಸವಲಿಂಗ ಶಾಸ್ತ್ರಿಗಳು: ಶ್ರೀಮದ್ ಅಥಣಿ ಶಿವಯೋಗೀಶ್ವರ ಚರಿತ್ರೆ ಪುಟ ೨೦೫) ಎಂದು ಹೇಳಿ ಶುಭವಾಗಲಿ ಎಂದು ಆಶೀರ್ವದಿಸಿ ಪ್ರೋತ್ಸಾಹಿಸಿದ್ದರು.

೧೯೨೪ ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಒಂದು ಐತಿಹಾಸಿಕ ಘಟನೆ. ಕಾರಣ ಮಹಾತ್ಮಾ ಗಾಂಧೀಜಿಯವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಒಂದೇ ಒಂದು ಅಧಿವೇಶನವದು. ಇಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರು ೧೨ನೇ ಶತಮಾನದ ಬಸವಣ್ಣನವರ ಆಂದೋಲನದ ಬಗೆಗೆ ಗಾಂಧೀಜಿಯವರಿಗೆ ಪರಿಚಯ ಮಾಡುತ್ತಾರೆ. ಆಗ ಶಿವಶರಣರ ಚಳುವಳಿಯಿಂದ ಗಾಂಧೀಜಿಯವರು ತುಂಬ ಪ್ರಭಾವಿತರಾಗಿ "ನೀವೆಲ್ಲ ಬಸವಣ್ಣನವರ ನಾಡಿನವರು. ನಾನು ಅವರ ತತ್ವಗಳ ಒಂದಂಶವನ್ನು ಪ್ರಯೋಗಿಸುತ್ತಿರುವೆ. ನೀವೆಲ್ಲ ಅವರ ದಾರಿಯಲ್ಲಿ ಸಾಗಬೇಕು" ಎಂದು ಕರೆ ನೀಡಿದಾಗ ಬೆಳಗಾವಿ ಮಠಾಧೀಶರೆಲ್ಲರಿಗೂ ಇನ್ನಿಲ್ಲದ ಹುರುಪು ಬಂದು ಮತ್ತಷ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕುವಂತೆ ತಮ್ಮ ಭಕ್ತ ವೃಂದವನ್ನು ಪ್ರೋತ್ಸಾಹಿಸಿದ್ದರು.

೧೯೩೭ ರಲ್ಲಿ ಗಾಂಧಜೀಯವರು ಮತ್ತೊಮ್ಮೆ ಬೆಳಗಾವಿ ನಾಡಿನ ಹುದಲಿ ಗ್ರಾಮಕ್ಕೆ ಬಂದಾಗ ಗಂಗಾಧರರಾವ್ ದೇಶಪಾಂಡೆಯವರು ನಾಗನೂರು ರುದ್ರಾಕ್ಷಿಮಠದ ಶಿವಬಸವ ಶ್ರೀಗಳನ್ನು ಗಾಂಧೀಜಿಯವರಿಗೆ ಭೇಟಿ ಮಾಡಿಸಿದಾಗ "ಗಾಂಧೀಜಿ ಶ್ರೀಗಳಿಗೆ ಖಾದಿ ಬಟ್ಟೆ ಧರಿಸಲು ತಿಳಿಸುತ್ತಾರೆ. ಅಂದಿನಿಂದ



ಕೊನೆಯವರೆಗೂ ಶ್ರೀಗಳು ಖಾದಿ ಬಟ್ಟೆಯನ್ನೇ ಧರಿಸಿದರು.೨ ( ಎಫ್. ಜಿ. ... ನಾಗನೂರು ಶ್ರೀ ರುದ್ರಾಕ್ಷಿಮಠ ಒಂದು ಅಧ್ಯಯನ ಪುಟ ೫೦) ... ೧೯೨೦-೩೦ ರ ದಶಕದಲ್ಲಿ ಗಾಂಧೀಜಿಯವರಿಂದ ಬೆಳಗಾವಿ ... ಮಠಗಳು ಪ್ರಭಾವಿತವಾಗಿ ಕೆಲವೊಂದು ಸಂದರ್ಭದಲ್ಲಿ ಪ್ರತ್ಯಕ್ಷವಾಗಿ, ... ಪರೋಕ್ಷವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವಂತೆ ಮಾಡಿತು. ... ರುದ್ರಾಕ್ಷಿ ಮಠದ ಶಿವಬಸವ ಸ್ವಾಮಿಗಳು ಗಂಗಾಧರ ... ಯವರಿಗೆ ಶಿವಶರಣರ ಕ್ರಾಂತಿಯ ಬಗ್ಗೆ ಪರಿಚಯಿಸಿ ಅವರಲ್ಲಿ ... ಉತ್ಸಾಹವನ್ನು ತುಂಬಿದ್ದುಂಟು.

ನಾಗನೂರು ಸ್ವಾಮಿ ಪ್ರಸಾದ ನಿಲಯದ ವಿದ್ಯಾರ್ಥಿಗಳೆಲ್ಲರು ೧೯೪೨ ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಸತ್ಯಾಗ್ರಹ, ಹರತಾಳ, ... ದಂಗೆ, ಸ್ವದೇಶಿ ಪ್ರಚಾರ ಮೆರವಣಿಗೆಗಳಲ್ಲಿ ಭಾಗವಹಿಸುತ್ತಿದ್ದರು. ಹಾಗೂ ... ಭೂಗತ ಹೋರಾಟಗಾರರಾದ ಚೆನ್ನಪ್ಪವಾಲಿ, ತಲ್ಲೂರ ರಾಯನಗೌಡ, ... ಪಾಟೀಲ ಮುಂತಾದವರು ಶ್ರೀ ನಾಗನೂರು ಮಠದಲ್ಲಿ ಆಶ್ರಯ ಪಡೆಯುತ್ತಿದ್ದರು. ಈ ವಿಷಯವನ್ನು ಅರಿತ ಬ್ರಿಟೀಷ ಅಧಿಕಾರಿಗಳು ಸ್ವಾಮೀಜಿಯವರನ್ನು ಬಂಧಿಸುವ ಆಜ್ಞೆ ಹೊರಡಿಸುತ್ತಾರೆ. ಇದು ಹೇಗೋ ಸ್ವಾಮೀಜಿಯವರಿಗೆ ಗೊತ್ತಾಗಿ ಅವರು ಭಕ್ತರ ಒತ್ತಾಯದ ಮೇರೆಗೆ ತಲೆ ತಪ್ಪಿಸಿಕೊಂಡು ಕೆಳದಿ ಮಠಕ್ಕೆ ಹೋಗಿ ಬಿಡುವರು.

ಹುಕ್ಕೇರಿ ತಾಲೂಕಿನ ಸಿದ್ಧ ಸಂಸ್ಥಾನ ಮಠವು ಸಹ ಹಲವಾರು ಸ್ವಾತಂತ್ರ್ಯ ಹೋರಾಟಗಾರರಿಗೆ ಆಶ್ರಯ ತಾಣವಾಗಿತ್ತು. ಗಡಹಿಂಗ್ಲಜ್, ಚಿಕ್ಕೋಡಿ, ನಿಪ್ಪಾಣಿ, ಸಂಕೇಶ್ವರ, ರಾಯಭಾಗ ಭಾಗದ ಭೂಗತ ಹೋರಾಟಗಾರರನ್ನು ಮಠದಲ್ಲಿಯೇ ಇರಿಸಿಕೊಂಡು ಅವರಿಗೆ ಊಟ, ವಸತಿ ... ಬರೆಗಳನ್ನು ಆಗಿನ ಸ್ವಾಮೀಜಿಯವರಾದ ಪ.ಪೂ. ನಾಲ್ವನೆಯ ... ಶಿವಯೋಗೀಶ್ವರರು ಒದಗಿಸುತ್ತಿದ್ದರು. ಬ್ರಿಟೀಷ ಅಧಿಕಾರಿಗಳು ಇವರನ್ನು ... ಮಠಕ್ಕೆ ಬಂದರೆ ಈ ಹೋರಾಟಗಾರರೆಲ್ಲರೂ ಮಠದ ... ದುಡಿಯುವ ಕೂಲಿಯವರಾಗಿ ಬಿಡುತ್ತಿದ್ದರು. "ಅಪ್ಪಣ್ಣಗೌಡ ... ಶಿವಪ್ಪಾ ಗುಂಡಾಳಿ, ಚೆನ್ನಪ್ಪಾ ಮಠಪತಿ ಮುಂತಾದ ತಂಡದವರು ... ಚಲೇಜಾವ ಚಳುವಳಿಯ ಕಾರ್ಯತಂತ್ರಗಳಿಗೆ ಸ್ವಾಮಿಗಳ ಮಾರ್ಗದರ್ಶನವಿತ್ತು. ೬-೧೦-೧೯೪೨ ರಂದು ಈ ತಂಡ ರಾಯಭಾಗ ... ಸುಟ್ಟು, ಕೆಲ್ಲೂರ ಅಂಚೆ ಕಚೇರಿ ಲೂಟಿ ಮಾಡಿ ಬ್ರಿಟೀಷರಿಗೆ ... ಆಘಾತ ನೀಡಿತು. ಈ ಕಾರ್ಯಕ್ಕೆ ಹೋಗುವ ಪೂರ್ವದಲ್ಲಿ ... ತಂಡದವರು ನಿಡಸೋಸಿಗೆ ತೆರಳಿ ಭೂಗತ ಹೋರಾಟದ ಬಗ್ಗೆ ಸ್ವಾಮಿಗಳೊಂದಿಗೆ ಚರ್ಚಿಸಿದರು. ಸ್ಟೇಶನ್ ಸುಡುವ ಹಿಂದಿನ ದಿನ ... ಹೋಗಿ ಮಧ್ಯಾಹ್ನ ಪ್ರಸಾದ ಸ್ವೀಕರಿಸಿ ಸ್ವಾಮಿಗಳು ಕಟ್ಟಿಕೊಟ್ಟ ... ತೆಗೆದುಕೊಂಡು ರಾಯಭಾಗದತ್ತ ಅವರೆಲ್ಲ ಮುನ್ನಡೆದಿದ್ದರು.೩



(ಡಾ. ಗುರಲಿಂಗ ಕಾಪಸೆ (ಸಂ) ಅರಳು, ಡಾ. ಗುರುಪಾದ ಮರಿಗುದ್ದಿ(ಲೇ) ವೀರಶೈವ ಮಠಗಳು: ಸ್ವಾತಂತ್ರ್ಯ ಚಳುವಳಿ ಪು. ೨೪೭)

ಗೋಕಾಕ ತಾಲ್ಲೂಕಿನ ತವಗ ಮಠದ ಚಂದ್ರಯ್ಯಸ್ವಾಮಿ ವಿರುಪಾದಯ್ಯನವರು ವೈಯಕ್ತಿಕ ಸತ್ಯಾಗ್ರಹ ಮತ್ತು ಚಲೇಜಾವ ಚಳುವಳಿಗಳಲ್ಲಿ ನೇರವಾಗಿ ಭಾಗವಹಿಸಿದ್ದರು. ಇದರಿಂದ ಅವರನ್ನು ಬ್ರಿಟೀಷ ಸರಕಾರ ಬಂಧಿಸಿ ಸೆರೆಮನೆಗೆ ತಳ್ಳಿತ್ತು, ನಂತರ ಇವರು ಗಾಂಧೀಜಿಯವರ ಪ್ರಭಾವದಿಂದ ತಮ್ಮ ಜೀವಿತದ ಕೊನೆಯವರೆಗೂ ಖಾದಿ ಬಟ್ಟೆಯನ್ನೇ ತೊಟ್ಟರು.

ಈ ತೆರನಾಗಿ ಬೆಳಗಾವಿ ಜಿಲ್ಲೆಯ ವೀರಶೈವ ಮಠಗಳು ಸಣ್ಣ ಮಠಗಳಿಂದ ಹಿಡಿದು, ದೊಡ್ಡ ಮಠಗಳವರೆಗೆ, ಗ್ರಾಮ ಮಠಗಳಿಂದ ನಗರ ಮಠಗಳವರೆಗೆ ಎಲ್ಲ ಮಠಗಳು ಸ್ವಾತಂತ್ರ್ಯಕ್ಕಾಗಿ ತಮ್ಮ ಅನುಪಮ ಕಾಣಿಕೆಯನ್ನು ಸಲ್ಲಿಸಿವೆ. ರಾಮದುರ್ಗದ ಅವರಾಧಿಯ ಫಲಹಾರೇಶ್ವರ ಮಠ, ಗೋಕಾಕದ ಕೊಣ್ಣೂರ ಮಠ, ಅರಬಾವಿಮಠ, ಚಿಕ್ಕೋಡಿ ತಾಲೂಕಿನ ಚಿಂಚಣಿ ಅಲ್ಲಮ ಪ್ರಭು ಸಿದ್ಧಸಂಸ್ಥಾನ ಮಠ ಇದಕ್ಕೆ ಉತ್ತಮ ನಿದರ್ಶನಗಳು.

ಈ ಜಿಲ್ಲೆಯ ಮಠಗಳು ವಿಶೇಷ ದಿನಗಳಂದು ಪುರಾಣ, ಪ್ರವಚನ, ಉಪನ್ಯಾಸ, ಕೀರ್ತನೆ, ಭಜನೆಗಳನ್ನು ಏರ್ಪಡಿಸುತ್ತಿದ್ದವು. ಆಗ ಮಠಗಳಿಗೆ ಎಲ್ಲ ಭಕ್ತರು ಬಂದು ಸೇರುತ್ತಿದ್ದರು. ಇದು ಬ್ರಿಟೀಷ ಅಧಿಕಾರಿಗಳಿಗೆ ಒಂದು ಧಾರ್ಮಿಕ ಕಾರ್ಯಕ್ರಮವಾಗಿ ಕಂಡರೆ, ಇದು ನಿಜವಾಗಿ ಸ್ವಾತಂತ್ರ್ಯ ಸಂಗ್ರಾಮದ ಕಾರ್ಯಕ್ರಮವಾಗಿರುತ್ತಿತ್ತು. ಧರ್ಮದ ಹೆಸರಿನಲ್ಲಿ ಮಠಾಧೀಶರು, ಕೀರ್ತನಕಾರರು ಉಪನ್ಯಾಸಕರು ಬ್ರಿಟೀಷರ್ ದಬ್ಬಾಳಿಕೆ. ಹಿಂಸೆ ಅವರ ದಮನಕಾರಿ ನೀತಿಗಳನ್ನು ತೆಗಳಿ ಭಕ್ತರಲ್ಲಿ ರಾಷ್ಟ್ರೀಯತೆಗಾಗಿ ಕರೆಕೊಡುತ್ತಿದ್ದರು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಮಾರ್ಗದರ್ಶನ, ರೂಪ- ರೇಷೆಗಳನ್ನು ಹಾಕಿಕೊಡುತ್ತಿದ್ದರು. ನಿಮ್ಮ ಹಿಂದೆ ನಾವು ಯಾವಾಗಲೂ ಇದ್ದೇವೆ ಎಂದು ಹುರಿದುಂಬಿಸುತ್ತಿದ್ದರು. ಅನಕ್ಷರಸ್ಥರಾದ ಹಿಂದುಳಿದವರಾದ ಈ ಭಾಗದ ಜನರನ್ನು ಎಚ್ಚರಿಸುತ್ತಿದ್ದರು. ಹೀಗೆ ತೆರೆಮರೆಯಲ್ಲಿ ಬೆಳಗಾವಿ ಜಿಲ್ಲೆಯ ಮಠಗಳು ಸ್ವಾತಂತ್ರ್ಯಕ್ಕಾಗಿ ತಮ್ಮ ಅತ್ಯಮೂಲ್ಯ ಕೊಡುಗೆಗಳನ್ನು ಸಲ್ಲಿಸಿವೆ.

**ಗಡಿನಾಡಿನಲ್ಲಿ ಕ್ರಾಂತಿ :**

ಬೆಳಗಾವಿ ಅನಾದಿ ಕಾಲದಿಂದಲೂ ಭಾಷಾ ವೈಷಮ್ಯದ ಹಾಗೂ ಗಡಿ ಕದನದಿಂದ ಬಳಲುತ್ತಿದೆ. ಇಲ್ಲಿನ ಬಹುತೇಕ ಹಳ್ಳಿಗಳು ಕರ್ನಾಟಕದ ಗಡಿಯಲ್ಲಿದ್ದು ಇತ್ತ ಕರ್ನಾಟಕದ ಸಹಾಯವನ್ನು, ಅತ್ತ ಮಹಾರಾಷ್ಟ್ರದ ಸಹಾಯವನ್ನು ಪಡೆಯದೇ ಬಳಲಿವೆ. ಇಂಥ ಹಳ್ಳಿಗಳನ್ನು ವೀರಶೈವ ಮಠಗಳು ಗುರುತಿಸಿ ಅಲ್ಲಿ ಕನ್ನಡದ ಕ್ರಾಂತಿಯನ್ನು ಮೊಳಗಿಸುತ್ತಿವೆ. ಚಿಕ್ಕೋಡಿ ತಾಲೂಕಿನ ಗಡಿಭಾಗದ ಗ್ರಾಮವಾದ ಬೆಂಚಗೆಯಲ್ಲಿರುವ ಸಿದ್ಧಸಂಸ್ಥಾನ ಮಠವು ಕನ್ನಡ



... ಕೇಂದ್ರವಾಗಿ ಮಾರ್ಪಾಡಾಗಿದೆ. ಈ ಮಠದ ಪೂಜ್ಯರಾದ ಶ್ರೀ ... ಸ್ವಾಮಿಗಳು "ಕನ್ನಡದ ಸ್ವಾಮೀಜಿ" ಎಂದೇ ಅನ್ವರ್ಥಕ ... ಪಡೆದುಕೊಂಡಿದ್ದಾರೆ. ಇಲ್ಲಿನ ಗಡಿ ಗ್ರಾಮಗಳಲ್ಲಿ ಕನ್ನಡದ ಉತ್ಸವಗಳನ್ನು, ... ಸಮಾರಂಭಗಳನ್ನು, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಕನ್ನಡಪರ ... ಸಂಸ್ಥೆಗಳನ್ನು ಬೆಳೆಸಿ ಪೋಷಿಸುತ್ತಿದೆ. ಕನ್ನಡ ಜಾಗೃತಿ ಪುಸ್ತಕ ... ಅಲ್ಲಮಪ್ರಭು ಜನಕಲ್ಯಾಣ ಸಂಸ್ಥೆ ಸಿದ್ಧ ಸಂಸ್ಥಾನ ಮಠ, ಬೆಂಚಗೆ ... ಹೆಸರಿನೊಂದಿಗೆ ೩೦ ಕ್ಕಿಂತ ಹೆಚ್ಚಿನ ಕನ್ನಡದ ಪ್ರಮುಖ ... ಕೃತಿಗಳನ್ನು ಪ್ರಕಟಿಸಿ ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿದೆ.

ಚಿಕ್ಕೋಡಿಯ ಸಂಪಾದನಸಂಸ್ಥಾನ ಚರಮೂರ್ತಿಮಠದ ಈಗಿನ ... ಧಿಕಾರಿಗಳಾದ ಶ್ರೀ. ಮ.ನಿ.ಪ್ರ ಸಂಪಾದನಾ ಸ್ವಾಮಿಗಳು ಜಾವೆ ಸ್ವತಃ ಚಿಕ್ಕೋಡಿ ತಾಲೂಕಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವುದಲ್ಲದೇ ಸ್ವತಃ ತಮ್ಮ ಮಠವನ್ನು ಕಾರ್ಯಾಲಯವನ್ನಾಗಿ ಮಾಡಿಕೊಂಡಿದ್ದಾರೆ. ನಾಗನೂರಿನ ಶ್ರೀ ರುದ್ರಾಕ್ಷಿ ಮಠದ ಸ್ವಾಮೀಜಿಯವರ ... ಗಳಲ್ಲಿ ಹಲವಾರು ಉತ್ಸವ- ಉಪನ್ಯಾಸಗಳನ್ನು ಏರ್ಪಡಿಸುತ್ತ ... ಭದ್ರ ಕೋಟೆಯಂತೆ ಕಾರ್ಯ ಮಾಡುತ್ತಿದ್ದಾರೆ.

**... ಗಡಿ ಹಾಗೂ ನೆಲ-ಜಲಗಳ ರಕ್ಷಣೆ :**

ಈ ಜಿಲ್ಲೆಯ ವೀರಶೈವ ಮಠಾಧೀಶರು ಕನ್ನಡ ಭಾಷೆಗೆ, ನೆಲಕ್ಕೆ, ಜಲಕ್ಕೆ ... ಬಂದಾಗ ತಮ್ಮ ಮಠವನ್ನು ಬಿಟ್ಟು ಹೊರಬಂದು ಬಹಿರಂಗವಾಗಿ ... ಇಳಿದಿದ್ದಾರೆ. ಗೋಕಾಕ ಚಳುವಳಿಯಲ್ಲಿ ಸಕ್ರಿಯವಾಗಿ ... ಯಾಗಿದ್ದಾರೆ ಬೆಳಗಾವಿ ಪರಿಸರದಲ್ಲಿ ಕನ್ನಡದ ಕಂಪು ನಿತ್ಯ ನಿರಂತರ ... ಸುವಾಸನೆಯ ಪರಿಮಳವನ್ನು ಬೀರುವಂತೆ ಆ ಪರಿಮಳದ ಸೊಬಗನ್ನು ... ಭಾಷಿಕರು ಆಸ್ವಾದಿಸಿ ನೆಮ್ಮದಿಯ ಬದುಕು ಕಟ್ಟಿಕೊಳ್ಳುವಂತೆ ... ನಿರ್ವಹಿಸುತ್ತಿದ್ದಾರೆ.

**... ಮುಕ್ತ ಗ್ರಾಮ :**

ಇಲ್ಲಿನ ವೀರಶೈವ ಮಠಾಧೀಶರು ಜನಜಾಗೃತಿಗಾಗಿ ಕಾಲ್ನಡಿಗೆಯಲ್ಲಿ ... ಗ್ರಾಮಗಳಲ್ಲಿ, ಕೇರಿ ಕೇರಿಗಳಲ್ಲಿ ಅಡ್ಡಾಡಿ ಜನರನ್ನು ಅಂಧಾನುಕರಣೆಯಿಂದ ... ಗೊಳಿಸುತ್ತಿದ್ದಾರೆ. ದುಶ್ಚಟಗಳಿಂದ ಬಳಲಿ ಬೆಂಡಾಗಿರುವ ಆದಷ್ಟೋ ... ಗಳಿಗೆ ಸಾಂತ್ವನ ನೀಡಿದ್ದಾರೆ. ಮಹಿಳೆಯರ ಅಳಲನ್ನು ಕೇಳಲಾರದೇ ... ಅಂಟಿಕೊಂಡಿರುವ ಸರಾಯಿ ಸೇವನೆಯನ್ನು ಬಿಡಿಸಲು ಗ್ರಾಮದ ... ನಿವಾಸಿಗಳಿಂದ ಸರಾಯಿ ಕುಡಿಯಲಾರೆ ಎಂದು ಪ್ರಮಾಣ ... ಮಾಡಿಕೊಳ್ಳುತ್ತ ಪಾನ ಮುಕ್ತ ಗ್ರಾಮಗಳನ್ನು ಕಟ್ಟುತ್ತಿದ್ದಾರೆ. ಧೂಮಪಾನಿಗಳೇ ... ದೂರವಿರಿ ನಮ್ಮ ಹತ್ತಿರ ಸುಳಿಯದಿರಿ ಎನ್ನುತ್ತ ಅವರನ್ನು ... ಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

**ದುಶ್ಚಟಗಳನ್ನು ಬಿಟ್ಟವರಿಗೆ ಮಾತ್ರ ಮಠದಲ್ಲಿ ಪ್ರವೇಶ :**

ತಮ್ಮ ಮಠಗಳಿಗೆ ಬರುವ ಭಕ್ತಾದಿಗಳ ಜೀವನವು ಆದರ್ಶತೆಯಿಂದ ಕೂಡಿರಲಿ. ಅವರು ಅಮರತ್ವವನ್ನು ಪಡೆದುಕೊಳ್ಳಲಿ ಎಂಬ ಸದುದ್ದೇಶದಿಂದ ನಮ್ಮ ಬಳಿ ಬರುವ ಭಕ್ತಾದಿಗಳು ತಮ್ಮ ದುಶ್ಚಟಗಳನ್ನು ಬಿಡಬೇಕು ಎನ್ನುವರು. ಸಿಗರೇಟ್, ತಂಬಾಕು, ಗುಟಕಾ ಹಾಗೂ ಮದ್ಯಪಾನ ಸೇವನೆ ಮಾಡುವವರು ನಮ್ಮ ಮಠಗಳಿಗೆ ಬರಬೇಡಿ ಎಂದು ನಿಷ್ಠುರವಾಗಿ ಹೇಳುತ್ತಾರೆ. ನಿಮ್ಮ ಚಟಗಳನ್ನು ನಮ್ಮ ಜೋಳಿಗೆಗೆ ಹಾಕಿ ಎಂದು ಕೇಳಿಕೊಳ್ಳುತ್ತಾರೆ. ಗೋಕಾಕ ತಾಲೂಕಿನ ಹಲವಾರು ಮಠಾಧೀಶರು ಇಂಥ ವಿನೂತನ ಕಾರ್ಯಗಳಲ್ಲಿ ತೃಪ್ತಿ ಪಡೆದಿದ್ದಾರೆ.

**ಆಯುರ್ವೇದಿಕ ಔಷಧಿ ನೀಡುವುದು :**

ಇಲ್ಲಿನ ಹಲವಾರು ಮಠಗಳು ಹಾಗೂ ಮಠಾಧೀಶರು ಬಡ ರೋಗಿಗಳಿಗೆ ಉಚಿತವಾಗಿ ಆಯುರ್ವೇದಿಕ ಔಷಧಿ ಉಪಚಾರ ಮಾಡುವರು. ಗೋಕಾಕ ತಾಲೂಕಿನ ಮಮದಾಪೂರ ಗ್ರಾಮದ ಮೌನ ಮಲ್ಲಿನಾಥ ಸ್ವಾಮಿಗಳು ಅಲೋಪಥಿ ಔಷಧಿಗಳಿಂದ ಗುಣವಾಗದ ಅದೆಷ್ಟೋ ಕಾಯಿಲೆಗಳನ್ನು ಆಯುರ್ವೇದಿಕ ಔಷಧಿಗಳಿಂದ ಗುಣಪಡಿಸುತ್ತಿದ್ದಾರೆ.

**ಯೋಗ ಮತ್ತು ಪ್ರಕೃತಿ ಚಿಕಿತ್ಸೆ :**

ಆಧುನಿಕ ಸಮಾಜದ ಜನರು ಬಹಳಷ್ಟು ಹಾಗೂ ಯಾಂತ್ರಿಕ ಜೀವನದಿಂದ ಒತ್ತಡಯುಕ್ತ ಬದುಕು ಸಾಗಿಸುತ್ತಿದ್ದಾರೆ. ಅಂಥವರಿಗೆ ಈ ಮಠ ಮಾನ್ಯಗಳು ಶಾಂತಿಯ ಸಂಕೇತಗಳಾಗಿವೆ. ಇಲ್ಲಿ ದಿನಂಪ್ರತಿ ನಡೆಯುವ ಯೋಗ ಶಿಬಿರಗಳು ಅವರಲ್ಲಿ ಜೀವನೋತ್ಸಾಹವನ್ನು ತುಂಬುತ್ತಿವೆ. ಜಲ ಚಿಕಿತ್ಸೆ, ಹಿಪಪಾಟ್ ಚಿಕಿತ್ಸೆ, ಸೂತ್ರ ನೇತಿ ಚಿಕಿತ್ಸೆಗಳಂತ ಪ್ರಕೃತಿ ಚಿಕಿತ್ಸಾ ಕೇಂದ್ರಗಳಾಗಿಯೂ ಇಂದು ಇಲ್ಲಿನ ಮಠಗಳು ಕಾರ್ಯ ನಿರ್ವಹಿಸುತ್ತಿವೆ.

**ಅಂತರ-ಜಾತಿ ಹಾಗೂ ವಿಧವಾ-ಪುನರ್-ವಿವಾಹ ಮತ್ತು ಸಾಮೂಹಿಕ ವಿವಾಹ :**

ಇಂದಿನ ಮಠಾಧೀಶರು ಹಿಂದಿನ ಜಾತಿ ತಾರತಮ್ಯ ವೈಷಮ್ಯವನ್ನು ಹೋಗಲಾಡಿಸಿ ನವ ಸಮಾಜ ನಿರ್ಮಾಣದ ಹರಿಕಾರರಾಗುತ್ತಿದ್ದಾರೆ. ಜಾತಿ ಜಾತಿಗಳ ನಡುವಿನ ವೈಷಮ್ಯವನ್ನು ನಿವಾರಿಸಲು ಅಂತರ ಜಾತಿಯ ವಿವಾಹಗಳನ್ನು ಮಠದಲ್ಲಿಯೇ ಮಾಡಿಸುತ್ತಿದ್ದಾರೆ. ವಿಧವಾ ಪುನರ್ ವಿವಾಹಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದಾರೆ. ಅಲ್ಲದೇ ತಮ್ಮ ಮಠಗಳಲ್ಲಿಯೇ ಸಾಮೂಹಿಕ ವಿವಾಹವನ್ನು ಏರ್ಪಡಿಸುತ್ತಿದ್ದಾರೆ. ಬೆಳಗಾವಿ ಜಿಲ್ಲೆಯ ಪ್ರತಿಯೊಂದು ಸಣ್ಣ ಮಠಗಳು ಇಂಥ ಕಾಯಕದಲ್ಲಿ ನಿರತವಾಗಿರುವುದು ಅಭಿನಂದನಾರ್ಹ.

**ಮಾನವೀಯ ಮೌಲ್ಯಗಳನ್ನು ವರ್ಧಿಸುವುದು :**

ಇಂದಿನ ಮಠಾಧೀಶರು ತಮ್ಮ ನಡೆ ನುಡಿಗಳ ಮೂಲಕ ಜನರ ಮನಸ್ಸನ್ನು ಆಕರ್ಷಿಸುತ್ತಿದ್ದಾರೆ. ಅವರಲ್ಲಿರುವ ಅರಿಷಡ್ವರ್ಗಗಳನ್ನು ಹೊರದೂಡಿ ಅವುಗಳ ಸ್ಥಾನದಲ್ಲಿ ಮಾನವೀಯ ಮೌಲ್ಯಗಳನ್ನು ಮೂಡಿಸುತ್ತಿದ್ದಾರೆ.



**ಕೋಮು- ಸೌಹಾರ್ದ ಭಾವನೆ ಬೆಳೆಸುವ ಚಟುವಟಿಕೆಗಳು :**

ಇಂದಿನ ಸ್ಥಿತಿಗತಿಯಲ್ಲಿ ಕೋಮು- ಸೌಹಾರ್ದ ಭಾವನೆ ಅತಿ ಅವಶ್ಯಕವಿದೆ. ಇಂಥ ಭಾವನೆಗಳನ್ನು ಮಠಾಧೀಶರು ಜನ ಮಾನಸದಲ್ಲಿ ಬಿತ್ತುತ್ತಿದ್ದಾರೆ. ಜನರಲ್ಲಿ ಮನೆ ಮಾಡಿರುವ ಧರ್ಮಾಂಧತೆ ಹಾಗೂ ಜಾತೀಯತೆಗಳ ಭಾವನೆಗಳನ್ನು ಕಡಿಮೆಗೊಳಿಸುತ್ತಿದ್ದಾರೆ. ತಮ್ಮ ಮಠಗಳಲ್ಲಿ ಕೋಮು ಸೌಹಾರ್ದತಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಅಥಣಿ ಮೋಟಗಿ ಮಠದವರು ಸರ್ವ ಧರ್ಮ ಸಮ್ಮೇಳನವನ್ನು ಏರ್ಪಡಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ. ಒಂದೇ ವೇದಿಕೆಯ ಮೇಲೆ ಎಲ್ಲ ಧರ್ಮದ ಪೂಜ್ಯರನ್ನು ಕೂಡ್ರಿಸಿ ಉಪನ್ಯಾಸ ಮಾಲಿಕೆಯನ್ನು ಏರ್ಪಡಿಸಿದ್ದಾರೆ. ಸಾವಳಗಿಯ ಜಗದ್ಗುರು ಪೀಠವಂತೂ ಹಿಂದೂ-ಮುಸ್ಲಿಂರ ಭಾವೈಕ್ಯ ಕೇಂದ್ರವಾಗಿದೆ. ಈ ಮಠಕ್ಕೆ ಹಿಂದೂಗಳಂತೆ ಮುಸ್ಲಿಂ ಧರ್ಮ ಬಾಂಧವರು ನಡೆದುಕೊಳ್ಳುತ್ತಾರೆ.

**ಮಾತೃತ್ವ -ಭಾತೃತ್ವ - ತಂದೆ-ತಾಯಿಗಳ ಬಗ್ಗೆ ಗೌರವ ಬೆಳೆಸುವುದು:**

ಇಂದಿನ ಆಧುನಿಕ ಯಾಂತ್ರಿಕ ಜೀವನದಲ್ಲಿ ವಯಸ್ಸಾದ ತಂದೆ- ತಾಯಿಗಳನ್ನು ವೃದ್ಧಾಶ್ರಮಕ್ಕೆ ಸೇರಿಸುವುದು ಸಹಜವಾಗಿದೆ. ಆದರೆ ಇಂಥ ಅಮಾನವೀಯ ಕಾರ್ಯವನ್ನು ಮಠಾಧೀಶರು ಅಲ್ಲಗಳೆಯುತ್ತಿದ್ದಾರೆ. ತಂದೆ- ತಾಯಿಗಳು ದೇವರ ಸಮಾನ ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ಮಕ್ಕಳದ್ದೇ ಎಂದು ಅರಿವನ್ನು ತಿದ್ದುತ್ತಿದ್ದಾರೆ. ಅವರಲ್ಲಿ ಭ್ರಾತೃತ್ವ ಹಾಗೂ ಮಾತೃತ್ವ ಭಾವನೆಗಳನ್ನು ಬೆಳೆಸುತ್ತಿದ್ದಾರೆ.

**ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ :**

ಬೆಳಗಾವಿ ಜಿಲ್ಲೆಯ ಮಠಗಳು ಮಹಿಳಾ ಸಬಲೀಕರಣಕ್ಕೆ ಹಲವಾರು ವಿನೂತನ ಕಾರ್ಯಗಳನ್ನು ಆಯೋಜಿಸಿವೆ. ಇಂದಿನ ಮಹಿಳೆಯರನ್ನು ಕೇವಲ ಕುಟುಂಬ ಹಾಗೂ ಧಾರ್ಮಿಕ ಕಾರ್ಯಗಳಿಗೆ ಮಾತ್ರ ಸೀಮಿತಗೊಳಿಸಿಕೊಳ್ಳದೇ ಅವರು ಪುರುಷನಷ್ಟೇ ಸಮಾನವಾಗಿ ಬೆಳೆಯಲು ಪ್ರೋತ್ಸಾಹಿಸುತ್ತಿದ್ದಾರೆ. ಅವರಿಗಾಗಿಯೇ ಪ್ರತ್ಯೇಕವಾದ ವಿಚಾರ ಗೋಷ್ಠಿಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಮಹಿಳಾ ಸಶಕ್ತೀಕರಣಕ್ಕಾಗಿ ಮಹಿಳಾ ಸಂಘ ಸಂಸ್ಥೆಗಳನ್ನು, ಸ್ವಶಕ್ತಿ ಕೇಂದ್ರಗಳನ್ನು ತೆರೆಯಲು ಉತ್ತೇಜಿಸುತ್ತಿದ್ದಾರೆ.

**ಖಾದಿ ಪ್ರಚಾರ :**

ಖಾದಿ ಬಟ್ಟೆ ನಮ್ಮ ದೇಶದ ಹೆಗ್ಗುರುತು. ನಮಗೆ ಸ್ವಾತಂತ್ರ್ಯ ತಂದು ಕೊಟ್ಟ ಮಹಾತ್ಮ ಗಾಂಧೀಜಿಯವರ ಆಂದೋಲನದ ಪ್ರಮುಖ ವಿಷಯ. ಈ ಖಾದಿ ಬಟ್ಟೆಗಳನ್ನು ಎಲ್ಲರೂ ಧರಿಸಬೇಕು. ಅಂದಾಗ ಮಾತ್ರ ನಮ್ಮ ರೈತನ ಬೆಳೆಗೆ ಬೆಲೆ ಬರುತ್ತದೆ. ಹಾಗೂ ನಮ್ಮ ದೇಶದ ವಸ್ತುಗಳಿಗೆ ಹೆಚ್ಚಿನ ಬೇಡಿಕೆ ಉಂಟಾಗುತ್ತದೆ. ಮಠಗಳು ಖಾದಿ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಮಠಗಳಿಗೆ ಬರುವ ಭಕ್ತಾದಿಗಳಿಗೆ ಖಾದಿ ಧರಿಸುವಂತೆ ವಿನಂತಿ ಮಾಡಿಕೊಳ್ಳುತ್ತಿದ್ದಾರೆ.



**ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಪುರಸ್ಕಾರ :**

ಇಂದು ಭಾರತೀಯರು ಕೊಳ್ಳುಬಾಕ ಸಂಸ್ಕೃತಿಗೆ ಜೋತು ಬಿದ್ದಿದ್ದಾರೆ. ಪೇಟೆಯಲ್ಲಿರುವ ಎಲ್ಲ ಆಕರ್ಷಕ ವಸ್ತುಗಳೆಲ್ಲವು ನಮ್ಮ ಮನೆಗಳಲ್ಲಿ ಇರಲಿ ಎಂಬ ಭಾವನೆಯನ್ನು ಹೊಂದಿದ್ದಾರೆ. ಅದರಲ್ಲೂ ವಿದೇಶಿ ವಸ್ತುಗಳ ಮೇಲೆ ಹೆಚ್ಚಿನ ಮೋಹವನ್ನು ಹೊಂದಿದ್ದಾರೆ. ಇದನ್ನು ಹೋಗಲಾಡಿಸಲು ಮಠಾಧೀಶರು "ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಸ್ವದೇಶಿ ವಸ್ತುಗಳನ್ನು ಖರೀದಿಸಿ" ಎಂದು ಜನರಿಗೆ ಹೇಳುತ್ತಿದ್ದಾರೆ. ಕೆಲವೊಂದು ಮಠಾಧೀಶರು ತಮ್ಮ ಮಠಗಳಲ್ಲಿಯೇ ಸ್ವದೇಶಿ ವಸ್ತುಗಳ ಮಾರಾಟ ಕೇಂದ್ರಗಳನ್ನು ಪ್ರಾರಂಭಿಸಿದ್ದಾರೆ.

**ರಾಷ್ಟ್ರೀಯ ಪ್ರಜ್ಞೆ ಜಾಗೃತಿಗೊಳಿಸುವಿಕೆ :**

ಬೆಳಗಾವಿ ಜಿಲ್ಲೆಯ ಪ್ರತಿಯೊಂದು ಮಠಗಳು ಸಹಿತ ಇಂಥ ಕೆಲಸಗಳನ್ನು ಮಾಡುತ್ತಿವೆ. ಜನರ ಮನಸ್ಸಿನಲ್ಲಿ ದೇಶಭಕ್ತಿ, ದೇಶಪ್ರೇಮ, ರಾಷ್ಟ್ರೀಯ ಪ್ರಜ್ಞೆ ಹಾಗೂ ಭಾವೈಕ್ಯತೆಯನ್ನು ಮೂಡಿಸುತ್ತಿವೆ. ಆ ಮೂಲಕ ಹೊಸ ಜಾಗೃತ ಸಮಾಜದ ನಿರ್ಮಾಣಕ್ಕೆ ಕಾರಣೀಕರ್ತರಾಗುತ್ತಿದ್ದಾರೆ.

**ರಾಷ್ಟ್ರೀಯ ಸಂಪತ್ತನ್ನು ರಕ್ಷಿಸುವ ಕಾರ್ಯ :**

ಮಾನವನ ಆಸೆಗೆ ಮಿತಿಯಿಲ್ಲ. ಅವನು ತನ್ನ ಅತಿ ಆಸೆಯಿಂದ ರಾಷ್ಟ್ರೀಯ ನೈಸರ್ಗಿಕ ಸಂಪತ್ತನ್ನು ಕೊಳ್ಳೆಹೊಡೆಯುತ್ತಿದ್ದಾನೆ. ಇದನ್ನು ಇಂದಿನ ಮಠಗಳು ತಡೆಯುತ್ತಿರುವುದು ಅಭಿನಂದನಾರ್ಹ.

**ಜನಪದ ಮತ್ತು ಗ್ರಾಮೀಣ ಸಂಸ್ಕೃತಿಯನ್ನು ಉಳಿಸುವಿಕೆ :**

ನಮ್ಮ ಜನಪದ ಹಾಗೂ ಗ್ರಾಮ ಸಂಸ್ಕೃತಿಯನ್ನು ಉಳಿಸುವಲ್ಲಿ ಬೆಳಗಾವಿ ಜಿಲ್ಲೆಯ ವೀರಶೈವ ಮಠಗಳು ಯಶಸ್ವಿಯಾಗಿವೆ. ಗ್ರಾಮೀಣ ಕಲೆ, ಕ್ರೀಡೆ, ಕಸೂತಿಗಳನ್ನು ಮಠ ಮಾನ್ಯಗಳು ಪ್ರೋತ್ಸಾಹಿಸುತ್ತಿವೆ.

**ಕಾಯಕ-ದಾಸೋಹ ಭಾವನೆ ಬೆಳೆಸುವಿಕೆ :**

ಇಂದಿನ ಬೆಳಗಾವಿ ಜಿಲ್ಲೆಯ ಪ್ರತಿಯೊಂದು ಮಠಗಳು ದಾಸೋಹಕ್ಕೆ ಹೆಸರುವಾಸಿಯಾಗಿವೆ. ಅದರಲ್ಲಿ ಕೆಲವೊಂದು ಮಠಗಳು ನಿತ್ಯ ದಾಸೋಹ ಕೇಂದ್ರಗಳಾಗಿವೆ. ನಿಡಸೋಸಿಯ ಜಗದ್ಗುರು ಸಂಸ್ಥಾನ ಪೀಠ, ಸಾವಳಗಿಯ ಜಗದ್ಗುರು ಸಂಸ್ಥಾನ ಪೀಠ, ಬೆಳಗಾವಿಯ ನಾಗನೂರ ಶ್ರೀ ರುದ್ರಾಕ್ಷಿಮಠ ಮುಂತಾದವುಗಳು ರಾಜ್ಯ ಮಟ್ಟದಲ್ಲಿಯೇ ಉಲ್ಲೇಖಿಸುವಂತಹ ದಾಸೋಹ ಕೇಂದ್ರಗಳಾಗಿವೆ. ಮಠಕ್ಕೆ ಬರುವ ಭಕ್ತರಲ್ಲಿಯೂ ದಾಸೋಹ ಭಾವನೆಯನ್ನು ಮೂಡಿಸುತ್ತಿವೆ. ಮಠಗಳು ಕಾಯಕ ಸಿದ್ಧಾಂತದ ಮೇಲೆ ಬಸವತತ್ವದ ಮೇಲೆ ನೆಲೆ ನಿಂತಿವೆ.

**ನಿತ್ಯ ದಾಸೋಹ ಕೇಂದ್ರಗಳು :**

ಬೆಳಗಾವಿ ಜಿಲ್ಲೆಯ ಪ್ರತಿಯೊಂದು ಸಣ್ಣ- ದೊಡ್ಡ ಮಠಗಳೆಲ್ಲವೂ ನಿತ್ಯ ದಾಸೋಹ ಕೇಂದ್ರಗಳಾಗಿವೆ. ಮಠಕ್ಕೆ ಬರುವ ಭಕ್ತಾದಿಗಳಿಗೆ ನಿತ್ಯ ಅನ್ನಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.



**ವಚನ ಸಾಹಿತ್ಯದ ಪ್ರಚುರತೆ :**

೧೨ನೇ ಶತಮಾನದ ಬಸವಾದಿ ಶಿವಶರಣರು ನವ ಸಮಾಜದ ಹರಿಕಾರರಾಗಿದ್ದರು. ಜಿಡ್ಡು ಗಟ್ಟಿದ ಅಂದಿನ ವ್ಯವಸ್ಥೆಯನ್ನು ಸುಧಾರಿಸಲು ಸಾಕಷ್ಟು ಪ್ರಯತ್ನಿಸಿ ಯಶಸ್ವಿಯಾಗಿದ್ದರು. ತಮ್ಮ ವಚನ ಸಾಹಿತ್ಯದ ಮೂಲಕ ಜನಸಮುದಾಯವನ್ನು ಎಚ್ಚರಿಸಲು, ಅವರಿಗೆ ಅರಿವು ನೀಡಲು ಶ್ರಮಿಸಿದ್ದರು. ಅಂತಹ ವಚನ ಸಾಹಿತ್ಯವನ್ನು ಜನ ಮಾನಸದಲ್ಲಿ ಪ್ರಚುರ ಪಡಿಸುವ ಕಾರ್ಯಗಳನ್ನು ಇಂದಿನ ಮಠಾಧೀಶರು ಮಾಡುತ್ತಿದ್ದಾರೆ.

**ಕಲ್ಯಾಣ ಕೇಂದ್ರಗಳ ನಿರ್ಮಾಣ :**

ಬೆಳಗಾವಿ ಜಿಲ್ಲೆಯ ಮಠಾಧೀಶರು ತಮ್ಮ ಮಠಗಳಲ್ಲಿಯೇ ವಿವಾಹ ಕಾರ್ಯಕ್ರಮಗಳನ್ನು ನೇರವೇರಿಸುವಂತಹ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಿವೆ. ಇವು ಸಾವಿರಾರು ಸಂಖ್ಯೆ ಜನರನ್ನು ಹಿಡಿಯುವ ದೊಡ್ಡ ಕಟ್ಟಡಗಳಾಗಿವೆ. ಇಲ್ಲಿ ನಿತ್ಯ ಶುಭ ಕಾರ್ಯಗಳು ಜರಗುತ್ತವೆ.

**ರೈತಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಿಕೆ :**

ಭಾರತವು ಹಳ್ಳಿಗಳ ದೇಶ. ಇಲ್ಲಿನ ಜನರು ಮೂಲತಃ ಕೃಷಿಕ ಜನರು ಆದರೆ ಇಂದಿನ ಆಧುನಿಕ ಯುಗದಲ್ಲಿ ಕೃಷಿ ಕೆಲಸವು ಅವಮಾನ ತರುವ ಕೆಲಸವಾಗಿ ಮಾರ್ಪಟ್ಟಿದೆ. ಹಾಗೆಯೇ ಇಂದಿನ ಕೃಷಿ ಮಳೆಯನ್ನೇ ಪ್ರಮುಖವಾಗಿ ಅವಲಂಬಿಸಿರುವುದರಿಂದ ಸರಿಯಾಗಿ ಮಳೆ ಬೀಳದಿದ್ದರೆ ರೈತನ ಬಾಳಿಗೆ ಸಂಕಷ್ಟ ಬಂದೇ ಬರುವುದು. ಇದರಿಂದ ರೈತ ಕೃಷಿ ಕಾರ್ಯಗಳಿಂದ ವಿಮುಖನಾಗುತ್ತಿದ್ದಾನೆ. ಇದನ್ನರಿತ ಮಠಾಧೀಶರು ರೈತನನ್ನು ಮತ್ತೆ ಕೃಷಿ ಕಾಯಕಕ್ಕೆ ಅಣಿಗೊಳಿಸುತ್ತಿದ್ದಾರೆ. ಅವರಿಗಾಗಿ ಹಲವಾರು ಕೃಷಿ ಹಾಗೂ ಕೃಷಿಯೋದ್ಯಮ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದಾರೆ. ಸುಧಾರಿಸಿದ ಬೇಸಾಯ ಕ್ರಮಗಳನ್ನು, ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸಿ ಹೆಚ್ಚಿನ ಬೆಳೆಯನ್ನು ಬೆಳೆಯಿರಿ ಎಂದು ಅವರಲ್ಲಿ ಭರವಸೆಯನ್ನು ತುಂಬುತ್ತಿದ್ದಾರೆ.

**ವಿಶ್ವ ಬಂಧುತ್ವ ಕಲ್ಪನೆ ಮೂಡಿಸುವುದು :**

ಇಂದಿನ ಜನರ ಮನಸ್ಸುಗಳು ಬಹಳ ಸಂಕುಚಿತಗೊಳ್ಳುತ್ತಿವೆ. ನಾನು, ನನ್ನ ಕುಟುಂಬ, ನನ್ನ ಊರು, ನನ್ನ ತಾಲೂಕು ಹೀಗೆ ಬಹು ಸಂಕುಚಿತ ಸ್ಥಿತಿಯಲ್ಲಿವೆ. ಇವುಗಳ ಮಧ್ಯದಲ್ಲಿ ವಿಶ್ವ ಬಾತೃತ್ವದ ಕಲ್ಪನೆಯನ್ನು ಮಠಾಧೀಶರು ಬಿತ್ತುತ್ತಿದ್ದಾರೆ.

**ಪ್ರಾಚೀನ ಸ್ಮಾರಕಗಳು, ಗುಡಿ- ಗುಂಡಾರಗಳ ರಕ್ಷಣೆ :**

ಇಂದಿನ ಮಠಗಳ ಪ್ರಮುಖ ಕಾರ್ಯಗಳೆಂದರೆ ಪ್ರಾಚೀನ ಸ್ಮಾರಕಗಳನ್ನು ರಕ್ಷಿಸುವುದಾಗಿದೆ. ಅವನತಿಯ ಸ್ಥಿತಿಯಲ್ಲಿರುವ ಪ್ರಮುಖ ಹಾಗೂ ಐತಿಹಾಸಿಕ ಪ್ರಾಚೀನ ಸ್ಮಾರಕಗಳನ್ನು ಗುಡಿ-ಗುಂಡಾರಗಳನ್ನು ರಕ್ಷಿಸುವ ಕೆಲಸಗಳನ್ನು ಮಠಗಳೇ ಮಾಡುತ್ತಿವೆ.

**ಪರಿಸರ ಪ್ರೇಮ ಬೆಳೆಸುವುದು :**

"ಪರಿಸರ ಉಳಿದರೆ ನಾವು ಉಳಿದೇವು" ಎಂಬುವುದನ್ನು ಇಂದಿನ ಬಹುತೇಕ ರಾಷ್ಟ್ರಗಳು ಮನಗಂಡಿವೆ. ಇದನ್ನೆ ಮಠಾಧೀಶರು ಜನರಲ್ಲಿ ತುಂಬುತ್ತಿದ್ದಾರೆ. ಮನೆಗೊಂದು ಮರ ನೆಡಲೇ ಬೇಕು ಎಂದು ಮನವಿ ಮಾಡುತ್ತ ತಮ್ಮ ಮಠಗಳಲ್ಲಿಯೂ ಗಿಡ ಮರಗಳನ್ನು ನೆಟ್ಟು ಬೆಳೆಸುತ್ತಿದ್ದಾರೆ.

**ಸಮಾಜದ ನ್ಯಾಯವಾದಿಗಳಾಗಿ ಮಠಾಧೀಶರು :**

ಸಮಾಜದಲ್ಲಿ, ಕುಟುಂಬದಲ್ಲಿ ನಡೆಯುವ ತಂಟೆ-ತಕರಾರು - ಜಗಳ, ವ್ಯಾಜ್ಯಗಳು ಪೊಲೀಸ್ ಠಾಣೆ, ನ್ಯಾಯಾಲಯಗಳ ಮೆಟ್ಟಿಲುಗಳನ್ನೇರದೆ ಮಠಗಳಲ್ಲಿಯೇ ಸೌಹಾರ್ದಯುತವಾಗಿ ಬಗೆಹರಿಯುತ್ತಿವೆ. ಈ ಮಠಾಧೀಶರು ನ್ಯಾಯಾಧೀಶರಂತೆ ಕಾರ್ಯ ನಿರ್ವಹಿಸುತ್ತಿರುವುದು ಪ್ರಶಂಸನೀಯವಾಗಿದೆ.

**ಪ್ರಕೃತಿ ವಿಕೋಪ ಸ್ಥಳಗಳಿಗೆ ಸಹಾಯ ಹಸ್ತ :**

ಅತಿವೃಷ್ಟಿ ಅನಾವೃಷ್ಟಿ, ಭೂಕಂಪ, ಸುನಾಮಿಯಿಂದಾಗಿ ಧೃತಿಗೆಟ್ಟ ಸ್ಥಳಗಳ ನಿವಾಸಿಗಳಿಗೆ ಈ ಮಠಾಧೀಶರು ಅಭಯ ಹಸ್ತವನ್ನು ನೀಡುತ್ತಿದ್ದಾರೆ. ತಮ್ಮ ತಮ್ಮ ವ್ಯಾಪ್ತಿಗಳಲ್ಲಿ ತಮ್ಮ ಭಕ್ತಾದಿಗಳೊಂದಿಗೆ ಜೋಳಿಗೆಯನ್ನು ಹಿಡಿದುಕೊಂಡು ಮನೆ ಮನೆಗಳಿಗೆ ತಿರುಗಿ ಜನರಿಂದ ಹಣ, ಆಹಾರ ವಸ್ತುಗಳನ್ನು ಪಡೆದುಕೊಂಡು ಅವುಗಳನ್ನು ನೆರೆ ಸಂತ್ರಸ್ತರಿಗೆ ತಲುಪಿಸುವ ವ್ಯವಸ್ಥೆಯನ್ನು ಇಂದು ಮಠಗಳು ಮಾಡುತ್ತಿರುವುದು ಬಹು ಶ್ಲಾಘನೀಯ.

ಹೀಗೆ ಬೆಳಗಾವಿ ಜಿಲ್ಲೆಯ ಪ್ರತಿಯೊಂದು ಮಠಗಳು ಜನ ಸೇವೆಯಲ್ಲಿ ತೊಡಗಿವೆ. "ಜನಸೇವೆಯೇ ಜನಾರ್ಧನ ಸೇವೆ" ಎಂದು ಮಠಾಧೀಶರು ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವುದು ಶ್ಲಾಘನೀಯವಾಗಿದೆ.

***





**Samanvaya** - A collection of Articles by various scholars

| | | |
|---|---|---|
| Editor's Name | : | Dr. Nagaraj D. Murgod |
| Published by | : | Anant Prakashana, Bangalore |
| First Impression | : | 2020 |
| Copies | : | 1000 |
| Pages | : | xviii + 216 |
| Price | : | Rs. 150/- |
| Paper Used | : | 70 GSM |
| Copy Right | : | Editor |
| Cover Design | : | Chittar Kala Balaga, Dharawad |
| DTP | : | Ravi Kammar |
| Printers | : | B G Printers, Dharwad |
| ISBN: | : | 978-81-938117-5-7 |
| Book Size | : | 1/8th Demi |

**ಸಮನ್ವಯ –**

ವಿವಿಧ ಸಂಶೋಧಕರಿಂದ ಬರೆಯಲ್ಪಟ್ಟ ಸಂಶೋಧನ ಲೇಖನಗಳ ಸಂಗ್ರಹ

| | |
|---|---|
| ಸಂಪಾದಕರು | : **ಡಾ.ನಾಗರಾಜ ಡಿ.ಮುರಗೋಡ** |
| ಪ್ರಕಾಶಕರು | : ಅನಂತ ಪ್ರಕಾಶನ<br>ನಂ.೧೦೩/ಎ, ೩ನೇ ಮುಖ್ಯ ರಸ್ತೆ,<br>೨ನೇ ಷಾಪ್ ಲೈನ್, ಟಾಟಾ ಸಿಲ್ಕ್ ಫಾರಂ,<br>ಬಸವನಗುಡಿ, ಬೆಂಗಳೂರು-೫೬೦೦೦೪ |
| ಮೊಬೈಲ್ | : ೯೯೭೨೧೨೯೩೭೬ |
| ಪುಟಗಳು | : xviii + ೨೧೬ |
| ಪ್ರಥಮ ಮುದ್ರಣ | : ೨೦೨೦ |
| ಹಕ್ಕುಗಳು | : ಸಂಪಾದಕರು |
| ಬೆಲೆ | : ರೂ. ೧೫೦/- |
| ಅಕ್ಷರ ಸಂಯೋಜನೆ | : ರವಿ ಕಮ್ಮಾರ |
| ಮುಖಪುಟ | : ಚಿತ್ತಾರ ಕಲಾ ಬಳಗ ಧಾರವಾಡ |
| ಮುದ್ರಕರು | : ಬಿ. ಜಿ. ಪ್ರಿಂಟರ್ಸ್, ಧಾರವಾಡ |




ಹಿರಿಯ ಪ್ರಾಧ್ಯಾಪಕರು

ಹಾಗೂ

ನನಗೆ ಮಾರ್ಗದರ್ಶಕರೂ ಆದ

ವೇದಮೂರ್ತಿ

**ಪ್ರೊ. ವ್ಹಿ. ಡಿ. ವಸ್ತ್ರದ**

ಅವರಿಗೆ



## ವಚನ ಸಾಹಿತ್ಯದಲ್ಲಿ ಮಹಿಳೆ

◇◇ ಡಾ. ನಾಗರಾಜ ಡಿ. ಮುರಗೋಡ

'ಯತ್ರ ನಾರ್ಯಂತು ಪೂಜ್ಯಂ ತೇತ ದೇವತಾ' ಎಲ್ಲಿ ಮಹಿಳೆಯರೋ ಪೂಜಿತರಾಗುವರೋ ಅಲ್ಲಿ ದೇವತೆಗಳು ವಾಸಿಸುತ್ತಾರೆ ಎಂಬ ನಾಣ್ಣುಡಿಯು ಅನಾದಿ ಕಾಲದಿಂದ ಬಂದಿದ್ದರೂ ಸಹ. ಮಹಿಳೆಗೆ ಹೆಚ್ಚಿನ ಸ್ವಾತಂತ್ರ್ಯವನ್ನು ನಮ್ಮ ಪೂರ್ವಜರು ನೀಡಿರಲಿಲ್ಲ. ಅವಳಿಗೆ ಧರ್ಮದ ಹೆಸರಿನಲ್ಲಿ ಪೂಜನೀಯ ಸ್ಥಾನವನ್ನು ನೀಡಿ ಅವಳ ಸ್ವಾತಂತ್ರ್ಯವನ್ನು ಹರಣಮಾಡಲಾಯಿತೆಂದೆ ಹೇಳಬಹುದು. ಅವಳನ್ನು ಸಂಪ್ರದಾಯ–ನಂಬಿಕೆಗಳ ಹೆಸರಿನ ಮೇಲೆ ಬಂಧಿಮಾಡಲಾಗಿತ್ತು. ನೀನು ಹೀಗೇ ಬದುಕಬೇಕು ಎಂಬುದರ ಕಟ್ಟಳೆಯನ್ನು ಹಾಕಿ ಆ ಬಂಧನದಲ್ಲಿ ಅವಳೇ ಸ್ವತಃ ತಾನಾಗಿ ಇರುವಂತೆ ಮಾಡಿರುವುದು ಪುರುಷ ಪ್ರಧಾನ ವ್ಯವಸ್ಥೆಯ ಒಂದು ಷಡ್ಯಂತ್ರವೇ ಸರಿ.

ಅವಳಿಗೆ ಶಿಕ್ಷಣವನ್ನು, ಅಧಿಕಾರವನ್ನು, ಪ್ರಾಶಸ್ತ್ಯವನ್ನು ನೀಡಿದರೆ ಅವಳು ಅಂಕೆಗೆ ಸಿಲುಕುವುದಿಲ್ಲ ಎಂಬುದನ್ನರಿತು ಮಹಿಳೆ ಜನ್ಮತಃ ದುರ್ಬಲಳು ಎಂದು ನಂಬಿಸಲಾಯಿತು. ಅವಳು ಬಾಲ್ಯದಲ್ಲಿ ತಂದೆಯ ಪೋಷಣೆಯಲ್ಲಿ, ಯೌವನದಲ್ಲಿ ಗಂಡನ ಪೋಷಣೆಯಲ್ಲಿ ಹಾಗೂ ವೃದ್ಧಾಪ್ಯದಲ್ಲಿ ಮಕ್ಕಳ ಪೋಷಣೆಯಲ್ಲಿ ಬದುಕು ಸಾಗಿಸಬೇಕು ಎಂಬ ಅಲಿಖಿತ ಕಾನೂನನ್ನು ಜಾರಿಗೆ ತರಲಾಗಿತ್ತು.

ಕೆಲವೊಂದು ಕೌಟುಂಬಿಕ ವಿಷಯದಲ್ಲಿ ಅವಳಿಗೆ ಪ್ರಾಧಾನ್ಯತೆ ನೀಡಿದ್ದರೂ ಸಹ ಸಮಾಜದಲ್ಲಿ ಸಮಾನವಾಗಿ ಅವಳನ್ನು ಕಾಣುವ ಸಮಾನತೆ ತತ್ವದಡಿಯಲ್ಲಿ ಅವಳು ಇನ್ನು ಬಂದಿಲ್ಲ. ಪ್ರಾಚೀನ ಕಾಲದ ವ್ಯವಸ್ಥೆಯ ಕಾಲಘಟ್ಟದಲ್ಲಿ ಅವಳಿಗೆ ಹೆಚ್ಚಿನ ಸೌಲಭ್ಯಗಳಿದ್ದರೂ ಅವಳಿಗೆ ಸ್ವಾತಂತ್ರ್ಯವಿರಲಿಲ್ಲ. ಋಗ್ವೇದದ ಕಾಲದಲ್ಲಿ ಮಹಿಳೆಯನ್ನು ಸಹಧರ್ಮಿಣಿಯೆಂದು ತಿಳಿಯಲಾಗಿತ್ತಾದರೂ ಧರ್ಮದ ವಿಷಯದಲ್ಲಿ ಮಾತ್ರ ಅವಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರಕಿತ್ತೆಂದು ಕಂಡುಬಂದರೂ ಸಹ ಎಲ್ಲ ರಂಗಗಳಲ್ಲಿಯಿಯೂ ಹೆಚ್ಚಿನ ಪ್ರಾಶಸ್ತ್ಯ ದೊರಕಿತ್ತೆಂದೆ ಹೇಳಬಹುದು. ಆ ಕಾಲದಲ್ಲಿ ವಿಧವಾ ವಿವಾಹ ಪದ್ಧತಿ ಜಾರಿಯಲ್ಲಿದ್ದು, ಬಾಲ್ಯ ವಿವಾಹ ಪದ್ಧತಿ ಜಾರಿಯಲ್ಲಿರಲಿಲ್ಲ. ಪುರುಷನ ಪ್ರತಿಯೊಂದು ಕಾರ್ಯದಲ್ಲಿ ಅವಳು ಭಾಗಿಯಾಗುತ್ತಿದ್ದಳು. ಸ್ವತಂತ್ರವಾಗಿ ಪುರುಷ ಸಮನಾಗಿ ವಿದ್ಯೆಯನ್ನು ಪಡೆಯಲು ಅವಳಿಗೆ ಅವಕಾಶವಿದ್ದಿತು. ವಿಶ್ವವಾರಾ, ಲೋಪಮುದ್ರಾ, ಅಪಾಲಾ, ಶಶಿಯಸೀ, ಇಂದ್ರಾಣಿ, ಘೋಷಾ, ಶಚೀ ಮತ್ತು ಸಿಕತಾನಿವಾರಿ ಮುಂತಾದ ಸ್ತ್ರೀಯರು ಪುರುಷ ಸಮಾನವಾಗಿ ವಿದ್ಯೆಯನ್ನು ಕಲಿತು ಧಾರ್ಮಿಕ ಮಂತ್ರಗಳನ್ನು ರಚಿಸಿದರೆಂಬ ಉಲ್ಲೇಖವಿರುವುದು ಮತ್ತು ಕೆಲವೊಂದು

ಸಂದರ್ಭದಲ್ಲಿ ಪುರುಷನಿಗೆ ಬುದ್ಧಿ ಮಾತನ್ನು ಹೇಳುವಷ್ಟು ಅವಳಿಗೆ ಸ್ವಾತಂತ್ರ್ಯವಿರುವುದು ಆ ಕಾಲ ಘಟ್ಟದ ಅಧ್ಯಯನದಿಂದ ತಿಳಿದು ಬರುತ್ತದೆ. ಮುಂದೆ ಕಾಲ ಗತಿಸಿದ ಹಾಗೆ ಮಹಿಳೆಯು ಶಿಕ್ಷಣದಿಂದ ವಂಚಿತಳಾಗತೊಡಗಿದಳು. ಅವಳು ಕುಟುಂಬದ ಮನೆಗೆಲಸಕ್ಕೆ ಮಾತ್ರ ಸೀಮಿತವಾಗತೊಡಗಿದಳು. ಸಾಮಾಜಿಕ ಅನಿಷ್ಟವಾದ ಬಾಲ್ಯ ವಿವಾಹವು ಜಾರಿಗೆ ಬಂದಿತು. ವಿಧವಾ ಪುನರ್ ವಿವಾಹದಂತ ಪರಿಕಲ್ಪನೆಗಳು ಹೋಗಿ ಸತಿ ಸಹಗಮನದಂತಹ ಕ್ರೂರ ಆಚರಣೆಗಳು ಜಾರಿಗೆ ಬಂದವು. ಅವಳನ್ನು ಕೇವಲ ಭೋಗದ ವಸ್ತುವನ್ನಾಗಿ ಪುರುಷ ಸಮಾಜ ನೋಡತೊಡಗಿತು. ಅನಿವಾರ್ಯವಾಗಿ ಮಹಿಳೆ ಇದನ್ನೆಲ್ಲ ಸಹಿಸಲೇ ಬೇಕಾಯಿತು. ಹೀಗೆ ಸಹಿಸುತ್ತ ಹೋದಂತೆಲ್ಲ ಅವಳ ಮೇಲೆ ಮತ್ತಷ್ಟು ಸಂಪ್ರದಾಯಗಳ ಹೇರಿಕೆಯ ಒತ್ತಡ ಹೆಚ್ಚಾಗಿ ಅವಳು ಆ ಕಪಿಮುಷ್ಠಿಯಿಂದ ಹೊರಬರಲಿಕ್ಕೆ ಸಾಧ್ಯವೇ ಆಗಲಿಲ್ಲ ಮುಂದೆ 12ನೇ ಶತಮಾನದ ವಚನ ಸಾಹಿತ್ಯದ ಕಾಲಘಟ್ಟದಲ್ಲಿ ಮಹಿಳೆ ಬಿಗಿದಿಟ್ಟುಕೊಂಡ ಉಸಿರನ್ನು ಬಿಡುವಂತಾಗಿ ನಿರಾತಂಕವಾಗಿ ಉಸಿರಾಡತೊಡಗಿದಳು.

ಕ್ರಿ.ಶ. 12ನೇ ಶತಮಾನವನ್ನು ಮಹಿಳೆಯರ ಸ್ವಾತಂತ್ರ್ಯದ ಸುವರ್ಣಯುಗವೆಂದು ಹೇಳಬಹುದು. ಆಗಿನ ಕಾಲಘಟ್ಟದಲ್ಲಿ ಜರುಗಿದ ಸಾಮಾಜಿಕ ಕ್ರಾಂತಿಯಿಂದಾಗಿ ಬಾಲ್ಯವಿವಾಹ, ಸತಿಪದ್ಧತಿ, ಸ್ತ್ರೀ ಶೋಷಣೆ ಮತ್ತು ಲಿಂಗತಾರತಮ್ಯಗಳಂತ ಮುಂತಾದ ಅನಿಷ್ಟ ಪದ್ಧತಿಗಳು ನಿವಾರಣೆಗಳಾದವು. ಮಹಿಳೆಯ ಮುಖದಲ್ಲಿ ಹೊಸದೊಂದು ಆಶಾಕಿರಣವು ಕಂಗೊಳಿಸತೊಡಗಿತು ಇದಕ್ಕೆ ಸ್ವತಃ ಪುರುಷರೇ ಸಾಥ ಕೊಟ್ಟರು. ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ ಜಲಬಿಂದುವಿನ ವ್ಯವಹಾರ ಒಂದೇ, ಆಸೆಯಾಮಿಷರೋಷ ಹರುಷ ವಿಷಯಾದಿಗಳೆಲ್ಲ ಒಂದೇ. ಎಂಬ ಬಸವಣ್ಣನವರ ವಚನ ಹುಟ್ಟಿನ ಮೂಲ ಮತ್ತು ಹುಟ್ಟಿನ ಅನಂತರದ ಸಂವೇದನಾಶೀಲಗಳು ಎಲ್ಲ ಜೀವಿಗಳಲ್ಲಿರುವ ಸಮಾನತೆಯನ್ನು ತಿಳಿಸಿತು. ಲಿಂಗ ಬೇಧವೆಂಬುದು ತೋರಿಕೆಯ ಕಾರಣವೇ ಹೊರತು, ಮೂಲಭೂತವಾದದ್ದಲ್ಲ ಎಂದು ತಮ್ಮ ವಚನಗಳ ಮೂಲಕ ತೋರ್ಪಡಿಸಿದರು. ಜೇಡರ ದಾಸಿಮಯ್ಯನವರ ಎರಡು ವಚನಗಳಲ್ಲಿ ಇದನ್ನು ಕಾಣಬಹುದು.

**ಮೊಲೆ ಮುಡಿ ಬಂದರೆ ಹೆಣ್ಣೆಂಬರು**
**ಗಡ್ಡ ಮೀಸೆ ಬಂದರೆ ಗಂಡೆಂಬರು**
**ನಡುವೆ ಸುಳಿವಾತ್ಮನು**
**ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥಾ.**
**ಮಡದಿಯ ಪ್ರಾಣಕ್ಕೆ ಮೊಲೆ ಮುಡಿಯಿದ್ದಿತ್ತೆ?**
**ಒಡೆಯನ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ**



**ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಹಿಡಿಗೋಲ?**
**ನೀ ತೊಡಕಿಕ್ಕಿದ ತೊಡಕೀ ಲೋಕದ ಜಡರೆತ್ತು ಬಲ್ಲರೈ ರಾಮನಾಥಾ.**

ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ವೇದವೇದಿಸಲರಿಯದೇ ಕೆಟ್ಟವು, ಶಾಸ್ತ್ರ ಸಾಧಿಸಲರಿಯದೇ ಕೆಟ್ಟುವು ಎಂದು ಅಲ್ಲಮ ಪ್ರಭುದೇವರು ನಮ್ಮ ದೋಷವನ್ನು ಎತ್ತಿ ತೋರಿದರು. ನಮ್ಮ ಪೂರ್ವಜರು ತಮ್ಮನ್ನು ತಾವು ತಿಳಿಯದೇ ಕೆಟ್ಟರು ಅವರ ಬುದ್ಧಿ ವಿಚಾರಗಳು ಅವರನ್ನು ಇಲ್ಲದಂತೆ ಮಾಡಿದವು ಎಂದು ಹೇಳುತ್ತ ಮಹಿಳೆಗೆ ಹೆಚ್ಚಿನ ಸ್ಥಾನಮಾನವನ್ನು ನೀಡಿದರು. ಮಹಿಳೆಯನ್ನು ಮಾಯೆ ಎಂದು ಕರೆಯುವರು, ಅವಳು ಮಾಯೆಯಲ್ಲ ಮಾತೆ ಎಂದು ಹೇಳುತ್ತ ಮನದ ಮುಂದಿನ ಆಸೆಯೇ ಮಾಯೆ ಎಂದು ಈ ಕೆಳಗಿನ ವಚನದಲ್ಲಿ ಹೇಳುವರು.

**ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ**
**ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ**
**ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ**
**ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ!**

ಮಹಾದೇವಿ ಅಕ್ಕ ಅನುಭವ ಮಂಟಪಕ್ಕೆ ಬಂದಾಗ ಅವಳ ಪೂರ್ವಾಪರ ಎಲ್ಲವೂ ತಿಳಿದ ಅಲ್ಲಮ ಪ್ರಭುದೇವರು ಸಭಿಕರಿಗೆ ಅವಳ ಸತ್ಯಾಸತ್ಯ ತಿಳಿಸಲೋಸುಗ ಕೇಳುವ ಹಲವು ಪ್ರಶ್ನೆಗಳು, ಅದಕ್ಕೆ ತಕ್ಕ ಉತ್ತರಿಸುವ ಅಕ್ಕನ ಶೈಲಿಯಲ್ಲಿ ಪುರುಷ ಮತ್ತು ಸ್ತ್ರೀ ಸಮಾನತೆಯನ್ನು ಕಾಣಬಹುದು. ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾಶಸ್ತ್ಯವಿದ್ದು ಅವಳು ಸ್ವತಂತ್ರಳಾಗಿದ್ದಳು. ಪುರುಷನನ್ನು ಪ್ರಶ್ನೆ ಮಾಡುವಷ್ಟು ಸ್ವಾತಂತ್ರ್ಯ ಅವಳಿಗೆ ಅಲ್ಲಿ ಲಭಿಸಿತ್ತು. 'ಅಲ್ಲಿರುವ ಸಂಗಯ್ಯ ಇಲ್ಲಿಲ್ಲವೇ'– ಎಂದು ಗಂಗಾಂಬಿಕೆ ಬಸವಣ್ಣನವರಿಗೆ ಕೇಳುವ ಪ್ರಶ್ನೆಯಲ್ಲಿ ಅವಳ ಸ್ವಾತಂತ್ರ್ಯ ವಿಧಿತವಾಗುತ್ತದೆ. 'ಈಸಕ್ಕಿ ಆಸೆ ನಮಗೇಕೆ'– ಎಂಬ ವಚನದಿಂದ ಆಯ್ದಕ್ಕಿ ಲಕ್ಕಮ್ಮನಲ್ಲಿರುವ ಸ್ವತಂತ್ರ ವಿಚಾರಧಾರೆ ಮತ್ತು ಗಂಡನನ್ನು ಪ್ರಶ್ನಿಸುವ ಹಾಗೂ ಅವನು ಮಾಡಿದ ಕೆಲಸವನ್ನು ಅಲ್ಲಗಳೆಯುವ ವಚನದಿಂದ ವಚನಕಾಲದಲ್ಲಿ ಮಹಿಳೆಗೆ ಸಂಪೂರ್ಣ ಸ್ವಾತಂತ್ರ್ಯವಿತ್ತೆಂದು ತಿಳಿದು ಬರುತ್ತದೆ. 'ಕೂಟಕ್ಕೆ ಸತಿ ಪತಿಯೆಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡ ಉಂಟೆ?' ಎಂಬ ವಚನದಲ್ಲಿ ಸ್ತ್ರೀ ಪುರುಷರ ಕೂಡುವಿಕೆಯಿಂದ ಸಂತಾನ ಅಭಿವೃದ್ಧಿಯಾಗುವುದು ಇದಕ್ಕಾಗಿಯೆ ಗಂಡು ಮತ್ತು ಹೆಣ್ಣುಗಳ ನಡುವೆ ದೈಹಿಕ ವ್ಯತ್ಯಾಸವಿದೆ ಆದರೆ ಇವರಿಬ್ಬರಲ್ಲಿರುವ ಅರಿವು ಒಂದೇ ಎಂದು ಹೇಳುವಲ್ಲಿ ಪುರುಷ ಮತ್ತು ಸ್ತ್ರೀಯರಲ್ಲಿ ಬುದ್ಧಿ-ಭಾವ ಒಂದೇ ಇದ್ದು, ದೈಹಿಕ ಆಕಾರಗಳು ಮಾತ್ರ ಬದಲು ಎಂದು ಹೇಳುವಲ್ಲಿ ಸಮಾನತೆಯನ್ನು ಸಾರುವಳು.



ಜೇಡರ ದಾಸಿಮಯ್ಯರು ತಮ್ಮೊಂದು ವಚನದಲ್ಲಿ 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ'–ಎಂದು ಹೇಳುವಲ್ಲಿ ಸತಿ–ಪತಿಗಳಿಬ್ಬರು ಒಂದೇ ಎಂದು ಹೇಳುತ್ತ ಇವರಲ್ಲಿ ಯಾರೂ ಮೇಲಲ್ಲ ಮತ್ತು ಕೀಳಲ್ಲ ಎಂಬುದನ್ನು ಹಿತವಾಗಿಪ್ಪುದು ಶಿವಂಗೆ ಎನ್ನುವಲ್ಲಿ ತೋರಿಸಿ ಕೊಟ್ಟಿದ್ದಾರೆ. ಬಸವಣ್ಣನವರ 'ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ'–ವಚನದಲ್ಲಿ ಪರಸ್ತ್ರೀಯರ ಬಗ್ಗೆ ಪುರುಷರಲ್ಲಿ ಗೌರವಾಭಿಮಾನಗಳು ಇರಬೇಕೆಂದು ತಿಳಿಸುತ್ತದೆ. ಬಸವಣನಾದಿಯಾಗಿ ಎಲ್ಲ ವಚನಕಾರರು ಮಹಿಳೆಯನ್ನು ಬಹಳ ಗೌರವದಿಂದ ಕಂಡಿರುವುದು ಅವರ ವಚನಗಳಿಂದ ತಿಳಿಯುವುದು.

ಪುರಷ ಮತ್ತು ಮಹಿಳೆಯ ಭೇದವು ದೈವಿಕವಾಗಿದೆ ಆದರೆ ಮೂಲದಲ್ಲಿ ಆ ವ್ಯತ್ಯಾಸವಿಲ್ಲ ಎಂಬುದನ್ನು ಅಂಬಿಗರ ಚೌಡಯ್ಯನ ಈ ವಚನದ ಸಾಲಿನ ಮೂಲಕ ಸೂಕ್ಷ್ಮವಾಗಿ ಗಮನಿಸಬಹುದು.

**ಶುಕ್ಲ ಶೋಣಿತ ಪಿಂಡದಲ್ಲಿಯೇ ಉತ್ಪತ್ತಿ**
**ಚಿತ್ತವಾಯು ಪ್ರಾಣ ಅಷ್ಟದಳ ಪದ್ಮದಲ್ಲಿಹುದು**
**ಮೊಲೆ ಮುಡಿ ಮೂಡಿದರೆ ಹೆಣ್ಣೆಂಬರು**
**ಗಡ್ಡ ಮೀಸೆಯಾಗಲು ಗಂಡೆಂಬರು**
**ನಡುವೆ ಸುಳಿವಾತ್ಮನು ಹೆಣ್ಣಲ್ಲ, ಗಂಡಲ್ಲ**
**ಇದರಂಘವ ತಿಳಿಯಲ್ಕೆ**
**ಶ್ರುತಿಗೆ ಗೋಚರವೆಂದಾತನಂಬಿಗರ ಚೌಡಯ್ಯ**

ವಚನಕಾರ ಜೇಡರ ದಾಸಿಮಯ್ಯರ ಹಾಗೆ ಅಂಬಿಗರ ಚೌಡಯ್ಯನು ಸಹ ನಡುವೆ ಇರುವ ಆತ್ಮಕ್ಕೆ ಗಂಡು ಮತ್ತು ಹೆಣ್ಣು ಎಂಬ ಯಾವುದೇ ಭೇದ ಭಾವವಿಲ್ಲವೆಂದು ಹೇಳುತ್ತ ಸಮಾನತೆಯನ್ನು ಸಾರುತ್ತಾನೆ. ವಚನಗಾರ್ತಿ ಅಕ್ಕಮಹಾದೇವಿಯಂತೂ 'ಶರಣಸತಿ ಲಿಂಗಪತಿ'– ಎಂಬ ಒಂದು ಹೊಸ ಪರಿಕಲ್ಪನೆಯನ್ನೇ ಕಟ್ಟಿ ಕೊಡುವಳು.

**ಹೆಣ್ಣು ಹೆಣ್ಣಾದೊಡೆ ಗಂಡಿಗೆ ಸೂತಕ**
**ಗಂಡು ಗಂಡಾದೊಡೆ ಹೆಣ್ಣಿನ ಸೂತಕ**
**ಮನದ ಸೂತಕ ಹಿಂಗಿದೊಡೆ**
**ತನುವಿನ ಸೂತಕಕ್ಕೆ ನೆರೆಹುಂಟೇ ಅಯ್ಯಾ?**
**ಮೊದಲಿಲ್ಲದ ಸೂತಕಕ್ಕೆ ಮರುಳಾಯಿತು ಜಗವೆಲ್ಲ**



**ಎನ್ನದೇವ ಚೆನ್ನ ಮಲ್ಲಿಕಾರ್ಜುನನೆಂಬ**
**ಗುರುವಂಗೆ ಜಗವೆಲ್ಲಾ ಹೆಣ್ಣು ನೋಡಾ!**

ಎಂಬ ವಚನದಲ್ಲಿ ಚೆನ್ನಮಲ್ಲಿಕಾರ್ಜುನನೆಂಬ ದೇವನ ಮುಂದೆ ಪ್ರಪಂಚದಲ್ಲಿರುವ ಪುರುಷ–ಸ್ತ್ರೀಯರೆಲ್ಲಾ ಹೆಣ್ಣು ನೋಡಾ ಎನ್ನುವಲ್ಲಿ ಅವಳ ದೃಷ್ಟಿಯಲ್ಲಿ ಹೆಣ್ಣು ಮತ್ತು ಗಂಡು ಎಂಬ ಪರಿಕಲ್ಪನೆಯೇ ಇಲ್ಲವೆಂದೆನಿಸುತ್ತಿದೆ. ಅವಳ ಇನ್ನೊಂದು ವಚನದ ಸಾಲುಗಳಲ್ಲಿ–

**ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ**
**ಕಾಡಿತ್ತು ನೋಡಾ! ಸ್ತ್ರೀಯ ಮುಂದೆ ಮಾಯೆ**
**ಪುರುಷನೆಂಬ ಅಭಿಮಾನವಾಗಿ ಕಾಡಿತ್ತು ನೋಡಾ!**

ಎಂಬ ವಚನದಲ್ಲಿ ಗಂಡಿನ ಮುಂದೆ ಮಾಯೆಯಾಗಿ ಸ್ತ್ರೀಯು, ಸ್ತ್ರೀಯ ಮುಂದೆ ಗಂಡು ಮಾಯೆಯಾಗಿ ಕಾಣುವನು ನೋಡು ಎಂಬಲ್ಲಿ ಇಬ್ಬರಲ್ಲಿಯೂ ಮೇಲ್ನೋಟಕ್ಕೆ ಬೇರೆಯಾಗಿ ಕಂಡರೂ ಅಂತರ್ಯದಲ್ಲಿ ಇಬ್ಬರೂ ಒಂದೇ ಎಂಬ ಭಾವ ಅಕ್ಕನ ಈ ವಚನದಲ್ಲಿ ಕಾಣಬಹುದು.

ಹೀಗೆ ವಚನಕಾರರು ಅಂದು 12ನೇ ಶತಮಾನದಲ್ಲಿ ಗಂಡು ಮತ್ತು ಹೆಣ್ಣು ಎಂಬ ಭೇದವನ್ನು ಹೋಗಲಾಡಿಸಲು ಶ್ರಮಿಸಿದರ ಫಲವಾಗಿ ಇಂದು 21ನೇ ಶತಮಾನದಲ್ಲಿ ಅದರ ಫಲಶ್ರುತಿಯನ್ನು ಕಚ್ಚಿತ್ತಾದರೂ ಕಾಣಬಹುದಾಗಿದೆ. ಅಂದು ವಚನಕಾರರು ಮಹಿಳೆಗೆ ಕೊಟ್ಟ ಪ್ರಾಶಸ್ತ್ಯದಿಂದ ಹಲವಾರು ವಚನಗಾರ್ತಿಯರು ತಮ್ಮ ಆಧ್ಯಾತ್ಮಿಕ ನೆಲೆಗಟ್ಟಿನ ಮೇಲೆ ಸಾಮಾಜಿಕ ಸಮಾನತೆಯ ಚಿಂತನ–ಮಂಥನಗಳನ್ನು ಅನುಭವ ಮಂಟಪದಲ್ಲಿ ಚರ್ಚಿಸುವಂತೆಯಾಯಿತು. 12ನೇ ಶತಮಾನದಲ್ಲಿ ವಚನಗಾರ್ತಿಯರ ಒಂದು ದಂಡೇ ಹೊರಹೊಮ್ಮಿತು ಎನ್ನಬಹುದು. ಇದಕ್ಕೆಲ್ಲ ವಚನ ಸಾಹಿತ್ಯದ ಪ್ರಭಾವಳಿಯೇ ಮೂಲ ಕಾರಣ

ಅಕ್ಕಮಹಾದೇವಿ, ಗಂಗಾಂಬಿಕೆ, ನೀಲಾಂಬಿಕೆ, ಅಕ್ಕ ನಾಗಮ್ಮ, ಮುಕ್ತಾಯಕ್ಕ, ದುಗ್ಗಳೆ, ಗೊಗ್ಗವ್ವೆ, ಕದಿರರೆಮ್ಮವ್ವೆ, ಕೇತಲದೇವಿ, ಶರಣೆ ಕಾಳವ್ವೆ, ಶರಣೆ ಚೆನ್ನಮ್ಮ, ಶರಣೆ ಬೊಂತಾದೇವಿ, ಶರಣೆ ರೇಚವ್ವೆ, ಮೋಳಿಗೆಯ ಮಹಾದೇವಿ, ಲಿಂಗಮ್ಮ, ವೀರಮ್ಮ, ಸತ್ಯಕ್ಕ, ಲಕ್ಷ್ಮಮ್ಮ, ಸುಗ್ಗಲಾದೇವಿ, ಸಂಕವ್ವೆ, ಆಯ್ದಕ್ಕಿ ಲಕ್ಕಮ್ಮ, ಅಮುಗೆ ರಾಯಮ್ಮ, ಕಾಲಕಣ್ಣಿಯ ಕಾಮಮ್ಮ ಮತ್ತು ಕೊಟ್ಟಣದ ಸೋಮವ್ವರಂತಹ ಮುಂತಾದ ವಚನಗಾರ್ತಿಯರು ವಚನ ಸಾಹಿತ್ಯ ಕಾಲದಲ್ಲಿ ಹೊರಹೊಮ್ಮಿದರು.

**ಪರಾಮರ್ಶನ ಗ್ರಂಥಗಳು:**


1. ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ – ಸ್ವಾಮಿ ಯತೀಶ್ವರಾನಂದ
2. ಬಸವ ವಚನಾಮೃತ ಭಾಗ–2– ಡಾ. ಎಲ್. ಬಸವರಾಜು
3. ವಚನ ಸಂಸ್ಕೃತಿ ಡಾ. ಎನ್.ಆರ್.ಚಂದ್ರೇಗೌಡ
4. ಶರಣರ ಅನುಭಾವ ಸಾಹಿತ್ಯ–ಎಚ್.ತಿಪ್ಪೇರುದ್ರಸ್ವಾಮಿ
5. ವಚನ ಸಾಹಿತ್ಯ – ಎಂ. ಚಿದಾನಂದಮೂರ್ತಿ


◆◇

ಸಹಾಯಕ ಪ್ರಾಧ್ಯಾಪಕ, ಜಿಪಿಪಿ ಹಾಗೂ ಬ್ರಿಪ್ಲಿಎಸ್ ಮಹಾವಿದ್ಯಾಲಯ, ಸಿಂದಗಿ

ಸಿಂದಗಿ ತಾಲ್ಲೂಕಿನ ಸ್ಥಳನಾಮಗಳ ವಿವೇಚನೆ



ಡಾ. ನಾಗರಾಜ ಮುರಗೋಡ ಅವರು ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ಹೊಂದಿರುವ ಕ್ರಿಯಾಶೀಲ ವ್ಯಕ್ತಿ. ನವ ವಸಾಹತುಶಾಹಿಯು ವಿಜೃಂಭಿಸುತ್ತಿರುವ ಈ ಕಾಲದಲ್ಲಿ ನಗರ / ಪಟ್ಟಣಗಳನ್ನು ಸುಂದರಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಡಾ. ಮುರಗೋಡ ಅವರು ಸಿಂದಗಿ ತಾಲ್ಲೂಕಿನ ಗ್ರಾಮನಾಮಗಳ ಕುರಿತು ಇಲ್ಲಿ ಅಧ್ಯಯನ ಮಾಡಿದ್ದಾರೆ. ಪ್ರತಿಯೊಂದು ಗ್ರಾಮವೂ ಸಾವಿರಾರು ವರ್ಷಗಳ ಇತಿಹಾಸ ಹೊಂದಿದ್ದು, ತನ್ನದೇ ಆದ ಪ್ರಾದೇಶಿಕ ಸಂಸ್ಕೃತಿಯನ್ನು ಹೊಂದಿದೆ. ಈ ದೃಷ್ಟಿಯಿಂದ ಗ್ರಾಮ ನಾಮಗಳ ಅಧ್ಯಯನ ಸುಲಭವಾದದ್ದಲ್ಲ. ಈ ಗ್ರಾಮನಾಮಗಳ ಜೊತೆ ಇತಿಹಾಸ, ಪುರಾಣ, ಧರ್ಮ, ರಾಜಕೀಯ, ಸಾಮಾಜಿಕ ಅಂಶಗಳು ತಳಕು ಹಾಕಿಕೊಂಡಿವೆ. ಗ್ರಾಮಗಳಲ್ಲಿ ಹಲವು ಜಾತಿ, ಮತ, ಪಂಥಗಳ ಜನ ಒಟ್ಟಿಗೆ ಬದುಕುತ್ತಿದ್ದಾರೆ. ಇಲ್ಲಿ ಡಾ. ಮುರಗೋಡ ಅವರು ಜಾತಿ, ಮತ–ಧರ್ಮಗಳ ಪ್ರಲೋಭನೆಗೆ ಒಳಗಾಗದೇ ಎಲ್ಲವನ್ನು ಸಮತೂಕದಿಂದ ಗ್ರಹಿಸುವ, ಸಮಾನತಾ ಭಾವದೊಂದಿಗೆ ಸ್ವೀಕರಿಸುವ ದೃಷ್ಟಿ ಈ ಸಂಶೋಧನೆಯಲ್ಲಿ ಎದ್ದು ಕಾಣುತ್ತದೆ. ಸಿಂದಗಿ ತಾಲ್ಲೂಕಿನ ಸಂಸ್ಕೃತಿಯ ಪುನರ್ರಚನೆಗೆ ಈ ಕೃತಿ ಆಕರ

**ಡಾ. ಕೆ. ಆರ್. ದುರ್ಗಾದಾಸ್**
ವಿಶ್ರಾಂತ ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಅಪ್ಪ ಪುಸ್ತಕ ಪ್ರಕಾಶನ
ಬೆಳಗಾವಿ

ISBN : 978-81-949726-0-0



# SINDAGI TALUKIN STHALANAMAMAGALA VIVECHANE

*(Research Book on Village Names)*

Author's : Dr. Nagaraj D. Murgod
Published by : Avva Pustaka Prakashan, Belagavi
First Impression : 2021
Copies : 1000
Pages : XII+74=86
Price : Rs. 110/-
Paper Used : 70 GSM
Copy Right : Publisher's
Cover Design : Nagaraj Nandaragi, Hubballi-31.
DTP : Ravi Kammar
Printers : B G Printers, Dharwad
ISBN : 978-81-949726-0-0

## ಸಿಂದಗಿ ತಾಲ್ಲೂಕಿನ ಸ್ಥಳನಾಮಗಳ ವಿವೇಚನೆ :

(ಗ್ರಾಮ ನಾಮಗಳ ಸಂಶೋಧನಾ ಕೃತಿ)

ಲೇಖಕರು : ಡಾ. ನಾಗರಾಜ ಡಿ. ಮುರಗೋಡ
ಪ್ರಕಾಶಕರು : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ
ಪುಟಗಳು : XII+74=86
ಪ್ರಥಮ ಮುದ್ರಣ : ೨೦೨೧
© : ಪ್ರಕಾಶಕರು
ಬೆಲೆ : ರೂ. ೧೧೦/-
ಅಕ್ಷರ ಸಂಯೋಜನೆ : ರವಿ ಕಮ್ಮಾರ
ಮುಖಪುಟ : ನಾಗರಾಜ ನಂದರಗಿ, ಹುಬ್ಬಳ್ಳಿ-೩೧
ಮುದ್ರಕರು : ಬಿ. ಜಿ. ಪ್ರಿಂಟರ್ಸ್, ಧಾರವಾಡ
ISBN : 978-81-949726-0-0




## ಅರ್ಪಣೆ....

ಪೂಜ್ಯ ಶ್ರೀ ಡಾ. ಚನ್ನವೀರ ಮಹಾಸ್ವಾಮಿಗಳು
[illegible]
[illegible]
[illegible]
ಶ್ರೀ [illegible]
[illegible]
[illegible]
[illegible]
ಈ ಕೃತಿ ಸಮರ್ಪಿತ



## ಪರಿವಿಡಿ

**


೧. ಪ್ರವೇಶ ... ೧
೨. ಸಿಂದಗಿ ತಾಲ್ಲೂಕಿನ ಸಾಂಸ್ಕೃತಿಕ ಪಕ್ಷಿನೋಟ ... ೩
೩. ಸ್ಥಳನಾಮ ಅಧ್ಯಯನ ಬೆಳೆದು ಬಂದ ಬಗೆ ... ೧೨
೪. ಸಿಂದಗಿ ತಾಲ್ಲೂಕಿನ ಸ್ಥಳನಾಮಗಳ ವಿಶ್ಲೇಷಣೆ ... ೧೬
೫. ಸಿಂದಗಿ ತಾಲ್ಲೂಕಿನ ಗ್ರಾಮ ನಾಮಗಳ ವಿವೇಚನೆ ... ೨೬
೬. ಸಮಾರೋಪ ... ೭೧


***



ಡಾ.ನಾಗರಾಜ ಮುರಗೋಡರವರು ಅವ್ವ ಪುಸ್ತಕ ಪ್ರಕಾಶನದ ಕ್ರಿಯಾಶೀಲ ಒಡನಾಡಿಗಳು. ತಮ್ಮ ರಚನಾತ್ಮಕ ಚಟುವಟಿಕೆಗಳಿಂದ ವಿಶೇಷವಾಗಿ ಗುರುತಿಸಿಕೊಂಡವರು. ನಿರಂತರ ಅಧ್ಯಯನ ಮತ್ತು ಅಧ್ಯಾಪನದ ಜೊತೆಗೆ ಇತರ ಸೇವಾಕಾರ್ಯಗಳಲ್ಲಿಯೂ ಸದಾ ತಮ್ಮನ್ನು ತೊಡಗಿಸಿಕೊಂಡಿರುವವರು.

ಇಲ್ಲಿರುವ ಸಂಶೋಧನಾ ಪ್ರಬಂಧಗಳ ಸಂಪಾದನಾ ಕಾರ್ಯದ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಅವರಿಗೆ ಸೂಚಿಸಿದಾಗ ಪ್ರೀತಿಪೂರ್ವಕವಾಗಿ ಒಪ್ಪಿಕೊಂಡು ಕೆಲವೇ ದಿನಗಳಲ್ಲಿ ಪೂರ್ಣಗೊಳಿಸಿದ್ದರ ಪ್ರತಿಫಲವಿದು.

ನಮ್ಮ ಸಂಸ್ಥೆಯ ದಶಮಾನೋತ್ಸವದ ಸವಿನೆನಪಿಗಾಗಿ ಹಮ್ಮಿಕೊಂಡಿರುವ 'ಅವ್ವ ಪುಸ್ತಕ ಪ್ರಕಾಶನ'ದ ದಶಮಾನೋತ್ಸವದ ಸಂಸ್ಮರಣಿಕೆಯ ಸಂಶೋಧನಾ ಪ್ರಬಂಧಗಳ ಪ್ರಕಟಣಾ ಮಾಲೆಯ ಐದನೆಯ ಕೃತಿ ಇದು.

ನಾಡಿನ ಓದುಗರು, ಸಾಹಿತ್ಯಾಸಕ್ತರು ಮತ್ತು ಸಂಶೋಧಕರು ಇಲ್ಲಿರುವ ಪ್ರಬಂಧಗಳನ್ನು ಓದಿ ನಮ್ಮ ಯುವ ಸಂಶೋಧಕರನ್ನು ಪ್ರೋತ್ಸಾಹಿಸಲಿ ಎಂದು ಆಶಿಸುತ್ತೇನೆ.

– ಪ್ರಕಾಶಕರು

ಅವ್ವ ಪುಸ್ತಕ ಪ್ರಕಾಶನ
ಬೆಳಗಾವಿ

ISBN : 978-81-950975-8-6




## VACHANA SAHITYA MATTU ANUBHAV

*A collection of Articles by various scholars*


| | |
|---|---|
| Editor's Name | : Dr. Nagaraj D. Murgod |
| Published by | : Avva Pustaka Prakashan, Belagavi |
| First Impression | : 2021 |
| Copies | : 1000 |
| Pages | : VIII+106 |
| Price | : Rs. 150/- |
| Paper Used | : 70 GSM |
| Copy Right | : Publisher's |
| Cover Design | : Nagaraj Nandaragi, Hubballi-31. |
| DTP | : Ravi Kammar |
| Printers | : B G Printers, Dharwad |
| ISBN | : 978-81-950975-8-6 |


## ವಚನ ಸಾಹಿತ್ಯ ಮತ್ತು ಅನುಭಾವ :

ಸಂಶೋಧನ ಪ್ರಬಂಧಗಳ ಸಂಕಲನ

(ಈ ಪುಸ್ತಕದಲ್ಲಿರುವ ಲೇಖನಗಳ ವಿಷಯ ಲೇಖಕರ ವಿವೇಚನೆಗಳಿಂದ ಹೊರಬಂದವುಗಳು. ಇದಕ್ಕೆ ಸಂಪಾದಕರಾಗಲಿ ಹಾಗೂ ಪ್ರಕಾಶಕರಾಗಲಿ ಜವಾಬ್ದಾರರಲ್ಲ.)


| | |
|---|---|
| ಸಂಪಾದಕರು | : ಡಾ. ನಾಗರಾಜ ಡಿ. ಮುರಗೋಡ |
| ಪ್ರಕಾಶಕರು | : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಪುಟಗಳು | : VIII + 106 |
| ಪ್ರಥಮ ಮುದ್ರಣ | : ೨೦೨೧ |
| © | : ಪ್ರಕಾಶಕರು |
| ಬೆಲೆ | : ರೂ. ೧೫೦/- |
| ಅಕ್ಷರ ಸಂಯೋಜನೆ | : ರವಿ ಕಮ್ಮಾರ |
| ಮುಖಪುಟ | : ನಾಗರಾಜ ನಂದರಗಿ, ಹುಬ್ಬಳ್ಳಿ-೩೧ |
| ಮುದ್ರಕರು | : ಬಿ. ಜಿ. ಪ್ರಿಂಟರ್ಸ್, ಧಾರವಾಡ |
| ISBN | : 978-81-950975-8-6 |

# ವಚನ ಸಾಹಿತ್ಯದಲ್ಲಿ ಅನುಭಾವ

– ಡಾ. ನಾಗರಾಜ ಡಿ. ಮುರಗೋಡ

**ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ತನು ಹಾಳಾಯಿತ್ತಯ್ಯಾ**
**ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯಾ**
**ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಕರ್ಮ ಛೇದನವಾಯಿತ್ತಯ್ಯಾ**
**ನಿಮ್ಮವರು ಅಡಿಗಡಿಗೆ ಹೇಳಿ ಭಕ್ತಿಯೆಂಬ ಒಡವೆಯನು**
**ದಿಟವ ಮಾಡಿ ತೋರಿದರು ಕಾಣಾ, ಕೂಡಲ ಸಂಗಮದೇವಾ**

ಕರ್ನಾಟಕದ ಚರಿತ್ರೆಯಲ್ಲಿ ವಿಜಯಪುರ ಜಿಲ್ಲೆಗೆ ವಿಶಿಷ್ಟವಾದ ಧಾರ್ಮಿಕ, ಸಾಹಿತ್ಯಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಮಹತ್ವವಿದೆ. ಜಿಲ್ಲೆಯಲ್ಲಿ ಜೀವನದಿಯಾಗಿ ಹರಿಯುತ್ತಿರುವ ಕೃಷ್ಣಾ, ಭೀಮಾ ಮತ್ತು ಡೋಣಿ ನದಿಗಳ ಅನುಪಾತಿನಲ್ಲಿ ಅನೇಕ ಜನಪದ ಸಮುದಾಯಗಳ ಸಂಸ್ಕೃತಿಗಳು ನೆಲೆಕಂಡಿವೆ. ಮೌರ್ಯ, ಶಾತವಾಹನ, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಬಹುಮನಿಗಳು, ಆದಿಲ್‌ಶಾಹಿಗಳು ಮತ್ತು ಇತರ ಸಂಸ್ಥಾನಿಕರು ಬೇರೆ ಬೇರೆ ಕಾಲಘಟ್ಟಗಳಲ್ಲಿ ಜಿಲ್ಲೆಯನ್ನು ಆಳಿದ್ದಾರೆ. ದೇವಾಲಯಗಳು, ಮಠ-ಮಾನ್ಯಗಳು, ದರ್ಗಾಗಳು ಮತ್ತು ಘಟಕಾಸ್ಥಾನಗಳು ಇಲ್ಲಿನ ವಿವಿಧ ಧಾರ್ಮಿಕ ಕೇಂದ್ರಗಳಾಗಿವೆ. ಇಲ್ಲಿನ ಅನುಭಾವಿಗಳು ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಈ ಜಿಲ್ಲೆಯ ಸಾಂಸ್ಕೃತಿಕ ಮಹತ್ವವನ್ನು ತಿಳಿಯುವಲ್ಲಿ ಅವಶ್ಯವಾಗಿ ಗಮನಿಸಬೇಕಾದ ಅಂಶಗಳಲ್ಲಿ ಅನುಭಾವ ಸಾಹಿತ್ಯ ಪರಂಪರೆಯೂ ಸಹ ಒಂದಾಗಿದೆ.

'ಅನುಭಾವ' ಎಂಬುದೊಂದು ಲೌಕಿಕ ಜ್ಞಾನವಾಗಿದ್ದು, ಆಧ್ಯಾತ್ಮಿಕ ಪ್ರಪಂಚವನ್ನು ಬೆಳಗುವ ನಕ್ಷತ್ರವಾಗಿದೆ. ೧೨ನೆಯ ಶತಮಾನದ ಶರಣರು ನೀಡುವ ಅನುಭಾವದ ಅರ್ಥಪರಿಕಲ್ಪನೆ ತುಂಬ ಭಿನ್ನವೂ ಮತ್ತು ವಿಶಿಷ್ಟವೂ ಆಗಿದೆ. ಶರಣರು 'ಅನುಭಾವವೆಂಬುದನ್ನು ಅಂತರಂಗದ ರತ್ನ', 'ಆತ್ಮವಿದ್ಯೆ' ಮತ್ತು 'ಆತ್ಮದೊಂದಿಗೆ ಅನುಸಂಧಾನಗೊಳಿಸುವುದು' ಎಂಬ ಮೊದಲಾದ ನುಡಿಗಳ ಮೂಲಕ ಅರ್ಥ ಕಲ್ಪಿಸಿದ್ದಾರೆ.



ಶರಣರು 'ಅನುಭಾವ'ವನ್ನು 'ಭಕ್ತಿ'ಯೊಂದಿಗೆ ಸಂಯೋಗಗೊಳಿಸಿದ್ದಾರೆ. ಸಾಧಕರು ಪರಮಾತ್ಮನನ್ನು ಕೂಡಲು ಮತ್ತು ಅವನ ಪ್ರೇಮದ ಒಲುಮೆಯನ್ನು ಪಡೆಯುವುದಕ್ಕೆ ಅನುಭಾವವನ್ನು ಸಾಧನವಾಗಿಸಿಕೊಂಡರು. ಆದ್ಯವಚನಕಾರ ಜೇಡರ ದಾಸಿಮಯ್ಯನು "ಅನುಭಾವ ಭಕ್ತಿಗಾಧಾರ, ಅನುಭಾವ ಭಕ್ತಿಗೆ ನೆಲವನೆ" ಎಂದು ಹೇಳಿದ್ದರೆ; ಜ್ಞಾನನಿಧಿ ಚೆನ್ನಬಸವಣ್ಣನು 'ಮನದ ಮೈಲಿಗೆಯ ತೊಳೆಯಬೇಕಾದರೆ ಕೂಡಲ ಸಂಗಯ್ಯನ ಶರಣರ ಅನುಭಾವವ ಮಾಡುವುದು' ಎಂದು ಹೇಳಿರುವರು. ಶರಣ ಸಿದ್ಧರಾಮನು ಸಹ ಇದೇ ಹಾದಿಯಲ್ಲಿ ಆಲೋಚನೆ ಮಾಡಿರುವನು. ಆತನು ತನ್ನ ವಚನವೊಂದರಲ್ಲಿ "ಶರಣರು ಮಹಾನುಭಾವ ಗೋಷ್ಠಿಯ ಮಾಡುವಲ್ಲಿ ಸಂಗದೊಳಿರ್ದಡೆ ಅಜ್ಞಾನವಳಿದು ನಿಜವನ್ನರಿದುವರಯ್ಯಾ. ನಿಮ್ಮ ಮಹಾನುಭಾವದ ಸೋಂಕಿನ ಸೆರಗಿನೊಳಗಿರ್ದು ನಾನು ಪರಮಸುಖಿಯಾಗಿರ್ದೆ" ನೆಂದು ಹೇಳುತ್ತಾರೆ. ಭಕ್ತನನ್ನು ಅರಿಷಡ್ವರ್ಗಗಳ ಬಾಧೆಗೆ ಒಳಗಾಗದಂತೆ ಅನುಭಾವವು ರಕ್ಷಿಸುತ್ತದೆ. ಇದಕ್ಕೆ ಸಾಕ್ಷಿಯಾಗಿ ಮನವೆಂಬ ಸಖಿಯ ಪ್ರಸಾದದಿಂದ ಅನುಭಾವವ ಕಲಿತೆನೆಂದು ಅಕ್ಕಮಹಾದೇವಿಯು, ಹುಟ್ಟಿದ ನೆಲೆಯ ಕೃಷಿ ಬಿಡದವಂಗೆ ಲಿಂಗದ ಅನುಭಾವವೇಕೋ ಎಂಬುದಾಗಿ ಪ್ರಭುದೇವರು, ನಿಮ್ಮ ಅನುಭಾವದಿಂದ ಎನ್ನ ತನು ಹಾಳಾಯಿತ್ತಯ್ಯಾ; ಅನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯಾ; ಅನುಭಾವದಿಂದ ಎನ್ನ ಕರ್ಮ ಛೇದನವಾಯಿತ್ತಯ್ಯಾ ಎಂದು ಬಸವಣ್ಣನವರು ನುಡಿಯುತ್ತ ತಾವು ಶರಣರು ಭಕ್ತಿಯೆಂಬ ಒಡವೆಯಾದೆನೆನ್ನುವರು. ಈ ಮಾತುಗಳಿಂದ ಶರಣರು ಅನುಭಾವವನ್ನು ಜೀವನದ ವಿಧಾನ ಮತ್ತು ಪರಂಪರೆಯಾಗಿಸಿಕೊಂಡು ಬಂದರೆಂಬುದನ್ನು ಸಾಕ್ಷೀಕರಿಸುತ್ತದೆ.

ಅನುಭಾವ ಎಂದರೆ ಇಂದ್ರಿಯ ಮತ್ತು ದೇಹಗಳಿಗೆ ಮೀರಿದುದನ್ನು ಕಾಣುವ ಹಂಬಲ. ಯಾವಾಗ ನಮ್ಮ ವಿವೇಕ ವಿರಮಿಸಿ, ಅರಿವು ಸಹಿತವಾಗಿ ಭಕ್ತಿ ವಿಕಸಿತವಾಗುವುದೋ ಅದು ಅನುಭಾವ. ಸಾವಿರ ಸಾವಿರ ದುಃಖಗಳಿದ್ದರೂ ಬದುಕಿನಾಚೆಗೆ ತುಡಿಯುವುದೇ ಅನುಭಾವ. ಲೌಕಿಕದಲ್ಲಿದ್ದೂ ಅಲೌಕಿಕಕ್ಕೆ ತುಡಿಯುವುದೇ ಅನುಭಾವ. ಮೋಡದ ಮಳೆಯ ನೀರು ಶುದ್ಧ, ಪರಿಶುದ್ಧ, ಆದು ಭೂಮಿಯ ಸ್ಪರ್ಶವನ್ನು ಪಡೆಯುತ್ತಿದ್ದಂತೆ ಮಲೀನವಾಗುತ್ತ ಹೋಗುತ್ತದೆ ಹಾಗೆ ಮನುಷ್ಯನಲ್ಲಿರುವ ಜೀವ, ಚೇತನ ಮತ್ತು ಆತ್ಮವು ಶುದ್ಧ ಪೂರ್ಣ ಆದರೆ ಈ ಶುದ್ಧಪೂರ್ಣದಿಂದ ಕೂಡಿದ ಮನುಷ್ಯನು ದೇಹವಿಡಿದು ದುಃಖದಲ್ಲಿ ಮುಳುಗುತ್ತಾನೆ. ಈ ದುಃಖ ಮತ್ತು ಕಣ್ಣೀರು ಮನುಷ್ಯನಿಗೆ ಎಲ್ಲಿಂದ ಬಂದವು? ಹುಟ್ಟು ಮತ್ತು ಸಾವು ಮನುಷ್ಯನನ್ನು ಸುಖ ದುಃಖದಲ್ಲಿ ಮುಳುಗಿಸುತ್ತದೆ. ಬದುಕು ಒಂದು ಕ್ಷಣ ಮಾತ್ರ ಚಂದ. ಅದಕ್ಕಾಗಿ ಇಲ್ಲಿ ಒಳ್ಳೆಯದು ಕೆಟ್ಟದ್ದು ಎರಡರ ನಡುವೆ ಶಕ್ತಿಯಂಚಿನ ಅಲಗಿನ



ದಾರಿಯಲ್ಲಿ ವಿವೇಕದಿಂದ ಜೀವನವನ್ನು ಸುಂದರ ಮಾಡಿಕೊಂಡು ಬದುಕುವುದೇ ಅನುಭಾವ. ಅನುಭಾವವು ಆಧ್ಯಾತ್ಮಿಕ ಜೀವನ ಮತ್ತು ಸಾಧನೆಯ ಅಮೃತ ಫಲವಾಗಿದೆ. ಅನುಭಾವವು ಇಂದ್ರಿಯ ಗಮ್ಯವಾದುದು. ಮನೋಬುದ್ಧಿ ಗ್ರಾಹ್ಯವಾದದ್ದು, ಅನುಭಾವವು ಅತೀಂದ್ರಿಯವಾದದ್ದು ಹಾಗೂ ಪರಮಾನಂದ ರೂಪದ್ದು. ಅನುಭವವು ಜಾಗ್ರತಾವಸ್ಥೆಯ ಫಲವಾದರೆ ಅನುಭಾವವು ತುರೀಯ (ಯೋಗಿಗಳು ಪರಮಾತ್ಮನಲ್ಲಿ ಐಕ್ಯವಾಗುವ ಸ್ಥಿತಿ) ಮತ್ತು ತುರೀಯಾತೀತದಲ್ಲಿ ಅರಳುವ ದೇವಲೋಕದ ಮಂದಾರ ಪುಷ್ಪ. ಅನುಭಾವಕ್ಕೆ ಏಕಾಂತತೆಬೇಕು. ಇದು ಭಗವತ್ ಅನುಸಂಧಾನದ ಫಲಶ್ರುತಿ. ಮಾತಿಗಿಂತ ಮೌನ ಇಲ್ಲಿಯ ರೀತಿ. ಶಿವಶರಣರು ಅನುಭಾವದ ಕುರಿತು ಹೀಗೆ ಹೇಳಿದ್ದಾರೆ.

**"ಅನುಭಾವವೆಂಬುದು ಆತ್ಮವಿದ್ಯೆ**
**ಅನುಭಾವವೆಂಬುದು ನೆಲದ ಮರೆಯ ನಿಧಾನ ಕಾಣಿರೋ**
**ಅನುಭಾವವೆಂಬುದು ರಚ್ಚೆಯ ಮಾತೆ?**
**ಅನುಭಾವವೆಂಬುದು ಸಂತೆಯ ಸುದ್ದಿಯೆ?**
**ಅನುಭಾವವೆಂಬುದೇನು ಬೀದಿಯ ಪಸರವೆ?**
**ಏನೆಂಬೆ ಹೇಳಾ ಮಹಾ ಘನವ?**
**ಆನೆಯ ಮಾನದೊಳಕ್ಕಿದರಡಗೊದೆ ದರ್ಪಣದೊಳಗಡಗುವದಲ್ಲದೆ?**
**ಕಂಡಕಂಡಲ್ಲಿ ಗೋಷ್ಠಿ, ನಿಂದ ನಿಂದಲ್ಲಿ ಅನುಭಾವ**
**ಬಂದ ಬಂದಲ್ಲಿ ಪ್ರಸಂಗವ ಮಾಡುವ ನಿಬುರುದ್ದಿ ನೀಚಕ ಮೆಚ್ಚ**
**ಕೂಡಲಚೆನ್ನಸಂಗಮದೇವಾ.**

ಅದು 'ನೆಲದ ಮರೆಯ ನಿಧಾನದಂತೆ ಗೌಪ್ಯ' 'ಶಿಶು ಕಂಡ ಕನಸಿನಂತೆ' ಅನಿರ್ವಚನೀಯ; ಅಂತರಂಗದ ರತ್ನದಂತೆ ಪ್ರಾಜ್ವಲ್ಯಮಾನ ಮಹಾಘನ. ಅನುಭಾವವು ಅನುಭವದ ಒಂದು ಪರಿಮಾಣವೂ ಹೌದು ಮತ್ತು ಪರಿಪಾಕವು ಹೌದು. ಅದು ಒಳಗಿನ ಭಾವದ ಪರಿಪಾಕ ಎಂದ ಡಾ. ದ.ರಾ ಬೇಂದ್ರೆಯವರು. 'ಬಹಿರಂಗದಲ್ಲಿ ಅದು ಕ್ರಿಯಾ ಪರಿಪಾಕವಾಗಿ ಹೊರಹೊಮ್ಮುತ್ತದೆ' ಎಂದಿದ್ದಾರೆ. ಅನುಭಾವದ ಬಗೆಗೆ ಅಲ್ಲಮಪ್ರಭುಗಳ ವಚನ ಹೀಗೆ ಬಣ್ಣಿಸಿದೆ.

ಅನು ನೀನೆಂಬುದು ತಾನಿಲ್ಲ.
ತಾನರಿದ ಬಳಿಕ ಏನೂ ಇಲ್ಲ ಇಲ್ಲ.



**ಇಲ್ಲದ ಇಲ್ಲವೆ ಎಲ್ಲಿಂದ ಬಪ್ಪುದೊ?**
**ಅನುವರಿದು ತನುವ ಮರೆದ**
**ಭಾವರಹಿತ ಗುಹೇಶ್ವರ.**

ಅಲ್ಲಮ ಪ್ರಭುಗಳು ಇನ್ನೊಂದೆಡೆ 'ಅನುಭಾವ ಸಮಷ್ಟಿಯ ಸಂಗ' ಎನ್ನುತ್ತಾರೆ. ವ್ಯಷ್ಟಿಯ ಸಮಷ್ಟಿಯ ಸಂಗ ಮಾಡಿದಾಗ ಅಲ್ಲಿರುವುದು ಸಮಷ್ಟಿಯ ಹೊರತು ವ್ಯಷ್ಟಿಯಲ್ಲ. ಅನುಭಾವ ಯಾವಾಗಲೂ ಬದುಕನ್ನು ಮತ್ತು ಕಾಲವನ್ನು ಅಖಂಡವಾಗಿ ಹಿಡಿಯುತ್ತದೆ. ಬೆರಗು ಮತ್ತು ಬೆಳಕುಗಳೆರಡೂ ಅದರ ವಿಶಿಷ್ಟ ಲಕ್ಷಣಗಳು. ಅನಿರ್ವಚನೀಯತೆ ಹಾಗೂ ಮಾರ್ದವತೆ ಅದರ ವಿಶೇಷತೆಗಳು. ಅನುಭಾವಕ್ಕೆ ಅತೀಂದ್ರಿಯವಾದ ಆತ್ಮಾನುಭವ ಎನ್ನುವುದರ ಜೊತೆಗೆ ವಿಚಾರ ಮಂಥನ ಮತ್ತು ಶರಣರ ಸಂಗೋಷ್ಠಿ ಎಂದೂ ಅರ್ಥವುಂಟು.

ಅನುಭಾವ ಮಾರ್ಗದ ಸಾಧನಾ ಜೀವನದಲ್ಲಿ ಸಚ್ಚಾರಿತ್ರ್ಯ, ತಪಸ್ಸು, 'ಭಕ್ತಿ ಮತ್ತು ವೈರಾಗ್ಯಗಳು ಬಹುಮುಖ್ಯ, ಇವುಗಳನ್ನು ಅಳವಡಿಸಿಕೊಂಡ ಅನುಭಾವಿಗಳು ಅಂತರಂಗ ಬಹಿರಂಗ ಶುದ್ಧಿಗಳನ್ನು ಸಾಧಿಸುತ್ತಾ ಆ ಮೂಲಕ ದೈವಿಕೃಪೆ ಮತ್ತು ದೈವಸಾನ್ನಿಧ್ಯವನ್ನು ಪಡೆಯುತ್ತಾರೆ. ಅವರು ಲೋಕಕಾರುಣ್ಯದ ಮಾತೃ ವಾತ್ಸಲ್ಯದ ಸಾಕಾರಮೂರ್ತಿಗಳು. ಅವರಲ್ಲಿ ಮಗುವಿನ ಮುಗ್ಧತೆ ಮತ್ತು ನಿಷ್ಕಪಟಗಳು ತುಂಬಿಕೊಂಡಿರುತ್ತವೆ. ಅನುಭಾವಿಗೆ ಜಾತಿ, ಮತ, ಧರ್ಮ, ಕುಲ, ಗೋತ್ರ, ಲಿಂಗ, ಧರ್ಮ, ದೇಶ ಮತ್ತು ಭಾಷೆಗಳ ಹಂಗಿಲ್ಲ. ನನ್ನವರು ಮತ್ತು ತನ್ನವರೆಂಬ ಭೇದವಿಲ್ಲ. ಅಮುಗೆ ರಾಯಮ್ಮ "ನೀರ ಮೇಲಣ ತೆಪ್ಪದಂತೆ, ಸಮುದ್ರದೊಳಗಣ ಬೆಂಗುಂಡಿನಂತೆ ಇರಬಲ್ಲಡೆ ಅನುಭಾವಿಗಳೆಂಬೆನಯ್ಯ" ಎಂದಿದ್ದಾರೆ.

"ಒಬ್ಬ ವ್ಯಕ್ತಿ ಅನುಭಾವಿ ಎಂದರೆ ಅವನು ಎಲ್ಲ ಧರ್ಮಗಳ ಚೌಕಟ್ಟುಗಳನ್ನು ಮೀರಿ ನಿಂತಿದ್ದಾನೆ ಎಂದೇ ಅರ್ಥ. ಅನುಭಾವಿಗಳು ಸತ್ಯಂ, ಶಿವಂ, ಸುಂದರಂಗಳ ಆರಾಧಕರು. ಔದಾರ್ಯ, ಸರಳತೆ, ಸಹನಶೀಲತೆ, ಮಾನವೀಯತೆ ಮತ್ತು ನಿರ್ಮಲ ಪ್ರೇಮಗಳು ಅವರಲ್ಲಿ ಸದಾ ನೆಲೆಸಿರುತ್ತವೆ. ಸತ್ಯ ನಿಷ್ಠುರವಾದ ಅವರ ನಡೆ-ನುಡಿಗಳು ಲೋಕ ವಿಲಕ್ಷಣವಾದವುಗಳು. ಎಲ್ಲ ಮಿತಿಗಳಿಂದ ಹಾಗೂ ಕಟ್ಟುಪಾಡುಗಳಿಂದ ಅತೀತವಾದ ಅವರು ಬುದ್ಧಿಗಿಂತ ಭಾವಕ್ಕೆ, ಶಿಷ್ಟಾಚಾರಕ್ಕಿಂತ ಸಜ್ಜನಿಕೆಗೆ– ಸದಾಚಾರಕ್ಕೆ ಆಡಂಬರಕ್ಕಿಂತ ಅಂತಃಕರಣಕ್ಕೆ ಹೆಚ್ಚಿನ ಬೆಲೆಕೊಡುವವರು. ಅನುಭಾವಿಗಳ ಒಳಗಣ್ಣು ಲೌಕಿಕತೆ, ವಾಸ್ತವಿಕತೆ ಮತ್ತು ನೈತಿಕತೆಗಳ ತಾತ್ವಿಕತೆಗಳಾಚೆಗಿನ ನಿತ್ಯ ಸತ್ಯದ ಮೇಲೆ ನೆಟ್ಟು ನಿಂತಿರುತ್ತದೆ.

ಇದಕ್ಕೆ ಅನುರೂಪವಾಗಿ ಅಕ್ಕಮಹಾದೇವಿಯವರಿಗೆ ಕೈಬೀಸಿ ಕರೆಯಿತು. ಮೃಷ್ಟಾನ್ನ ಭೋಜನ ಹಾಸಿಹೊದ್ದಿಕೊಂಡು ಕಾಲಡಿ ಬಿದ್ದಿತ್ತು ರಾಜ, ಪಟ್ಟದ ರಾಣಿಯನ್ನಾಗಿ ಮಾಡಿಕೊಳ್ಳುತ್ತೇನೆ ಎಂದು ಬಲೆ ಬೀಸಿದ. ರಾಜಾಜ್ಞೆ ಮಾಡಿದ ಮತ್ತು ನಿನ್ನ ತಂದೆ ತಾಯಿ ಪ್ರಾಣ ತೆಗೆಯುತ್ತೇನೆಂದ. ಇಂತಹ ಯಾವುದೇ ಗೊಡ್ಡು ಬೆದರಿಕೆಗಳಿಗೆ ಅವಳು ಸೊಪ್ಪು ಹಾಕಲಿಲ್ಲ. ಅವರ ಅಂತರಂಗದಿಂದ ನುಡಿರತ್ನ ಆಲೆಆಲೆಯಾಗಿ ಹೊರಹೊಮ್ಮಿತು.

**ತನು ಶುದ್ಧ ಮನ ಶುದ್ಧ ಭಾವ ಶುದ್ಧವಾದವರ ಎನಗೊಮ್ಮೆ**

**........................................ ತೋರಾ**

೧೮ ವರ್ಷ ವಯಸ್ಸಿನ ಯೌವ್ವನಾವಸ್ಥೆಯಲ್ಲಿರುವ ಅಕ್ಕಮಹಾದೇವಿ ಹೇಳುವ ಪರಿ ಈ ರೀತಿಯಾಗಿದೆ. ಯಾರು ತಮ್ಮ ದೇಹ ಮನಸ್ಸನ್ನು ನಿರ್ಮಲ ಇರಿಸಿಕೊಂಡಿದ್ದಾರೆಯೋ, ಯಾರು ತಮ್ಮ ಬದುಕಿನಿಂದ ತಮಗೂ ಇನ್ನೊಬ್ಬರಿಗೂ ಆನಂದ ಕೊಡುತ್ತಿದ್ದಾರೋ ಅಂತವರ ದರ್ಶನ ಮಾಡಿಸು ಎಂದು ಹಪಹಪಿಸುತ್ತಾಳೆ. ಲೌಕಿಕ ಜೀವನ ನನಗೆ ಬೇಡ ಎನ್ನುತ್ತಾಳೆ. ನಾವೆಲ್ಲ ದಿನನಿತ್ಯ ಈ ಲೌಕಿಕಕ್ಕಾಗಿಯೇ ಬಡಿದಾಡುತ್ತೇವೆ. ನಮಗೆ ಎಷ್ಟಿದ್ದರೂ ಸಾಲದು ಬೇಕು ಬೇಕು ಎಂಬ ದಾಹದಲ್ಲಿಯೇ ಮುಳುಗಿದ್ದೇವೆ, ತೃಪ್ತಿಗಾಗಿಯೇ ನಮ್ಮ ಬದುಕನ್ನು ಮೀಸಲಾಗಿಟ್ಟಿದ್ದೇವೆ. ಇಂದ್ರಿಯಗಳ ತೃಪ್ತಿಗಾಗಿ ಬದುಕುವುದು ಲೌಕಿಕ. ಅತೀಂದ್ರಿಯದ ಅನುಭವಕ್ಕಾಗಿ ಹಂಬಲಿಸುವುದು ಅಲೌಕಿಕ. ತನು, ಮನ ಮತ್ತು ಭಾವ ಇವುಗಳನ್ನು ಶುದ್ಧ ಮಾಡಿಕೊಂಡವರನ್ನು ನನಗ ತೋರಿಸು ಮತ್ತು ದರ್ಶನವಾಡಿಸು ಎಂದು ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನಲ್ಲಿ ಕೇಳುತ್ತಾಳೆ. ಇದೇ ರೀತಿ ಶಿವಾನುಭವ ದಾಸಿಮಯ್ಯನವರು ಕೂಡಾ ಈ ಕೆಳಗಿನಂತೆ ಹೇಳುತ್ತಾರೆ.

**ಅನುಭಾವ ಇಲ್ಲದೆ ಈ ತನು ವಿಳತಟವಾದುದು**

**ಅನುಭಾವವೇ ತನುವಿಂಗೆ ಆಧಾರ - ದಾಸಿಮಯ್ಯ**

**ಅನುಭಾವಿಗಳ ಪರಿ ನೀರ ಮೇಲಣ ತೆಪ್ಪದಂತೆ**

**ಸಮುದ್ರದೊಳಗಣ ಬೆಂಗುಂಡಿನಂತೆ- ಅಮುಗೆ ರಾಯಮ್ಮ**

**ಕೂಡಲ ಸಂಗನ ಶರಣರ ಅನುಭಾವದಿಂದ**

**ಎನ್ನ ಭವದ ಕೇಡು ನೋಡಯ್ಯ - ಬಸವಣ್ಣ**

ಮೇಲಿನ ಎಲ್ಲ ಸಾಲುಗಳಲ್ಲಿ ಅನುಭಾವವು ಇಲ್ಲದೆ ಹೋದಾಗ ತನುವು ದುಃಖಕ್ಕೆ ಒಳಗಾಗುತ್ತದೆ. ಅನುಭಾವವನ್ನು ಪಡೆದುಕೊಂಡಾಗ ಭವವೇ ಕಳೆಯುತ್ತದೆ. ಅನುಭಾವ ಎನ್ನುವುದು ಅಕ್ಕದ ದರ್ಶನ ಮಾಡಿಸುವ



ವಿದ್ಯೆಯಾಗಿದೆ. ಅನುಭಾವಿಗಳು ಹೇಗೆ ಇರುತ್ತಾರೆಂದರೆ ನೀರಿನ ಮೇಲಿರುವ ತೆಪ್ಪದಂತೆ. ಸಂಸಾರದಲ್ಲಿದ್ದೂ ಅಂಟಿಸಿಕೊಳ್ಳುವುದಿಲ್ಲ. ಸಮುದ್ರದಲ್ಲಿ ಬೆಂಗುಂಡು ಎಂದರೆ, ಕಿಚ್ಚು ಇದ್ದರೂ ಅದು ಆರದೆ ಇರುವಂತೆ ಸಂಸಾರದಲ್ಲಿದ್ದರೂ ಅವರ ಅಕ್ಕದ ಅರಿವು ಆರದಂತೆ ಇರುತಾರೆ.

ಸಂಸಾರದಲ್ಲಿ ಕಾಯಕ ನಿರತರಾದ ಮನುಷ್ಯರಿಗೆ ದೇಹ ಮತ್ತು ಮನಸ್ಸು ಇವೆಲ್ಲವೂ ಅಶುದ್ಧವಾಗುತ್ತಲೇ ಇರುತ್ತವೆ. ನಿತ್ಯವೂ ಮಜ್ಜನ ಮಾಡಿದಾಗ ದೇಹ ಮಾತ್ರ ಸ್ವಚ್ಛವಾಗುತ್ತದೆ ಆದರೆ ಮನಸ್ಸು ಮಾತ್ರ ಹಾಗೆಯೇ ಇರುತ್ತದೆ. ಅದನ್ನು ಸ್ವಚ್ಛಮಾಡಬೇಕಾದರೆ ಅನುಭಾವಿಗಳ ಮಾತು ಅವಶ್ಯಕವಾಗಿದೆ. ಭವ ರೋಗಕ್ಕೆ ಔಷಧ ಎಲ್ಲಿದೆ? ಇದಕ್ಕೆ ಚೆನ್ನಬಸವಣ್ಣನವರು ಈ ರೀತಿ ಹೇಳುತ್ತಾರೆ.

**ಮಂಡೆ ಮಾಸಿದರೆ ಮಹಾಮಜ್ಜನವ ಮಾಡುವುದು**

**ವಸ್ತ್ರ ಮಾಸಿದಡೆ ಮಡಿವಾಳಂಗಿಕ್ಕುವುದು**

**ಮನದ ಮೈಲಿಗೆಯ ಕಳೆಯಬೇಕಾದಡೆ**

**ಕೂಡಲಚೆನ್ನ ಸಂಗನ ಶರಣರೊಡನೆ ಅನುಭಾವವ ಮಾಡುವುದು.**

ದೇಹ ಮತ್ತು ಬಟ್ಟೆಗಳನ್ನು ತೊಳೆದುಕೊಳ್ಳುವುದಕ್ಕೆ ಬೇಕಾದಷ್ಟು ಕಂಪನಿಗಳು ಹೊಸ ಹೊಸ ಸಾಬೂನುಗಳನ್ನು ಬಿಡುಗಡೆ ಮಾಡಿದ ಆದರೆ, ಮನಸ್ಸು ತೊಳೆಯಲು ಯಾವ ಕಂಪನಿಗಳು ಇನ್ನೂ ಸಾಬೂನು ಬಿಡುಗಡೆಮಾಡಿಲ್ಲ. ಮನಸ್ಸು ತೊಳೆದುಕೊಳ್ಳದಿದ್ದರೆ ಮನುಷ್ಯನು ರೋಗಿಷ್ಟನಾಗುತ್ತಾನೆ. ಭವ ದುಃಖಿಯಾಗಿ ಹುಟ್ಟು ಸಾವಿನಲ್ಲಿ ಸಿಕ್ಕಿ ಬೀಳುತ್ತಾನೆ.

'ಎನ್ನ ಮಹಾತ್ಮನ ಚೇತನನಯ್ಯಾ ನಿಜ ಸುಖಿ ಅಪ್ಪಣ್ಣನು' ಎಂದು ಶರಣ ಮರುಳಶಂಕರದೇವರು ಶರಣ ಹಡಪದ ಅಪ್ಪಣ್ಣನವರ ನಿಲವನ್ನು ಸ್ತುತಿಸಿರುವುದನ್ನು ಕಂಡಾಗ, ಅಪ್ಪಣ್ಣನವರ ಅನುಭಾವದ ನಿಲುವು ಅರ್ಥವಾಗದೇ ಇರಲಾರದು.

**ಕೀಡೆ ತುಂಬಿಯ ಬಿಡದೆ ನೆನೆಯೇ**

**ನೋಡಲಾಕ್ಷಣ ತುಂಬಿಯಾಗಿಹುದು**

**ರೂಢಿಯೊಳು ಅಗಮ್ಯ ಶರಣರ ಪಾದವೇ ಗೂಡಾಗಿ ನಿಂದಿರೆ,**

**ಬಸವಪ್ರಿಯ ಕೂಡಲ ಚೆನ್ನಸಂಗನ ಬಸವ ತಾನೇ..**

ಅಂದರೆ ಕೀಡೆಯು ತುಂಬಿಯ ಸಂಪರ್ಕದಿಂದಾಗಿ ಅದನ್ನು ನೆನೆ ನೆನೆದು ಕೊನೆಗೆ ತುಂಬಿಯೇ ತಾನಾಗಿ ಮಾರ್ಪಡುವುದು. ಅದೇ ರೀತಿಯಲ್ಲಿ ಬಸವಾದಿ ಶರಣರ ಅರಿವು ಆಚಾರಗಳ ಸಂಗದಲ್ಲಿ ಸದಾಕಾಲವಿದ್ದರೆ ಆ ಶರಣ ಸ್ವರೂಪವೇ ತಾನಾಗಿ ನಿಂತೆ ಎಂಬ ಅನುಭಾವ ವ್ಯಕ್ತಪಡಿಸಿದ್ದಾರೆ.



ಒಬ್ಬ ಅನುಭಾವಿ ಕೇವಲ ತಾನೊಬ್ಬನೇ ದಿವ್ಯತೆಯನ್ನು ಸಾಧಿಸಿದರೆ ಸಾಲದು, ತನ್ನೊಂದಿಗೆ ಸಮಾಜವನ್ನು ಮೇಲಕ್ಕೆತ್ತಬೇಕು. ಸಮಾಜ ಜೀವನವನ್ನು ಹಸನಾಗಿಸಬೇಕಾಗುತ್ತದೆ. ಆದ್ದರಿಂದಲೇ ಶರಣ ಅಪ್ಪಣ್ಣನವರು ಅನುಭಾವ ಸಾಧನೆಯ ಬಗ್ಗೆ ಹೀಗೆ ಎಚ್ಚರಿಸುತ್ತಾರೆ.

**ಸಾವಾಗ ದೇವನೆಂಬರೆ ಸಾವು ಬಿಡುವುದೆ?**

**ಇದಾವ ಮಾತೆಂದು ನುಡಿವಿರಿ ಎಲೆ ಅಣ್ಣಗಳಿರಾ**

**ಬಾಳುವಲ್ಲಿ ಬದುಕುವಲ್ಲಿ ಗುರುಲಿಂಗ ಜಂಗಮವನರಿಯದೇ**

**ಹಾಳು-ಹಂಪು ತಿಂದ ಶುನಕದಂತೆ ಕಾಲ್ಗೆದೆದು ಓಡಾಡಿ**

**ಏಳಲಾರದೆ ಬಿದ್ದಾಗ, ಶಿವಾ ಶಿವಾ ಎಂದರೆ ಅಲ್ಲಿ ದೇವನಿಪ್ಪನೇ?**

**ಇದನೋಡಿ ನಾಚಿ ನಗುತಿರ್ಪ**

**ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.**

ಒಟ್ಟಿನಲ್ಲಿ ವಚನ ಸಾಹಿತ್ಯ ಮತ್ತು ಅನುಭಾವ ಎಂಬುದು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನಾವು ಶಿವಶರಣರ ಪ್ರತಿಯೊಂದು ವಚನದಲ್ಲೂ ಅನುಭಾವವನ್ನು ಕಾಣಬಹುದು.

ಆಕರ ಗ್ರಂಥಗಳು:

೧. ಮುಡಿಗುಂಡ ... ಭಾರತ ... ಕನ್ನಡ ಸಾಹಿತ್ಯ ಸಮ್ಮೇಳನ, ವಿಜಯಪುರ - ನೆನಪಿನ ಸಂಚಿಕೆ

೨. ಸಿಂದಗಿ ಪನ್ನದಾ ಸ್ಮರಣ ಸಂಚಿಕೆ - ವಿಜಯಪುರ ಜಿಲ್ಲಾ ೧೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಸಿಂದಗಿ

೩. ಭೀಮಾಸಿರಿ ಸ್ಮರಣ ಸಂಚಿಕೆ - ವಿಜಯಪುರ ಜಿಲ್ಲಾ ೧೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಆಲಮೇಲ, ಸಿಂದಗಿ

೪. ಹಡಪದ ಅಪ್ಪಣ್ಣ - ಲಿಂಗಮ್ಮರು - ಪ್ರೊ. ಸಿದ್ದಣ್ಣ ಲಂಗೋಟಿ

ಕನ್ನಡ ಸಹಾಯಕ ಪ್ರಾಧ್ಯಾಪಕ, ಜಿ.ಪಿ.ಪಿ. ಮತ್ತು ಪಿ.ಜಿ.ಎಸ್. ಕಾಲೇಜು, ಸಿಂದಗಿ




## Vachana - Vivechane

Editer and Address :
Dr. Hombaiah
Assistant Professor
Department of Kannada
Smt. K.M.A.C. College, Bedkihal
Chikodi taluk, Belagam District, Pin : 591214

Dr. N.K. Lolakshi
Kannada Professor
Kuvempu Institute of Kannada Studies
Manasagangotri, Mysore - 570006

Published by :
Usha Prakashana
# 2542, Hebbal 2nd Stage
Near Renuka Yellamma Temple, Mysore-17

ISBN : 978-93-92051-06-7
Pages : viii + 288 + 4 = 300
First Impression : 2021
© : Author
Copies : 600
Price : Rs.330=00
Used Paper : Maplito

ಪುಟಗಳು : viii + ೨೮೮ + ೪ = ೩೦೦
ಮೊದಲ ಮುದ್ರಣ : ೨೦೨೧
ಪ್ರತಿಗಳು : ೬೦೦
© : ಲೇಖಕರದು
ಬೆಲೆ : ರೂ.೩೩೦=೦೦
ಮುಖಪುಟ ವಿನ್ಯಾಸ : ಕಿರಣ್, ಮೈಸೂರು.
ಅಕ್ಷರ ಜೋಡಣೆ : ಉನ್ನತಿ ಗ್ರಾಫಿಕ್ಸ್, ಮೈಸೂರು.
ಮುದ್ರಣ : ಕಮಲ್ ಇಂಪ್ರೆಶನ್ಸ್, ಮೈಸೂರು.

# ವಚನ ಸಾಹಿತ್ಯದಲ್ಲಿ ಮನೋವಿಜ್ಞಾನ

– ಡಾ. ನಾಗರಾಜ ವಿ. ಮುರಗೋಡ

ಕರ್ನಾಟಕದ ಮಹತ್ಸಾಧನೆಯ ಇತಿಹಾಸದಲ್ಲಿ ವಚನ ಸಾಹಿತ್ಯದ ಸ್ಥಾನ ವಿಶಿಷ್ಟವಾದುದು. ಯುಗದ ಪ್ರವರ್ತಕ ಶಕ್ತಿಯಾಗಿ ಸ್ಥಾವರ ಮೌಲ್ಯಗಳನ್ನು ಅಲುಗಿಸಿ ಚಲನಶೀಲ ಮೌಲ್ಯದ ಪ್ರತೀಕವೆನಿಸಿದವರು ಶಿವಶರಣರು. ದಲಿತರು, ಶೋಷಿತರು, ಕೆಳವರ್ಗದವರು ಮೊದಲ ಬಾರಿಗೆ ವಾಸ್ತವಕ್ಕೆ ಸ್ಪಂದಿಸಿ ಸಾಹಿತ್ಯದ ಮುಖಾಂತರ ತಮ್ಮ ಅನಿಸಿಕೆಯನ್ನು ಸ್ಪಷ್ಟಪಡಿಸಿದ್ದು ಇದೇ ಸಂದರ್ಭದಲ್ಲಿ. ಅರಮನೆ, ರಾಜಾಶ್ರಯಗಳಲ್ಲಿ ಮಲೆತು ನಿಂತ ಪಂಡಿತರ ಕಪಿಮುಷ್ಠಿಯಿಂದ ಪಾರಾಗಿ ಬಂದ ಕನ್ನಡ ಸಾಹಿತ್ಯ ಸಹಜವಾಗಿ ಉಸಿರಾಡಿದ್ದು; ಜನಸಾಮಾನ್ಯರ ನೋವು ನಲಿವುಗಳಿಗೆ ನಾಲಿಗೆಯಾಗಿದ್ದು; ದುಡಿವ ವರ್ಗದ ಜನರ ಮೊದಲ ತೊದಲ್ನುಡಿಯಾಗಿ ಹೊರಹೊಮ್ಮಿದ್ದು ವಚನ ಸಾಹಿತ್ಯದ ಪರಿಸರದಲ್ಲಿಯೇ.

ಶಿವಶರಣರು ಅದೆಷ್ಟೋ ವೈಜ್ಞಾನಿಕ ಸತ್ಯ ಸಂಗತಿಗಳನ್ನು ಕಂಡರಿಯದಿದ್ದರೂ ಕಂಡಂತೆ; ಕಂಡ ಹಾಗೆ ತಮ್ಮ ವಚನಗಳಲ್ಲಿ ಸತ್ಯವನ್ನು ನಿರೂಪಿಸಿದ್ದಾರೆ. ಅಂದಿನ ಆ ವಚನಗಳು ಕೇವಲ ಒಂದು ವಿಷಯಕ್ಕೆ ಮಾತ್ರ ಸೀಮಿತವಾಗಿರದೆ ಅಂಗೈಯಲ್ಲಿ ಅರಮನೆಯನ್ನು ತೋರಿಸಿದಂತೆ ಹಲವು ವಿಷಯಗಳನ್ನು ಅರಿವಿಗೆ ತಂದ ಕೀರ್ತಿ ಬಸವಾದಿ ಶರಣರಿಗೆ ಸಲ್ಲುತ್ತದೆ.

ಒಂದು ವಸ್ತುವಿನ ನಿಖರವಾದ, ಸತ್ಯವಾದ, ಸ್ಪಷ್ಟವಾದ ಪ್ರಯೋಗಾತ್ಮಕವಾಗಿ ಸತ್ಯವನ್ನು ಕಂಡುಕೊಂಡ ಅಧ್ಯಯನವೇ ವಿಜ್ಞಾನ ಎಂದು ಕರೆಯಿಸಿಕೊಳ್ಳುತ್ತದೆ. ಇಂದು ನಾವು ವಚನ



ಹುದುಗಿರುವ ಅದೆಷ್ಟೊ ವೈಜ್ಞಾನಿಕ ಅಂಶಗಳ ಕುರಿತು ಗಮನಹರಿಸಬೇಕಿದೆ. ವಚನದ ಹಾಗೇ ವಿಜ್ಞಾನವು ಸಹಿತ ವಿಫುಲ ವಿಭಾಗಗಳನ್ನು ಒಳಗೊಂಡಿದೆ. ಸಸ್ಯ ವಿಜ್ಞಾನ, ಭೂಗರ್ಭ ವಿಜ್ಞಾನ, ಭೌತವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಕೃಷಿವಿಜ್ಞಾನ, ಭೂಗೋಳ ವಿಜ್ಞಾನ, ರಸಾಯನ ವಿಜ್ಞಾನ, ಖಗೋಳ ವಿಜ್ಞಾನ, ಯೋಗ ವಿಜ್ಞಾನ, ಮನೊವಿಜ್ಞಾನ ಇನ್ನೂ ಅನೇಕ. ಇಲ್ಲಿ ಅಧ್ಯಯನದ ವ್ಯಾಪ್ತಿಯ ಬಾಹುಲ್ಯತೆಯನ್ನು ಅರಿತು ವಚನಸಾಹಿತ್ಯದಲ್ಲಿನ ಮನೋವಿಜ್ಞಾನ ವಿಷಯವನ್ನು ಮಾತ್ರ ಆಯ್ದುಕೊಳ್ಳಲಾಗಿದೆ.

ಈ ವಚನಕಾರರ ವಚನಗಳಲ್ಲಿ ಮೂಡಿಬಂದಿರುವ ಹಲವಾರು ಮನೋವೈಜ್ಞಾನಿಕ ಪರಿಕಲ್ಪನೆಗಳು 20 ನೆಯ ಶತಮಾನದಲ್ಲಿ ಆವಿಷ್ಕಾರಗೊಂಡ ಸಿದ್ಧಾಂತಗಳಿಗೆ ಸಂವಾದಿಯಾಗಿರುವುದನ್ನು ಕಂಡರೆ ನಿಜಕ್ಕೂ ಅಚ್ಚರಿಯಾಗುತ್ತದೆ. ಅಂದಿನ ವಚನಕಾರರು ನಿಜವಾಗಿ ಮನೋವಿಜ್ಞಾನಿಗಳಾಗಿರಬಹುದೇ ಎಂಬ ಚಿಂತನೆಗೆ ಗ್ರಾಸ ಒದಗಿಸುತ್ತದೆ.

ಮನೋವಿಜ್ಞಾನವು ಗ್ರೀಕ ಭಾಷೆಯ 'Psycho' ಮತ್ತು 'Logos' ಎಂಬ ಎರಡು ಪದಗಳ ಮಿಶ್ರಣದಿಂದ ಉತ್ಪತ್ತಿಯಾದ ಪದ. ಇಂಗ್ಲೀಷಿನ Physiology ಎಂಬ ಪದಕ್ಕೆ ಸಮನಾಗಿ ಕನ್ನಡದಲ್ಲಿ ಮನೋವಿಜ್ಞಾನ ಪದವನ್ನು ಬಳಸಲಾಗುತ್ತದೆ. Psycho ಎಂದರೆ 'ಆತ್ಮ', Logos – ಎಂದರೆ ಅಧ್ಯಯನ. ಅಂದರೆ ಆತ್ಮವನ್ನು ಕುರಿತು ಅಧ್ಯಯನ ಮಾಡುವುದೆ ಮನೋವಿಜ್ಞಾನ. ಇದು ಮೊದಲು ತತ್ವಶಾಸ್ತ್ರದ ಒಂದು ಭಾಗವಾಗಿತ್ತು ಆದರೆ ಇತ್ತೀಚೆಗೆ ಇದರ ಪ್ರಾಮುಖ್ಯತೆ ಹೆಚ್ಚಾದಂತೆ ಒಂದು ಪ್ರತ್ಯೇಕ ಶಾಖೆಯಾಗಿ ಮತ್ತು ವಾಸ್ತವಿಕತೆ ಹೆಚ್ಚಿದಂತೆ ಈ ವಿಷಯವನ್ನು ಒಂದು ಪ್ರತ್ಯೇಕ ವಿಷಯ ವಿಜ್ಞಾನವಾಗಿ ಮಾರ್ಪಡಿಸಲಾಗಿದೆ.

ಆತ್ಮವನ್ನು ಕುರಿತು ಅಧ್ಯಯನ ಮಾಡುವುದೇ ಮನೋವಿಜ್ಞಾನವೆಂದು Physiology ಯ ಶಬ್ದಶಃ ಅನುವಾದದಿಂದ ಅರ್ಥವಾಗುತ್ತದೆ. ಆದರೆ ಆತ್ಮದ ಸ್ವಭಾವ, ನಿಲುವು ಇನ್ನುವರೆಗೆ ದೊರಕದೆ ಹೋಗಿದ್ದರಿಂದ ಈ ವ್ಯಾಖ್ಯೆಯನ್ನು ಮರು ಚಿಂತನೆಗೆ ಒಳಪಡಿಸಲಾಗಿದೆ. ಮನಸ್ಸಿನ ವಿಜ್ಞಾನವೇ ಮನೋವಿಜ್ಞಾನ ಎನ್ನುವದಾದರೆ ಆತ್ಮದಂತೆ ಮನಸ್ಸು ಸಹ ಅಗೋಚರ. ಅದರ ಸ್ವರೂಪವನ್ನು ಅಧ್ಯಯನ ಮಾಡುವದು ಅಸಾಧ್ಯ. ಪ್ರಜ್ಞಾನುಭವದ ಜ್ಞಾನವೇ ಮನೋವಿಜ್ಞಾನ ಎನ್ನುವದಾದರೆ ಪ್ರಜ್ಞೆಯಲ್ಲಿ ಜಾಗೃತ ಮತ್ತು ಅಜಾಗೃತ ಪ್ರಜ್ಞೆಯಿರುವುದರಿಂದ ಇವೆರಡನ್ನು ಅಭ್ಯಸಿಸುವದು ಸಾಧ್ಯವಾಗದ ಮಾತು. ಒಟ್ಟಾರೆ ಮಾನವನ ವರ್ತನೆಯನ್ನು ಕುರಿತು ಅಧ್ಯಯನ ಮಾಡುವುದೇ ಮನೋವಿಜ್ಞಾನ ಎಂದಾಗುತ್ತದೆ. ಅದೇನೇ ಇರಲಿ 12ನೇ ಶತಮಾನದ ಆದ್ಯ ವಚನಕಾರ ತನ್ನೊಂದು ವಚನದಲ್ಲಿ



ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು
ಗಂಡೂ ಅಲ್ಲ ಹೆಣ್ಣೂ ಅಲ್ಲ ರಾಮನಾಥಾ

ಇಲ್ಲಿ ಸ್ತ್ರೀ-ಪುರುಷರ ಸಮಾನತೆಯ ಕುರಿತು ಜೇಡರ ದಾಸಿಮಯ್ಯ ಅಂದು ಪ್ರತಿಪಾದಿಸಿದ ನಿಲುವು ಎಂದೆಂದಿಗೂ ಪ್ರಸ್ತುತವೇ ಆಗಿದೆ. ಈ ಅಸಮಾನತೆಯು ಮಾನಸಿಕ ಅತಿರೇಕವೇ ಹೊರತು ವೈಜ್ಞಾನಿಕ ಅಥವಾ ವೈಚಾರಿಕ ಕಾರಣಗಳಿಂದಲ್ಲ ಎನ್ನುವ ವಿಚಾರ ಸ್ಪಷ್ಟವಾಗುವುದರ ಜೊತೆಗೆ ಆತ್ಮದ ಸ್ಪಷ್ಟ ಪರಿಕಲ್ಪನೆ ಅಂದಿನ ವಚನಕಾರರಿಗೆ ಇತ್ತೆಂದು ತಿಳಿಯುತ್ತದೆ.

ಬಸವಾದಿ ಶರಣರು ವಚನಗಳನ್ನು ಮುಖ್ಯವಾಗಿ ಧಾರ್ಮಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಚಿಂತನಗಳನ್ನು ಗುರಿಯಾಗಿಟ್ಟುಕೊಂಡು ರಚಿಸಿದ್ದಾರೆ. ಆಯಾ ವಿಷಯಗಳಿಗೆ ಪೂರಕವಾಗಿ ಉದಾಹರಣೆಗಳನ್ನು ನೀಡುವಾಗ ಅವರ ಅಂತರ್ಗತದಲ್ಲಿರುವ ವೈಜ್ಞಾನಿಕ ಅಂಶಗಳು ಬೆಳಕಿಗೆ ಬಂದಿವೆ.

ಮನಸ್ಸು, ಬುದ್ಧಿ, ಅಂಹಕಾರ ಮತ್ತು ಚಿತ್ತ ಇವುಗಳಿಂದ ನಮ್ಮ ಅಂತಃಕರಣವು ರೂಪಿತಗೊಂಡಿದೆ. ಮನದಲ್ಲಿ ಸಹಜವಾಗಿ ಸಂಕಲ್ಪ, ವಿಕಲ್ಪಗಳು ಹುಟ್ಟುತ್ತವೆ. ಚಿತ್ತವು ಅದರ ಬಗ್ಗೆ ಚಿಂತನೆ ಮಾಡುತ್ತದೆ. ಬುದ್ಧಿಯು ಅವುಗಳ ಸಂಬಂಧದಿಂದ ತನ್ನ ನಿರ್ಣಯ ನೀಡುತ್ತದೆ. ಅಂಹಕಾರದಿಂದ ಕರ್ತೃತ್ವಭಾವ ಉಂಟಾಗುತ್ತದೆ. ಹೀಗೆ ಮನಸ್ಸು ಸಂಕಲ್ಪ ವಿಕಲ್ಪಗಳ ಉಗಮಸ್ಥಾನವು ಹಾಗೂ ಇಂದ್ರೀಯಗಳ ಪ್ರೇರಕ ಮತ್ತು ನಿಯಂತ್ರಕವು ಆಗಿದೆ. ಮನವು ಕೇಂದ್ರಿಕೃತವಾಗದೇ ಯಾವುದೇ ಕೆಲಸ-ಕಾರ್ಯಗಳು ಒಳ್ಳೆಯ ರೀತಿಯಿಂದ ನಡೆಯಲಾರವು. ನಾವು ಮಾಡುವ ಪ್ರತಿಯೊಂದು ಕರ್ಮವು ಮೊದಲು ಮನದಲ್ಲಿ ರೂಪುಗೊಂಡು, ತದನುಸಾರ ಇಂದ್ರಿಯಗಳು ಅದನ್ನು ಕಾರ್ಯಗತಗೊಳಿಸುತ್ತವೆ. ಒಟ್ಟಾರೆ ನಮ್ಮ ಎಲ್ಲ ಕಾರ್ಯಗಳಿಗೂ ಮನಸ್ಸೇ ಮೂಲ ಕಾರಣವಾಗಿದೆ.

ಅದನ್ನೇ ಅಕ್ಕನವರ ಒಂದು ವಚನ ಹೀಗೆ ಹೇಳುತ್ತದೆ.
ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ,
ಎನಗುಳ್ಳದೊಂದು ಮನ, ಆ ಮನ ನಿನ್ನಲ್ಲಿ ಸಿಲುಕಿದ ಬಳಿಕ,
ಎನಗೆ ಭವವುಂಟೇ? ಚೆನ್ನಮಲ್ಲಿಕಾರ್ಜುನ

*(ಸಮಗ್ರ ವಚನ ಸಂಪುಟ 5, ಅಕ್ಕಮಹಾದೇವಿಯವರ ವಚನಗಳು, ಕ.ಸ.ಕ.ಸಂ.ನಿ ಬೆಂಗಳೂರು ವ.ಸಂ.297, ಪು.ಸಂ. 92)*



ಭೂಮಿಯ ಮೇಲಿನ ಸಕಲ ಚಟುವಟಿಕೆಗಳಿಗೆ ಸೂರ್ಯನ ಶಕ್ತಿಯೇ ಕಾರಣ. ಮಾನವನ ದೇಹದ ಅಂಗಾಂಗಗಳ ಚಟುವಟಿಕೆಗಳಿಗೆ ಮನಸ್ಸೇ ಮೂಲ ಕಾರಣ ಮನಸ್ಸೇ ಮಾನವನ ನಿಯಂತ್ರಕ ಶಕ್ತಿ, ಚಲನ ಶಕ್ತಿ ಎಂದು ಮಹಾದೇವಿಯಕ್ಕ ತಿಳಿಸುತ್ತ ಅದೇ ಮನ ನಿನ್ನಲ್ಲಿ ಸಿಲುಕಿದ ಬಳಿಕ ಎನಗೆ ದುಃಖ ಉಂಟೆ, ಪುನರ್‌ಜನ್ಮ ಉಂಟೆ? ಎಂದು ಪ್ರಶ್ನಿಸುತ್ತಾಳೆ. ಮನಸ್ಸನ್ನು ಕೇಂದ್ರಿಕೃತ ಗೊಳಿಸಿದರೆ ಯಾವ ನೋವುಗಳು ನಮ್ಮನ್ನು ಬಾಧಿಸುವುದಿಲ್ಲ ಎಲ್ಲದಕ್ಕೂ ಮನಸ್ಸೇ ಮೂಲ ಕಾರಣವೆಂದು ಹೇಳುತ್ತ ಮುಕ್ತಿಯ ವಿಧಾನವನ್ನು ಸಹ ತಿಳಿಸಿದ್ದಾಳೆ.

ಅಲ್ಲಮ ಪ್ರಭುದೇವರು ತಮ್ಮ ಒಂದು ವಚನದಲ್ಲಿ ;
ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ

*(ಅಲ್ಲಮ ಪ್ರಭುದೇವರ 108 ವಚನಗಳು ಸಂ : ಶ್ರೀ ಟಿ.ಆರ್. ಮಹದೇವರು ಬಸವಸಮಿತಿ, ಬೆಂಗಳೂರು ಪು.ಸಂ.7)*

ರಾಮಾಯಣ, ಮಹಾಭಾರತ ಯುದ್ಧಗಳಷ್ಟೇ ಅಲ್ಲದೇ ಇಲ್ಲಿಯವರೆಗೆ ನಡೆಯುವ ಪ್ರತಿಯೊಂದು ಕಲಹಗಳು ಈ ಮೂರರಿಂದಲೇ ಎನ್ನುವರು ಅವು ಹೆಣ್ಣು, ಹೊನ್ನು, ಮತ್ತು ಮಣ್ಣು ಆದರೆ ಅಲ್ಲಮ ಪ್ರಭು ಇವುಗಳನ್ನು ಅಲ್ಲಗಳೆದು ಮನಸ್ಸಿನಲ್ಲಿರತಕ್ಕ ಅತಿಯಾದ ಆಸೆಯೇ ಮಾಯೆ ಎನ್ನುವರು. ಎಲ್ಲ ಅನಾಹುತಕ್ಕೆ ಎಲ್ಲ ಒಳ್ಳೆದಕ್ಕೂ ಮನಸ್ಸೇ ಮೂಲ ಕಾರಣ ಮನಸ್ಸಿನಾಳದ ಯೋಚನಾ ಲಹರಿಯೇ ಎಲ್ಲದರ ಆದಿ ಹಾಗೂ ಅಂತ್ಯ.

ಮನುಷ್ಯನ ಚಂಚಲತೆಗೆ ಮನವೇ ಮೂಲ ಕಾರಣವೆಂದು ಬಸವಣ್ಣನವರು ಹೇಳುತ್ತ ಅದು ಕ್ಷಣ ಕ್ಷಣಕ್ಕೂ ನಾನಾ ದಿಕ್ಕಿಗೆ ಚಲಿಸುತ್ತದೆ. ಅದರ ವೇಗ ನಮ್ಮ ಈ ವಿಮಾನ, ರಾಕೆಟ ವೇಗಕ್ಕಿಂತಲೂ ಮಿಗಿಲು ಎನ್ನುತ್ತ ಮನವು ಮಂಗನಂತೆ ಸುಮ್ಮನಿರದೆ ಯಾವುದೇ ಕಾರಣವಿರದೆ ಗಿಡದಿಂದ ಗಿಡಕ್ಕೆ ಜಿಗಿಯುವಂತೆ ಮಾಡೆಂದು ಹೇಳುವರು.

ಇನ್ನೇವೆನಿನ್ನೇವೆನಯ್ಯಾ!
ಎನ್ನ ಮನವೆಂಬ ಮರ್ಕಟನ ದಾಳಿ ಘನವಾಯಿತ್ತು
ಎನ್ನ ನಿಂದಲ್ಲಿ ನಿಲ್ಲಲೀಯದು,
ಎನ್ನ ಕುಳಿತಲ್ಲಿ ಕುಳ್ಳಿರಲೀಯದು,
ಕ್ಷಣದಲ್ಲಿ ಪಾತಾಳಕ್ಕೆ ಐದುತ್ತಿದೆ.

ಕ್ಷಣದಲ್ಲಿ ಆಕಾಶಕ್ಕೆ ಏರುತ್ತಿದೆ,
ಕ್ಷಣದಲ್ಲಿ ಪಾತಾಳಕ್ಕೆ ಇಳಿಯುತ್ತಿದೆ,
ಕೂಡಲಸಂಗಮ ದೇವಾ;
ಈ ಮನವೆಂಬ ಮರ್ಕಟನ ದಾಳಿಯ ನೆಂದಿಗೆ ನಿಲಿ
ಎಂದು ನಿಮ್ಮ ಕೂಡಗೂಡಿರಲೆನಯ್ಯಾ?

*(ವಚನವಾಹಿನಿ ಬಸವರಾಜ ದೇವರ ವಚನಗಳು ವೀ.ಅ.ಸಂ.ಜ.ತೋ. ಸಂ; ಗದಗ ವ.ಸಂ. 73 ಪು.ಸಂ.19)*

ಇಲ್ಲಿ ಬಸವಣ್ಣನವರು ಓರ್ವ ಮನಶಾಸ್ತ್ರಜ್ಞರಂತೆ ಮನಸ್ಸಿನ ಎಲ್ಲ ವಿಚಾರಗಳನ್ನು ಬಲ್ಲಿದಂತೆ ಎನ್ನ ಮನವಯ್ಯಾ ಹೊತ್ತಿಗೊಂದು ಪರಿಪರಿ ಗೋಸುಂಬೆಯಂತೆನ್ನ ಮನವು ಬಾವುಲ ಬಾಳುವೆ ಎಂತೆನ್ನ ಮನವು

ನಡುವಿರುಳದ್ದ ಕುರುಡಂಗೆ ಅಗಸೆಯಲಿ ಬೆಳಗಾದಂತೆ
ಕೂಡಲಸಂಗಮ ದೇವಾ?

ಮಾನವನ ಮನಸ್ಸು ಕ್ಷಣಕ್ಷಣಕ್ಕೆ ತನ್ನ ಭಾವನೆಗಳನ್ನು ಬದಲಾಯಿಸಿಕೊಳ್ಳುತ್ತ ಸಾವಿರಾರು ಹೊಸ ಹೊಸ ವಿಷಯಗಳನ್ನು ಆಲೋಚಿಸುತ್ತದೆ ಎನ್ನುತ್ತಾರೆ. ಆಹಾರವನ್ನು ಅರಸುವ ಬೆಳಲಿಯ ಮೇಲಿನ ಓತಿಯು ಆಹಾರಕ್ಕಾಗಿ ಯಾವ ಕಡೆಗಾದರೂ ಎರಗಬೇಕಾದ ಮನಸ್ಥಿತಿಯನ್ನು ಜಾಗೃತಿಗೊಳಿಸಿಕೊಂಡಿರುತ್ತದೆ. ಹಾಗೆ ನನ್ನ ಮನ ಎನ್ನುತ್ತ, ಗೋಸುಂಬೆಯಂತೆ ನನ್ನ ಮನಸ್ಸು ಕ್ಷಣ ಕ್ಷಣಕ್ಕೆ ಮೈಬಣ್ಣ ಬದಲಿಸುತ್ತದೆಂದು ಒಮ್ಮೆ ಸಂತೋಷ, ಇನ್ನೊಮ್ಮೆ ದುಃಖ, ಒಮ್ಮೆ ನಗು, ಇನ್ನೊಮ್ಮೆ ಅಳು, ಮತ್ತೊಮ್ಮೆ ಆಶ್ಚರ್ಯ, ತಿರಸ್ಕಾರ ಹೀಗೆ ಗೋಸುಂಬೆಯ ಬಣ್ಣದ ಹಾಗೆ ನಾನಾ ಭಾವಗಳನ್ನು ಹೊಂದುತ್ತದೆ ಎಂದು ಹೇಳುತ್ತ ಕಣ್ಣಿಲ್ಲದ ಬಾವುಲಿಯು ಕೇವಲ ತರಂಗ ಪ್ರತಿ ಫಲನದ ವಿಧಾನದ ಆಧಾರದಿಂದ ತನ್ನ ಹಾರಾಟವನ್ನು ನಡೆಸುತ್ತದೆ. ಮುಂದಿನ ಪ್ರತಿಫಲಿತ ಸಂಜ್ಞೆಗಳು ಬಂದಾಗ ಮಾತ್ರ ಹಾರಾಟ ಮುಂದುವರಿಸುತ್ತದೆ ಹೀಗೆ ಬಾವುಲಿಗೆ ಎತ್ತ ಹೋಗಬೇಕೆಂಬ ಭವಿಷ್ಯ ಗೊತ್ತಿಲ್ಲದಂತೆ; ಎನಗೆ ಮುಂದಿನ ಆಗು ಹೋಗುಗಳ ಬಗ್ಗೆ ಗೊತ್ತಿಲ್ಲದ ಕುರುಡನ ಹಾಗೆ ಆಗಿದೆ ಎಂದು ಮನಸ್ಸಿನ ಹೊಯ್ದಾಟವನ್ನು ಉದಾಹರಣೆಯ ಮೂಲಕ ಇಲ್ಲಿ ಹೇಳಿದ್ದಾರೆ.

ಮಾನವನ ವ್ಯಕ್ತಿತ್ವದ ಉನ್ನತಿಗೆ, ಒಳ್ಳೆಯ ಕೆಲಸ–ಕಾರ್ಯಗಳಿಗೆ ಕೆಲವೊಂದು ಹಠಮಾರಿತನಗಳು ಬೇಕೆ ಬೇಕು. ಅವು ಎಂಥ ಹಠಮಾರಿತನಗಳೆಂಬುದನ್ನು ಬಸವಣ್ಣನವರ ಈ ವಚನ ತಿಳಿಸುತ್ತದೆ.

ಛಲಬೇಕು ಶರಣಂಗೆ ಪರಧನವ ನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯ ನೊಲ್ಲೆನೆಂಬ



ಛಲಬೇಕು ಶರಣಂಗೆ ಪರದೈವ ನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗ ಜಂಗಮವದೊಂದೆಂಬ
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲವಿಲ್ಲದವರ ಮೆಚ್ಚ ಕೂಡಲ ಸಂಗಮದೇವ

*(ವಚನ ವಾಹಿನಿ 1 ಬಸವರಾಜ ದೇವರ ವಚನಗಳು ವಿ.ಅ.ಸಂ.ಜ.ತೋ.ಸಂ. ಗದಗ, ವ.ಸಂ.–197 ಪು.ಸಂ.49)*

ಇಲ್ಲಿ ಬಸವಣ್ಣನವರು ಬಳಸಿದ 'ಛಲ' ಎಂಬ ಶಬ್ದ ಮನಸ್ಸಿಗೆ ಸಂಬಂಧಪಟ್ಟಿದ್ದು ಇದನ್ನು ತೋರಿಸು ಎಂದರೆ ಸಾಧ್ಯವಾಗದೊಂದು ಇರಬಹುದು. ಆದರೆ ಅಂತರ್ಯದಲ್ಲಿ ಅವ್ಯಕ್ತವಾಗಿ ಇಂಥಾ ಛಲವಿರಬೇಕೆನ್ನುವರು. ಈ ಛಲ ಎನ್ನುವದೊಂದು ಮನಸ್ಸಿನ ಒಂದು ಸ್ಥಿತಿ. ಮನಸ್ಸಿನ ಒಂದು ಗಟ್ಟಿತನ, ಮನಸ್ಸಿನ ಹಟವೆಂದು ಹೇಳಬಹುದು. ಪರರಹಣ, ಪರರಹೆಣ್ಣು, ಪರರದೈವ ಒಲ್ಲೆನೆಂಬ ಗಟ್ಟಿತನ ಮಾನವನ ಮನಸ್ಸಿಗೆ ಬೇಕು ಎನ್ನುವರು. ವ್ಯಕ್ತಿಯು ತನ್ನ ಪರಿಸರದೊಂದಿಗೆ ಸ್ಥಾಪಿಸುವ ವಿಶಿಷ್ಟ ರೀತಿಯ ಹೊಂದಾಣಿಕೆಯನ್ನು ನಿರ್ಧರಿಸುವಂತಹ ನಡತೆ, ಸ್ವಭಾವ ಹೇಗಿರಬೇಕೆಂದು ಬಸವಣ್ಣನವರು ತಿಳಿಸಿ ವ್ಯಕ್ತಿಯ ಮತ್ತು ಸಮಾಜದ ಮಾನಸಿಕ ಆರೋಗ್ಯ ಸ್ಥಿರವಾಗಿಟ್ಟುಕೊಳ್ಳಲು ಸೂಚಿಸುವರು.

ಬಸವಣ್ಣನವರು ತಮ್ಮ ಇನ್ನೊಂದು ವಚನದಲ್ಲಿ ದುರ್ಮಾರ್ಗದಿಂದ ನಡೆಯುವವರಿಗೆ ಸನ್ಮಾರ್ಗವನ್ನು ತೋರಿಸಿದರೂ ಯಾವುದೇ ಪ್ರಯೋಜನವಾಗುವುದಿಲ್ಲ, ದುಷ್ಟ ಬುದ್ಧಿಯುಳ್ಳವರ ಸ್ಥಿತಿ ಹೇಗೆಂಬುದನ್ನು ಈ ವಚನದಲ್ಲಿ ಹೇಳುವರು.

ಕತ್ತೆಯ ಕರವೆತ್ತಿ ಕರವೆತ್ತಿ ಕರೆದಡೆ
ಅದೆತ್ತಾ ದಾತೆಯೆಂದು ಬಲ್ಲುದು?
ಕುಬುದ್ಧಿಯುಳ್ಳವರಿಗೆ ಸುಬುದ್ಧಿಯ ಹೇಳಿದಡೆ
ಕುಬುದ್ಧಿ ಮಾಣ್ಬುದೆ ಕೂಡಲಸಂಗಮದೇವಾ.

*(ವಚನ ವಾಹಿನಿ 1 ಬಸವರಾಜ ದೇವರ ವಚನಗಳು ವಿ.ಅ.ಸಂ.ಜ.ತೋ.ಸಂ. ಗದಗ, ವ.ಸಂ.138 ಪು.ಸಂ. 34)*

ದುಷ್ಟ ಮನಸ್ಸುಳ್ಳವರ ಸ್ವಭಾವವನ್ನು ಎಂದಿಗೂ ತಿದ್ದಲೂ ಸಾಧ್ಯವಿಲ್ಲ ಕತ್ತೆಯನ್ನು ಕೈ ಎತ್ತಿ ಕರೆದರೆ ಅದು ಹೇಗೆ ಪ್ರತಿಕ್ರಿಯಿಸಲಾರದೋ ಹಾಗೆ ಕೆಟ್ಟ ಬುದ್ಧಿಉಳ್ಳವರನ್ನು ತಿದ್ದುವುದು ಅಸಾಧ್ಯ ಎನ್ನುವರು ಅದೇ ಅರ್ಥ ಬರುವಹಾಗೆ ಅಕ್ಕ ತನ್ನೊಂದು ವಚನದಲ್ಲಿ–

ಕೊಳಲ ದನಿಗೆ ಸರ್ಪ ತಲೆದೂಗಿದಡೇನು
ಒಳಗಣ ವಿಷದ ಬಯಕೆ ಬಿಡದನ್ನಕ್ಕ
ಹಾಡಿದಡೇನು, ಕೇಳಿದಡೇನು,



ತನ್ನಲ್ಲುಳ್ಳ ಅವಗುಣ ಬಿಡದನ್ನಕ್ಕ
ಒಳಗನರಿದು ಹೊರಗೆ ಮರೆದವರ
ನೀ ಎನಗೆ ತೋರಯ್ಯಾ ಚೆನ್ನಮಲ್ಲಿಕಾರ್ಜುನಾ

*(ಅಕ್ಕ ಮಹಾದೇವಿಯವರ ಆಯ್ದ 108 ವಚನಗಳು ಸಂ. ಲೀಲಾದೇವಿ ಆರ್. ಪ್ರಸಾದ ವ.ಸಂ. 59, ಪು.ಸಂ.57)*

ಇಂಪಾದ ಕೊಳಲ ಧ್ವನಿಗೆ ಹಾವು ತಲೆದೂಗಿ ಶಾಂತವಾದರೂ ತನ್ನಲ್ಲಿರುವ ವಿಷವನ್ನು ಬಿಡುವುದಿಲ್ಲ. ಹಾಗೆಯೇ ಕೆಟ್ಟಗುಣ ಅಥವಾ ಕೆಟ್ಟ ಮನಸ್ಸುಳ್ಳವರು ಮಂತ್ರ ಪಠಣ ಮಾಡಿದರೂ, ಹಾಡಿದರೂ ತಮ್ಮಲ್ಲಿರುವ ಅವಗುಣಗಳನ್ನು ಬಿಡುವುದಿಲ್ಲ ಎಂದು ಹೇಳುತ್ತ ಒಳ ಮನಸ್ಸನ್ನು ಅರಿತು ಮರೆವ ಮಹಾತ್ಮರನ್ನು ನೀ ಎನಗೆ ತೋರಿಸು ಎನ್ನುವರು ಅಂದರೆ ನಮ್ಮ ಅಂತರಂಗ ಮತ್ತು ಬಹಿರಂಗ ಎರಡು ಒಂದೇ ಯಾಗಿರಬೇಕು. ಬಾಹ್ಯದಲ್ಲಿ ಬಸವ್ವ ಅಂತರ್ಯದಲ್ಲಿ ವಿಸವ್ವನಾಗಿರದೇ ಒಳಗೂ ಹೊರಗೂ ಒಂದೇ ಯಾಗಿರಬೇಕೆಂಬ ಆಶಯ ಅಕ್ಕನದ್ದಾಗಿದೆ.

ಒಟ್ಟಾರೆ ಈ ಮನದ ಕಲ್ಮಶಕ್ಕೆ ಅಜ್ಞಾನವೇ ಮೂಲ ಕಾರಣ ವೆಂದು ಶಿವಶರಣರು ಹೇಳುತ್ತಾರೆ. ಬಸವಣ್ಣನವರ ಒಂದು ವಚನ ಮನದ ಅಜ್ಞಾನತೆಯಿಂದ ಏನೇನೂ ಮನೋವಿಕಾರಗಳು ಹುಟ್ಟುತ್ತವೆ ಎಂಬುದನ್ನು ತಮ್ಮ ವಚನ ಒಂದರಲ್ಲಿ ಹೇಳುತ್ತಾರೆ.

ಅಜ್ಞಾನದಿಂದ ಹುಟ್ಟಿತ್ತು ಅಹಂಮಂತೆ
ಅಜ್ಞಾನದಿಂದ ಹುಟ್ಟಿತ್ತು ಮನಸ್ಸಂಚಲ
ಅಜ್ಞಾನದಿಂದ ಹುಟ್ಟಿತ್ತು ಇಂದ್ರಿಯೋದ್ರೇಕ

ಎನ್ನುತ್ತ ಈ ಮನದ ಅಂಧಕಾರವನ್ನು, ಅಜ್ಞಾನವನ್ನು ಮಾನವ ಹೇಗೆ ಕಳೆದು ಕೊಳ್ಳಬೇಕು, ಸುಜ್ಞಾನಿಯಾಗುವ ಬಗೆ ಹೇಗೆಂದು ಶರಣರೆ ಸೂಚಿಸುತ್ತಾರೆ. ಔಷಧವನ್ನು ಸ್ವತಃ ಶರಣರೆ ಹೇಳುತ್ತಾರೆ.

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ
ಕೂಡಲ ಸಂಗನ ಶರಣರ ಅನುಭಾವದ ಬಲದಿಂದ
ಎನ್ನ ಭವದ ಕೇಡು ನೋಡಯ್ಯಾ

*(ವಚನ ವಾಹಿನಿ 1 ಬಸವರಾಜರ ದೇವರ ವಚನಗಳು ವೀ.ಅ.ಸಂ.ಜ.ತೋ.ಸಂ. ಗದಗ ವ.ಸಂ. 208 ಪು.ಸಂ. 51)*



ಬಸವಣ್ಣನವರ ಈ ವಚನದ ಸಾಲುಗಳು ಮನದ ಅಜ್ಞಾನವನ್ನು ಹೋಗಲಾಡಿಸಲು ಜ್ಞಾನವೊಂದೆ ದಿವ್ಯೌಷಧ ಎನ್ನುವಂತಿದೆ.

ಒಟ್ಟಾರೆ ಅಂದಿನ ಶಿವಶರಣರು ತಮ್ಮ ವೈಯಕ್ತಿಕ ಸ್ವಾರ್ಥ ಸಾಧನೆಗಾಗಿ ಸಮಾಜದ ಹಿತವನ್ನು ಬಲಿಕೊಡುವವರ ವಿರುದ್ಧ ಸತತ ಹೋರಾಟ ನಡೆಸಿ ಪ್ರಜಾಪ್ರಭುತ್ವದ ಗಂಧ ಗಾಳಿ ಕೂಡಾ ಗೊತ್ತಿರದ ಆ ಕಾಲದಲ್ಲಿ ಬಿಜ್ಜಳ ದೊರೆಯ ರಾಜಧಾನಿ ಕಲ್ಯಾಣದಲ್ಲಿ ತಮ್ಮ ವೈಜ್ಞಾನಿಕ ಮನೋಭಾವದಿಂದ ಪ್ರಖರ ವಿಚಾರವಾದಿಗಳಾಗಿ, ಜಾತ್ಯಾತೀತತೆಯ ದಿಟ್ಟ ವಕ್ತಾರರಾಗಿ, ಮಾನವೀಯ ಗುಣಗಳ ಮುತ್ಸದ್ದಿಗಳಾಗಿ ಹೊರಹೊಮ್ಮಿದ್ದು ಸೋಜಿಗದ ಸಂಗತಿ.

ಗ್ರಂಥ ಋಣ


1. ವಚನಗಳಲ್ಲಿ ವಿಜ್ಞಾನ, ಸಂ. ಡಾ. ವೀರಣ್ಣ ರಾಜೂರ ಹಾಗೂ ಶ್ರೀ ಬಸವರಾಜ ಹೂಗಾರ
2. ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ, ಸ್ವಾಮಿ ಯತೀಶ್ವರಾನಂದ
3. ವಚನ ಸಂಸ್ಕೃತಿ, ಡಾ. ಎಸ್.ಆರ್. ಚಂದ್ರೇಗೌಡ
4. ಬಸವಣ್ಣನವರ ಹಾಗೂ ಅಕ್ಕಮಹಾದೇವಿಯವರ ವಚನಗಳಲ್ಲಿ ವೈಜ್ಞಾನಿಕ ಅಂಶಗಳು – ಡಾ. ವ್ಹಿ.ವ್ಹಿ. ಬಾಗಲಕೋಟೆ
5. ಮಹಾದೇವಿ ಅಕ್ಕನ ಯೋಗಾಂಗ ತ್ರಿವಿಧಿಯಲ್ಲಿ ಶಿವಯೋಗ, ವ್ಹಿ.ಜಿ. ಶೀಲವಂತರ





## VACHAN SAHITYADALLI VAIJNANIKATE

*Collection of Articles Presented in National Seminar*

Editor's Name : Dr. Nagaraj D. Murgod
Published by : Avva Pustaka Prakashan, Belagavi
Revised First Impression : 2021
Copies : 1000
Pages : XII + 130 = 142
Price : Rs. 150/-
Paper Used : 70 GSM (Demy 1/8th)
Copy Right : Editor
Cover Design : Chittar Kala Balaga, Dharawad
DTP : Ravi Kammar
Printers : B G Printers, Dharwad
ISBN : 978-81-950975-1-7

ವಚನ ಸಾಹಿತ್ಯದಲ್ಲಿ ವೈಜ್ಞಾನಿಕತೆ :
ರಾಷ್ಟ್ರೀಯ ವಿಚಾರ ಸಂಕಿರಣದ ಸಂಶೋಧನ ಪ್ರಬಂಧಗಳ ಸಂಕಲನ
ಸಂಪಾದಕರು : ಡಾ. ನಾಗರಾಜ ಡಿ. ಮುರಗೋಡ
ಪ್ರಕಾಶಕರು : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ
ಪುಟಗಳು : XII+130 = 142
ಪರಿಷ್ಕೃತ ಪ್ರಥಮ ಮುದ್ರಣ : ೨೦೨೧
© : ಸಂಪಾದಕರು
ಬೆಲೆ : ರೂ. ೧೫೦/-
ಅಳತೆ : ಡೆಮಿ ೧/೮
ಅಕ್ಷರ ಸಂಯೋಜನೆ : ರವಿ ಕಮ್ಮಾರ
ಮುಖಪುಟ : ಚಿತ್ತಾರ ಕಲಾ ಬಳಗ, ಧಾರವಾಡ
ಮುದ್ರಕರು : ಬಿ. ಜಿ. ಪ್ರಿಂಟರ್ಸ್, ಧಾರವಾಡ
ISBN : 978-81-950975-1-7




ಅರ್ಪಣೆ...

ಬರದ ನಾಡಿನಲ್ಲಿ ಬೃಹತ್ ವಿದ್ಯಾಸಂಸ್ಥೆಯೊಂದನ್ನು ಕಟ್ಟಿ
ಮನೆ-ಮನಗಳಲ್ಲಿ
ನಿರಂತರವಾಗಿ ಜ್ಞಾನ ಜ್ಯೋತಿ ಬೆಳಗುವಂತೆ ಮಾಡಿದ
ಕಾಯಕಯೋಗಿ ಮತ್ತು ಭಕ್ತರ ಕಣ್ಮಣಿ
ಲಿಂ. ಪರಮಪೂಜ್ಯ ಶ್ರೀ ಚನ್ನವೀರ ಮಹಾಸ್ವಾಮಿಗಳು,
ಸಾರಂಗಮಠ-ಗಚ್ಚಿನಮಠ, ಸಿಂದಗಿ ಅವರ ದಿವ್ಯ
ಚೇತನಕ್ಕೆ
ಭಕ್ತಿಪೂರ್ವಕವಾಗಿ ಸಮರ್ಪಿತ

# ವಚನ ಸಾಹಿತ್ಯದಲ್ಲಿ ಮನೋವಿಜ್ಞಾನ

– ಡಾ. ನಾಗರಾಜ ಡಿ. ಮುರಗೋಡ

ಕರ್ನಾಟಕದ ಮಹತ್ಸಾಧನೆಯ ಇತಿಹಾಸದಲ್ಲಿ ವಚನ ಸಾಹಿತ್ಯದ ಸ್ಥಾನ ವಿಶಿಷ್ಟವಾದುದು. ಯುಗದ ಪ್ರವರ್ತಕ ಶಕ್ತಿಯಾಗಿ ಸ್ಥಾವರ ಮೌಲ್ಯಗಳನ್ನು ಅಲುಗಿಸಿ ಚಲನಶೀಲ ಮೌಲ್ಯದ ಪ್ರತೀಕವೆನಿಸಿದವರು ಶಿವಶರಣರು, ದಲಿತರು, ಶೋಷಿತರು, ಕೆಳವರ್ಗದವರು ಮೊದಲ ಬಾರಿಗೆ ವಾಸ್ತವಕ್ಕೆ ಸ್ಪಂದಿಸಿ ಸಾಹಿತ್ಯದ ಮುಖಾಂತರ ತಮ್ಮ ಅನಿಸಿಕೆಯನ್ನು ಸ್ಪಷ್ಟಪಡಿಸಿದ್ದು ಇದೇ ಸಂದರ್ಭದಲ್ಲಿ. ಅರಮನೆ, ರಾಜಾಶ್ರಯಗಳಲ್ಲಿ ಮಲೆತು ನಿಂತ ಪಂಡಿತರ ಕಪಿಮುಷ್ಟಿಯಿಂದ ಪಾರಾಗಿ ಬಂದ ಕನ್ನಡ ಸಾಹಿತ್ಯ ಸಹಜವಾಗಿ ಉಸಿರಾಡಿದ್ದು; ಜನಸಾಮಾನ್ಯರ ನೋವು ನಲಿವುಗಳಿಗೆ ನಾಲಿಗೆಯಾಗಿದ್ದು; ದುಡಿವ ವರ್ಗದ ಜನರ ಮೊದಲ ತೊದಲ್ನುಡಿಯಾಗಿ ಹೊರಹೊಮ್ಮಿದ್ದು ವಚನ ಸಾಹಿತ್ಯದ ಪರಿಸರದಲ್ಲಿಯೇ.

ಶಿವಶರಣರು ಅದೆಷ್ಟೋ ವೈಜ್ಞಾನಿಕ ಸತ್ಯ ಸಂಗತಿಗಳನ್ನು ಕಂಡರಿಯದಿದ್ದರೂ ಕಂಡಂತೆ; ಕಂಡ ಹಾಗೆ ತಮ್ಮ ವಚನಗಳಲ್ಲಿ ಸತ್ಯವನ್ನು ನಿರೂಪಿಸಿದ್ದಾರೆ. ಅಂದಿನ ಆ ವಚನಗಳು ಕೇವಲ ಒಂದು ವಿಷಯಕ್ಕೆ ಮಾತ್ರ ಸೀಮಿತವಾಗಿರದೆ ಅಂಗೈಯಲ್ಲಿ ಅರಮನೆಯನ್ನು ತೋರಿಸಿದಂತೆ ಹಲವು ವಿಷಯಗಳನ್ನು ಅರಿವಿಗೆ ತಂದ ಕೀರ್ತಿ ಬಸವಾದಿ ಶರಣರಿಗೆ ಸಲ್ಲುತ್ತದೆ.

ಒಂದು ವಸ್ತುವಿನ ನಿಖರವಾದ, ಸತ್ಯವಾದ, ಸ್ಪಷ್ಟವಾದ ಪ್ರಯೋಗಾತ್ಮಕವಾಗಿ ಸತ್ಯವನ್ನು ಕಂಡುಕೊಂಡ ಅಧ್ಯಯನವೇ ವಿಜ್ಞಾನ ಎಂದು ಕರೆಯಿಸಿಕೊಳ್ಳುತ್ತದೆ. ಇಂದು ನಾವು ವಚನ ಸಾಹಿತ್ಯದಲ್ಲಿ ಹುದುಗಿರುವ ಅದೆಷ್ಟೋ ವೈಜ್ಞಾನಿಕ ಅಂಶಗಳ ಕುರಿತು ಗಮನಹರಿಸಬೇಕಿದೆ. ವಚನದ ಹಾಗೇ ವಿಜ್ಞಾನವು ಸಹಿತ ವಿಫುಲ ವಿಭಾಗಗಳನ್ನು ಒಳಗೊಂಡಿದೆ. ಸಸ್ಯ ವಿಜ್ಞಾನ, ಭೂಗರ್ಭ ವಿಜ್ಞಾನ, ಭೌತವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಕೃಷಿವಿಜ್ಞಾನ, ಭೂಗೋಳ ವಿಜ್ಞಾನ, ರಸಾಯನ ವಿಜ್ಞಾನ, ಖಗೋಳ ವಿಜ್ಞಾನ, ಯೋಗ ವಿಜ್ಞಾನ, ಮನೋವಿಜ್ಞಾನ ಇನ್ನೂ ಅನೇಕ. ಇಲ್ಲಿ ಅಧ್ಯಯನದ ವ್ಯಾಪ್ತಿಯ ಬಾಹುಳ್ಯತೆಯನ್ನು ಅರಿತು ವಚನಸಾಹಿತ್ಯದಲ್ಲಿನ ಮನೋವಿಜ್ಞಾನ ವಿಷಯವನ್ನು ಮಾತ್ರ ಆಯ್ದುಕೊಳ್ಳಲಾಗಿದೆ.



ಈ ವಚನಕಾರರ ವಚನಗಳಲ್ಲಿ ಮೂಡಿಬಂದಿರುವ ಹಲವಾರು ಮನೋವೈಜ್ಞಾನಿಕ ಪರಿಕಲ್ಪನೆಗಳು ೨೦ ನೆಯ ಶತಮಾನದಲ್ಲಿ ಆವಿಷ್ಕಾರಗೊಂಡ ಸಿದ್ಧಾಂತಗಳಿಗೆ ಸಂವಾದಿಯಾಗಿರುವುದನ್ನು ಕಂಡರೆ ನಿಜಕ್ಕೂ ಆಶ್ಚರ್ಯವಾಗುತ್ತದೆ. ಅಂದಿನ ವಚನಕಾರರು ನಿಜವಾಗಿ ಮನೋವಿಜ್ಞಾನಿಗಳಾಗಿರಬಹುದೇ ಎಂಬ ಚಿಂತನೆಗೆ ಗ್ರಾಸ ಒದಗಿಸುತ್ತದೆ.

ಮನೋವಿಜ್ಞಾನವು ಗ್ರೀಕ ಭಾಷೆಯ 'Psycho' ಮತ್ತು 'Logos' ಎಂಬ ಎರಡು ಪದಗಳ ಮಿಶ್ರಣದಿಂದ ಉತ್ಪತ್ತಿಯಾದ ಪದ. ಇಂಗ್ಲೀಷಿನ Physiology ಎಂಬ ಪದಕ್ಕೆ ಸಮನಾಗಿ ಕನ್ನಡದಲ್ಲಿ ಮನೋವಿಜ್ಞಾನ ಪದವನ್ನು ಬಳಸಲಾಗುತ್ತದೆ. Psycho – ಎಂದರೆ 'ಆತ್ಮ', Logos – ಎಂದರೆ ಅಧ್ಯಯನ. ಅಂದರೆ ಆತ್ಮವನ್ನು ಕುರಿತು ಅಧ್ಯಯನ ಮಾಡುವುದೆ ಮನೋವಿಜ್ಞಾನ. ಇದು ಮೊದಲು ತತ್ವಶಾಸ್ತ್ರದ ಒಂದು ಭಾಗವಾಗಿತ್ತು ಆದರೆ ಇತ್ತೀಚೆಗೆ ಇದರ ಪ್ರಾಮುಖ್ಯತೆ ಹೆಚ್ಚಾದಂತೆ ಒಂದು ಪ್ರತ್ಯೇಕ ಶಾಖೆಯಾಗಿ ಮತ್ತು ವಾಸ್ತವಿಕತೆ ಹೆಚ್ಚಿದಂತೆ ಈ ವಿಷಯವನ್ನು ಒಂದು ಪ್ರತ್ಯೇಕ ವಿಷಯ ವಿಜ್ಞಾನವಾಗಿ ಮಾರ್ಪಡಿಸಲಾಗಿದೆ.

ಆತ್ಮವನ್ನು ಕುರಿತು ಅಧ್ಯಯನ ಮಾಡುವುದೆ ಮನೋವಿಜ್ಞಾನವೆಂದು Physiology ಯ ಶಬ್ದಶಃ ಅನುವಾದದಿಂದ ಅರ್ಥವಾಗುತ್ತದೆ. ಆದರೆ ಆತ್ಮದ ಸ್ವಭಾವ, ನಿಲುವು ಇನ್ನುವರೆಗೆ ದೊರಕದೆ ಹೋಗಿದ್ದರಿಂದ ಈ ವ್ಯಾಖ್ಯೆಯನ್ನು ಮರು ಚಿಂತನೆಗೆ ಒಳಪಡಿಸಲಾಗಿದೆ. ಮನಸ್ಸಿನ ವಿಜ್ಞಾನವೇ ಮನೋವಿಜ್ಞಾನ ಎನ್ನುವದಾದರೆ ಆತ್ಮದಂತೆ ಮನಸ್ಸು ಸಹ ಅಗೋಚರ. ಅದರ ಸ್ವರೂಪವನ್ನು ಅಧ್ಯಯನ ಮಾಡುವದು ಅಸಾಧ್ಯ. ಪ್ರಜ್ಞಾನುಭವದ ಜ್ಞಾನವೇ ಮನೋವಿಜ್ಞಾನ ಎನ್ನುವದಾದರೆ ಪ್ರಜ್ಞೆಯಲ್ಲಿ ಜಾಗೃತ ಮತ್ತು ಅಜಾಗೃತ ಪ್ರಜ್ಞೆಯಿರುವುದರಿಂದ ಇವೆರಡನ್ನು ಅಭ್ಯಸಿಸುವದು ಸಾಧ್ಯವಾಗದ ಮಾತು. ಒಟ್ಟಾರೆ ಮಾನವನ ವರ್ತನೆಯನ್ನು ಕುರಿತು ಅಧ್ಯಯನ ಮಾಡುವುದೇ ಮನೋವಿಜ್ಞಾನ ಎಂದಾಗುತ್ತದೆ. ಅದೇನೇ ಇರಲಿ ೧೨ ನೇ ಶತಮಾನದ ಆದ್ಯ ವಚನಕಾರ ತನ್ನೊಂದು ವಚನದಲ್ಲಿ

**ಮೊಲೆ ಮುಡಿ ಬಂದರೆ ಹೆಣ್ಣೆಂಬರು**
**ಗಡ್ಡ ಮೀಸೆ ಬಂದರೆ ಗಂಡೆಂಬರು**
**ನಡುವೆ ಸುಳಿವಾತ್ಮನು**
**ಗಂಡೂ ಅಲ್ಲ ಹೆಣ್ಣೂ ಅಲ್ಲ ರಾಮನಾಥಾ**



ಇಲ್ಲಿ ಸ್ತ್ರೀ–ಪುರುಷರ ಸಮಾನತೆಯ ಕುರಿತು ಜೇಡರ ದಾಸಿಮಯ್ಯ ಅಂದು ಪ್ರತಿಪಾದಿಸಿದ ನಿಲುವು ಎಂದೆಂದಿಗೂ ಪ್ರಸ್ತುತವೇ ಆಗಿದೆ. ಈ ಅಸಮಾನತೆಯು ಮಾನಸಿಕ ಅತಿರೇಕವೇ ಹೊರತು ವೈಜ್ಞಾನಿಕ ಅಥವಾ ವೈಚಾರಿಕ ಕಾರಣಗಳಿಂದಲ್ಲ ಎನ್ನುವ ವಿಚಾರ ಸ್ಪಷ್ಟವಾಗುವುದರ ಜೊತೆಗೆ ಆತ್ಮದ ಸ್ಪಷ್ಟ ಪರಿಕಲ್ಪನೆ ಅಂದಿನ ವಚನಕಾರರಿಗೆ ಇತ್ತೆಂದು ತಿಳಿಯುತ್ತದೆ.

ಬಸವಾದಿ ಶರಣರು ವಚನಗಳನ್ನು ಮುಖ್ಯವಾಗಿ ಧಾರ್ಮಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಚಿಂತನಗಳನ್ನು ಗುರಿಯಾಗಿಟ್ಟುಕೊಂಡು ರಚಿಸಿದ್ದಾರೆ. ಅಂಥಾ ವಿಷಯಗಳಿಗೆ ಪೂರಕವಾಗಿ ಉದಾಹರಣೆಗಳನ್ನು ನೀಡುವಾಗ ಅವರ ಅಂತರ್ಗತದಲ್ಲಿರುವ ವೈಜ್ಞಾನಿಕ ಅಂಶಗಳು ಬೆಳಕಿಗೆ ಬಂದಿವೆ.

ಮನಸ್ಸು, ಬುದ್ಧಿ, ಅಹಂಕಾರ ಮತ್ತು ಚಿತ್ತ ಇವುಗಳಿಂದ ನಮ್ಮ ಅಂತಃಕರಣವು ರೂಪಿತಗೊಂಡಿದೆ. ಮನದಲ್ಲಿ ಸಹಜವಾಗಿ ಸಂಕಲ್ಪ, ವಿಕಲ್ಪಗಳು ಹುಟ್ಟುತ್ತವೆ. ಚಿತ್ತವು ಅದರ ಬಗ್ಗೆ ಚಿಂತನೆ ಮಾಡುತ್ತದೆ. ಬುದ್ಧಿಯು ಅವುಗಳ ಸಂಬಂಧದಿಂದ ತನ್ನ ನಿರ್ಣಯ ನೀಡುತ್ತದೆ. ಅಹಂಕಾರದಿಂದ ಕರ್ತೃತ್ವಭಾವ ಉಂಟಾಗುತ್ತದೆ. ಹೀಗೆ ಮನಸ್ಸು ಸಂಕಲ್ಪ ವಿಕಲ್ಪಗಳ ಉಗಮಸ್ಥಾನವು ಹಾಗೂ ಇಂದ್ರಿಯಗಳ ಪ್ರೇರಕ ಮತ್ತು ನಿಯಂತ್ರಕವು ಆಗಿದೆ. ಮನವು ಕೇಂದ್ರಿಕೃತವಾಗದೇ ಯಾವುದೇ ಕೆಲಸ–ಕಾರ್ಯಗಳು ಒಳ್ಳೆಯ ರೀತಿಯಿಂದ ನಡೆಯಲಾರವು. ನಾವು ಮಾಡುವ ಪ್ರತಿಯೊಂದು ಕರ್ಮವು ಮೊದಲು ಮನದಲ್ಲಿ ರೂಪುಗೊಂಡು, ತದನುಸಾರ ಇಂದ್ರಿಯಗಳು ಅದನ್ನು ಕಾರ್ಯಗತಗೊಳಿಸುತ್ತವೆ. ಒಟ್ಟಾರೆ ನಮ್ಮ ಎಲ್ಲ ಕಾರ್ಯಗಳಿಗೂ ಮನಸ್ಸೇ ಮೂಲ ಕಾರಣವಾಗಿದೆ.

**ಅದನ್ನೇ ಅಕ್ಕನವರ ಒಂದು ವಚನ ಹೀಗೆ ಹೇಳುತ್ತದೆ.**
**ಲೋಕದ ಚೇಷ್ಟೆಗೆ ರವಿ ಬೀಜವಾದಂತೆ**
**ಕರಣಂಗಳ ಚೇಷ್ಟೆಗೆ ಮನವೇ ಬೀಜ,**
**ಎನಗುಳ್ಳದೊಂದು ಮನ, ಆ ಮನ ನಿನ್ನಲ್ಲಿ ಸಿಲುಕಿದ ಬಳಿಕ,**
**ಎನಗೆ ಭವವುಂಟೆ? ಚೆನ್ನಮಲ್ಲಿಕಾರ್ಜುನ**

(ಸಮಗ್ರ ವಚನ ಸಂಪುಟ ೫, ಅಕ್ಕಮಹಾದೇವಿಯವರ ವಚನಗಳು, ಕ.ಸ.ಕ.ಸಂ.ನಿ. ಬೆಂಗಳೂರು ವ.ಸಂ.೨೯೭, ಪು.ಸಂ. ೯೨)

ಭೂಮಿಯ ಮೇಲಿನ ಸಕಲ ಚಟುವಟಿಕೆಗಳಿಗೆ ಸೂರ್ಯನ ಶಕ್ತಿಯೇ ಕಾರಣ. ಮಾನವನ ದೇಹದ ಅಂಗಾಂಗಗಳ ಚಟುವಟಿಕೆಗಳಿಗೆ ಮನಸ್ಸೇ

ಮೂಲ ಕಾರಣ ಮನಸ್ಸೇ ಮಾನವನ ನಿಯಂತ್ರಕ ಶಕ್ತಿ, ಚಲನ ಶಕ್ತಿ ಎಂದು ಮಹಾದೇವಿಯಕ್ಕ ತಿಳಿಸುತ್ತ ಅದೇ ಮನ ಬಿನ್ನಲ್ಲಿ ಸಿಲುಕಿದ ಬಳಿಕ ಎನಗೆ ದುಃಖ ಉಂಟೆ, ಪುನರ್ಜನ್ಮ ಉಂಟೆ? ಎಂದು ಪ್ರಶ್ನಿಸುತ್ತಾಳೆ. ಮನಸ್ಸನ್ನು ಕೇಂದ್ರೀಕೃತ ಗೊಳಿಸಿದರೆ ಯಾವ ನೋವುಗಳು ನಮ್ಮನ್ನು ಬಾಧಿಸುವುದಿಲ್ಲ ಎಲ್ಲದಕ್ಕೂ ಮನಸ್ಸೇ ಮೂಲ ಕಾರಣವೆಂದು ಹೇಳುತ್ತ ಮುಕ್ತಿಯ ವಿಧಾನವನ್ನು ಸಹ ತಿಳಿಸಿದ್ದಾಳೆ.

**ಅಲ್ಲಮ ಪ್ರಭುದೇವರು ತಮ್ಮ ಒಂದು ವಚನದಲ್ಲಿ;**

**ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ**
**ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ**
**ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ**
**ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ**

(ಅಲ್ಲಮ ಪ್ರಭುದೇವರ ೧೦೮ ವಚನಗಳು ಸಂ : ಶ್ರೀ ಟಿ.ಆರ್. ಮಹದೇವರು ಬಸವಸಮಿತಿ, ಬೆಂಗಳೂರು ಪು.ಸಂ.೭)

ರಾಮಾಯಣ, ಮಹಾಭಾರತ ಯುದ್ಧಗಳಷ್ಟೇ ಅಲ್ಲದೇ ಇಲ್ಲಿಯವರೆಗೆ ನಡೆಯುವ ಪ್ರತಿಯೊಂದು ಕಲಹಗಳು ಈ ಮೂರರಿಂದಲೇ ಎನ್ನುವರು ಅವು ಹೆಣ್ಣು, ಹೊನ್ನು, ಮತ್ತು ಮಣ್ಣು ಆದರೆ ಅಲ್ಲಮ ಪ್ರಭು ಇವುಗಳನ್ನು ಅಲ್ಲಗಳೆದು ಮನಸ್ಸಿನಲ್ಲಿರತಕ್ಕ ಅತಿಯಾದ ಆಸೆಯೇ ಮಾಯೆ ಎನ್ನುವರು. ಎಲ್ಲ ಅನಾಹುತಕ್ಕೆ ಎಲ್ಲ ಒಳ್ಳೆದಕ್ಕೂ ಮನಸ್ಸೇ ಮೂಲ ಕಾರಣ ಮನಸ್ಸಿನಾಳದ ಯೋಚನಾ ಲಹರಿಯೇ ಎಲ್ಲದರ ಆದಿ ಹಾಗೂ ಅಂತ್ಯ.

ಮನುಷ್ಯನ ಚಂಚಲತೆಗೆ ಮನವೇ ಮೂಲ ಕಾರಣವೆಂದು ಬಸವಣ್ಣನವರು ಹೇಳುತ್ತ ಅದು ಕ್ಷಣ ಕ್ಷಣಕ್ಕೂ ನಾನಾ ದಿಕ್ಕಿಗೆ ಚಲಿಸುತ್ತದೆ. ಅದರ ವೇಗ ನಮ್ಮ ಈ ವಿಮಾನ, ರಾಕೇಟ ವೇಗಕ್ಕಿಂತಲೂ ಮಿಗಿಲು ಎನ್ನುತ್ತ ಮನವು ಮಂಗನಂತೆ ಸುಮ್ಮನಿರದೆ ಯಾವುದೇ ಕಾರಣವಿರದೆ ಗಿಡದಿಂದ ಗಿಡಕ್ಕೆ ಜಿಗಿಯುವಂತೆ ಮಾಡೆಂದು ಹೇಳುವರು.

**ಅನ್ನೇವೆನಿನ್ನೇವೆನಯ್ಯಾ!**
**ಎನ್ನ ಮನವೆಂಬ ಮರ್ಕಟನ ದಾಳಿ ಘನವಾಯಿತ್ತು**
**ಎನ್ನ ನಿಂದಲ್ಲಿ ನಿಲ್ಲಲೀಯದು,**
**ಎನ್ನ ಕುಳಿತಲ್ಲಿ ಕುಳ್ಳಿರಲೀಯದು,**
**ಕ್ಷಣದಲ್ಲಿ ಪಾತಾಳಕ್ಕೆ ಐದುತ್ತಿದೆ,**



**ಕ್ಷಣದಲ್ಲಿ ಆಕಾಶಕ್ಕೆ ಐದುತ್ತಿದೆ.**
**ಕ್ಷಣದಲ್ಲಿ ದಿಗ್ದೆಸೆಗೆ ಐದುತ್ತಿದೆ.**
**ಕೂಡಲಸಂಗಮ ದೇವಾ;**
**ಈ ಮನವೆಂಬ ಮರ್ಕಟನ ದಾಳಿಯ ನೆಂದಿಗೆ ನೀಗಿ**
**ಎಂದು ನಿಮ್ಮ ನೊಡಗೂಡಹೆನಯ್ಯಾ?**

(ವಚನವಾಹಿನಿ ಬಸವರಾಜ ದೇವರ ವಚನಗಳು ವೀ.ಅ.ಸಂ.ಜ.ತೋ. ಸಂ; ಗದಗ ವ.ಸಂ. ೭೩ ಪು.ಸಂ.೧೯)

ಇಲ್ಲಿ ಬಸವಣ್ಣನವರು ಓರ್ವ ಮನಶಾಸ್ತ್ರಜ್ಞರಂತೆ ಮನಸ್ಸಿನ ಎಲ್ಲ ವಿಚಾರಗಳನ್ನು ಬಲ್ಲಿದಂತೆ ಎನ್ನ ಮನವಯ್ಯಾ ಹೊತ್ತಿಗೊಂದು ಪರಿಸಪ್ಪ ಗೋಸುಂಬೆಯಂತೆನ್ನ ಮನವು ಬಾವುಲ ಬಾಳುವೆ ಎಂತೆನ್ನ ಮನವು

**ನಡುವಿರುಳಡ್ಡ ಕುರುಡಂಗೆ ಆಗಸೆಯಲಿ ಬೆಳಗಾದಂತೆ**
**ಕೂಡಲಸಂಗಮ ದೇವಾ?**

ಮಾನವನ ಮನಸ್ಸು ಕ್ಷಣಕ್ಷಣಕ್ಕೆ ತನ್ನ ಭಾವನೆಗಳನ್ನು ಬದಲಾಯಿಸಿಕೊಳ್ಳುತ್ತ ಸಾವಿರಾರು ಹೊಸ ಹೊಸ ವಿಷಯಗಳನ್ನು ಆಲೋಚಿಸುತ್ತದೆ ಎನ್ನುತ್ತಾರೆ. ಆಹಾರವನ್ನು ಅರಿಸುವ ಬೆಳಲಿಯ ಮೇಲಿನ ಓತಿಯು ಆಹಾರಕ್ಕಾಗಿ ಯಾವ ಕಡೆಗಾದರೂ ಎರಗಬೇಕಾದ ಮನಸ್ಥಿತಿಯನ್ನು ಜಾಗೃತಿಗೊಳಿಸಿಕೊಂಡಿರುತ್ತದೆ. ಹಾಗೆ ನನ್ನ ಮನ ಎನ್ನುತ್ತ, ಗೊಸುಂಬೆಯಂತೆ ನನ್ನ ಮನಸ್ಸು ಕ್ಷಣ ಕ್ಷಣಕ್ಕೆ ಮೈಬಣ್ಣ ಬದಲಿಸುತ್ತದೆಂದು ಒಮ್ಮೆ ಸಂತೋಷ, ಇನ್ನೊಮ್ಮೆ ದುಃಖ, ಒಮ್ಮೆ ನಗು, ಇನ್ನೊಮ್ಮೆ ಅಳು, ಮತ್ತೊಮ್ಮೆ ಆಶ್ಚರ್ಯ, ತಿರಸ್ಕಾರ ಹೀಗೆ ಗೊಸುಂಬೆಯ ಬಣ್ಣದ ಹಾಗೆ ನಾನಾ ಭಾವಗಳನ್ನು ಹೊಂದುತ್ತದೆ ಎಂದು ಹೇಳುತ್ತ ಕಣ್ಣಿಲ್ಲದ ಬಾವುಲಿಯು ಕೇವಲ ತರಂಗ ಪ್ರತಿ ಫಲನದ ವಿಧಾನದ ಆಧಾರದಿಂದ ತನ್ನ ಹಾರಾಟವನ್ನು ನಡೆಸುತ್ತದೆ. ಮುಂದಿನ ಪ್ರತಿಫಲಿತ ಸಂಜ್ಞೆಗಳು ಬಂದಾಗ ಮಾತ್ರ ಹಾರಾಟ ಮುಂದುವರಿಸುತ್ತದೆ ಹೀಗೆ ಬಾವುಲಿಗೆ ಎತ್ತ ಹೋಗಬೇಕೆಂಬ ಭವಿಷ್ಯ ಗೊತ್ತಿಲ್ಲದಂತೆ; ಎನಗೆ ಮುಂದಿನ ಆಗು ಹೋಗುಗಳ ಬಗ್ಗೆ ಗೊತ್ತಿಲ್ಲದ ಕುರುಡನ ಹಾಗೆ ಆಗಿದೆ ಎಂದು ಮನಸ್ಸಿನ ಹೊಯ್ದಾಟವನ್ನು ಉದಾಹರಣೆಯ ಮೂಲಕ ಇಲ್ಲಿ ಹೇಳಿದ್ದಾರೆ.

ಮಾನವನ ವ್ಯಕ್ತಿತ್ವದ ಉನ್ನತಿಗೆ, ಒಳ್ಳೆಯ ಕೆಲಸ-ಕಾರ್ಯಗಳಿಗೆ ಕೆಲವೊಂದು ಹತವಹಾರಿಕನಗಳು ಬೇಕೆ ಬೇಕು. ಅವು ಎಂಥ ಹತವಹಾರಿಕನಗಳೆಂಬುದನ್ನು ಬಸವಣ್ಣನವರ ಈ ವಚನ ತಿಳಿಸುತ್ತದೆ.



**ಛಲಬೇಕು ಶರಣಂಗೆ ಪರಧನವ ನೊಲ್ಲೆನೆಂಬ**
**ಛಲಬೇಕು ಶರಣಂಗೆ ಪರಸತಿಯ ನೊಲ್ಲೆನೆಂಬ**
**ಛಲಬೇಕು ಶರಣಂಗೆ ಪರದೈವ ನೊಲ್ಲೆನೆಂಬ**
**ಛಲಬೇಕು ಶರಣಂಗೆ ಲಿಂಗ ಜಂಗಮವನೊಂದೆಂಬ**
**ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ**
**ಛಲವಿಲ್ಲದವರ ಮೆಚ್ಚ ಕೂಡಲ ಸಂಗಮದೇವ**

(ವಚನ ವಾಹಿನಿ ೧ ಬಸವರಾಜ ದೇವರ ವಚನಗಳು ವಿ.ಅ.ಸಂ.ಜ.ತೋ.ಸಂ.ಗದಗ. ವ.ಸಂ.-೧೯೭ ಪು.ಸಂ.೪೯)

ಇಲ್ಲಿ ಬಸವಣ್ಣನವರು ಬಳಸಿದ 'ಛಲ' ಎಂಬ ಶಬ್ದ ಮನಸ್ಸಿಗೆ ಸಂಬಂಧಪಟ್ಟದ್ದು ಇದನ್ನು ತೋರಿಸು ಎಂದರೆ ಸಾಧ್ಯವಾಗದೊಂದು ಇರಬಹುದು. ಆದರೆ ಅಂತರ್ಯದಲ್ಲಿ ಅವ್ಯಕ್ತವಾಗಿ ಇಂಥಾ ಛಲವಿರಬೇಕೆನ್ನುವರು. ಈ ಛಲ ಎನ್ನುವದೊಂದು ಮನಸ್ಸಿನ ಒಂದು ಸ್ಥಿತಿ, ಮನಸ್ಸಿನ ಒಂದು ಗಟ್ಟಿತನ, ಮನಸ್ಸಿನ ಹಟವೆಂದು ಹೇಳಬಹುದು. ಪರರಧನ, ಪರರಹೆಣ್ಣು, ಪರರದೈವ ಒಲ್ಲೆನೆಂಬ ಗಟ್ಟಿತನ ಮಾನವನ ಮನಸ್ಸಿಗೆ ಬೇಕು ಎನ್ನುವರು. ವ್ಯಕ್ತಿಯು ತನ್ನ ಪರಿಸರದೊಂದಿಗೆ ಸ್ಥಾಪಿಸುವ ವಿಶಿಷ್ಟ ರೀತಿಯ ಹೊಂದಾಣಿಕೆಯನ್ನು ನಿರ್ಧರಿಸುವಂತಹ ನಡತೆ, ಸ್ವಭಾವ ಹೇಗಿರಬೇಕೆಂದು ಬಸವಣ್ಣನವರು ತಿಳಿಸಿ ವ್ಯಕ್ತಿಯ ಮತ್ತು ಸಮಾಜದ ಮಾನಸಿಕ ಆರೋಗ್ಯ ಸ್ಥಿರವಾಗಿಟ್ಟುಕೊಳ್ಳಲು ಸೂಚಿಸುವರು.

ಬಸವಣ್ಣನವರು ತಮ್ಮ ಇನ್ನೊಂದು ವಚನದಲ್ಲಿ ದುರ್ಮಾರ್ಗದಿಂದ ನಡೆಯುವವರಿಗೆ ಸನ್ಮಾರ್ಗವನ್ನು ತೋರಿಸಿದರೂ ಯಾವುದೇ ಪ್ರಯೋಜನವಾಗುವುದಿಲ್ಲ. ದುಷ್ಟ ಬುದ್ಧಿಯುಳ್ಳವರ ಸ್ಥಿತಿ ಹೇಗೆಂಬುದನ್ನು ಈ ವಚನದಲ್ಲಿ ಹೇಳುವರು.

**ಕತ್ತೆಯ ಕರವೆತ್ತಿ ಕರವೆತ್ತಿ ಕರೆದಡೆ**
**ಅದೆತ್ತಣ ವಾರ್ತೆಯೆಂದು ಬಲ್ಲುದು?**
**ಕುಬುದ್ಧಿಯುಳ್ಳವರಿಗೆ ಸುಬುದ್ಧಿಯ ಹೇಳಿದಡೆ**
**ಕುಬುದ್ಧಿ ಮಾಣ್ಬುದೆ ಕೂಡಲಸಂಗಮದೇವಾ.**

(ವಚನ ವಾಹಿನಿ ೧ ಬಸವರಾಜ ದೇವರ ವಚನಗಳು ವಿ.ಅ.ಸಂ.ಜ.ತೋ.ಸಂ.ಗದಗ. ವ.ಸಂ.೧೩೭ ಪು.ಸಂ. ೩೪)



ದುಷ್ಟ ಮನಸ್ಸುಳ್ಳವರ ಸ್ವಭಾವವನ್ನು ಎಂದಿಗೂ ತಿದ್ದಲೂ ಸಾಧ್ಯವಿಲ್ಲ ಕತ್ತೆಯನ್ನು ಕೈ ಎತ್ತಿ ಕರೆದರೆ ಅದು ಹೇಗೆ ಪ್ರತಿಕ್ರಿಯಿಸಲಾರದೋ ಹಾಗೆ ಕೆಟ್ಟ ಬುದ್ಧಿಉಳ್ಳವರನ್ನು ತಿದ್ದುವುದು ಅಸಾಧ್ಯ ಎನ್ನುವರು ಅದೇ ಅರ್ಥ ಬರುವಹಾಗೆ ಅಕ್ಕ ತನ್ನೊಂದು ವಚನದಲ್ಲಿ

**ಕೊಳಲ ದನಿಗೆ ಸರ್ಪ ತಲೆದೂಗಿದಡೇನು**
**ಒಳಗಣ ವಿಷದ ಬಯಕೆ ಬಿಡದನ್ನಕ್ಕ**
**ಹಾಡಿದಡೇನು, ಕೇಳಿದಡೇನು,**
**ತಿನ್ನಲ್ಲುಳ್ಳ ಅವಗುಣ ಬಿಡದನ್ನಕ್ಕ**
**ಒಳಗನರಿದು ಹೊರಗೆ ಮರೆದವರ**
**ನೀ ಎನಗೆ ತೋರಯ್ಯಾ ಚೆನ್ನಮಲ್ಲಿಕಾರ್ಜುನಾ**

(ಅಕ್ಕ ಮಹಾದೇವಿಯವರ ಆಯ್ದ ೧೦೮ ವಚನಗಳು ಸಂ. ಲೀಲಾದೇವಿ ಆರ್. ಪ್ರಸಾದ ವ.ಸಂ. ೬೯, ಪು.ಸಂ.೫೭)

ಇಂಪಾದ ಕೊಳಲ ಧ್ವನಿಗೆ ಹಾವು ತಲೆದೂಗಿ ಶಾಂತವಾದರೂ ತನ್ನಲ್ಲಿರುವ ವಿಷವನ್ನು ಬಿಡುವುದಿಲ್ಲ. ಹಾಗೆಯೇ ಕೆಟ್ಟಗುಣ ಅಥವಾ ಕೆಟ್ಟ ಮನಸ್ಸುಳ್ಳವರು ಮಂತ್ರ ಪಠಣ ಮಾಡಿದರೂ, ಹಾಡಿದರೂ ತಮ್ಮಲ್ಲಿರುವ ಅವಗುಣಗಳನ್ನು ಬಿಡುವುದಿಲ್ಲ ಎಂದು ಹೇಳುತ್ತ ಒಳ ಮನಸ್ಸನ್ನು ಅರಿತು ಮರೆವ ಮಹಾತ್ಮರನ್ನು ನೀ ಎನಗೆ ತೋರಿಸು ಎನ್ನುವರು ಅಂದರೆ ನಮ್ಮ ಅಂತರಂಗ ಮತ್ತು ಬಹಿರಂಗ ಎರಡು ಒಂದೇ ಯಾಗಿರಬೇಕು. ಬಾಹ್ಯದಲ್ಲಿ ಬಸವ ಅಂತರ್ಯದಲ್ಲಿ ವಿಸಪ್ಪನಾಗಿರದೇ ಒಳಗೂ ಹೊರಗೂ ಒಂದೇ ಯಾಗಿರಬೇಕೆಂಬ ಆಶಯ ಅಕ್ಕನದ್ದಾಗಿದೆ.

ಒಟ್ಟಾರೆ ಈ ಮನದ ಕಲ್ಮಶಕ್ಕೆ ಅಜ್ಞಾನವೇ ಮೂಲ ಕಾರಣ ವೆಂದು ಶಿವಶರಣರು ಹೇಳುತ್ತಾರೆ. ಬಸವಣ್ಣನವರ ಒಂದು ವಚನ ಮನದ ಅಜ್ಞಾನತೆಯಿಂದ ಏನೇನೂ ಮನೋವಿಕಾರಗಳು ಹುಟ್ಟುತ್ತವೆ ಎಂಬುದನ್ನು ತಮ್ಮ ವಚನ ಒಂದರಲ್ಲಿ ಹೇಳುತ್ತಾರೆ.

**ಅಜ್ಞಾನದಿಂದ ಹುಟ್ಟಿತ್ತು ಅಹಂಮಂತೆ**
**ಅಜ್ಞಾನದಿಂದ ಹುಟ್ಟಿತ್ತು ಮನಸ್ಸಂಚಲ**
**ಅಜ್ಞಾನದಿಂದ ಹುಟ್ಟಿತ್ತು ಇಂದ್ರಿಯೋದ್ರೇಕ**

............................................................

ಎನ್ನುತ್ತ ಈ ಮನದ ಅಂಧಕಾರವನ್ನು, ಅಜ್ಞಾನವನ್ನು ಮಾನವ ಹೇಗೆ ಕಳೆದು ಕೊಳ್ಳಬೇಕು, ಸುಜ್ಞಾನಿಯಾಗುವ ಬಗೆ ಹೇಗೆಂದು ಶರಣರೆ ಸೂಚಿಸುತ್ತಾರೆ. ಔಷಧವನ್ನು ಸ್ವತಃ ಶರಣರೆ ಹೇಳುತ್ತಾರೆ.

**ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ**
**ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ**
**ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ**
**ಪರುಷದ ಬಲದಿಂದ ಅಪಲೋಹದ ಕೇಡು ನೋಡಯ್ಯಾ**
**ಕೂಡಲ ಸಂಗನ ಶರಣರ ಅನುಭಾವದ ಬಲದಿಂದ**
**ಎನ್ನ ಭವದ ಕೇಡು ನೋಡಯ್ಯಾ**

(ವಚನ ವಾಹಿನಿ ೧ ಬಸವರಾಜರ ದೇವರ ವಚನಗಳು ಎಂ.ಆ.ಸಂ.ಬಿ.ಶೋ.ಸಂ. ಗದಗ ವ.ಸಂ. ೨೦೮ ಪು.ಸಂ. ೫೧)

ಬಸವಣ್ಣನವರ ಈ ವಚನದ ಸಾಲುಗಳು ಮನದ ಅಜ್ಞಾನವನ್ನು ಹೋಗಲಾಡಿಸಲು ಜ್ಞಾನವೊಂದೆ ದಿವ್ಯೌಷಧ ಎನ್ನುವಂತಿದೆ.

ಒಟ್ಟಾರೆ ಅಂದಿನ ಶಿವಶರಣರು ತಮ್ಮ ವೈಯಕ್ತಿಕ ಸ್ವಾರ್ಥ ಸಾಧನೆಗಾಗಿ ಸಮಾಜದ ಹಿತವನ್ನು ಬಲಿಕೊಡುವವರ ವಿರುದ್ಧ ಸತತ ಹೋರಾಟ ನಡೆಸಿ ಪ್ರಜಾಪ್ರಭುತ್ವದ ಗಂಧ ಗಾಳಿ ಕೂಡಾ ಗೊತ್ತಿರದ ಆ ಕಾಲದಲ್ಲಿ ಬಿಜ್ಜಳ ದೊರೆಯ ರಾಜಧಾನಿ ಕಲ್ಯಾಣದಲ್ಲಿ ತಮ್ಮ ವೈಜ್ಞಾನಿಕ ಮನೋಭಾವದಿಂದ ಪ್ರಖರ ವಿಚಾರವಾದಿಗಳಾಗಿ, ಜಾತ್ಯಾತೀತತೆಯ ದಿಟ್ಟ ಪ್ರತಿಪಾದಕರಾಗಿ, ಮಾನವೀಯ ಗುಣಗಳ ಮುತ್ಸದ್ದಿಗಳಾಗಿ ಹೊರಹೊಮ್ಮಿದ್ದು ಸೋಜಿಗದ ಸಂಗತಿ.


ಗ್ರಂಥ ಋಣ :

೧. ವಚನಗಳಲ್ಲಿ ವಿಜ್ಞಾನ – ಸಂ. ಡಾ. ವೀರಣ್ಣ ರಾಜೂರ ಹಾಗೂ ಶ್ರೀ ಬಸವರಾಜ ಹೂಗಾರ
೨. ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ – ಸ್ವಾಮಿ ಯತೀಶ್ವರಾನಂದ
೩. ವಚನ ಸಂಸ್ಕೃತಿ – ಡಾ. ಎಸ್.ಆರ್.ಚಂದ್ರೇಗೌಡ
೪. ಬಸವಣ್ಣನವರ ಹಾಗೂ ಅಕ್ಕಮಹಾದೇವಿಯವರ ವಚನಗಳಲ್ಲಿ ವೈಜ್ಞಾನಿಕ ಅಂಶಗಳು – ಡಾ.ವ್ಹಿ.ವ್ಹಿ.ಬಾಗಲಕೋಟ
೫. ಮಹಾದೇವಿ ಅಕ್ಕನ ಯೋಗಾಂಗ ತ್ರಿವಿಧಿಯಲ್ಲಿ ಶಿವಯೋಗ– ಪ್ರೊ. ಜಿ. ಶೀಲವಂತರ


□□





ಡಾ. ನಾಗರಾಜ ಮುರಗೋಡರವರು ಅಪ್ನ ಪುಸ್ತಕ ಪ್ರಕಾಶನದ ಕ್ರಿಯಾಶೀಲ ಒಡನಾಡಿಗಳು. ತಮ್ಮ ರಚನಾತ್ಮಕ ಚಟುವಟಿಕೆಗಳಿಂದ ವಿಶೇಷವಾಗಿ ಗುರುತಿಸಿಕೊಂಡವರು. ನಿರಂತರ ಅಧ್ಯಯನ ಮತ್ತು ಅಧ್ಯಾಪನದ ಜೊತೆಗೆ ಇತರ ಸೇವಾಕಾರ್ಯಗಳಲ್ಲಿಯೂ ಸದಾ ತಮ್ಮನ್ನು ತೊಡಗಿಸಿಕೊಂಡಿರುವವರು.

ಇಲ್ಲಿರುವ ಸಂಶೋಧನಾ ಪ್ರಬಂಧಗಳ ಸಂಪಾದನಾ ಕಾರ್ಯದ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಅವರಿಗೆ ಸೂಚಿಸಿದಾಗ ಪ್ರೀತಿಪೂರ್ವಕವಾಗಿ ಒಪ್ಪಿಕೊಂಡು ಕೆಲವೇ ದಿನಗಳಲ್ಲಿ ಪೂರ್ಣಗೊಳಿಸಿದ್ದರ ಪ್ರತಿಫಲವಿದು.

ನಮ್ಮ ಸಂಸ್ಥೆಯ ದಶಮಾನೋತ್ಸವದ ನೆನಪಿಗಾಗಿ ಹಮ್ಮಿಕೊಂಡಿರುವ 'ಅಪ್ನ ಪುಸ್ತಕ ಪ್ರಕಾಶನ'ದ ದಶಮಾನೋತ್ಸವದ ಸಂಸ್ಮರಣಿಕೆಯ ಸಂಶೋಧನಾ ಪ್ರಬಂಧಗಳ ಪ್ರಕಟಣಾ ಮಾಲೆಯ ಒಂಬತ್ತನೆಯ ಕೃತಿ ಇದು.

ನಾಡಿನ ಓದುಗರು, ಸಾಹಿತ್ಯಾಸಕ್ತರು ಮತ್ತು ಸಂಶೋಧಕರು ಇಲ್ಲಿರುವ ಪ್ರಬಂಧಗಳನ್ನು ಓದಿ ನಮ್ಮ ಯುವ ಸಂಶೋಧಕರನ್ನು ಪ್ರೋತ್ಸಾಹಿಸಲಿ ಎಂದು ಆಶಿಸುತ್ತೇನೆ.

- ಪ್ರಕಾಶಕರು


ಅಪ್ನ ಪುಸ್ತಕ ಪ್ರಕಾಶನ
ಬೆಳಗಾವಿ

ISBN: 978-81-950975-9-3




## VYAKTI CHITRAN MATTU SAHITYA

*A collection of Articles by various scholars*

| | |
|---|---|
| Editor's Name | : Dr. Nagaraj D. Murgod |
| Published by | : Avva Pustaka Prakashan, Belagavi |
| First Impression | : 2021 |
| Copies | : 1000 |
| Pages | : X+94 |
| Price | : Rs. 150/- |
| Paper Used | : 70 GSM |
| Copy Right | : Publisher's |
| Cover Design | : Nagaraj Nandaragi, Hubballi-31. |
| DTP | : Ravi Kammar |
| Printers | : B G Printers, Dharwad |
| ISBN | : 978-81-950975-9-3 |

**ವ್ಯಕ್ತಿ ಚಿತ್ರಣ ಮತ್ತು ಸಾಹಿತ್ಯ:** ಸಂಶೋಧನ ಪ್ರಬಂಧಗಳ ಸಂಕಲನ
(ಈ ಪುಸ್ತಕದಲ್ಲಿರುವ ಲೇಖನಗಳ ವಿಷಯ ಲೇಖಕರ ವಿವೇಚನೆಗಳಿಂದ ಮೂಡಿಬಂದವುಗಳು. ಇದಕ್ಕೆ ಸಂಪಾದಕರಾಗಲಿ ಹಾಗೂ ಪ್ರಕಾಶಕರಾಗಲಿ ಜವಾಬ್ದಾರರಲ್ಲ.)

| | |
|---|---|
| ಸಂಪಾದಕರು | : ಡಾ. ನಾಗರಾಜ ಡಿ. ಮುರಗೋಡ |
| ಪ್ರಕಾಶಕರು | : ಅವ್ವ ಪುಸ್ತಕ ಪ್ರಕಾಶನ, ಬೆಳಗಾವಿ |
| ಪುಟಗಳು | : X+104 |
| ಪ್ರಥಮ ಮುದ್ರಣ | : ೨೦೨೧ |
| © | : ಪ್ರಕಾಶಕರು |
| ಬೆಲೆ | : ರೂ. ೧೫೦/- |
| ಅಕ್ಷರ ಸಂಯೋಜನೆ | : ರವಿ ಕಮ್ಮಾರ |
| ಮುಖಪುಟ | : ನಾಗರಾಜ ನಂದರಗಿ, ಹುಬ್ಬಳ್ಳಿ-೩೧. |
| ಮುದ್ರಕರು | : ಬಿ. ಜಿ. ಪ್ರಿಂಟರ್ಸ್, ಧಾರವಾಡ |
| ISBN | : 978-81-950975-9-3 |




# ರಾವಬಹಾದ್ದೂರ ಪ್ರೊ. ವ್ಹಿ. ಸಿ. ಪಾವಟೆ

– ಡಾ. ನಾಗರಾಜ ಡಿ. ಮುರಗೋಡ

ಸಾಮಾನ್ಯ ಬಡತನ ಕುಟುಂಬದಲ್ಲಿ ಜನಿಸಿ, ಮಾಸ್ತರ ವೃತ್ತಿಯನ್ನು ಆರಂಭಿಸಿ ವ್ಯಾಪಕ ಶಿಕ್ಷಣ ತಜ್ಞರೆನಿಸಿಕೊಂಡು, ಒಕ್ಕಲುತನ ಶಿಕ್ಷಣದಲ್ಲಿ ಗಣನೀಯ ಬದಲಾವಣೆ ತಂದು, ಒಕ್ಕಲುತನ ಶಿಕ್ಷಣದ ಉಪನಿರ್ದೇಶಕ ಮತ್ತು ನಿರ್ದೇಶಕರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯ ಹರಿಕಾರರಾಗಿ ಮತ್ತು ಕರ್ನಾಟಕ ರಾಜ್ಯ ರಾಜಕಾರಣದಲ್ಲಿ ಸಕ್ರೀಯವಾಗಿ ಭಾಗವಹಿಸಿ ಕೃಷಿಯಲ್ಲಿ ಒಂದು ಹೊಸ ಕ್ರಾಂತಿಯನ್ನೇ ಎಸಗಿದ ಮಹಾನುಭಾವರೇ ರಾವಬಹಾದ್ದೂರ ಪ್ರೊ. ವ್ಹಿ.ಸಿ. ಪಾವಟೆಯವರು.

ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಮಮದಾಪೂರ ಗ್ರಾಮದಲ್ಲಿ ೨೮ ಜನೇವರಿ ೧೮೯೬ ರಂದು ಶ್ರೀ ವೀರಭದ್ರಪ್ಪನವರು ಜನಿಸಿದರು. ಬಾಲ್ಯದಲ್ಲಿ ಬಡತನದ ಜೊತೆಗೆ ಅನಾರೋಗ್ಯವೂ ಇವರನ್ನು ಕಾಡಿತ್ತು. ಬಹುಕುಳಿಯಲಾರದ ಬಾಲಕನಂತೆ ಬೆಳೆದ ಇವರು ೧೯೦೪ ರಲ್ಲಿ ತಮ್ಮ ಸ್ವಗ್ರಾಮದಲ್ಲಿ ಶಾಲೆಗೆ ಹೋಗತೊಡಗಿದರು. ತಾಯಿ ತೀರಿಕೊಂಡಿದ್ದರಿಂದ ತಂದೆಯೇ ಎರಡೂ ಜವಾಬ್ದಾರಿಗಳನ್ನು ನಿಭಾಯಿಸಿದ್ದರು. ಇವರು ಮಾಧ್ಯಮಿಕ ಶಿಕ್ಷಣವನ್ನು ಗೋಕಾಕದಲ್ಲಿ ಪೂರೈಸಿ ನಂತರ ೧೯೧೬ ರಲ್ಲಿ ಧಾರವಾಡದಲ್ಲಿ ಮೆಟ್ರಿಕ್ ಪರೀಕ್ಷೆ ಪಾಸಾಗಿ ಅದೇ ವರ್ಷ ತಂದೆಯ ಅಣತಿಯ ಮೇರೆಗೆ ರಾಮದುರ್ಗ ತಾಲ್ಲೂಕಿನ ಸಾಲಹಳ್ಳಿಯ ನಾಗಮ್ಮನವರನ್ನು ವಿವಾಹವಾಗುತ್ತಾರೆ. ನಂತರ ಎಲ್.ಎ. ಅಸೋಸಿಯೇಷನರವರ ಸ್ಕಾಲರ್‌ಶಿಪ್‌ನಿಂದ ೧೯೨೨ ರಲ್ಲಿ ಒಕ್ಕಲುತನ ವಿಷಯದಲ್ಲಿ ಪದವಿ ಪಡೆಯುತ್ತಾರೆ.

ಪದವಿಯ ನಂತರ ಗೋಕಾಕದ ಶಾಲೆಯೊಂದರಲ್ಲಿ ಹೆಡ್ ಮಾಸ್ತರರಾಗಲು ಆ ಸಂಸ್ಥೆಯ ಚೇರಮನ್‌ರಿಂದ ಮನವಿ ಬಂದರೂ ಇವರು ಒಕ್ಕಲುತನ ಶಿಕ್ಷಣದಲ್ಲಿ ಏನಾದರೂ ಸಾಧಿಸಬೇಕೆಂದು ೧೯೨೨ ರ ಜೂನ್ ೧ ರಂದು ದೇವಿಹೊಸೂರಿನ ಒಕ್ಕಲುತನ ಶಾಲೆಯಲ್ಲಿ ಅಸಿಸ್ಟೆಂಟ್ ಮಾಸ್ತರರಾಗಿ ಕೆಲಸ ಪ್ರಾರಂಭಿಸಿದರು. ಅಲ್ಲಿ ಮಾಸ್ತರರಾಗಿದ್ದುಕೊಂಡೇ ಒಕ್ಕಲಿಗರು ಹಾಗೂ ಒಕ್ಕಲುತನವು ಎಂಬ ಮಾಸಪತ್ರಿಕೆಯಲ್ಲಿ ಕೃಷಿಯ



ಹೊಸ ಹೊಸ ಪದ್ಧತಿಗಳ ಬಗ್ಗೆ ಹಲವಾರು ಲೇಖನಗಳನ್ನು ಪ್ರಕಟಿಸತೊಡಗಿದರು. ಪ್ರಬುದ್ಧ ಒಕ್ಕಲಿಗ ಎಂಬ ಅಭಿದಾನದ ಕೆಳಗೆ ನಾಲ್ಕು ಪುಸ್ತಕಗಳನ್ನು ಮತ್ತು ಸಪ್ರಯೋಗ ಸಸ್ಯಶಾಸ್ತ್ರ ಎಂಬ ಪುಸ್ತಕವನ್ನು ಬರೆಯುತ್ತಾರೆ. ಇವುಗಳಲ್ಲಿ ರೈತರ ಸಮಸ್ಯೆಗಳಿಗೆ ಸರಳ ಪರಿಹಾರವಿದೆ. ಇವು ಇಂದಿಗೂ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಹಾಗೂ ಒಕ್ಕಲಿಗರಿಗೆ ಸಹಾಯಕವಾಗಿವೆ.

ತಮ್ಮ ವೃತ್ತಿಯ ಜೊತೆಗೆ ಹಳ್ಳಿಹಳ್ಳಿಗಳಿಗೆ ಹೋಗಿ ಬಡರೈತರನ್ನು ಕೂಡಿಸಿ ಅವರನ್ನು ಉದ್ದೇಶಿಸಿ, ದನಕರುಗಳ ರೋಗಗಳು ಹಾಗೂ ಕೃಷಿಯಲ್ಲಿನ ಆಧುನಿಕತೆಯ ಕುರಿತಾಗಿ ಸರಳವಾಗಿ ಭಾಷಣ ಮಾಡುತ್ತಿದರು. ಖ್ಯಾತ ಕಲಾವಿದ ಶ್ರೀ ಹುಕ್ಕೇರಿ ಬಾಳಪ್ಪನವರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಿ, ಜಾನಪದ ಹಾಡುಗಳ ಮೂಲಕ ಒಕ್ಕಲುತನ ಪ್ರಚಾರವನ್ನು ಕೈಗೊಂಡರು. ಈ ತೆರನಾಗಿ ದೇವಿಹೊಸೂರಿನಲ್ಲಿರುವಾಗ ಶಾಲೆಯ ಸಲುವಾಗಿ ಅಲ್ಲದೇ ಗ್ರಾಮೀಣ ರೈತರ ಸಲುವಾಗಿ ಸಾಕಷ್ಟು ದುಡಿದರು. ಆಗಿನ ಮುಂಬೈ ಪ್ರಾಂತ್ಯದ ಒಕ್ಕಲುತನ ನಿರ್ದೇಶಕರಾಗಿದ್ದ ಇಂಗ್ಲಿಷ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರಾದ ಶ್ರೀ ಸಾಲಿಮಠರವರು ಅಲ್ಲಿಗೆ ಭೇಟಿ ಇತ್ತಾಗ, ಶಾಲೆಯ ಹಾಗೂ ಫಾರ್ಮಿನ ಸರ್ವಾಂಗೀಣ ಉನ್ನತಿ ನೋಡಿ ಅತ್ಯಂತ ಸಂತೋಷಪಟ್ಟು ವ್ಹಿ.ಸಿ.ಪಾವಟೆ ಅವರ ಸೇವೆಯು ಕೇವಲ ಇದೊಂದೇ ಶಾಲೆಗೆ ಸೀಮಿತವಾಗದೇ, ಉಳಿದ ಇಂತಹ ಇತರ ಶಾಲೆಗಳಿಗೂ ಆಗಲಿ ಎಂದು ಇವರ ಮೇಲೆ ಇದ್ದ ೫೭ ಜನರನ್ನು ಬಿಟ್ಟು ಇವರನ್ನೇ ಒಕ್ಕಲುತನ ಶಾಲೆಗಳ ಇನ್ಸಪೆಕ್ಟರ್ ಎಂದು ನೇಮಣೂಕ ಮಾಡಿದರು. ಹೀಗೆ ವ್ಹಿ.ಸಿ. ಅವರು ೧೯೩೧ ರಲ್ಲಿ ಒಕ್ಕಲುತನ ಶಾಲೆಗಳ ಇನ್ಸ್‌ಪೆಕ್ಟರರಾದರು.

ಇವರ ಕಾರ್ಯಕ್ಷಮತೆ, ದಕ್ಷತೆ ಮತ್ತು ಕೃಷಿಯಲ್ಲಿ ಹೊಸ ವಿಧಾನಗಳ ಅಳವಡಿಕೆಗಳು ಮುಂಬೈ ಪ್ರಾಂತ್ಯದ ತುಂಬ ಹಬ್ಬಿದವು. ೧೯೩೬ ರ ಮಾರ್ಚ್ ೮ ರಂದು ಕಾಟನ್ ಸುಪರಿಟೆಂಡೆಂಟ್ ಎಂದು ಬಡ್ತಿ ಹೊಂದಿ ಧಾರವಾಡಕ್ಕೆ ಬಂದರು. ಇವರು ಪರಿಷ್ಕರಿಸಿದ 'ಜಯವಂತ' ಹಾಗೂ 'ಗದಗ ನಂ. ೧' ಹತ್ತಿಯ ಬೀಜ ಪ್ರಸಾರದಿಂದ ಸರ್ಕಾರದವರು ಇವರಿಗೆ 'ರಾವ್ ಸಾಹೇಬ' ಎಂಬ ಪದವಿ ನೀಡಿ ಗೌರವಿಸಿದರು. ನಂತರ ಅದೇ ವರ್ಷ ಜುಲೈ ೨೦ ರಂದು ಮುಂಬೈ ಪ್ರಾಂತ್ಯದ ದಕ್ಷಿಣ ಭಾಗದ ಡೆಪ್ಯುಟಿ ಡೈರೆಕ್ಟರ್ ಎಂದು ನಿಯಮಿತರಾದರು. ನಂತರ ಒಕ್ಕಲುತನ ಶಿಕ್ಷಣದ ಉಪನಿರ್ದೇಶಕರಾಗಿ ನೇಮಕಗೊಂಡು 'ಅಧಿಕ ಆಹಾರ ಬೆಳೆಯಿರಿ' ಆಂದೋಲನದಲ್ಲಿ ಸಕ್ರಿಯ ಪಾತ್ರವಹಿಸಿ ಜನಮೆಚ್ಚುಗೆ ಪಡೆದುಕೊಂಡರು.

೧೯೪೬ ರಲ್ಲಿ ನೇಮಿಸಲ್ಪಟ್ಟ ಬಂಡಿಂಗ್ ಖಾತೆಯ ವಿಚಾರಣಾ ಕಮಿಟಿಯ ಸದಸ್ಯರಾಗಿ ಅಲ್ಲಿಯ ಅವ್ಯವಹಾರಗಳನ್ನು ಸರ್ಕಾರದ ಗಮನಕ್ಕೆ

ತಂದರು. ನಂತರ ೧೯೪೯ ರಲ್ಲಿ ಧಾರವಾಡದಲ್ಲಿ ಪ್ರಾರಂಭಗೊಂಡ ಕೃಷಿ ಮಹಾವಿದ್ಯಾಲಯಕ್ಕೆ ಪ್ರಿನ್ಸಿಪಾಲರಾಗಿ ನೇಮಕಗೊಂಡರು. ಪ್ರಿನ್ಸಿಪಾಲರಾದ ಕೂಡಲೇ ಕಾಲೇಜಿಗೆ ಸಂಬಂಧಪಟ್ಟ ಭೂಮಿಯನ್ನು ಸಮತಲಗೊಳಿಸಿ, ಒಡ್ಡುಗಳನ್ನು ಹಾಕಿ, ಪ್ಲಾಟ್ ಮಾಡಿಸಿ, ಮಾವು, ದ್ರಾಕ್ಷಿ, ಚಿಕ್ಕು, ಮೋಸಂಬಿ, ತೆಂಗು, ಅಡಿಕೆ, ಎಲೆಬಳ್ಳಿಗಳಂತ ಮುಂತಾದ ಗಿಡ ಬಳ್ಳಿಗಳ ಪ್ರತ್ಯೇಕ ತೋಟಗಳನ್ನು ಮಾಡಿಸಿ, ಹೊಸ ಹೊಸ ವಿಧಾನಗಳನ್ನು ಪ್ರಯೋಗಿಸಿದರು.

ಕರ್ನಾಟಕ ವಿಶ್ವವಿದ್ಯಾಲಯದ ಅಡ್ವಾಯಜರ್ ಕಮಿಟಿಯ ಸದಸ್ಯರಾಗಿ, ಸಿನೆಟ್, ಸಿಂಡಿಕೇಟ್ ಸದಸ್ಯರಾಗಿ, ಕೃಷಿ ಹಾಗೂ ಎಂಜಿನಿಯರ ಫೇಕಲ್ಟಿಗೆ ಡೀನರಾಗಿ ಕಾರ್ಯವನ್ನು ನಿರ್ವಹಿಸಿದರು. ಈ ತೆರನಾಗಿ ಕೃಷಿಯಲ್ಲಿ ಹಲವಾರು ಸುಧಾರಣೆಗಳನ್ನು ತಂದು, ಜನಮನವನ್ನು ಆಕರ್ಷಿಸಿ ೧೯೫೧ ರಲ್ಲಿ ನಿವೃತ್ತಿಯಾದರು. ಆಗ ಮಮದಾಪೂರದ ಜನತೆ ಸಭೆ ಸೇರಿ ತಮ್ಮ ಊರಿನ ಕುಲಪುತ್ರರಾದ ವ್ಹಿ.ಸಿ. ಯವರ ಗುಣಗಾನ ಮಾಡಿ, ಬೆಳ್ಳಿತಟ್ಟೆ, ಚೆಂಬು, ಲೋಟ ಕೊಟ್ಟು, ಶಾಲು ಹೊದಿಸಿ ಸನ್ಮಾನ ಮಾಡಿ ತುಂಬು ಹೃದಯದಿಂದ ಇವರ ಸೇವಾಕಾರ್ಯಗಳನ್ನು ಪ್ರಶಂಸಿಸಿದರು.

ಸದಾ ಕಾರ್ಯತತ್ಪರರಾದ ವ್ಹಿ.ಸಿ.ಯವರು ನಿವೃತ್ತಿ ಜೀವನಕ್ಕೆ ಬೇಸರಗೊಂಡು, ಕರ್ನಾಟಕ ವಿಶ್ವವಿದ್ಯಾಲಯದ ಸಿನೆಟ್ ಹಾಗೂ ಸಿಂಡಿಕೇಟ್ ಚುನಾವಣೆಗಳಿಗೆ ಸ್ಪರ್ಧಿಸಿ ಬಹುಮತದಿಂದ ಆರಿಸಿ ಬಂದು ನಂತರ ಗಾರ್ಡನ್ ಕಮೀಟಿಯ ಚೇರಮನ್ನರಾಗಿ ದುಡಿದರು. ವಿಶ್ವವಿದ್ಯಾಲಯದ ಹಿಂದೆ ಮಾವಿನ ತೋಟವನ್ನು ಮತ್ತು ಮುಂದೆ ಹೂದೋಟವನ್ನು ನಿರ್ಮಿಸಿ, ಬೊಟಾನಿಕಲ್ ಗಾರ್ಡನ್ ಹಾಗೂ ಪ್ಲಾಂಟ್ ನರ್ಸರಿಗಳ ಪ್ಲ್ಯಾನ್ ಹಾಕಿ ಕಾರ್ಯಗತ ಮಾಡಿಸಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಒಂದು ಸುಂದರ ಪ್ರಾಕೃತಿಕ ನೋಟವನ್ನು ಒದಗಿಸಿದರು.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿದ್ದಾಗಲೇ ಇವರ ಮನಸ್ಸು ರಾಜಕೀಯದತ್ತ ವಾಲುತ್ತಿತ್ತು. ೧೯೫೮ ರಲ್ಲಿ ಪದವೀಧರ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಆರಿಸಿ ಬಂದು ನಂತರ ಕಾಂಗ್ರೆಸ್ ಪಕ್ಷ ಸೇರಿ ೧೯೬೦ ರಲ್ಲಿ ೮ ಜಿಲ್ಲೆಗಳ ಪದವೀಧರರ ಪತಿಯಿಂದ ಕಾಂಗ್ರೆಸ್ ಪಕ್ಷದ ಏಕೈಕ ಹುರಿಯಾಳಾಗಿ ಪ್ರಚಂಡ ಬಹುಮತಗಳಿಂದ ಜಯಗಳಿಸಿದರು. ರಾಜಕೀಯ ಜೀವನ ಇವರಿಗೆ ಹೊಸದಾಗಿ ಇದ್ದರೂ ಸಹ ಹಲವಾರು ಗೆಳೆಯರ ಸಹಾಯದಿಂದ ಅನೇಕ ಕ್ರಾಂತಿಕಾರಿ ಕಾರ್ಯಗಳನ್ನು ತರುವಲ್ಲಿ ಯಶಸ್ವಿಯಾದರು. ೧೯೬೪ ರಲ್ಲಿ ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂಬ ಇಂಗಿತ ಸರ್ಕಾರದ ಮುಂದೆ ಇದ್ದಾಗ, ಅದು ಧಾರವಾಡದಲ್ಲೇ ಸ್ಥಾಪನೆಯಾಗಬೇಕೆಂದು ಗುಡುಗಿದರು. ೧೯೬೪ ರಲ್ಲಿ ಮೈಸೂರು ರಾಜ್ಯದಲ್ಲಿ



"ಪಾಣಚಿಣಾಜ ಆರಿಗಾಟಚಿಭಿಟ ರಿಜ ಉಭಿಚಿಟತಿಚಿದಿಜುಚಿಟ" ಎಂಬ ರಾಷ್ಟ್ರೀಯ ಸಂಸ್ಥೆಯ ಉಪಾಧ್ಯಕ್ಷರಾಗಿ ನೇಮಿಸಲ್ಪಟ್ಟರು. ದನಕರುಗಳ ರೋಗರುಜಿನಗಳನ್ನು ನಿವಾರಿಸಿ, ಹೈನುಗಾರಿಕೆಯನ್ನು ಹೆಚ್ಚಿಸುವುದೇ ಈ ಸಂಸ್ಥೆಯ ಉದ್ದೇಶವಾಗಿತ್ತು. ಇವರಿಗೆ ಸಂದ ಗೌರವ ಮಾನ್ಯತೆಗಳು ಮತ್ತು ಅಧಿಕಾರಗಳು ಹತ್ತು ಹಲವು. ಕೆ.ಎಲ್.ಇ. ಸಂಸ್ಥೆಯ ಆಜೀವ ಸದಸ್ಯರಾಗಿ, ಧಾರವಾಡ ತಾಲ್ಲೂಕಾ ಬೋರ್ಡ್ ಮತ್ತು ಧಾರವಾಡ ಜಿಲ್ಲಾ ಅಭಿವೃದ್ಧಿ ಪರಿಷತ್ತಿನ ಸಭಾಸದರಾಗಿ, ಕರ್ನಾಟಕ ರಾಜ್ಯದ ಕೃಷಿ ಸುಧಾರಣಾ ಸಮಿತಿಯ ಸದಸ್ಯರಾಗಿರುವುದಲ್ಲದೇ ಧಾರವಾಡದಲ್ಲಿನ ವೇದಮೂರ್ತಿ ಮೃತ್ಯುಂಜಯ ಸ್ವಾಮಿಗಳು ನಡೆಸುತ್ತಿದ್ದ ಉಚಿತ ವಸತಿನಿಲಯಕ್ಕೆ ಹೇರಳವಾದ ಧನಸಹಾಯ ಮಾಡಿ ಅದರ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ.

ತಮ್ಮ ಹುಟ್ಟೂರು ಮಮದಾಪೂರದಲ್ಲಿ ಒಂದು ಮಾಧ್ಯಮಿಕ ಶಾಲೆ ಇಲ್ಲದ್ದಕ್ಕೆ ಇವರು ಹಾಗೂ ಇವರ ಸಹೋದರ ಡಾ. ಡಿ.ಸಿ. ಪಾವಟೆಯವರು ಕೂಡಿ 'ಚಿಂತಾಮಣಿ ಪಾವಟೆ' ಎಂಬ ಪ್ರೌಢ ಶಾಲೆಯನ್ನು ಕಟ್ಟಿಸಿ ಅದರ ಸರ್ವಾಂಗೀಣ ಉನ್ನತಿಗೆ ದುಡಿದಿದ್ದಾರೆ. ತಮ್ಮ ಊರಿನ ಹಳ್ಳಕ್ಕೆ ಒಂದು ಸೇತುವೆ ಕಟ್ಟಿಸುವಲ್ಲಿ ಮತ್ತು ರಸ್ತೆಗಳ ದುರಸ್ತಿಯ ಕಾರ್ಯದಲ್ಲಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ತಮ್ಮ ಕೆಲಸಕಾರ್ಯಗಳಿಗೆ ಯಾವಾಗಲೂ ಮಹತ್ವ ಕೊಡುತ್ತಿದ್ದ ವ್ಹಿ.ಸಿ. ಅವರು 'ಮುತ್ತು ಒಡೆದರೆ ತಿರುಗಿ ಬಪ್ಪದು; ಹೊತ್ತು ಹೋದರೆ ಮತ್ತೆ ಬಾರದು' ಎಂಬ ಈ ತತ್ವದವರಾಗಿ ತಮ್ಮ ಆಯುಷ್ಯದ ಅರಘಳಿಗೆಯನ್ನು ಸಹ ವ್ಯರ್ಥವಾಗಿಸದೇ ದುಡಿದು, ಬೆಂಗಳೂರಿನಲ್ಲಿ ವಿಧಾನಪರಿಷತ್ ಸಭೆ ನಡೆಯುತ್ತಿರುವಾಗಲೇ ಹೃದಯಾಘಾತದಿಂದ ದಿನಾಂಕ ೧೪-೦೩-೧೯೬೬ ರಂದು ಲಿಂಗೈಕ್ಯರಾದರೂ ಇಂದು ಅವರು ತಮ್ಮ ಕಾರ್ಯತತ್ಪರತೆಯಿಂದ ಜನಮನದಲ್ಲಿ ಅಮರರಾಗಿದ್ದಾರೆ.

□□

ಸಹಾಯಕ ಪ್ರಾಧ್ಯಾಪಕ, ಜಿ. ಪಿ. ಪಿ. ಹಾಗೂ ವ್ಹಿ. ವ್ಹಿ. ಎಸ್. ಕಾಲೇಜು, ಸಿಂದಗಿ, ವಿಜಯಪುರ


VISHWABHARATI
RESEARCH CENTRE
FICTIONAL WORLD OF
KAMALA MARKANDAYA
Ravi Lamani





**Ravi Lamani**, born in 1978 at Bijapur (Karnataka) has obtained his BA from Sahydri College, Shivamogga, Kuvempu University, Shankarghatta in 2004 and Master's Degree in English from Karnataka University, Dharwad in 2006, MPhil degree in 2007 from Alagappa University, Karaikudi Tamilnadu and pursuing his PhD in English at Dr Babasaheb Ambedkar Marathwada University, Aurangabad.

He has worked as Lecturer in English at Bhandari and Rathi College, Guledagudda for 2 years and Now he is working as a Assistant Professor at the Department of English in G.P. Porwal Arts, Commerce and V.V. Salimath Science College, Sindagi Dt. Vijayapur, Karnataka. He is working as commissioned NCC officer in the same College.

He has presented many research papers in the national and international seminars, conferences and also published many research articles in the reputed journals. He has organized national seminars and University level cultural activities in zonal. He has edited two books and worked as a editorial board committee member.

ISBN : 978-93-89264-73-9

9 789389 264739

₹ 599 | $ 25

VISHWABHARATI
RESEARCH CENTRE

# FICTIONAL WORLD OF KAMALA MARKANDAYA

Ravi Lamani

VISHWABHARATI
RESEARCH CENTRE

# FICTIONAL WORLD OF KAMALA MARKANDAYA

**Ravi Lamani**

Published by:

VISHWABHARATI
RESEARCH CENTRE

Head Office:
Sunil Terraces, Block No.14, Near Central S.T. Bus Stand,
Latur-413512 (MS) India. Cell: 91-9422 467 462
e-mail: vishwabharati.submission@gmail.com
www.vishwabharati.in

ISBN: 978-93-89264-73-9

Price: ₹ 599| $ 25

Copyright © Author
First Edition 2020

All rights reserved. No part of this publication may be reproduced, distributed or transmitted in any form or by any means, including photocopying, recording, or other electronic or mechanical methods, without the prior written permission of the Publisher and the Author, except in the case of brief quotations embodied in critical reviews and certain other non-commercial uses permitted by copyright law. All legal matters concerning the Publication / Publisher shall be settled under the jurisdiction of Latur (MS) Court only.

Cover Design Source: Images from Google and Internet
Printed, Typesetting, Cover Design by:

साहित्य आनंद
A GLOBAL LITERARY VOICE